ಮಂಗಳೂರು
ಸೋಮವಾರ, 23 ಫೆಬ್ರವರಿ 2026
ಸಂಪುಟ 47, ಸಂಚಿಕೆ 326, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಯೋಧ್ಯೆಯಲ್ಲಿ ಶ್ರೀರಾಮಾರ್ಚನೆ | ೦೨
ಅಯೋಧ್ಯೆ: ರಾಮನಿಗಾಗಿ ಓಟ | ೦೨
ಅಸ್ಸಾಂ ಕಾಂಗ್ರೆಸ್ ನಾಯಕ ಬೋರಾ ಬಿಜೆಪಿಗೆ | ೦೨

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಭರಣಿ

ದಿನದ ಮಾತು

ಒಳ್ಳೆಯತನ ನೋಡಿದಾಗ ಅನುಕರಿಸು. ಕೆಟ್ಟದ್ದನ್ನು ಕಂಡಾಗ ಆತ್ಮಪರಿಶೀಲನೆ ಮಾಡಿಕೋ.

▲ರಾಮಕೃಷ್ಣ ಪರಮಹಂಸ

ಅದ್ದೂರಿ ಮದುವೆಗಳಿಗೊಂದು ನಿಯಂತ್ರಣ ರೇಖೆ

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಮೂವರು ಜೆಇಎಂ ಉಗ್ರರ ಎನ್‌ಕೌಂಟರ್

• **ಶ್ರೀನಗರ:** ಭದ್ರತಾ ಪಡೆಗಳ ಯಶಸ್ವಿ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಉಗ್ರ ಸಂಘಟನೆ ಜೈಶ್-ಎ-ಮೊಹಮ್ಮದ್(ಜೆಇಎಂ) ನಂಟು ಹೊಂದಿದ್ದ ಮೂವರು ಉಗ್ರರನ್ನು ಭದ್ರತಾ ಪಡೆಗಳು ಕಿಶ್ತ್ವಾರ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹೊಡೆದುರುಳಿಸಿದ್ದಾರೆ.

• ಪುಟ ೨

5 ಕೋಟಿ ರೂ. ಮೌಲ್ಯದ ಸಿಗರೇಟ್, ನಾಲ್ವರ ವಶ

• **ಅಹಮದಾಬಾದ್:** ಗುಜರಾತಿನ ಅರಬ್ಬೀ ಸಮುದ್ರದಲ್ಲಿ ಭಾರತೀಯ ಕೋಸ್ಟ್ ಗಾರ್ಡ್ ವಿದೇಶಿ ದೋಣಿಯನ್ನು ತಡೆದು, ಸುಮಾರು 5 ಕೋಟಿ ರೂ. ಮೌಲ್ಯದ 200 ಬಾಕ್ಸ್ ವಿದೇಶಿ ಬ್ರಾಂಡ್ ಸಿಗರೇಟ್‌ಗಳನ್ನು ವಶಪಡಿಸಿಕೊಂಡು, ನಾಲ್ವರು ಇರಾನಿ ಪ್ರಜೆಗಳನ್ನು ಬಂಧಿಸಿದೆ ಎಂದು ಐಸಿಜಿ ಭಾನುವಾರ ತಿಳಿಸಿದೆ.

• ಪುಟ ೨

ಟ್ರಂಪ್ ಹತ್ಯೆಗೆ ಯತ್ನ?: ಯುವಕ ಗುಂಡೇಟಿಗೆ ಬಲಿ

• ಪುಟ ೨

ನಕ್ಸಲ್ ಹಿರಿಯ ನಾಯಕ ಥಿಪ್ರಿ ತಿರುಪತಿ ಶರಣಾಗತಿ

• ಪುಟ ೨

70 ಬಂಡುಕೋರರರನ್ನು ಕೊಂದಿದ್ದೇವೆ: ಪಾಕ್

• ಪುಟ ೨

ರಾಜ್ಯದಲ್ಲಿ ಶೇ.67 ಮ್ಯಾಪಿಂಗ್ ಕಾರ್ಯ ಪೂರ್ಣ

• ಪುಟ ೫




ಭಾರತದ ಮೊದಲ ಡಿಸ್ಪ್ಲೆ ಡ್ರೈವರ್ ಚಿಪ್ ಪ್ಲಾಂಟ್

• ಪುಟ ೨

ಸುದ್ದಿ ಸಮಗ್ರ

ಜಾಗತಿಕ ಭವಿಷ್ಯಕ್ಕೆ ಮಹತ್ವದ ತಿರುವು ನೀಡಿದ ಎಐ ಶೃಂಗ

ಭಾರತಕ್ಕೆ ವಿಶ್ವ ಮೆಚ್ಚುಗೆ



• **ಹೊಸದಿಲ್ಲಿ:** ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆಯು ಭವಿಷ್ಯದಲ್ಲಿ ವಿಶ್ವವು ಕೃತಕ ಬುದ್ಧಿಮತ್ತೆಯ ಶಕ್ತಿಯನ್ನು ಹೇಗೆ ಬಳಸಿಕೊಳ್ಳಲಿದೆ ಎಂಬ ದಿಕ್ಕಿನಲ್ಲಿ ಮಹತ್ವದ ತಿರುವು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಈ ಕ್ಷೇತ್ರದಲ್ಲಿ ಭಾರತ ಸಾಧಿಸಿರುವ ಮಹತ್ವದ ಮುನ್ನಡೆಯಿಂದ ಜಾಗತಿಕ ನಾಯಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಅವರು ತಿಳಿಸಿದರು.

ಮನ್ ಕಿ ಬಾತ್‌ನಲ್ಲಿ ಮಾತನಾಡಿದ ಅವರು, ಆನ್‌ಲೈನ್ ಆರ್ಥಿಕ ವಂಚನೆಗಳು ಮತ್ತು ಡಿಜಿಟಲ್ ಬಂಧನ ಪ್ರಕರಣಗಳ ವಿರುದ್ಧ ಜನರು ಎಚ್ಚರಿಕೆಯಿಂದಿರಬೇಕು ಎಂದು ಮನವಿ ಮಾಡಿದರು. ಬ್ಯಾಂಕ್‌ಗಳು ಕೇಳುವ ಕೆವೈಸಿ ನವೀಕರಣವನ್ನು ಪಾಲಿಸುವುದು ಖಾತೆಯ ಸುರಕ್ಷತೆಗೆ ಅತ್ಯಂತ ಅಗತ್ಯವೆಂದರು.

ಮನ್ ಕಿ ಬಾತ್‌ನಲ್ಲಿ ಮೋದಿ

ಭಾರತದ ಎಐ ಸಾಧನೆ: ಇತ್ತೀಚೆಗೆ ನಡೆದ ಎಐ ಶೃಂಗದಲ್ಲಿ ಅನೇಕ ದೇಶಗಳ ನಾಯಕರು, ಕೈಗಾರಿಕಾ ವಲಯದ ಪ್ರತಿನಿಧಿಗಳು, ನವೋದ್ಯಮಿಗಳು ಹಾಗೂ ಸ್ಟಾರ್ಟ್‌ಅಪ್ ಕ್ಷೇತ್ರದವರು ಭಾಗವಹಿಸಿದ್ದರು ಎಂದು ಮೋದಿ ಹೇಳಿದರು. ಈ ಸಮ್ಮೇಳನವು ಭವಿಷ್ಯದಲ್ಲಿ ವಿಶ್ವವು ಎಐ ಶಕ್ತಿಯನ್ನು ಹೇಗೆ ಬಳಸಿಕೊಳ್ಳಲಿದೆ ಎಂಬ ದಿಕ್ಕಿನಲ್ಲಿ ಮಹತ್ವದ ತಿರುವು ನೀಡಿದೆ ಎಂದರು.ಸಮ್ಮೇಳನದಲ್ಲಿ ಎರಡು ವಿಶೇಷ ಆವಿಷ್ಕಾರಗಳು ಜಾಗತಿಕ ನಾಯಕರನ್ನು ಹೆಚ್ಚು ಆಕರ್ಷಿಸಿದವು ಎಂದು ಅವರು ವಿವರಿಸಿದರು.

ಅಮುಲ್ ಸ್ಟಾಲ್‌ನಲ್ಲಿ ಎಐ ಬಳಕೆ: ಅಮುಲ್ ಸಂಸ್ಥೆಯ ಪ್ರದರ್ಶನದಲ್ಲಿ ಎಐ ತಂತ್ರಜ್ಞಾನವು ಪಶು ಚಿಕಿತ್ಸೆಯಲ್ಲಿ ಹೇಗೆ ಸಹಾಯ ಮಾಡುತ್ತಿದೆ ಹಾಗೂ ರೈತರು 24X7 ಎಐ ನೆರವಿನಿಂದ ತಮ್ಮ ಪಶುಸಂಪತ್ತಿನ ಮೇಲ್ವಿಚಾರಣೆ ನಡೆಸುತ್ತಿರುವುದನ್ನು ತೋರಿಸಲಾಯಿತು.

➡ಪುಟ ೪

ಪರೀಕ್ಷಾರ್ಥಿಗಳಿಗೆ ಮೋದಿ ಸಂದೇಶ

ಪರೀಕ್ಷೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳನ್ನು ಎಕ್ಸಾಂ ವಾರಿಯರ್ಸ್ ಎಂದು ಕರೆದು, ಅಂಕಪಟ್ಟಿಯೇ ನಿಮ್ಮ ಮೌಲ್ಯವನ್ನು ನಿರ್ಧರಿಸುವುದಿಲ್ಲ ಎಂದು ಹೇಳಿದರು.ಸಂದೇಹಗಳು ಸಹಜ. ಎಲ್ಲವೂ ನೆನಪಿರುತ್ತದೆಯೇ? ಸಮಯ ಸಾಲುತ್ತದೆಯೇ? ಎಂಬ ಆತಂಕ ಉಂಟಾಗುತ್ತದೆ. ಆದರೆ ನೀವು ಒಬ್ಬರಲ್ಲ. ನಿಮ್ಮ ಮೌಲ್ಯ ಅಂಕಪಟ್ಟಿಯಿಂದ ನಿರ್ಧಾರವಾಗುವುದಿಲ್ಲ. ಆತ್ಮವಿಶ್ವಾಸದಿಂದ ಬರೆಯಿರಿ ಎಂದು ಅವರು ಪ್ರೇರಣೆ ನೀಡಿದರು.

ಕರ್ನಾಟಕದ ಕೃಷಿ ಉತ್ಪನ್ನಗಳಿಗೆ ಪ್ರಶಂಸೆ

ಭಾರತದ ಕೃಷಿ ಉತ್ಪನ್ನಗಳ ರಫ್ತು ವೃದ್ಧಿ ಕುರಿತು ಮಾತನಾಡಿದ ಪ್ರಧಾನಿ ಮೋದಿಯವರು, ಕರ್ನಾಟಕದ ವಿಶೇಷ ಕೃಷಿ ಉತ್ಪನ್ನಗಳು ವಿದೇಶಗಳಿಗೆ ರಫ್ತಾಗುತ್ತಿರುವುದನ್ನು ಶ್ಲಾಘಿಸಿದ್ದಾರೆ.ಕರ್ನಾಟಕದ ನಂಜನಗೂಡಿನ ರಸಬಾಳೆ, ಮೈಸೂರಿನ ವೀಳ್ಯದೆಲೆ ಹಾಗೂ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಕಾಜಿ ನಿಂಬೆಹಣ್ಣು ಮಾಲ್ಡೀವ್ಸ್‌ಗೆ ರಫ್ತಾಗುತ್ತಿರುವುದು ಗಮನಾರ್ಹ ಸಾಧನೆ ಎಂದಿದ್ದಾರೆ. ಗುಣಮಟ್ಟ ಹಾಗೂ ವಿಶಿಷ್ಟತೆಯ ಕಾರಣದಿಂದ ಈ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ ಪಡೆಯುತ್ತಿವೆ. ಇಂದಿನ ರೈತರು ಉತ್ತಮ ಇಳುವರಿ ಜತೆಗೆ ಗುಣಮಟ್ಟಕ್ಕೂ ಒತ್ತು ನೀಡುತ್ತಿದ್ದು, ತಮ್ಮದೇ ಆದ ಗುರುತನ್ನು ನಿರ್ಮಿಸುತ್ತಿದ್ದಾರೆ ಎಂದರು.ನಂಜನಗೂಡು ರಸಬಾಳೆ ಮೈಸೂರು ಹಾಗೂ ಚಾಮರಾಜನಗರ ಭಾಗಗಳಲ್ಲಿ ಬೆಳೆಯುವ ಪ್ರಸಿದ್ಧ ಬಾಳೆಹಣ್ಣು. ವಿಶೇಷ ರುಚಿ, ಸುಗಂಧ ಮತ್ತು ದಪ್ಪ ತಿರುಳಿಗೆ ಹೆಸರಾದ ಈ ಹಣ್ಣು 2005ರಲ್ಲಿ ಜಿಐ ಮಾನ್ಯತೆ ಪಡೆದಿದೆ. ಕಪಿಲಾ ನದಿಯ ತೀರದ ಕಪ್ಪು ಮಣ್ಣಿನಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ. ಮೈಸೂರು ವೀಳ್ಯದೆಲೆ ತನ್ನ ಸುವಾಸನೆ, ವಿನ್ಯಾಸ ಮತ್ತು ಖಾರವಾದ ರುಚಿಗೆ ಪ್ರಸಿದ್ಧವಾಗಿದೆ.

➡ಪುಟ ೪

ಡಿಜಿಟಲ್ ವಂಚನೆ ಬಗ್ಗೆ ಎಚ್ಚರಿಕೆ

ಡಿಜಿಟಲ್ ಬಂಧನ ಮತ್ತು ಆನ್‌ಲೈನ್ ವಂಚನೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹಿರಿಯ ನಾಗರಿಕರು ಹಾಗೂ ನಿರಪರಾಧಿಗಳು ಹೆಚ್ಚು ಬಲಿಯಾಗುತ್ತಿದ್ದಾರೆ ಎಂದು ಪ್ರಧಾನಿ ಹೇಳಿದರು. ಬ್ಯಾಂಕ್‌ನಿಂದ ಕೆವೈಸಿ ಅಥವಾ ಕೆವೈಸಿ ನವೀಕರಣಕ್ಕಾಗಿ ಸಂದೇಶ ಬಂದಾಗ ಗಾಬರಿಯಾಗಬೇಡಿ. ಇದು ನಿಮ್ಮ ಹಣದ ಸುರಕ್ಷತೆಗಾಗಿ ಮಾತ್ರ ಎಂದು ಅವರು ಸಲಹೆ ನೀಡಿದರು.

ಕಾಂಗ್ರೆಸ್‌ನ ಕೊಳಕು, ನಾಚಿಕೆಗೇಡಿನ ಕೃತ್ಯ

• **ಮೀರತ್(ಉ.ಪ್ರ.):** ದಿಲ್ಲಿಯ ಜಾಗತಿಕ ಕೃತಕ ಬುದ್ಧಿಮತ್ತೆ ಶೃಂಗಸಭೆಯಲ್ಲಿ ಶರ್ಟ್‌ರಹಿತವಾಗಿ ಪ್ರತಿಭಟನೆ ನಡೆಸಿದ ಕಾಂಗ್ರೆಸಿಗರನ್ನು ಕಟುವಾಗಿ ತರಾಟೆಗೆತ್ತಿಕೊಂಡಿರುವ ಪ್ರಧಾನಿ ಮೋದಿ, ಪಕ್ಷವು ತನ್ನ ಕೊಳಕು ಮತ್ತು ನಾಚಿಕೆಗೇಡಿನ ಕೃತ್ಯಕ್ಕಾಗಿ ಅಂತಾರಾಷ್ಟ್ರೀಯ ಕಾರ್ಯಕ್ರಮ ಜಾಗವನ್ನು ಬಳಸಿಕೊಂಡದ್ದು ತೀರಾ ಅಕ್ಷಮ್ಯವೆಂದು ತರಾಟೆಗೆತ್ತಿಕೊಂಡಿದ್ದಾರೆ.

• ವಿವರ ಪುಟ ೨

ಗಂಗಾವಳಿ ಸೇತುವೆ ಉದ್ಘಾಟಿಸಿದ ಸಿದ್ದರಾಮಯ್ಯ

ಜೂನ್‌ನೊಳಗೆ ಸ್ಥಳೀಯ ಸಂಸ್ಥೆ ಚುನಾವಣೆ: ಸಿಎಂ



• **ಅಂಕೋಲಾ:** ಜೂನ್ ಒಳಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಭಾನುವಾರ ಅಂಕೋಲಾ-ಕುಮಟಾ ತಾಲೂಕಿನ ಮಧ್ಯೆ ಗಂಗಾವಳಿ ನದಿಗೆ 34.21 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಸೇತುವೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಚುನಾವಣೆಗಳನ್ನು ಶೀಘ್ರ ನಡೆಸಲು ಸರ್ಕಾರ ಬದ್ಧವಾಗಿದೆ ಎಂದರು.

ಕುಮಟಾ ಶಾಸಕ ದಿನಕರ ಶೆಟ್ಟಿಯವರು ಗೋಕರ್ಣವನ್ನು ಗ್ರಾಪಂನಿಂದ ಪಟ್ಟಣ ಪಂಚಾಯತಿಗೆ ಬದಲಾಯಿಸಬೇಕು ಎಂದು ಮಾಡಿದ ಮನವಿಗೆ ಮುಖ್ಯಮಂತ್ರಿಗಳು ಪಂಚಾಯತ್ ಚುನಾವಣೆಯ ಪ್ರಕ್ರಿಯೆಗಳು ಆರಂಭವಾಗಲಿದ್ದು, ಇದೀಗ ಯಾವುದೇ ಪಟ್ಟಣ ಪಂಚಾಯತ್ ಮತ್ತು ನಗರ ಸಂಸ್ಥೆಗಳನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯ ಸಾಧ್ಯವಿಲ್ಲ.

➡ಪುಟ ೪

> ಈ ನೆಲದ ಬುಡಕಟ್ಟು ಸಮುದಾಯದವರಾದ ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕಾದುದು ಕೇಂದ್ರ ಸರ್ಕಾರದ ಕೆಲಸ. ಕೇಂದ್ರ ಒಮ್ಮೆ ಪ್ರಸ್ತಾವನೆ ತಿರಸ್ಕರಿಸಿದ್ದು ರಾಜ್ಯ ಸರ್ಕಾರದಿಂದ ಮತ್ತೊಮ್ಮೆ ಪ್ರಸ್ತಾವನೆ ಕಳಿಸಲಾಗುವುದು.
>
> ■ ಸಿದ್ದರಾಮಯ್ಯ, ಸಿಎಂ

ಪ್ರವಾಸೋದ್ಯಮ ಅಭಿವೃದ್ಧಿ: ಡಿಸಿಎಂ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮಾತನಾಡಿ, ಉತ್ತರ ಕನ್ನಡಜಿಲ್ಲೆ ಮತ್ತು ಕರಾವಳಿ ಪ್ರದೇಶದ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಲಾಗುತ್ತಿದ್ದು, ಪ್ರವಾಸಿಗರನ್ನು ಸೆಳೆಯುವ ಹೂಡಿಕೆದಾರರನ್ನು ಆಕರ್ಷಿಸುವ ಮೂಲಕ ಪ್ರವಾಸೋದ್ಯಮದ ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಚಿಂತನೆ ನಡೆದಿದೆ ಎಂದರು.ಶಾಸಕ ಸತೀಶ ಸೈಲ್ ಪ್ರಾಸ್ತಾವಿಕ ಮಾತನಾಡಿದರು. ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ, ಶಿರಸಿ ಶಾಸಕ ಭೀಮಣ್ಣ ನಾಯ್ಕ, ಕುಮಟಾ ಶಾಸಕ ದಿನಕರ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಲಷ್ಕರ್ ಸಂಪರ್ಕಿತ ಉಗ್ರರ ಘಟಕ ಭೇದಿಸಿದ ದಿಲ್ಲಿ ಪೊಲೀಸರು

8 ಶಂಕಿತ ಭಯೋತ್ಪಾದಕರ ಸೆರೆ

• **ಹೊಸದಿಲ್ಲಿ:** ಪಾಕಿಸ್ತಾನ ಮೂಲದ ಲಷ್ಕರ್-ಎ-ತೊಯ್ಬಾ ಮತ್ತು ವಿದೇಶಿ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಹೊಂದಿರುವ ಪ್ರಮುಖ ಭಯೋತ್ಪಾದಕ ಘಟಕವನ್ನು ದಿಲ್ಲಿ ಪೊಲೀಸ್ ವಿಶೇಷ ಘಟಕ ಭೇದಿಸಿದ್ದು, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಾದ್ಯಂತ ಸಂಘಟಿತ ದಾಳಿ ನಡೆಸಿ, ಎಂಟು ಶಂಕಿತ ಉಗ್ರರನ್ನು ಬಂಧಿಸಿದೆ.



ಎರಡು ರಾಜ್ಯಗಳಲ್ಲಿ ಬಂಧನ: ಮಿರ್ಜಾನೂರ್ ರೆಹಮಾನ್, ಮೊಹಮ್ಮದ್ ಶಬತ್, ಉರ್ಮ, ಮೊಹಮ್ಮದ್ ಲಿಟನ್, ಮೊಹಮ್ಮದ್ ಶಾಹಿದ್ ಮತ್ತು ಮೊಹಮ್ಮದ್ ಉಜಾಲ್ ಎಂದು ಗುರುತಿಸಲಾದ ಆರು ಆರೋಪಿಗಳನ್ನು ತಮಿಳುನಾಡಿನ ತಿರುಪ್ಪೂರ್ ಜಿಲ್ಲೆಯ ಗಾರ್ಮೆಂಟ್ ಘಟಕಗಳಿಂದ ಬಂಧಿಸಲಾಗಿದೆ. ಇತರ ಇಬ್ಬರನ್ನು ಪಶ್ಚಿಮ ಬಂಗಾಳದಲ್ಲಿ ಬಂಧಿಸಲಾಗಿದೆ. ಬಂಧಿತರಲ್ಲಿ ಕೆಲವರು ಬಾಂಗ್ಲಾ ಪ್ರಜೆಗಳಾಗಿದ್ದು, ತಮ್ಮ ಗುರುತನ್ನು ಮರೆಮಾಚಲು ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಸುತ್ತಿದ್ದರು ಎಂದು ಶಂಕಿಸಲಾಗಿದೆ.

➡ಪುಟ ೪

ಬೃಹತ್ ಭಯೋತ್ಪಾದಕ ದಾಳಿಗೆ ಯೋಜನೆ?

ಪಾಕಿಸ್ತಾನದ ಐಎಸ್‌ಐ ಮತ್ತು ಬಾಂಗ್ಲಾದೇಶ ಮೂಲದ ಉಗ್ರಗಾಮಿ ಸಂಘಟನೆಗಳಿಗೆ ಸಂಬಂಧಿಸಿದ ಅಂಶಗಳಿಂದ ಮತ್ತು ವಿದೇಶಿ ಹ್ಯಾಂಡ್ಲರ್‌ಗಳ ನಿರ್ದೇಶನಗಳಿಂದ ಭಾರತದಲ್ಲಿ ದೊಡ್ಡ ಭಯೋತ್ಪಾದಕ ದಾಳಿಗೆ ಯೋಜಿಸಲಾಗುತ್ತಿದೆ ಎಂಬುದು ತಿಳಿದುಬಂದಿದೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ. ಕಾರ್ಯಾಚರಣೆ ಸಮಯದಲ್ಲಿ, ಎಂಟು ಮೊಬೈಲ್ ಫೋನ್‌ಗಳು ಮತ್ತು 16 ಸಿಮ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಾಧನಗಳನ್ನು ಡಿಜಿಟಲ್ ಪುರಾವೆ ಮತ್ತು ಇತರ ಭಯೋತ್ಪಾದಕರ ಪತ್ತೆಗಾಗಿ ಪರೀಕ್ಷಿಸಲಾಗುತ್ತಿದೆ ಎನ್ನಲಾಗಿದೆ.

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯಲ್ಲಿ ಉಚಿತ ಶಿಕ್ಷಣ

20,146 ವಿದ್ಯಾರ್ಥಿಗಳಿಂದ ಪರೀಕ್ಷೆ



• **ಮೂಡುಬಿದಿರೆ:** ಖಾಸಗಿ ಶಿಕ್ಷಣ ಸಂಸ್ಥೆಗಳ ಪೈಕಿ ಮುಂಚೂಣಿಯಲ್ಲಿರುವ ಮೂಡುಬಿದಿರೆಯ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ 2026-27ನೇ ಸಾಲಿನ 6ರಿಂದ 9ನೇ ತರಗತಿಯ ಸಂಪೂರ್ಣ ಉಚಿತ ಶಿಕ್ಷಣ ಸೌಲಭ್ಯಕ್ಕೆ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ 20,146 ವಿದ್ಯಾರ್ಥಿಗಳು ಮೂಡುಬಿದಿರೆಯ ವಿದ್ಯಾಗಿರಿ ಹಾಗೂ ಪುತ್ತಿಗೆ ಆವರಣದಲ್ಲಿ ಭಾನುವಾರ ಪರೀಕ್ಷೆ ಬರೆದಿದ್ದಾರೆ. ರಾಜ್ಯಾದ್ಯಂತ ಹಾಗೂ ಕರ್ನಾಟಕದ ಗಡಿ ಪ್ರದೇಶ ಕೇರಳದ ಕಾಸರಗೋಡು, ಮಹಾರಾಷ್ಟ್ರದ ಗಡಿ ಪ್ರದೇಶವೂ ಸೇರಿದಂತೆ 32 ಶೈಕ್ಷಣಿಕ ಜಿಲ್ಲೆಗಳ 23,141 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, 20146 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. 6ನೇ ತರಗತಿಗೆ 16,014, 7ನೇ ತರಗತಿಗೆ 1,374, 8ನೇ ತರಗತಿಗೆ 1,983 ಹಾಗೂ 9ನೇ ತರಗತಿಗೆ 775 ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆ ಬರೆದರು.

➡ಪುಟ ೪

140 ಕೋಟಿ ರೂ. ಖರ್ಚು

ಕಳೆದ 14 ವರ್ಷಗಳಲ್ಲಿ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯಲ್ಲಿ ಸಂಪೂರ್ಣ ಉಚಿತವಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಕಲ್ಪಿಸಿಕೊಡಲಾಗುತ್ತಿದೆ. ಕೇವಲ ಶಿಕ್ಷಣ, ಕಲೆ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ ಹೀಗೆ ಆಯ್ದ ವಿಚಾರಗಳ ಆಧಾರದಲ್ಲಿ ಪಾರದರ್ಶಕ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಿ, ಸಂಪೂರ್ಣ ಉಚಿತವಾಗಿ ವಸತಿಸಹಿತ ಶಿಕ್ಷಣ ನೀಡುತ್ತಾ ಬರಲಾಗುತ್ತಿದೆ. 140 ಕೋಟಿಗೂ ಮಿಕ್ಕಿ ಖರ್ಚನ್ನು ಈ ಸಂಸ್ಥೆಯ ಮೂಲಕ ಮಾಡಲಾಗಿದೆ. ಇದೆಲ್ಲವೂ ಕನ್ನಡದ ಬಗೆಗಿರುವ ಆಳವಾದ ಶ್ರದ್ಧೆ, ಹಾಗೂ ಬದ್ಧತೆಯ ಕಾರಣಕ್ಕಾಗಿ ನಡೆಯುತ್ತಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಹೊಸ ದಿಗಂತಕ್ಕೆ ತಿಳಿಸಿದ್ದಾರೆ.

ಕೆಲ ಶಾಸಕರು ಬಾಯ್ಮುಚ್ಚಿದರೆ ಒಳಿತು: ಡಿ.ಕೆ.ಶಿವಕುಮಾರ್



• **ಕಾರವಾರ:** ನನಗೆ ಒಳಿತಾಗಬೇಕಾದರೆ ಇಕ್ಬಾಲ್ ಹುಸೇನ್ ಸೇರಿದಂತೆ ಕೆಲ ಶಾಸಕರು ಬಾಯಿ ಮುಚ್ಚಿಕೊಂಡಿರುವುದು ಒಳಿತು. ನಾಯಕತ್ವ ಬದಲಾವಣೆ ಬಗ್ಗೆ ಶಾಸಕರೂ ಸೇರಿ ಯಾರೂ ಮಾತನಾಡುವುದು ಬೇಡ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ವಿವಿಧ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆಗೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಶಾಸಕರುಗಳಾದ ಇಕ್ಬಾಲ್ ಹುಸೇನ್, ರವಿ ಗಣಿಗ, ಶಿವಗಂಗಾ ಬಸವರಾಜ್ ಸ್ವಲ್ಪ ಮೌನ ಆಗಿದ್ದರೆ ಸಾಕು ಎಂದರು. ಶಾಸಕರ ವಿದೇಶ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿದ ಅವರು, ವಿದೇಶಕ್ಕೆ ಹೋದವರೂ ನಮ್ಮವರೇ. ಅವರೆಲ್ಲ ಬಂದ ಮೇಲೆ ಏಕೆ ಹೋಗಿದ್ದು ಎಂದು ಕೇಳುತ್ತೇನೆ ಎಂದರು.

ಕಾಡಾನೆ ದಾಳಿಗೆ ಮಹಿಳೆ ಸಾವು; ಪ್ರತಿಭಟನೆ

• **ಬಾಳೆಹೊನ್ನೂರು:** ತಾಲೂಕಿನ ಹುಣಸೇಹಳ್ಳಿ ಸಮೀಪ ಪುರ ಗ್ರಾಮದ ಕಾಫಿ ತೋಟದಲ್ಲಿ ಭಾನುವಾರ ಕಾಡಾನೆ ದಾಳಿಗೆ ಬಳ್ಳಾರಿ ಮೂಲದ ಕಾರ್ಮಿಕ ಮಹಿಳೆಯೊಬ್ಬರು ಬಲಿಯಾಗಿದ್ದಾರೆ. ಒಂದು ವಾರದ ಅಂತರದಲ್ಲಿ ಇದು ಎರಡನೇ ಸಾವು. ಸ್ಥಳೀಯರ ಪ್ರತಿಭಟನೆಯಿಂದ ಪರಿಸ್ಥಿತಿ ಉದ್ರಿಕ್ತಗೊಂಡ ಹಿನ್ನೆಲೆಯಲ್ಲಿ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

ಮಹಿಳೆ ಕೊಂದ ಆನೆ ಸೆರೆ

• ವಿವರ ಪುಟ ೫

ಎಐ ಶೃಂಗದಲ್ಲಿ ಪ್ರತಿಭಟನೆಗೆ ಮೋದಿ ತರಾಟೆ

ಕಾಂಗ್ರೆಸ್‌ನ ಕೊಳಕು, ನಾಚಿಕೆಗೇಡಿನ ಕೃತ್ಯ



ಮೀರತ್(ಉ.ಪ್ರ.): ದಿಲ್ಲಿಯ ಜಾಗತಿಕ ಕೃತಕ ಬುದ್ಧಿಮತ್ತೆ ಶೃಂಗಸಭೆಯಲ್ಲಿ ಶರ್ಟ್‌ರಹಿತವಾಗಿ ಪ್ರತಿಭಟನೆ ನಡೆಸಿದ ಕಾಂಗ್ರೆಸಿಗರನ್ನು ಕಟುವಾಗಿ ತರಾಟೆಗೆತ್ತಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಪಕ್ಷವು ತನ್ನ ಕೊಳಕು ಮತ್ತು ನಾಚಿಕೆಗೇಡಿನ ಕೃತ್ಯಕ್ಕಾಗಿ ಅಂತಾರಾಷ್ಟ್ರೀಯ ಕಾರ್ಯಕ್ರಮ ಜಾಗವನ್ನು ಬಳಸಿಕೊಂಡದ್ದು ತೀರಾ ಅಕ್ಷಮ್ಯವೆಂದು ತರಾಟೆಗೆತ್ತಿಕೊಂಡಿದ್ದಾರೆ.

ಕಾಂಗ್ರೆಸ್ ಸೈದ್ಧಾಂತಿಕವಾಗಿ ದಿವಾಳಿಯಾಗಿದೆ ಮತ್ತು ದರಿದ್ರ ಸ್ಥಿತಿಯಲ್ಲಿದೆ ಎಂಬುದು ಕಾಂಗ್ರೆಸಿಗರ ನಡೆಯಿಂದ ಸಾಬೀತಾಗಿದೆ. ಎಲ್ಲಾ ಮಿತಿಗಳ ಮೀರಿರುವ ಕಾಂಗ್ರೆಸ್ ದುರ್ವರ್ತನೆಗೆ ದೇಶಾದ್ಯಂತ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ ಎಂದು ಹೇಳಿದ ಪ್ರಧಾನಿ ಮೋದಿ, ಕಾಂಗ್ರೆಸಿಗರ ನಾಚಿಕೆಗೇಡಿನ ಪ್ರತಿಭಟನೆಯನ್ನು ಖಂಡಿಸಿರುವ ವಿಪಕ್ಷಗಳಿಗೆ ಕೃತಜ್ಞತೆ ಸಲ್ಲಿಸಿದರು. ತನ್ಮೂಲಕ ವಿಪಕ್ಷಗಳು ಸತ್ಯ ಹಾಗೂ ರಾಷ್ಟ್ರೀಯ ಘನತೆಯನ್ನು ಎತ್ತಿಹಿಡಿದಿವೆ ಎಂದು ಪ್ರಶಂಸಿಸಿದರು. ಮೀರತ್‌ನಲ್ಲಿ ನಮೋ ಭಾರತ್ ರೈಲು ಮತ್ತು ಮೀರತ್ ಮೆಟ್ರೋ ರೈಲು ವಿಸ್ತರಣೆ ಸೌಲಭ್ಯ ಸಹಿತ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಬಳಿಕ ಸಾರ್ವಜನಿಕ ಸಮಾವೇಶ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

ಜನರು ಭಾರತವನ್ನು ಸಂಪನ್ನ ರಾಷ್ಟ್ರವಾಗಿಸಲು ಅಹೋರಾತ್ರಿ ದುಡಿಯುತ್ತಿದ್ದರೆ, ಕೆಲವು ರಾಜಕೀಯ ಪಕ್ಷಗಳಿಗೆ ಮಾತ್ರ ರಾಷ್ಟ್ರದ ಪ್ರಗತಿಯನ್ನು ಅರಗಿಸಲಾಗುತ್ತಿಲ್ಲ. ಸುಮಾರು 80 ರಾಷ್ಟ್ರಗಳ ಪ್ರತಿನಿಧಿಗಳು ಹಾಗೂ 20ರಾಷ್ಟ್ರಗಳ ಪ್ರಮುಖ ನಾಯಕರು ಎಐ ಶೃಂಗಸಭೆಯಲ್ಲಿ ಪಾಲ್ಗೊಂಡದ್ದು ಭಾರತದ ಪಾಲಿಗೆ ಹೆಮ್ಮೆಯ ವಿಚಾರ ಎಂದು ಪ್ರಧಾನಿ ಮೋದಿ ಹೇಳಿದರು. ಆದರೆ ಕಾಂಗ್ರೆಸ್ ಮತ್ತವರ ಹಿಂಬಾಲಕರು ಮಾಡಿದ್ದೇನು? ಅವರು ಭಾರತದ ಜಾಗತಿಕ ಸಮಾವೇಶ ಜಾಗವನ್ನು ಕೊಳಕು ಮತ್ತು ನಾಚಿಕೆಗೇಡಿನ ಕೃತ್ಯಕ್ಕೆ ದುರ್ಬಳಸಿದರು.

ವಿದೇಶಿ ಅತಿಥಿಗಳ ಸಮಕ್ಷಮಕ್ಕೆ ಕಾಂಗ್ರೆಸಿಗರು ಬಟ್ಟೆ ಕಳಚಿಕೊಂಡು ಬಂದದ್ದು ತೀರಾ ಹೇಯ. ನನ್ನ ಪ್ರಶ್ನೆ ಇಷ್ಟೆ. ನೀವು ಈಗಾಗಲೆ ಬೆತ್ತಲಾಗಿದ್ದೀರೆಂದು ಇಡೀ ದೇಶಕ್ಕೆ ಗೊತ್ತು. ವಾಸ್ತವ ಇದಾಗಿರುವಾಗ ಮತ್ತೆ ಬಟ್ಟೆ ಕಳಚುವ ಅಗತ್ಯವೇನಿತ್ತು ಎಂದು ಪ್ರಧಾನಿ ಮೋದಿ ಪ್ರಶ್ನಿಸಿದರು. ಕಾಂಗ್ರೆಸ್ ನಾಯಕರು ಮೋದಿಯನ್ನು ದ್ವೇಷಿಸುತ್ತಾರೆ. ಅವರು ನನ್ನ ಗೋರಿ ತೋಡಲು ಬಯಸಿದ್ದಾರೆ. ನನ್ನ ತಾಯಿಯನ್ನು ನಿಂದಿಸಲೂ ಹೇಸುವುದಿಲ್ಲ. ಅವರು ಬಿಜೆಪಿಯನ್ನು ವಿರೋಧಿಸುತ್ತಾರೆ, ಎನ್‌ಡಿಎ ವಿರೋಧಿಗಳು. ಆದರೆ, ಕೃತಕ ಬುದ್ಧಿಮತ್ತೆ ಜಾಗತಿಕ ಶೃಂಗಸಭೆ ಬಿಜೆಪಿ ಕಾರ್ಯಕ್ರಮವಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿಯಾಗಲು ಜನರ ಮನಸ್ಸು ಗೆಲ್ಲಿ

ನಿಮಗೆ ಪ್ರಧಾನಿ ಸೀಟಲ್ಲಿ ಕೂರುವ ಆಸೆಯಿದ್ದರೆ ಮೊದಲು ನೀವು ಜನರ ಮನಸ್ಸನ್ನು ಗೆಲ್ಲಿ. ಸೀಟುಗಳ ವಶಪಡಿಸಲು ಮಹಿಳಾ ಸಂಸದರ ಛೂಬಿಟ್ಟ ಮಾತ್ರಕ್ಕೆ ನೀವು ಪ್ರಧಾನಿಯಾಗಲಾರಿರಿ. ಅಷ್ಟಕ್ಕೂ ಮಾತೆಯರು, ಸೋದರಿಯರ ಈ ರೀತಿ ಮುಂದಕ್ಕೆ ದೂಡೋ ಅನಿವಾರ್ಯತೆ ಅಥವಾ ಒತ್ತಡವಾದರು ಏನು? ತಾವು ಅಷ್ಟೂ ನಿಷ್ಪ್ರಯೋಜಕರೇ ಎಂದು ಪ್ರಧಾನಿ ಮೋದಿ ಯಾರ ಹೆಸರನ್ನೂ ಉಲ್ಲೇಖಿಸದೆ ಛೀಮಾರಿ ಹಾಕಿದರು.

ಆರ್‌ಎಸ್‌ಎಸ್ ಶತಮಾನೋತ್ಸವ ಅಂಗವಾಗಿ ಕಾರ್ಯಕ್ರಮ

ಅಯೋಧ್ಯೆಯಲ್ಲಿ ಶ್ರೀರಾಮಾರ್ಚನೆ



ಅಯೋಧ್ಯೆ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮಗಳನ್ನು ದೇಶದ ವಿವಿಧ ಕಡೆಗಳಲ್ಲಿ ಹಮ್ಮಿಕೊಳ್ಳುತ್ತಿದ್ದು, ಅದೇರೀತಿ ಭಾನುವಾರ ಅಯೋಧ್ಯೆಯಲ್ಲಿ ದಿಲ್ಲಿ ಸ್ವಯಂ ಸೇವಕರಿಂದ ಘೋಷ ವಾದನದ ಮೂಲಕ ಶ್ರೀ ರಾಮಾರ್ಚನಂ ಕಾರ್ಯಕ್ರಮ ಜರುಗಿತು. ಮಧ್ಯಾಹ್ನ 3:30ಕ್ಕೆ ಅಯೋಧ್ಯೆ ಸರಿಯೂ ನದಿಯ ತಟದಿಂದ ಆರಂಭವಾದ ಘೋಷ ವಾದ್ಯ ಸಂಚಲನ ಲತಾ ಮಂಗೇಶ್ಕರ್ ವೃತ್ತದಲ್ಲಿ ರಾಮ ಜನ್ಮಭೂಮಿ ಆಂದೋಲನದಲ್ಲಿ ಹುತಾತ್ಮರಾದ ಕರಸೇವಕರಿಗೆ ಶ್ರದ್ಧಾಂಜಲಿ ಸಲ್ಲಿಸಿದ ನಂತರ ಹನುಮಾನ್ ಗಡಿ ಮಂದಿರ ಹಾಗೂ ಶ್ರೀ ರಾಮ ಜನ್ಮಭೂಮಿಯ ಶ್ರೀ ರಾಮಾನಂದಾಚಾರ್ಯ ಮುಖ್ಯ ದ್ವಾರದಲ್ಲಿಯೂ ಘೋಷ ವಾದ್ಯ ಮೊಳಗಿತು.

ಸಂಜೆ 5:30ಕ್ಕೆ ಶ್ರೀರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿ ಧ್ವಜಾರೋಹಣ ಪ್ರಾರ್ಥನೆ ಹಾಗೂ ಘೋಷ ವಾದನ ಮಾಡುವುದರ ಮೂಲಕ ಶ್ರೀ ರಾಮಾರ್ಚನೆ ಕಾರ್ಯಕ್ರಮ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ವಿಶ್ವ ಹಿಂದೂ ಪರಿಷತ್ತಿನ ಕೇಂದ್ರಿಯ ಕಾರ್ಯ ದರ್ಶಿ ಗೋಪಾಲ ಜಿ, ಶ್ರೀ ರಾಮ ಜನ್ಮಭೂಮಿಯ ಟ್ರಸ್ಟಿಗಳಾದ ಕೃಷ್ಣಮೋಹನ್, ಅನಿಲ ಮಿಶ್ರಾ, ಸಂಘ ಪರಿವಾರದ ಪದಾಧಿಕಾರಿಗಳು ಇದ್ದರು.





ಭಾರತೀಯ ತಂತ್ರಜ್ಞಾನ ದೈತ್ಯ ಎಚ್‌ಸಿಎಲ್ ಗ್ರೂಪ್ ಮತ್ತು ಥೈವಾನೀಸ್ ಎಲೆಕ್ಟ್ರಾನಿಕ್ಸ್ ತಯಾರಕ ಫಾಕ್ಸ್‌ಕಾನ್ ನಡುವಿನ ಹೆಗ್ಗುರುತು ಜಂಟಿ ಉದ್ಯಮವಾದ ಇಂಡಿಯಾ ಚಿಪ್ ಪ್ರೈವೇಟ್ ಲಿಮಿಟೆಡ್‌ಗೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದ್ದಾರೆ. ಇದು ದೇಶೀಯ ಸೆಮಿಕಂಡಕ್ಟರ್ ಉದ್ಯಮವನ್ನು ಕಟ್ಟುವ ಭಾರತದ ಮಹತ್ವಾಕಾಂಕ್ಷೆಗೆ ಮಹತ್ವದ ಮುನ್ನುಡಿ ಎನಿಸಿದೆ. ಯಮುನಾ ಎಕ್ಸ್‌ಪ್ರೆಸ್ ವೇ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರ ಪ್ರದೇಶದ, ತಲೆಯೆತ್ತಲಿರುವ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದ ಜೆವಾರ್‌ನಲ್ಲಿ ಸ್ಥಾವರವನ್ನು ಸ್ಥಾಪಿಸುವುದರೊಂದಿಗೆ ಈ ಸೌಲಭ್ಯಕ್ಕೆ ಮೋದಿ ವರ್ಚುವಲ್ ಮೋಡ್‌ನಲ್ಲಿ ಶಂಕುಸ್ಥಾಪನೆ ನೆರವೇರಿಸಿದರು.

ಭಾರತದ ಮೊದಲ ಡಿಸ್ಪ್ಲೇ ಡ್ರೈವರ್ ಚಿಪ್ ಪ್ಲಾಂಟ್

ಉತ್ತರ ಪ್ರದೇಶಕ್ಕೆ ಹೊಸ ಹೆಗ್ಗುರುತು, ವ್ಯಾಪಕ ಉದ್ಯೋಗ ಸೃಷ್ಟಿ ಸಾಧ್ಯತೆ



ಆ ಸ್ಥಾವರ ಏಕೆ ವಿಶೇಷ?

ಈ ಸೌಲಭ್ಯ, ಭಾರತದ ಮೊದಲ ಡಿಸ್ಪ್ಲೇ ಡ್ರೈವರ್ ಇಂಟಿಗ್ರೇಟೆಡ್ ಸರ್ಕ್ಯೂಟ್(ಡಿಡಿಐಸಿ) ಹೊರಗುತ್ತಿಗೆ ಸೆಮಿಕಂಡಕ್ಟರ್ ಅಸೆಂಬ್ಲಿ ಮತ್ತು ಟೆಸ್ಟ್ (ಒಎಸ್‌ಎಟಿ) ಸ್ಥಾವರ ಎನಿಸಿದೆ. ಅಂದರೆ, ಚಿಪ್‌ಗಳನ್ನು ಆರಂಭದಿಂದ ತಯಾರಿಸುವ ಬದಲು ಜೋಡಿಸುವ, ಪರೀಕ್ಷಿಸುವ ಮತ್ತು ಪ್ಯಾಕೇಜ್ ಮಾಡುವ ಕಾರ್ಖಾನೆ. ಇದು ಸ್ಮಾರ್ಟ್‌ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ಆಟೋಮೊಬೈಲ್‌ಗಳು ಮತ್ತು ಕೈಗಾರಿಕಾ ಉಪಕರಣಗಳಲ್ಲಿ ಬಳಸುವ ಡಿಸ್ಪ್ಲೇ ಡ್ರೈವರ್ ಚಿಪ್‌ಗಳನ್ನು ಉತ್ಪಾದಿಸುತ್ತದೆ. ಸಂಪೂರ್ಣ ಕಾರ್ಯನಿರ್ವಹಣೆ ಆರಂಭವಾದ ಬಳಿಕ ಇಲ್ಲಿ ಪ್ರತಿ ತಿಂಗಳು 3.6 ಕೋಟಿ ಚಿಪ್‌ಗಳನ್ನು ಉತ್ಪಾದಿಸಲು ಯೋಜಿಸಲಾಗಿದೆ.

48 ಎಕರೆಯಲ್ಲಿ ವಿಶಾಲ ಸ್ಥಾವರ

ಸುಮಾರು 48 ಎಕರೆ ಪ್ರದೇಶದಲ್ಲಿ ಹರಡಿರುವ ಈ ಸ್ಥಾವರ, ಒಟ್ಟು 3,700 ಕೋಟಿ ರೂ.ಗಳ ಹೂಡಿಕೆಯಲ್ಲಿ ಆರಂಭವಾಗುತ್ತಿದೆ. ಇದು 60:40 ಜಂಟಿ ಉದ್ಯಮವಾಗಿ ರಚನೆಯಾಗಿದ್ದು, ಎಚ್‌ಸಿಎಲ್ ಹೆಚ್ಚಿನ ಪಾಲು ಹೊಂದಿದೆ ಮತ್ತು ಫಾಕ್ಸ್‌ಕಾನ್ ಶೇ.40ರಷ್ಟು ಕೊಡುಗೆ ನೀಡುತ್ತದೆ. ಈ ಸೌಲಭ್ಯ, 2028ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದ್ದು, ತಿಂಗಳಿಗೆ 20,000 ವೇಫರ್‌ಗಳ ಉತ್ಪಾದನೆಯ ಸಾಮರ್ಥ್ಯ ಹೊಂದಿರುತ್ತದೆ.

ಚಿಪ್ ಸ್ವಾವಲಂಬನೆಗೆ ಭಾರತದ ದೃಷ್ಟಿಕೋನ

ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ದೇಶೀಯ ಚಿಪ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ತುರ್ತು ಅಗತ್ಯವನ್ನು ಒತ್ತಿ ಹೇಳಿದರು. ಕೋವಿಡ್ 19 ಸಾಂಕ್ರಾಮಿಕ, ಜಾಗತಿಕ ಚಿಪ್ ಪೂರೈಕೆ ಸರಪಳಿಗಳ ಸೂಕ್ಷ್ಮತೆಯನ್ನು ಹೇಗೆ ಬಹಿರಂಗಪಡಿಸಿದೆ ಎಂಬುದನ್ನು ಅವರು ನೆನಪಿಸಿಕೊಂಡರು. ಇದರಿಂದಾಗಿ ದೇಶಗಳು ಕಾರುಗಳಿಂದ ಹಿಡಿದು ವೈದ್ಯಕೀಯ ಉಪಕರಣಗಳವರೆಗೆ ಎಲ್ಲದರಲ್ಲೂ ಅಗತ್ಯವಿರುವ ಸೆಮಿಕಂಡಕ್ಟರ್‌ಗಳ ಕೊರತೆ ಎದುರಿಸುತ್ತಿವೆ ಎಂದರು.

ಉತ್ತರ ಪ್ರದೇಶಕ್ಕೆ ತಂತ್ರಜ್ಞಾನದ ಗುರುತು

ರಾಷ್ಟ್ರೀಯ ಗುರಿಗಳನ್ನು ಮೀರಿ, ಈ ಯೋಜನೆ ಉತ್ತರ ಪ್ರದೇಶದ ಆರ್ಥಿಕ ವರ್ಚಸ್ಸಿಗೆ ಮಹತ್ವದ ತಿರುವು ನೀಡಿದೆ. ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇಬ್ಬರೂ, ಈ ಸ್ಥಾವರ, ಗೃಹ ವಿನ್ಯಾಸ, ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಮತ್ತು ನವೋದ್ಯಮಗಳನ್ನು ಈ ಪ್ರದೇಶಕ್ಕೆ ಹೇಗೆ ಸೆಳೆಯುತ್ತದೆ, ವಿಶಾಲವಾದ ಸೆಮಿಕಂಡಕ್ಟರ್ ನಿರ್ಮಾಣ ವ್ಯವಸ್ಥೆಯನ್ನು ಹೇಗೆ ಸೃಷ್ಟಿಸುತ್ತದೆ. ವೈಇಐಡಿಎನ ಅಧಿಕಾರಿಗಳು, ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನೆಗಾಗಿ ಇತರ ಹತ್ತು ಕಂಪನಿಗಳು ಈಗಾಗಲೇ ಹತ್ತಿರದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ. ಈ ಸ್ಥಾವರ, ಜೆವಾರ್ ಬೆಲ್ಟ್ ವೇಗವಾಗಿ, ಅಷ್ಟೇ ಸ್ಥಿರವಾಗಿ ತಂತ್ರಜ್ಞಾನ ಕಾರಿಡಾರ್ ಆಗಿ ಹೊರಹೊಮ್ಮುತ್ತಿದೆ ಎಂದು ಸೂಚಿಸುತ್ತದೆ.

ಸಾಫ್ಟ್‌ವೇರ್ ಜತೆಗೇ ಹಾರ್ಡ್‌ವೇರ್‌ಗೂ ಯೋಜನೆ

ಚಿಪ್ ತಯಾರಿಕೆಯಲ್ಲಿ ಭಾರತ ಸ್ವಾವಲಂಬಿಯಾಗಬೇಕು ಎಂದು ಹೇಳಿದ ಮೋದಿ, ದೇಶ ಈಗ ತಂತ್ರಜ್ಞಾನದ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಎರಡರ ನಿಟ್ಟಿನಲ್ಲೂ ಏಕಕಾಲದಲ್ಲಿ ಕಾರ್ಯೋನ್ಮುಖವಾಗಿದೆ ಎಂದು ಹೇಳಿದರು. ಭಾರತ ಈಗಾಗಲೇ ಹತ್ತು ಸೆಮಿಕಂಡಕ್ಟರ್ ಫ್ಯಾಬ್ರಿಕೇಶನ್ ಮತ್ತು ಪ್ಯಾಕೇಜಿಂಗ್ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಅವುಗಳಲ್ಲಿ ನಾಲ್ಕು ಶೀಘ್ರದಲ್ಲೇ ಉತ್ಪಾದನೆ ಪ್ರಾರಂಭಿಸಲಿವೆ ಎಂದು ಅವರು ಹೇಳಿದರು. ಜೆವಾರ್ ಸ್ಥಾವರ, ಭಾರತದ ಆರನೇ ಅನುಮೋದಿತ ಸೆಮಿಕಂಡಕ್ಟರ್ ಯೋಜನೆ ಮತ್ತು ಉತ್ತರ ಪ್ರದೇಶದ ಮೊದಲ ಒಎಸ್‌ಎಟಿ ಸೌಲಭ್ಯವಾಗಿದ್ದು, ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತದಂತಹ ಸರ್ಕಾರಿ ಯೋಜನೆಗಳನ್ನು ಒಳಗೊಂಡ ವಿಶಾಲ ರಾಷ್ಟ್ರೀಯ ದೃಷ್ಟಿಕೋನಕ್ಕೆ ಹೊಂದಿಕೊಳ್ಳುತ್ತದೆ ಎಂಬುದನ್ನು ಪ್ರಧಾನಿ ಮನದಟ್ಟು ಮಾಡಿದರು.



ಉದ್ಯೋಗ ಸೃಷ್ಟಿ

ಈ ಸ್ಥಾವರ, ಎಂಜಿನಿಯರ್‌ಗಳು, ತಂತ್ರಜ್ಞರು ಮತ್ತು ನುರಿತ ಕಾರ್ಮಿಕರು ಸೇರಿದಂತೆ 3,500ಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಫಾಕ್ಸ್‌ಕಾನ್‌ನ ಭಾಗವಹಿಸುವಿಕೆ, ಸಾಂಕೇತಿಕವಾಗಿ ಇದರ ಮೌಲ್ಯವನ್ನು ಹೆಚ್ಚಿಸಿದೆ. ಥೈವಾನ್ ಸಂಸ್ಥೆಯ ಹೂಡಿಕೆ, ಭಾರತ ಉನ್ನತ ಮಟ್ಟದ ಉತ್ಪಾದನೆಯಲ್ಲಿ ವಿಶ್ವಾಸಾರ್ಹ ಪಾಲುದಾರ ಎಂಬ ಸಂದೇಶವನ್ನು ಜಗತ್ತಿಗೆ ರವಾನಿಸಿದೆ ಎಂದು ನಾಯಕರು ಅಭಿಪ್ರಾಯಪಟ್ಟಿದ್ದಾರೆ. ಈ ಸೌಲಭ್ಯದ ಸುತ್ತಲೂ, ಪೂರಕ ಕೈಗಾರಿಕೆಗಳು, ವಿನ್ಯಾಸ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳೂ ತಲೆ ಎತ್ತುವ ಸಾಧ್ಯತೆಯಿದೆ ಎನ್ನಲಾಗಿದೆ.



- ಗ್ರೇಟರ್ ನೋಯ್ಡಾದ ಜೆವಾರ್‌ನಲ್ಲಿ 3,700 ಕೋಟಿ ರೂ. ವೆಚ್ಚದಲ್ಲಿ ಒಎಸ್‌ಎಟಿ ಸೌಲಭ್ಯ
- ಎಚ್‌ಸಿಎಲ್(60%) ಮತ್ತು ಫಾಕ್ಸ್‌ಕಾನ್(40%) ನಡುವಿನ ಜಂಟಿ ಉದ್ಯಮ
- ತಿಂಗಳಿಗೆ 20,000 ವೇಫರ್‌ಗಳು ಮತ್ತು 3.6 ಕೋಟಿ ಚಿಪ್ ಉತ್ಪಾದನಾ ಸಾಮರ್ಥ್ಯ
- 3,500ಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳ ಸೃಷ್ಟಿ
- 2028ರ ವೇಳೆಗೆ ಕಾರ್ಯಾಚರಣೆ ಪ್ರಾರಂಭಿಸುವ ಗುರಿ



ಕಿರುಸುದ್ದಿ

ನಕ್ಸಲ್ ಹಿರಿಯ ನಾಯಕ ಥಿಪ್ರಿ ತಿರುಪತಿ ಶರಣಾಗತಿ

ಹೈದರಾಬಾದ್: ಮಾವೋವಾದಿಗಳ ಉನ್ನತ ನಾಯಕ ಥಿಪ್ರಿ ತಿರುಪತಿ ಅಲಿಯಾಸ್ ದೇವ್ಜಿ ಪೊಲೀಸರ ಮುಂದೆ ಭಾನುವಾರ ಶರಣಾಗಿದ್ದಾನೆ. ಈತ ಮೂಲತಃ ತೆಲಂಗಾಣದ ಜಗ್ತಿಯಾಲ್ ಜಿಲ್ಲೆಯವನಾಗಿದ್ದು, ಈತನ ಶರಣಾಗತಿ ಮೂಲಕ ಆ ಪ್ರದೇಶದಲ್ಲಿನ ನಕ್ಸಲ್ ತಲೆನೋವು ಕಡಿಮೆಯಾಗಿದೆ. ದೇವ್ಜಿ ಜತೆಗೆ ಇನ್ನೋರ್ವ ಹಿರಿಯ ನಾಯಕ ಮಲ್ಲ ರೆಡ್ಡಿ ಮತ್ತು ಇತರ ಹಲವು ಸಿಪಿಐ ಕೆಡರ್‌ಗಳು ಕೂಡ ಭಾನುವಾರ ಶರಣಾಗಿದ್ದಾರೆ.

ಪೊಲೀಸ್ ಮೂಲಗಳ ಪ್ರಕಾರ ದೇವ್ಜಿ ತಲೆಗೆ ಒಟ್ಟು 1 ಕೋಟಿ ರೂ.ಗಳ ಬಹುಮಾನವಿತ್ತು. ಈತ ಹಲವು ನಕ್ಸಲ್ ಸಂಘಟನೆಗಳನ್ನು ಕಟ್ಟಿಕೊಂಡು ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ.

ಟ್ರಂಪ್ ಹತ್ಯೆಗೆ ಯತ್ನ: ಯುವಕ ಗುಂಡೇಟಿಗೆ ಬಲಿ



ವಾಷಿಂಗ್ಟನ್: ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಾರ್-ಎ-ಲಾಗೋ ರೆಸಾರ್ಟ್‌ನಲ್ಲಿ ಕಾನೂನುಬಾಹಿರವಾಗಿ ಸುರಕ್ಷಿತ ಪರಿಧಿಯನ್ನು ಪ್ರವೇಶಿಸಲು ಪ್ರಯತ್ನಿಸಿದ ಯುವಕನೊಬ್ಬನನ್ನು ಅಮೆರಿಕ ಸೀಕ್ರೆಟ್ ಸರ್ವಿಸ್ ಏಜೆಂಟ್‌ಗಳು ಗುಂಡಿಕ್ಕಿ ಕೊಂದಿದ್ದಾರೆ. ಟ್ರಂಪ್ ಪ್ರಸ್ತುತ ವಾಷಿಂಗ್ಟನ್‌ನಲ್ಲಿದ್ದಾರೆ. ಆ ವ್ಯಕ್ತಿಯು ಶಾಟ್‌ಗನ್ ಮತ್ತು ಇಂಧನ ಬಾಕ್ಸ್ ಅನ್ನು ಹೊತ್ತೊಯ್ಯುತ್ತಿದ್ದನು ಎಂದು ಏಜೆನ್ಸಿ ಹೇಳಿದೆ. ಈತ ರೆಸಾರ್ಟ್ ಒಳಕ್ಕೆ ನುಗ್ಗಲು ಏಕೆ ಪ್ರಯತ್ನಿಸಿದ ಎಂಬುದು ಇನ್ನೂ ಬಹಿರಂಗಗೊಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

70 ಬಂಡುಕೋರರನ್ನು ಕೊಂದಿದ್ದೇವೆ: ಪಾಕ್



ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಇತ್ತೀಚೆಗೆ ನಡೆದ ಬಂಡುಕೋರರ ದಾಳಿಗೆ ಪ್ರತೀಕಾರವಾಗಿ ಅಫ್ಘಾನಿಸ್ತಾನದಲ್ಲಿ ಕನಿಷ್ಠ ಏಳು ಭಯೋತ್ಪಾದಕ ಅಡಗುತಾಣಗಳನ್ನು ಗುರಿಯಾಗಿಸಿಕೊಂಡು ಮಿಲಿಟರಿ ಕಾರ್ಯಾಚರಣೆ ನಡೆಸಿ 70 ಬಂಡುಕೋರರನ್ನು ಕೊಂದಿದ್ದೇವೆ ಎಂದು ಪಾಕಿಸ್ತಾನ ಭಾನುವಾರ ಹೇಳಿಕೊಂಡಿದೆ. ಅಫ್ಘಾನಿಸ್ತಾನವು ಬಹಳ ಹಿಂದಿನಿಂದಲೂ ಭಯೋತ್ಪಾದನೆಯನ್ನು ರಫ್ತು ಮಾಡುತ್ತಿದೆ. ಪಾಕಿಸ್ತಾನವು ತನ್ನ ನಾಗರಿಕರ ಜೀವ ಮತ್ತು ಆಸ್ತಿಯನ್ನು ಭದ್ರಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಪಾಕಿಸ್ತಾನದ ಆಂತರಿಕ ಖಾತೆ ರಾಜ್ಯ ಸಚಿವ ತಲಾಲ್ ಚೌಧರಿ ಹೇಳಿದ್ದಾರೆ.

ಅಯೋಧ್ಯೆ: 'ರಾಮನಿಗಾಗಿ ಓಟ' ಕ್ರೀಡಾಕೂಟಕ್ಕೆ ಚಾಲನೆ



ಅಯೋಧ್ಯೆ: ಕ್ರೀಡಾ ಭಾರತಿ ವತಿಯಿಂದ ಆಯೋಜಿಸಲಾಗಿದ್ದ ರಾಮನಿಗಾಗಿ ಓಟ ಕ್ರೀಡಾಕೂಟದಲ್ಲಿ ನೂರಾರು ಜನ ವಿದ್ಯಾರ್ಥಿಗಳು ಹಾಗೂ ಸ್ಥಳೀಯರು ಭಾಗವಹಿಸಿದ್ದರು.

ಮೊದಲನೆಯ ಹಂತ 42 ಕಿಮೀ, ಎರಡನೆಯ ಹಂತ 21 ಕಿಮೀ ಹಾಗೂ ಮೂರನೆಯ ಹಂತ 10 ಕಿಮೀ ಓಟದ ಸ್ಪರ್ಧೆಯಾಗಿತ್ತು. 2022ರಲ್ಲಿ ಈ ಕ್ರೀಡಾಕೂಟವನ್ನು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ವತಿಯಿಂದ ಆಯೋಜಿಸಲಾಗಿದ್ದು, ಈಗ ಕ್ರೀಡಾ ಭಾರತಿ ಅದನ್ನು ನಿರಂತರವಾಗಿ ನಡೆಸಿಕೊಂಡು ಹೋಗುತ್ತಿದೆ. ಭಾನುವಾರ ಬೆಳಗ್ಗೆ 4:30ಕ್ಕೆ ವಿಶ್ವ ಹಿಂದೂ ಪರಿಷತ್ತಿನ ಕೇಂದ್ರಿಯ ಕಾರ್ಯದರ್ಶಿ ಗೋಪಾಲ ಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ಕ್ರೀಡಾ ಭಾರತಿಯ ಪದಾಧಿಕಾರಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರು ಉಪಸ್ಥಿತರಿದ್ದರು.

ಮೋದಿ ನನ್ನ ಉತ್ತಮ ಸ್ನೇಹಿತ: ನೆತನ್ಯಾಹು

ಹೊಸದಿಲ್ಲಿ: ನನ್ನ ಸ್ನೇಹಿತ ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಮುಂಬರುವ ಇಸ್ರೇಲ್ ಭೇಟಿಯು ಆರ್ಥಿಕ ಸಹಕಾರ, ರಾಜತಾಂತ್ರಿಕ ಸಹಕಾರ ಮತ್ತು ಭದ್ರತಾ ಸಹಕಾರವನ್ನು ಹೆಚ್ಚಿಸುತ್ತದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಹೇಳಿದ್ದಾರೆ. ಈ ಭೇಟಿಯು ಮಧ್ಯಪ್ರಾಚ್ಯದಲ್ಲಿ ಉಗ್ರ ಸಂಘಟನೆಗಳ ವಿರುದ್ಧ ಮೈತ್ರಿ ರಚಿಸುವ ಭಾಗವಾಗಿದೆ ಎಂದು ಹೇಳಿದರು.

ಬುಧವಾರ, ಭಾರತದ ಪ್ರಧಾನಿ, ನನ್ನ ಸ್ನೇಹಿತ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಆಗಮಿಸಲಿದ್ದಾರೆ. ನಾವು ಮಧ್ಯಪ್ರಾಚ್ಯದ ಸುತ್ತ ಸಂಪೂರ್ಣ ಮೈತ್ರಿ ವ್ಯವಸ್ಥೆಯನ್ನು ರಚಿಸುತ್ತೇವೆ. ವಾಸ್ತವ, ಸವಾಲುಗಳು ಮತ್ತು ಗುರಿಗಳನ್ನು ಒಂದೇ ತೆರನಾಗಿ ನೋಡುವ ದೇಶಗಳ ಅಕ್ಷವು ಆಮೂಲಾಗ್ರ ಅಕ್ಷಗಳನ್ನು ಎದುರಿಸುತ್ತಿದೆ ಎಂದು ಸರ್ಕಾರದ ಸಭೆಯ ಪ್ರಾರಂಭದಲ್ಲಿ ನೆತನ್ಯಾಹು ಹೇಳಿದರು.

ಇತ್ತೀಚಿನ ವರ್ಷಗಳಲ್ಲಿ ಇಸ್ರೇಲ್ ಮತ್ತು ಭಾರತದ ನಡುವೆ ಅಭಿವೃದ್ಧಿ ಹೊಂದಿದ ವಿಶೇಷ ಸಂಬಂಧವನ್ನು ನೆತನ್ಯಾಹು ಹೇಳಿದರು. ಪ್ರಧಾನಿ ಮೋದಿಯವರನ್ನು ವೈಯಕ್ತಿಕ ಸ್ನೇಹಿತ. ನಾನು ಭಾರತಕ್ಕೆ ಭೇಟಿ ನೀಡಿದ್ದೇನೆ. ಮೋದಿ ಇಲ್ಲಿಗೆ ಭೇಟಿ ನೀಡಿದ್ದಾರೆ. ಮೋದಿಯವರ ಭೇಟಿಯು ಹೈಟೆಕ್, ಕೃತಕ ಬುದ್ಧಿಮತ್ತೆ ಮತ್ತು ಕ್ವಾಂಟಮ್ ಪ್ರಕ್ರಿಯೆಗಳ ಜತೆಗೆ ನಿಕಟ ಆರ್ಥಿಕ, ರಾಜತಾಂತ್ರಿಕ ಮತ್ತು ಭದ್ರತಾ ಸಹಕಾರಕ್ಕೆ ಕಾರಣವಾಗುತ್ತದೆ ಎಂದು ಇಸ್ರೇಲ್ ಪ್ರಧಾನಿ ಹೇಳಿದರು.

ಮೂಲಭೂತವಾದ ಅಕ್ಷಗಳಿಗೆ ವ್ಯತಿರಿಕ್ತವಾಗಿ, ವಾಸ್ತವ, ಸವಾಲುಗಳು ಮತ್ತು ಗುರಿಗಳನ್ನು ಅದೇ ರೀತಿಯಲ್ಲಿ ನೋಡುವ ದೇಶಗಳ ಅಕ್ಷವನ್ನು ರಚಿಸುವುದು ಇಲ್ಲಿನ ಉದ್ದೇಶವಾಗಿದೆ ಎಂದು ಅವರು ಹೇಳಿದರು.

5 ಕೋಟಿ ರೂ. ಮೌಲ್ಯದ ಸಿಗರೇಟ್, ನಾಲ್ವರ ವಶ

ಅಹಮದಾಬಾದ್: ಗುಜರಾತಿನ ಅರಬ್ಬೀ ಸಮುದ್ರದಲ್ಲಿ ಭಾರತೀಯ ಕೋಸ್ಟ್ ಗಾರ್ಡ್ ವಿದೇಶಿ ದೋಣಿಯನ್ನು ತಡೆದು, ಸುಮಾರು 5 ಕೋಟಿ ರೂ. ಮೌಲ್ಯದ 200 ಬಾಕ್ಸ್ ವಿದೇಶಿ ಬ್ರಾಂಡ್ ಸಿಗರೇಟ್‌ಗಳನ್ನು ವಶಪಡಿಸಿಕೊಂಡು, ನಾಲ್ವರು ಇರಾನಿ ಪ್ರಜೆಗಳನ್ನು ಬಂಧಿಸಿದೆ ಎಂದು ಐಸಿಜಿ ಭಾನುವಾರ ತಿಳಿಸಿದೆ.



ಕಾರ್ಯಾಚರಣೆಯನ್ನು ಶನಿವಾರ ದ್ವಾರಕಾ ಕರಾವಳಿಯಲ್ಲಿ ನಡೆಸಲಾಯಿತು. ಅಲ್ಲಿ ಅಲ್ ಮುಖ್ತಾರ್ ಎಂಬ ನಾಲ್ವರು ಇರಾನಿ ಸಿಬ್ಬಂದಿಗಳಿದ್ದ ಹಡಗಿನಲ್ಲಿ ಸುಮಾರು ಒಂದು ಲಕ್ಷ ಪ್ಯಾಕೆಟ್ ವಿದೇಶಿ ಬ್ರಾಂಡ್ ಸಿಗರೇಟ್‌ಗಳಿದ್ದ 200 ಪೆಟ್ಟಿಗೆಗಳನ್ನು ಅಡಗಿಸಿಟ್ಟಿರುವುದು ಕಂಡುಬಂದಿದೆ. ಈ ಸರಕುಗಳ ಅಂತಾರಾಷ್ಟ್ರೀಯ ಮಾರುಕಟ್ಟೆ ಮೌಲ್ಯ 2.5 ಕೋಟಿ ರೂಪಾಯಿಗಳಿಂದ 5 ಕೋಟಿ ರೂಪಾಯಿಗಳಷ್ಟಿದೆ ಎಂದು ಐಸಿಜಿ ತನ್ನ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ. ಹೆಚ್ಚಿನ ತನಿಖೆ ಮತ್ತು ಸಿಬ್ಬಂದಿಯ ವಿಚಾರಣೆಗಾಗಿ ದೋಣಿಯನ್ನು ಗುಜರಾತಿನ ಪೋರಬಂದರ್‌ಗೆ ಕರೆದೊಯ್ಯಲಾಗಿದೆ. ಇದಕ್ಕೂ ಮೊದಲು, ಐಸಿಜಿ ಮತ್ತು ಗುಜರಾತ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಫೆ.16ರಂದು ಜಂಟಿ ಕಾರ್ಯಾಚರಣೆಯಲ್ಲಿ ಗುಜರಾತ್ ಕರಾವಳಿಯಲ್ಲಿ 200 ಕೆಜಿಗೂ ಹೆಚ್ಚು ಅನುಮಾನಾಸ್ಪದ ಮಾದಕ ದ್ರವ್ಯಗಳೊಂದಿಗೆ ಇಬ್ಬರು ಇರಾನಿನ ಪ್ರಜೆಗಳನ್ನು ಬಂಧಿಸಿದ್ದವು.

ಅಸ್ಸಾಂ ಕಾಂಗ್ರೆಸ್‌ನ ಮಾಜಿ ರಾಜ್ಯಾಧ್ಯಕ್ಷ ಬಿಜೆಪಿಗೆ ಸೇರ್ಪಡೆ

ಗುವಾಹಟಿ: ಅಸ್ಸಾಂ ಕಾಂಗ್ರೆಸ್‌ನ ಮಾಜಿ ರಾಜ್ಯಾಧ್ಯಕ್ಷ ಭೂಪೇನ್ ಬೋರಾ ಭಾನುವಾರ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಬಿಜೆಪಿ ಸೇರಿದ ಕೆಲವೇ ಗಂಟೆಗಳಲ್ಲಿ, ಆಡಳಿತ ಪಕ್ಷವು ಬೋರಾ ಅವರನ್ನು ರಾಜ್ಯ ಕಾರ್ಯಕಾರಿ ಸಮಿತಿಗೆ ಸೇರಿಸಿದೆ. ಅಸ್ಸಾಂ ಬಿಜೆಪಿ ಪ್ರಧಾನ ಕಚೇರಿ ವಾಜಪೇಯಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಬೋರಾ ಬಿಜೆಪಿ ಸದಸ್ಯರಾದರು. ಅವರ ಜತೆಗೆ, ಕಾಂಗ್ರೆಸ್ ಮಾಜಿ ನಾಯಕರಾದ ಸಂಜು ಬೋರಾ, ರಾಜೇಶ್ ಕುಮಾರ್ ಜೋಶಿ, ಕಂಗ್ಕನ್ ದಾಸ್, ಗಗನ್ ಚಂದ್ರ ಬೋರಾ ಮತ್ತು ವಿರೋಧ ಪಕ್ಷದ ಹನ್ನೆರ ಡಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಸೇರಿದ್ದಾರೆ. ಫೆ.16ರಂದು ಬೋರಾ ರಾಜೀನಾಮೆ ನೀಡಿದ್ದರು, ಕಾಂಗ್ರೆಸ್ ಹೈಕಮಾಂಡ್ ಅದನ್ನು ಸ್ವೀಕರಿಸಲಿಲ್ಲ ಮತ್ತು ಹಿರಿಯ ನಾಯಕರು ಅವರ ಅವರ ಮನವೊಲಿಸಿದ್ದರು. ರಾಹುಲ್ ಗಾಂಧಿ ಕೂಡ ಅವರೊಂದಿಗೆ ಮಾತನಾಡಿದ್ದರು. ಈ ಬೆನ್ನಲ್ಲೇ ಸಿಎಂ ಹಿಮಂತಾ ಬಿಸ್ವ ಶರ್ಮಾ ಅವರು ಬೋರಾ ನಿವಾಸಕ್ಕೆ ತೆರಳಿದ್ದರು. ಅಂತಿಮವಾಗಿ ಬೋರಾ ಬಿಜೆಪಿ ಸೇರಿದ್ದಾರೆ.

ಬ್ರೆಜಿಲ್ ಏರೋಸ್ಪೇಸ್ ಸಂಸ್ಥೆಯಿಂದ ಐಎಎಫ್‌ಗೆ 80 ಸಾರಿಗೆ ವಿಮಾನ?

ಜಾಗತಿಕ ಉತ್ಪಾದನಾ ನೆಲೆಯಾಗಿ ಭಾರತ

ಹೊಸದಿಲ್ಲಿ: ಬ್ರೆಜಿಲ್‌ನ ಏರೋಸ್ಪೇಸ್ ಸಂಸ್ಥೆ ಎಂಬ್ರೇರ್, ಭಾರತೀಯ ವಾಯುಪಡೆಗೆ 80 ಸಾರಿಗೆ ವಿಮಾನಗಳ ಒಪ್ಪಂದವನ್ನು ಪಡೆದರೆ, ಏಷ್ಯಾ-ಪೆಸಿಫಿಕ್ ಮಾರುಕಟ್ಟೆಯಲ್ಲಿ ಸೇವೆ ಸಲ್ಲಿಸುತ್ತಿರುವ ತನ್ನ ಕೆಸಿ-390 ಮಿಲೇನಿಯಮ್ ವಿಮಾನಗಳಿಗೆ ಭಾರತವನ್ನು ಪ್ರಾಥಮಿಕ ಉತ್ಪಾದನಾ ನೆಲೆಯನ್ನಾಗಿಸಲು ಸಿದ್ಧವಾಗಿದೆ ಎಂದು ಸೂಚಿಸಿದೆ.

ಸಂದರ್ಶನವೊಂದರಲ್ಲಿ, ಎಂಬ್ರೇರ್ ಅಧ್ಯಕ್ಷ ಮತ್ತು ಸಿಇಒ ಫ್ರಾನ್ಸಿಸ್ಕೊ ಗೋಮ್ಸ್ ನೆಟೊ, ಕೆಸಿ-390 ಅನ್ನು ಐಎಎಫ್‌ಗೆ ಅತ್ಯಂತ ತಾಂತ್ರಿಕವಾಗಿ ಉತ್ತಮ ಆಯ್ಕೆ ಎಂದು ಪ್ರತಿಪಾದಿಸಿದರು. ಅದರ 26-ಟನ್ ಪೇಲೋಡ್ ಸಾಮರ್ಥ್ಯ, ಜೆಟ್-ಚಾಲಿತ ಎಂಜಿನ್‌ಗಳು, 470-ನಾಟ್ ಕ್ರೂಸ್ ವೇಗ ಮತ್ತು ಸುಸಜ್ಜಿತ ರನ್‌ವೇಗಳಿಲ್ಲದೆಯೇ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಉಲ್ಲೇಖಿಸಿ, ಕೆಸಿ-390 ಪ್ರತಿಸ್ಪರ್ಧಿ ವಿಮಾನಗಳಿಗಿಂತ(ಟರ್ಬೊಪ್ರಾಪ್ ಸಿ-130 ಜೆ ಸೂಪರ್ ಹರ್ಕ್ಯುಲಸ್), ಶೇ.25-30ರಷ್ಟು ವೇಗವಾಗಿದೆ ಮತ್ತು ಕಾರ್ಯನಿರ್ವಹಣೆ ಅಗ್ಗ ಎಂದರು.

ಒಪ್ಪಂದ ಮತ್ತಷ್ಟು ಸನಿಹ: ಐಎಎಫ್ ತನ್ನ ಹಳೆಯ ಎಎನ್-32 ಮತ್ತು ಐಎಲ್-76 ನೌಕಾಪಡೆ ವಿಮಾನಗಳನ್ನು ಬದಲಿಸಲು 2022ರಲ್ಲಿ ಮನವಿ ಸಲ್ಲಿಸಿತ್ತು. ಸುಮಾರು 80 ಮಧ್ಯಮ ಸಾರಿಗೆ ವಿಮಾನಗಳನ್ನು ಖರೀದಿಸಲು ನಿರ್ಧರಿಸಲಾಗಿದ್ದು, ರಕ್ಷಣಾ ಸ್ವಾಧೀನ ಮಂಡಳಿಯ ನಿರ್ಧಾರವನ್ನು ಕೆಲವೇ ತಿಂಗಳುಗಳಲ್ಲಿ ನಿರೀಕ್ಷಿಸಲಾಗಿದೆ. ಏರ್‌ಬಸ್‌ನ ಎ-400ಎಂ ಮತ್ತು ಲಾಕ್ಹೀಡ್ ಮಾರ್ಟಿನ್‌ನ ಸಿ-130ಜೆ ಕೂಡ ಸ್ಪರ್ಧೆಯಲ್ಲಿವೆ. ಬಿಡ್‌ಗಾಗಿ ಮಹೀಂದ್ರಾದೊಂದಿಗೆ ಎಂಬ್ರೇರ್ ಪಾಲುದಾರಿಕೆ ಹೊಂದಿದೆ. ಒಂಬತ್ತು ಯುರೋಪಿಯನ್ ನ್ಯಾಟೋ ರಾಷ್ಟ್ರಗಳು ಈಗಾಗಲೇ ಕೆಸಿ-390 ಅನ್ನು ಆಯ್ಕೆ ಮಾಡಿವೆ.



ವಿಶಾಲ ಮಹತ್ವಾಕಾಂಕ್ಷೆಗಳು: ಭಾರತದಲ್ಲಿ ಕೆಸಿ-390 ನಿರ್ವಾಹಕರಿಗೆ ವಿಶೇಷ ಪ್ರಾದೇಶಿಕ ಎಂಆರ್‌ಒ ಕೇಂದ್ರವನ್ನೂ ಪ್ರಸ್ತಾಪಿಸಲಾಗಿದೆ. ಅಲ್ಲದೆ, ಭಾರತದ ಪ್ರಾದೇಶಿಕ ಸಾರಿಗೆ ವಿಮಾನ ಯೋಜನೆಯಲ್ಲಿ ಇ175 ಪ್ರಾದೇಶಿಕ ಜೆಟ್‌ಗಾಗಿ ಅಂತಿಮ ಜೋಡಣೆ ಸ್ಥಾವರ ಸ್ಥಾಪಿಸಲು ಎಂಬ್ರೇರ್ ಮತ್ತು ಅದಾನಿ ಡಿಫೆನ್ಸ್ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಟ್ರಾಶಿ-1 ಹೆಸರಲ್ಲಿ ಭಯೋತ್ಪಾದಕ ವಿರೋಧಿ ಕಾರ್ಯಾಚರಣೆ

ಮೂವರು ಜೆಇಎಂ ಉಗ್ರರ ವಧೆ

ಶ್ರೀನಗರ: ಭದ್ರತಾ ಪಡೆಗಳ ಯಶಸ್ವಿ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಉಗ್ರ ಸಂಘಟನೆ ಜೈಶ್-ಎ-ಮೊಹಮ್ಮದ್(ಜೆಇಎಂ) ನಂಟು ಹೊಂದಿದ್ದ ಮೂವರು ಉಗ್ರರನ್ನು ಭದ್ರತಾ ಪಡೆಗಳು ಕಿಶ್ತ್ವಾರ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹೊಡೆದುರುಳಿಸಿದ್ದಾರೆ. ಚತ್ರೂ ಬೆಲ್ಟ್‌ನ ಪಾಸರ್ಕುಟ್‌ನ ಸಾಮಾನ್ಯ ಪ್ರದೇಶದಲ್ಲಿ ಟ್ರಾಶಿ-1 ಕಾರ್ಯಾಚರಣೆಯ ವೇಳೆ ಭಯೋತ್ಪಾದಕರನ್ನು ಸದೆಬಡಿಯಲಾಗಿದೆ. ಗುಂಡಿನ ಚಕಮಕಿ ವೇಳೆ, ವಧೆಯಾದ ಭಯೋತ್ಪಾದಕರ ಶವಗಳು ಗುರುತಿಸಲಾಗದಷ್ಟು ಸುಟ್ಟುಹೋಗಿವೆ.

ಸಕ್ರಿಯ ಭಯೋತ್ಪಾದಕ ಸೈಫುಲ್ಲಾ: ಭದ್ರತಾ ಸಂಸ್ಥೆಗಳ ಪ್ರಾಥಮಿಕ ವರದಿ ಪ್ರಕಾರ, ವಧೆಯಾದ ಉಗ್ರರಲ್ಲಿ ಓರ್ವ ಕುಖ್ಯಾತ ಜೆಇಎಂ ಕಮಾಂಡರ್ ಸೈಫುಲ್ಲಾ ಎಂಬುದು ಬಹಿರಂಗಗೊಂಡಿದೆ. ಆತ ಸುಮಾರು ಐದು ವರ್ಷಗಳ ಹಿಂದೆ ಜಮ್ಮು -ಕಾಶ್ಮೀರಕ್ಕೆ ನುಸುಳಿದ್ದು, ಅಂದಿನಿಂದ ಈ ಪ್ರದೇಶದಲ್ಲಿ ಸಕ್ರಿಯನಾಗಿದ್ದನು, ಭದ್ರತಾ ಪಡೆಗಳ ಮೇಲೆ ಹಲವಾರು ಮಾರಣಾಂತಿಕ ದಾಳಿಯ ಮಾಸ್ಟರ್ ಮೈಂಡ್ ಎಂದು ಹಲವು ತನಿಖೆಯಲ್ಲಿ ಬಹಿರಂಗಗೊಂಡಿದೆ. ಈ ಪೈಕಿ 2024 ಜುಲೈನಲ್ಲಿ ನಡೆದ ಒಂದು ದಾಳಿಯು ನಾಲ್ಕು ಸೈನಿಕರ ವೀರಗತಿಗೆ ಕಾರಣವಾಗಿತ್ತು.

ಅಪಾರ ಶಸ್ತ್ರಾಸ್ತ್ರಗಳ ವಶ

ಮೃತ ಉಗ್ರರಿಂದ ಎರಡು ಎಕೆ-47 ಬಂದೂಕುಗಳು ಸೇರಿದಂತೆ ಅಪಾರ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇನೆ ತಿಳಿಸಿದೆ.



ಸೇನಾ ಶ್ವಾನಕ್ಕೆ ಗಾಯ

ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆಯ 2 ಪ್ಯಾರಾ ವಿಶೇಷ ಪಡೆಗಳ ಉತ್ತಮ ತರಬೇತಿ ಪಡೆದ ಶ್ವಾನವೊಂದು ಗಾಯಗೊಂಡಿದೆ. ಜರ್ಮನ್ ಶೆಫರ್ಡ್ ಟೈಸನ್, ಕಾರ್ಯಾಚರಣೆಯ ವೇಳೆ ಮುನ್ನಡೆಯ ನೇತೃತ್ವ ವಹಿಸಿತ್ತು.

ಕಿರುಸುದ್ದಿ

ಕಾರ್ಕಳದಲ್ಲಿ 'ಮಾದಕ ದ್ರವ್ಯ ವಿರೋಧಿ ಜಾಥಾ' ಕಾರ್ಯಕ್ರಮ

ಕಾರ್ಕಳ: ರಾಷ್ಟ್ರೀಯ ಸೇವಾ ಯೋಜನೆ ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜು, ರೋಟರಿ ಕ್ಲಬ್ ಕಾರ್ಕಳ, ಜೇಸಿಐ ಕಾರ್ಕಳ, ವಿಜೇತ ವಿಶೇಷ ಶಾಲೆ ಇದರ ಸಹಯೋಗದಲ್ಲಿ 'ಮಾದಕ ದ್ರವ್ಯ ವಿರೋಧಿ ಜಾಥಾ' ಕಾರ್ಯಕ್ರಮ ನಡೆಯಿತು. ವಿಜೇತ ಶಾಲೆಯಿಂದ ಬಂಡಿಮಠ ಬಸ್ ನಿಲ್ದಾಣದವರೆಗೆ ನಡೆದ ಮಾದಕ ದ್ರವ್ಯ ವಿರೋಧಿ ಜಾಥಾ ಕಾರ್ಯಕ್ರಮದ ಉದ್ಘಾಟನೆಯನ್ನು ರೋಟರಿ ಕ್ಲಬ್ ಕಾರ್ಕಳ ಇದರ ಅಧ್ಯಕ್ಷ ನವೀನ್ ಶೆಟ್ಟಿ ಜಾಥಾಕ್ಕೆ ಚಾಲನೆ ನೀಡಿದರು. ಅಧ್ಯಕ್ಷತೆಯನ್ನು ಜೇಸಿಐ ಕಾರ್ಕಳದ ಅಧ್ಯಕ್ಷ ಅವಿನಾಶ್ ಜಿ. ಶೆಟ್ಟಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾರ್ಕಳದ ಸಮಾಜ ಹಿತ ಚಿಂತಕರಾದ ಸಮದ್ ಖಾನ್, ಉದ್ಯಮಿಗಳಾದ ವೃಷಭರಾಜ ಜೈನ್, ರೋಟರಿ ಸೇವಾ ಯೋಜನೆಯ ವಸಂತ್ ಎಂ., ಕಾರ್ಕಳ ಪುರಸಭೆ ಮಾಜಿ ಅಧ್ಯಕ್ಷ ಸುಭಿತ್ ಎನ್.ಆರ್., ಸಮಾಜ ಸೇವಕ ಶೋಭಾ ಭಾಸ್ಕರ್, ವಿಜೇತ ವಿಶೇಷ ಶಾಲಾ ಸ್ಥಾಪಕರಾದ ಡಾ. ಕಾಂತಿ ಹರೀಶ್, ಎನ್ನೆಸ್ಸೆಸ್ ಯೋಜನಾಧಿಕಾರಿಗಳಾದ ಪ್ರೊಫೆಸರ್ ಚಂದ್ರಕಾಂತ್ ಶೆಟ್ಟಿ, ಪ್ರೊಫೆಸರ್ ರೇಣುಕಾ ಎಚ್.ಜಿ. ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಎನ್ನೆಸ್ಸೆಸ್ ವಿದ್ಯಾರ್ಥಿಗಳಾದ ಅಕ್ಷಿನ ಕಾರ್ಯಕ್ರಮ ನಿರೂಪಿಸಿ, ಹುಲಿಗೇಶ್ ಸ್ವಾಗತಿಸಿ, ಆದರ್ಶ ವಂದಿಸಿದರು.

ಇಂದು ಡಾ. ಅಮ್ಮೆಂಬಳ ಬಾಳಪ್ಪ ಜನ್ಮದಿನಾಚರಣೆ

ಬಂಟ್ವಾಳ: ಮಂಗಳೂರು ವಿಶ್ವವಿದ್ಯಾನಿಲಯ ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ ಮಂಗಳಗಂಗೋತ್ರಿ, ಸ್ವಾತಂತ್ರ್ಯ ಯೋಧ ಡಾ. ಅಮ್ಮೆಂಬಳ ಬಾಳಪ್ಪ ಸೇವಾ ಪ್ರತಿಷ್ಠಾನ, ಸಂಯುಕ್ತ ಆಶ್ರಯದಲ್ಲಿ ಸ್ವಾತಂತ್ರ್ಯ ಹೋರಾಟಗಾರ, ಮತ್ತು ಕಾರ್ಮಿಕ ಮುಖಂಡ ಡಾ. ಅಮ್ಮೆಂಬಳ ಬಾಳಪ್ಪ ಅವರ ಜನ್ಮದಿನಾಚರಣೆ ಫೆ.23 ಬೆ. 10.30ಕ್ಕೆ ಹಂಪನಕಟ್ಟೆ ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ನಡೆಯಲಿದೆ. ಸ್ಪೀಕರ್ ಯು.ಟಿ. ಖಾದರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ.ಎಲ್. ಧರ್ಮ ಅಧ್ಯಕ್ಷತೆ ವಹಿಸಲಿದ್ದಾರೆ. ಬಿ.ಸಿ.ರೋಡು ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷ ಪ್ರೊ. ತುಕಾರಾಂ ಪೂಜಾರಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ ಹಲವಾರು ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಫೆ.25: ಸಂಸದರಿಂದ ರಕ್ಷಣಾ ತಡೆಗೋಡೆಗಳಿಗೆ ಭೂಮಿ

ಮಡಿಕೇರಿ: ರಾಷ್ಟ್ರೀಯ ಹೆದ್ದಾರಿ–275 ರ ಸರಪಣಿ 78 ಕಿ.ಮೀ. ರಿಂದ 125 ಕಿ.ಮೀ ವರೆಗಿನ ಆಯ್ದ 21 ಭಾಗಗಳಲ್ಲಿ ನಿರ್ಮಿಸಲುದ್ದೇಶಿಸಿರುವ ರಕ್ಷಣಾ ತಡೆಗೋಡೆಗಳ ಭೂಮಿ ಪೂಜೆಯನ್ನು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಫೆ.25 ರಂದು ಮಧ್ಯಾಹ್ನ 12.30 ಗಂಟೆಗೆ ನೆರವೇರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೆ.ಇ.ಇ ಮೈನ್ಸ್ : ವಾಸವಿ ಕೆ.ಸಿ.ಗೆ ಶೇ. 97.68 ಅಂಕ

ಬಂಟ್ವಾಳ: ಕೇಂದ್ರ ಸರಕಾರದ ಎನ್‌ಟಿಎ ಪ್ರಾಧಿಕಾರವು ನಡೆಸುವ ರಾಷ್ಟ್ರಮಟ್ಟದ ಜೆ.ಇ.ಇ ಮೈನ್ಸ್ 2026ರ ಪ್ರಥಮ ಹಂತದ ಪರೀಕ್ಷೆಯಲ್ಲಿ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ವಾಸವಿ ಕೆ.ಸಿ. ಶೇ. 97.68 ಅಂಕಗಳನ್ನು ಗಳಿಸಿದ ಸಾಧನೆಗೈದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.



ಅಸೈಗೋಳಿ: ಭಾವಚಿತ್ರ ಬಿಡಿಸುವ ಸ್ಪರ್ಧೆ

ಕೊಣಾಜೆ: ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯ ಅಂಗವಾಗಿ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ವಿದ್ಯಾನಿಧಿ ಟ್ರಸ್ಟ್ ಉಳ್ಳಾಲ ತಾಲೂಕು ವತಿಯಿಂದ ಅಸೈಗೋಳಿ ವಿದ್ಯೋದಯ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಬಣ್ಣ ಹಚ್ಚುವ ಮತ್ತು ಭಾವಚಿತ್ರ ಬಿಡಿಸುವ ಸ್ಪರ್ಧೆ ನಡೆಯಿತು. ವಿದ್ಯಾನಿಧಿ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷರಾದ ಯಾದವ, ಕಲಾ ರತ್ನ ಪ್ರಶಸ್ತಿ ಪಡೆದುಕೊಂಡಿರುವ ಉಮೇಶ್ ಪಜೀರ್ ಇವರು ವಿದ್ಯಾರ್ಥಿಗಳಿಗೆ ಅಂಬೇಡ್ಕರ್ ರವರ ಶಿಕ್ಷಣ, ಜೀವನ ಚರಿತ್ರೆ ಕುರಿತು ಮಾತನಾಡಿದರು. ಶಿಕ್ಷಕಿ ಅನಿತಾ, ಈವಾ ನಿಖಾ ಪೇರೋರು, ಕುಮಾರಿ ಪ್ರೀತಿ, ಶಾಲಾ ಮುಖ್ಯ ಶಿಕ್ಷಕಿ ಪುಟ್ಟಮ್ಮ ಮೊದಲಾದವರು ಉಪಸ್ಥಿತರಿದ್ದರು.



ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಉಚಿತ ಶಿಕ್ಷಣ ಸೌಲಭ್ಯದ ಪ್ರವೇಶ ಪರೀಕ್ಷೆ

ವಿದ್ಯಾರ್ಥಿಗಳ ದಾಖಲೆ ಹಾಜರಾತಿ

ಹರೀಶ್ ಕೆ. ಆದೂರು

ಮೂಡುಬಿದಿರೆ: ರಾಜ್ಯದ ಮೂಲೆ ಮೂಲೆಗಳಿಂದ ತಂಡೋಪತಂಡವಾಗಿ ಹರಿದು ಬಂದ ವಿದ್ಯಾರ್ಥಿಗಳು ಕನ್ನಡ ಮಾಧ್ಯಮಕ್ಕೆ ಪ್ರವೇಶ ಬಯಸಿ ಪರೀಕ್ಷೆ ಬರೆಯುವ ಮೂಲಕ ಮೂಡುಬಿದಿರೆಯ ವಿದ್ಯಾಗಿರಿಯಲ್ಲಿ ಹೊಸ ದಾಖಲೆಯೊಂದು ಬರೆಯಲ್ಪಟ್ಟಿದೆ. ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಉಚಿತ ಶಿಕ್ಷಣ ಸೌಲಭ್ಯದ ಪ್ರವೇಶ ಪರೀಕ್ಷೆ ಭಾನುವಾರ ನಡೆಯಿತು.

ವಿದ್ಯಾಗಿರಿಯಲ್ಲಿ ಜನಜಾತ್ರೆ!

35,000ಕ್ಕೂ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಆಗಮಿಸಿದ್ದರೂ ಎಲ್ಲೂ ಏನೂ ಅವ್ಯವಸ್ಥೆಗಳಾಗಿರಲಿಲ್ಲ. ಅಚ್ಚುಕಟ್ಟಿನ ವ್ಯವಸ್ಥೆಯೊಂದಿಗೆ ಪರೀಕ್ಷೆ ನಡೆಸಲಾಯಿತು. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಆಳ್ವಾಸ್ ಸಂಸ್ಥೆಯ ವತಿಯಿಂದ, ವ್ಯವಸ್ಥಿತ ಶೌಚಾಲಯದೊಂದಿಗೆ ಉಚಿತ ತಂಗುವ ವ್ಯವಸ್ಥೆ ಕಲ್ಪಿಸಲಾಗಿತ್ತು.

ಕನ್ನಡ ಮಾಧ್ಯಮದ ಉಚಿತ ಶಿಕ್ಷಣ ಸೌಲಭ್ಯದಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ, ವಿದ್ಯಾರ್ಥಿನಿಲಯ, ಪಠ್ಯಪುಸ್ತಕ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಶಾಲಾ ಶಿಕ್ಷಣದೊಂದಿಗೆ ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿಯೇ ಸ್ಪರ್ಧಾತ್ಮಕವಾದ ಬುದ್ಧಿಮತ್ತೆ ಜತೆಗೆ ಸುಸಂಸ್ಕೃತವಾದ ಮನಸ್ಸನ್ನು ಕಟ್ಟುವ ವಿವಿಧ ಚಟುವಟಿಕೆಗಳನ್ನು ಕಲಿಸಲಾಗುತ್ತದೆ. ಸದ್ಯ ಇಡೀ ಕನ್ನಡ ಮಾಧ್ಯಮ ಶಾಲೆಯಲ್ಲಿ 6ರಿಂದ 10ನೇ ತರಗತಿಯವರೆಗೆ 750ಕ್ಕೂ ಅಧಿಕ ಮಕ್ಕಳಿದ್ದು, ಉಚಿತ ವಸತಿ, ಊಟ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.



ಈವರೆಗೆ 10ನೇ ತರಗತಿಯಿಂದ 1862 ವಿದ್ಯಾರ್ಥಿಗಳು ಮುಗಿಸಿದ್ದು ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ, ವೈದ್ಯಕೀಯ, ಇಂಜಿನಿಯರಿಂಗ್, ಕಾನೂನು ಇನ್ನಿತರ ಪದವಿಗಳೊಂದಿಗೆ ಸಾಧಕ ವಿದ್ಯಾರ್ಥಿಗಳಾಗಿ ಮೂಡಿ ಬಂದಿದ್ದಾರೆ. ವಾರ್ಷಿಕ ಓರ್ವ ವಿದ್ಯಾರ್ಥಿಗೆ ಸಂಸ್ಥೆಯ ವತಿಯಿಂದ 1 ಲಕ್ಷದ 30 ಸಾವಿರ ರೂಪಾಯಿ ವ್ಯಯಿಸಲಾಗುತ್ತಿದ್ದು, ಒಟ್ಟು 10 ಕೋಟಿಗೂ ಮಿಕ್ಕಿ ಹಣವನ್ನು ಸಂಸ್ಥೆ ವಾರ್ಷಿಕವಾಗಿ ವ್ಯಯಿಸುತ್ತಿದೆ.

ಅತ್ಯಂತ ಸುವ್ಯವಸ್ಥೆ!

ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿದ್ದ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿತ್ತು. 5 ಕೇಂದ್ರಗಳಲ್ಲಿ ಪರೀಕ್ಷಾ ಕೊಠಡಿ ವ್ಯವಸ್ಥೆ ಮಾಡಲಾಗಿತ್ತು. ಆಳ್ವಾಸ್ ವಿದ್ಯಾಗಿರಿ ಹಾಗೂ ಪುತ್ತಿಗೆ ಕ್ಯಾಂಪಸ್‌ನ ಯಶೋಕಿರಣ ಬ್ಲಾಕ್, ಜಗನ್ಮೋಹನ ಬ್ಲಾಕ್, ಕಾಮರ್ಸ್ ಬ್ಲಾಕ್, ಆಳ್ವಾಸ್ ಪದವಿ ಕಾಲೇಜು ಮತ್ತು ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ ಪ್ರವೇಶ ಪರೀಕ್ಷೆ ನಡೆಸಲಾಗಿದೆ. 6 ಮತ್ತು 9ನೇ ತರಗತಿಯವರೆಗೆ ಎಲ್ಲಾ ಪಠ್ಯ ವಿಷಯಗಳು ಸೇರಿದಂತೆ ತಾರ್ಕಿಕ ಸಾಮರ್ಥ್ಯ ಆಧಾರಿತವಾಗಿ 150 ಅಂಕಗಳಿಗೆ 2.30 ಗಂಟೆಗಳ ಕಾಲ ಪರೀಕ್ಷೆ ನಡೆದಿದೆ. ಪ್ರಾಥಮಿಕ ಹಂತದಲ್ಲಿ ಒಎಮ್ ಆರ್ ಆಧಾರಿತ ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆಯನ್ನು ಸ್ಪರ್ಧಾತ್ಮಕ ಪರೀಕ್ಷೆಯಂತೆ ಪ್ರಶ್ನೆ ಪತ್ರಿಕೆಗಳನ್ನು ಎ,ಬಿ,ಸಿ,ಡಿ,ಇ ಸಿರೀಸ್‌ನಲ್ಲಿ ನೀಡಲಾಗಿತ್ತು. ವಿದ್ಯಾರ್ಥಿಯ ಚಿಂತನಾ ಸಾಮರ್ಥ್ಯವನ್ನು ಗುರುತಿಸಿದ ನಂತರ, ಸಂಸ್ಥೆ ನಿಗದಿ ಪಡಿಸಿದ ಮಾನದಂಡ ಗಳಿಸಿದವರು ಮುಖ್ಯ ಹಂತಕ್ಕೆ ಆಯ್ಕೆಯಾಗಲಿದ್ದಾರೆ.

ದಾಖಲೆಯ ವಿದ್ಯಾರ್ಥಿಗಳು

ಈ ಬಾರಿ ದಾಖಲೆಯ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಆಗಮಿಸಿದ್ದಾರೆ. ಬೆಳಗಾವಿ ಜಿಲ್ಲೆಯೊಂದರಿಂದಲೇ ಅತ್ಯಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಆಗಮಿಸಿದ್ದು ವಿಶೇಷವೇ ಸರಿ. ಒಂದೊಂದು ಶಾಲೆಯಿಂದ ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಆಗಮಿಸಿ ಪರೀಕ್ಷೆ ಬರೆಯುತ್ತಿದ್ದುದು ನೋಡಿದರೆ ಖುಷಿಯಾಗುತ್ತದೆ. ಒಟ್ಟಿನಲ್ಲಿ ಜನತೆಯಲ್ಲಿ ಭಾಷೆಯ ಬಗೆಗಿರುವ ಜಾಗೃತಿ ಹೆಚ್ಚಾಗಿರುವುದು ಖುಷಿಯ ವಿಚಾರ ಎನ್ನುತ್ತಾರೆ ಸಂಸ್ಥೆಯ ಟ್ರಸ್ಟಿ ವಿವೇಕ್ ಆಳ್ವ

ನಿಟ್ಟೂರು ಕೊಳಚೆ ನೀರು ಶುದ್ಧೀಕರಣ ಘಟಕಕ್ಕೆ ಅಧಿಕಾರಿಗಳೊಂದಿಗೆ ಶಾಸಕ ಯಶ್‌ಪಾಲ್ ಭೇಟಿ

ಉಡುಪಿ: ನಗರಸಭೆಯ ನಿಟ್ಟೂರು ಒಳಚರಂಡಿ ಕೊಳಚೆ ನೀರು ಶುದ್ಧೀಕರಣ ಘಟಕಕ್ಕೆ ಅಧಿಕಾರಿಗಳೊಂದಿಗೆ ಶಾಸಕ ಯಶ್‌ಪಾಲ್ ಸುವರ್ಣ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಿಟ್ಟೂರು ಕೊಳಚೆ ನೀರು ಶುದ್ಧೀಕರಣ ಘಟಕದ ಪರಿಸರದಲ್ಲಿ ಸ್ಥಳೀಯ ಜನರಿಗೆ ದುರ್ವಾಸನೆ ಹಾಗೂ ಕುಡಿಯುವ ನೀರಿನ ಬಾವಿಗಳಿಗೆ ಕಲುಷಿತ ನೀರು ಸೇರುವ ಬಗ್ಗೆ ದೂರುಗಳು ಬರುತ್ತಿದ್ದು, ಈ ಬಗ್ಗೆ ತಕ್ಷಣ ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಾಷ್ಟ್ರೀಯ ಹಸಿರು ಪೀಠದ ಆದೇಶದ ಮೇರೆಗೆ ಮಂಜೂರಾದ 30 ಕೋಟಿ ಅನುದಾನದಲ್ಲಿ ಕೊಳಚೆ ನೀರು ಶುದ್ಧೀಕರಣ ಘಟಕದ ಉನ್ನತೀಕರಣ ಕಾಮಗಾರಿಯ ಬಗ್ಗೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಶೀಘ್ರ ಕಾಮಗಾರಿ ಪೂರ್ಣಗೊಳಿಸುವಂತೆ ತಿಳಿಸಿದರು.



ಅಧಿಕಾರಿಗಳಿಗೆ ಸೂಚನೆ

ಉಡುಪಿ ನಗರದ ಒಳಚರಂಡಿ ಕೊಳಚೆ ನೀರು ಶುದ್ಧೀಕರಣ ಘಟಕದ ಸಾಮರ್ಥ್ಯವನ್ನು ವಿಸ್ತರಿಸುವ ನಿಟ್ಟಿನಲ್ಲಿ ತಕ್ಷಣ ಯೋಜನೆಯನ್ನು ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಉಡುಪಿ ನಗರಸಭೆ ಪೌರಾಯುಕ್ತ ಮಹಾಂತೇಶ್ ಹಂಗರಗಿ, ನಗರಸಭೆಯ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಬೈಲೂರು, ಮಾಜಿ ಸದಸ್ಯರಾದ ಸಂತೋಷ್ ಜತ್ತನ್, ಬಾಲಕೃಷ್ಣ ಶೆಟ್ಟಿ, ಗಿರೀಶ್ ಅಂಚನ್, ಹರೀಶ್ ಶೆಟ್ಟಿ, ಸುಂದರ ಕಲ್ಮಾಡಿ, ಮಂಜುನಾಥ ಮಣಿಪಾಲ, ಅಶೋಕ್ ನಾಯ್ಕ್, ಗಿರಿಧರ ಆಚಾರ್ಯ ಕರಂಬಳ್ಳಿ, ಟಿ. ಜಿ. ಹೆಗ್ಡೆ, ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್, ಸಹಾಯಕ ಕಾರ್ಯಪಾಲಕ ಅಭಿಯಂತರ ದುರ್ಗಾಪ್ರಸಾದ್ ಹಾಗೂ ಸ್ಥಳೀಯ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಲೇಜು ಕಟ್ಟಡ ಏರಿದ ಮುಳ್ಳು ಹಂದಿ ಕೆಳಗೆ ಬಿದ್ದು ಸಾವು

ಪುತ್ತೂರು: ನೆಹರೂ ನಗರದ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಕಟ್ಟಡದ ನಾಲ್ಕನೇ ಮಹಡಿಯಿಂದ ಕೆಳಕ್ಕೆ ಧುಮುಕಿದ ಮುಳ್ಳು ಹಂದಿಯೊಂದು ಮೈದಾನದಲ್ಲಿ ಬಿದ್ದು ದಾರುಣವಾಗಿ ಮೃತಪಟ್ಟ ಘಟನೆ ಶನಿವಾರ ಬೆಳಗ್ಗೆ ಸಂಭವಿಸಿದೆ. ಕಾಲೇಜಿನ ಆವರಣದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳಕ್ಕೆ ಸಿದ್ಧತೆ ನಡೆಯುತ್ತಿದ್ದಾಗ ಈ ದುರ್ಘಟನೆ ಸಂಭವಿಸಿತು.



ನಾಯಿಗಳನ್ನು ಕಂಡು ಮುಳ್ಳುಹಂದಿ ಎಲ್ಲಿಂದಲೋ ಓಡಿಕೊಂಡು ಬಂದು ಕಾಲೇಜು ಆವರಣ ಪ್ರವೇಶಿಸಿತ್ತು. ಕೆಲವೇ ಹೊತ್ತಿನಲ್ಲಿ ಅದು ಕಾಲೇಜು ಕಟ್ಟಡದೊಳಗೆ ಪ್ರವೇಶಿಸಿ ಮೆಟ್ಟಿಲು ಹತ್ತುತ್ತ 3ನೇ ಮಹಡಿ ತಲುಪಿತ್ತು. ಮೆಟ್ಟಿಲ ಮೇಲೆ ಭಯದಿಂದ ಮುದುಡಿ ಕೂತಿದ್ದ ಮುಳ್ಳುಹಂದಿಯನ್ನು ಕಂಡವರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು.

ಇಲಾಖೆಯ ಸಿಬ್ಬಂದಿ, ಉಪ ವಲಯ ಅರಣ್ಯಾಧಿಕಾರಿ ಉಲ್ಲಾಸ್ ಅವರ ನೇತೃತ್ವದಲ್ಲಿ ಬಂದು ಮುಳ್ಳು ಹಂದಿಯನ್ನು ರಕ್ಷಿಸಲು ಯತ್ನಿಸಿದರು. ಭಯಗೊಂಡ ಮುಳ್ಳು ಹಂದಿ ಮತ್ತಷ್ಟು ಮೆಟ್ಟಿಲು ಏರಿ ಇನ್ನೊಂದು ಮಹಡಿಗೆ ಹೋಗಿದ್ದಲ್ಲದೆ, ಕಿಟಕಿಯೊಳಗೆ ತೂರಿ ಕೆಳಕ್ಕೆ ಜಿಗಿದಿದೆ. ನೆಲದ ಮೇಲೆ ಬಿದ್ದ ಹೊಡೆತಕ್ಕೆ ಸ್ಥಳದಲ್ಲೇ ಸಾವನ್ನಪ್ಪಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ವಲಯ ಅರಣ್ಯಾಧಿಕಾರಿ ಕಿರಣ್, ನಿಯಮ ಪ್ರಕಾರ ಪೋಸ್ಟ್ ಮಾರ್ಟಂ ಮಾಡಿ ಅಂತಿಮ ಸಂಸ್ಕಾರ ನಡೆಸಲಾಗಿದೆ ಎಂದು ಹೇಳಿದರು.

ಪೊನ್ನಂಪೇಟೆ ಪ.ಪಂ.: ವಾರ್ಡ್‌ವಾರು ಕೇತ್ರಗಳ ಪುನರ್ ವಿಂಗಡಣೆ

ಮಡಿಕೇರಿ: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ತಾಲೂಕು ಕೇಂದ್ರವಾಗಿರುವ ಪೊನ್ನಂಪೇಟೆ ಗ್ರಾ.ಪಂ.ಯನ್ನು ಪಟ್ಟಣ ಪಂಚಾಯತ್‌ಯನ್ನಾಗಿ ಘೋಷಿಸಿ ಸರಕಾರ ಈಗಾಗಲೇ ಘೋಷಿಸಿದ್ದು, ನೆರೆಯ ಬಲ್ಯಮಂಡೂರು ಗ್ರಾ.ಪಂ.ವ್ಯಾಪ್ತಿಯ ಕಾನೂರು ರಸ್ತೆ ಕಾಲೋನಿ, ಮಾಪಿಳ್ಳೆತೋಡು ಸೇತುವೆ, ಕಾವೇರಮ್ಮ ಬಡಾವಣೆ ಮತ್ತು ಇತರ ಬಡಾವಣೆಗಳು ಒಳಗೊಂಡಂತೆ ಸಂಪೂರ್ಣ ಮುಗುಟಗೇರಿ ಗ್ರಾಮವನ್ನು ಪ.ಪಂ.ವ್ಯಾಪ್ತಿಗೆ ತರಲಾಗಿದೆ.

ಪ್ರಸಕ್ತ ಪೊನ್ನಂಪೇಟೆ ಪ.ಪಂ.ವಾರ್ಡ್‌ಗಳನ್ನು 2011ರ ಜನಗಣತಿಯ ಆಧಾರದ ಮೇರೆ ಪುನರ್ ವಿಂಗಡಣೆ ಮಾಡಿ, ವಾರ್ಡ್‌ನ ಹೆಸರು ಹಾಗೂ ವಾರ್ಡ್ ವ್ಯಾಪ್ತಿಗೆ ಒಳಪಡುವ ಪ್ರದೇಶದ ವಿವರ ಮತ್ತು ಚೆಕ್ಕುಬಂದಿಗಳನ್ನು ನಮೂದಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ. ಈ ಕರಡು ಅಧಿಸೂಚನೆ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದ್ದು, ಈ ಬಗ್ಗೆ ಯಾವುದೇ ಆಕ್ಷೇಪಣೆಯನ್ನು / ಸಲಹೆ ಗಳನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣ ಸಹಿತವಾಗಿ ಹದಿನೈದು ದಿನಗಳೊಳಗೆ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ತಿಳಿಸಿದ್ದಾರೆ.

ಹೊಸಮಠ ಸಿ.ಎ.ಬ್ಯಾಂಕ್ ಕಟ್ಟಡದಲ್ಲಿ ಮಾಸ್‌ನ ಅಡಿಕೆ ಖರೀದಿ ಕೇಂದ್ರ ಉದ್ಘಾಟನೆ

ಕೃಷಿಕರಿಗೆ ಆರ್ಥಿಕ ಚೈತನ್ಯ ಸಿಗಲಿ: ಶಾಸಕಿ ಭಾಗೀರಥಿ ಮುರುಳ್ಯ

ಕಡಬ: ರೋಗ ಬಾಧೆ, ಕಾರ್ಮಿಕರ ಸಮಸ್ಯೆ, ಧಾರಣೆ ಇಳಿಕೆಯಿಂದ ಸಂಕಷ್ಟದಲ್ಲಿರುವ ಕೃಷಿಕರಿಗೆ ರೈತಪರ ಸಂಸ್ಥೆಗಳು ಸಾಂತ್ವನ ನೀಡುವಂತಾಗಬೇಕು. ಕ್ಯಾಂಪ್ಕೋ ಸಂಸ್ಥೆಯಂತೆಯೇ ಮಾಸ್ ಸಂಸ್ಥೆ ಕೂಡಾ ರೈತರ ಬದುಕಿಗೆ ಜೀವನಾಡಿಯಾಗಿ ಕೆಲಸ ಮಾಡುವಲ್ಲಿ ಯಶಸ್ವಿಯಾಗಲಿ ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಶುಭಹಾರೈಸಿದರು.

ಅವರು ಸೋಮವಾರ ಹೊಸಮಠ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘದ ಕಟ್ಟಡದಲ್ಲಿ ಸಹಕಾರ ರತ್ನ ಡಾ. ಎಂ.ಎನ್.ರಾಜೇಂದ್ರ ಕುಮಾರ್ ಅವರ ಸಹಕಾರದೊಂದಿಗೆ ಮಂಗಳೂರು ಕೃಷಿಕರ ಸಹಕಾರಿ ಸಂಘ (ಮಾಸ್ ಲಿಮಿಟೆಡ್) ದ ವತಿಯಿಂದ ಪ್ರಾರಂಭವಾದ ಅಡಿಕೆ ಖರೀದಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯ ಆರ್ಥಿಕ ಶಕ್ತಿಯಾಗಿರುವ ಅಡಕೆಗೆ ಈಗ ಧಾರಣೆ ಏರುತ್ತಿದೆ. ಕ್ಯಾಂಪ್ಕೋ, ಮಾಸ್ ನಂತಹ ಸಂಸ್ಥೆಗಳು ರೈತರ ಬೆಳೆಗಳಿಗೆ ಬೆಲೆ ಇಳಿಮುಖವಾದಾಗ ಬೆಂಬಲಕ್ಕೆ ನಿಂತು ಅವರಿಗೆ ಆರ್ಥಿಕ ಶಕ್ತಿಯನ್ನು ತುಂಬುವ ಕಾರ್ಯ ಮಾಡಬೇಕು ಎಂದು ಶಾಸಕರು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ದ.ಕ. ಜಿಲ್ಲಾ ಕೇಂದ್ರ ಸರಕಾರಿ ಬ್ಯಾಂಕಿನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು ಮಾತನಾಡಿ, ಮಾಸ್ ಸಂಸ್ಥೆಯ ಬೆಳವಣಿಗೆಯಲ್ಲಿ ಕುಂಠಿತ ಕಂಡಾಗ ಅದರ ನೇತೃತ್ವವನ್ನು ತೆಗೆದುಕೊಂಡ ಸವಣೂರು ಸೀತಾರಾಮ ರೈ ಅವರು ಸಂಸ್ಥೆಗೆ ನವ ಚೈತನ್ಯ ನೀಡಿದ್ದಾರೆ. ರೈತರ ಜ್ವಲಂತ ಸಮಸ್ಯೆಗಳಿಗೆ ಸ್ಪಂದನೆ ನೀಡಿ ಕ್ಯಾಂಪ್ಕೊ ಸಂಸ್ಥೆಯೊಂದಿಗೆ ಅನ್ಯೋನ್ಯತೆಯಿಂದ ಮಾಸ್ ಸಂಸ್ಥೆಯನ್ನು ಕಟ್ಟಿ ಬೆಳೆಸಿ ರೈತರ ಜೀವನಾಡಿಯನ್ನಾಗಿದ್ದಾರೆ ಎಂದರು.



ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾಸ್ ಲಿಮಿಟೆಡ್‌ನ ಅಧ್ಯಕ್ಷ ಕೆ.ಸೀತಾರಾಮ ರೈ ಸವಣೂರು ಅವರು ನಮ್ಮ ಮಾಸ್ ಸಂಸ್ಥೆ ಕ್ಯಾಂಪ್ಕೋ ಸಂಸ್ಥೆಗೆ ಪ್ರತಿಸ್ಪರ್ಧಿಯಲ್ಲ, ಅಡಕೆ ಧಾರಣೆ ಕುಸಿತವಾಗಿ ರೈತರು ಕಂಗೆಟ್ಟಿದ್ದಾಗ ಕ್ಯಾಂಪ್ಕೋ ಸಂಸ್ಥೆಯನ್ನು ಪ್ರಾರಂಭಿಸಿ ರೈತರ ಹಿತಕಾಯುವ ಕೆಲಸ ಮಾಡಲಾಯಿತು. ಆದೇ ರೀತಿ ಮಾಸ್ ಸಂಸ್ಥೆ ಕೂಡಾ ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಾ ಬಂದಿದೆ. ರೈತರಿಗೆ ಸೇವೆ ಮಾಡುವುದೇ ನಮ್ಮ ಗುರಿಯಾಗಿದ್ದು, ಅಡಿಕೆ ಬೆಳೆಗಾರರಿಗೆ ಒಳ್ಳೆಯ ಧಾರಣೆ ಸಿಗಬೇಕೆನ್ನುವುದೇ ನಮ್ಮ ಉದ್ದೇಶವಾಗಿದೆ ಎಂದರು. 2001ರಲ್ಲಿ 4200 ಸದಸ್ಯರೊಂದಿಗೆ ಪ್ರಾರಂಭವಾದ ಸಂಸ್ಥೆ ನಾನು ಅಧಿಕಾರ ವಹಿಸಿಕೊಂಡಾಗ 167 ಕೋಟಿ ರೂ. ವ್ಯವಹಾರವಿತ್ತು. ಪ್ರಸ್ತುತ ರೂ. 200 ಕೋಟಿಗೆ ಏರಿದೆ. ಹೊಸಮಠದಲ್ಲಿ 13 ನೇ ಶಾಖೆ ಪ್ರಾರಂಭವಾಗಿದ್ದು, ಮಾಸ್ ಸಂಸ್ಥೆಯನ್ನು ರೈತರ ಮನೆಬಾಗಿಲಿಗೆ ಕೊಂಡೊಯ್ಯುವ ಕೆಲಸ ಮಾಡುವ ಉದ್ದೇಶದಿಂದ ವಿವಿಧೆಡೆ ಶಾಖೆಗಳನ್ನು ತೆರೆಯಲಾಗುವುದು ಎಂದರು.

ಸಹಕಾರಿ ಸಂಘಗಳ ಪುತ್ತೂರು ವಿಭಾಗದ ನಿಬಂಧಕ ರಘು ಎಸ್.ಎಂ. ಮಾತನಾಡಿದರು. ಮಾಸ್ ಲಿಮಿಟೆಡ್‌ನ ನಿರ್ದೇಶಕರಾದ ಸುಧಾ ಎಸ್.ರೈ ಪುಣ್ಚಪ್ಪಾಡಿ, ನಿತ್ಯಾನಂದ ಮುಂಡೋಡಿ, ಪಿ.ರಾಜಾರಾಂ ಶೆಟ್ಟಿ ಕೋಲ್ಪೆಗುತ್ತು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಟಿ.ಮಹಾಬಲೇಶ್ವರ ಭಟ್, ಮುಖ್ಯ ಮಾರುಕಟ್ಟೆ ಅಧಿಕಾರಿ ಕೆ.ಎಂ.ಲೋಕೇಶ್, ಪ್ರಗತಿಪರ ಕೃಷಿಕರಾದ ಜಯರಾಮ ಶರ್ಮ, ಕರುಣಾಕರ ಗೋಗಟೆ, ಹೊಸಮಠ ಸಿ.ಎ. ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೋಮಸುಂದರ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಹೊಸಮಠ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಕೃಷ್ಣಪ್ಪ ದೇವಾಡಿಗ ಸನಿಲ ಸ್ವಾಗತಿಸಿ, ಉಪಾಧ್ಯಕ್ಷ ಚಿದಾನಂದ ಕೊಡೆಂಕಿರಿ ವಂದಿಸಿದರು. ನಿರ್ದೇಶಕ ಶಿವಪ್ರಸಾದ್ ರೈ ಮೈಲೇರಿ ನಿರೂಪಿಸಿದರು.

ವರದಿ ನೀಡಲು ಹೈ ನಿರ್ದೇಶನ

• **ಬೆಂಗಳೂರು:** ರಾಜ್ಯಾದ್ಯಂತ ಜೈಲುಗಳಲ್ಲಿರುವ ವಿಚಾರಣಾಧೀನ ಕೈದಿಗಳಲ್ಲಿ ಕಳೆದ ಆರು ತಿಂಗಳಿನಿಂದ ಈತನಕ ಎಷ್ಟು ಮಂದಿಯನ್ನು ಅವರ ಪ್ರಕರಣದ ವಿಚಾರಣೆಯ ದಿನದಂದು ನಿಯಮಿತವಾಗಿ ಖುದ್ದು ಅಥವಾ ವಿಡಿಯೋ ಕಾನ್ಫರೆನ್ಸ್ ಮೂಲಕ ಸಕ್ಷಮ ನ್ಯಾಯಾಲಯ ವಿಚಾರಣೆಗೆ ಹಾಜರುಪಡಿಸಲಾಗಿದೆ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ರಾಜ್ಯ ಕಾರಾಗೃಹಗಳ ಡಿಐಜಿಗೆ ಹೈಕೋರ್ಟ್ ನಿರ್ದೇಶಿಸಿದೆ.

ನಾಲ್ಕು ವರ್ಷಗಳಿಂದ ಜೈಲಿನಲ್ಲಿರುವ ಆರೋಪಿ ಇಮ್ರಾನ್ ಅಲಿಯಾಸ್ ಕುಳ್ಳನನ್ನು ಸಕ್ಷಮ ನ್ಯಾಯಾಲಯದ ವಿಚಾರಣೆಗೆ ಹಾಜರುಪಡಿಸದೆ ಕರ್ತವ್ಯ ಲೋಪ ಎಸಗಿರುವ ಆರೋಪದ ಹಿನ್ನೆಲೆಯ ಪ್ರಕರಣವನ್ನು ನ್ಯಾ. ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಅಡ್ವೊಕೇಟ್ ಜನರಲ್ ಕೆ ಶಶಿಕಿರಣ ಶೆಟ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಿರುವ ಲೋಪಗಳನ್ನು ಪೀಠಕ್ಕೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯವು ಒಬ್ಬ ವಿಚಾರಣಾ ಕೈದಿಗೆ ನಾಲ್ಕು ವರ್ಷಗಳಲ್ಲಿ 20 ಬಾರಿ ಸಮನ್ಸ್ ನೀಡಿದ್ದರೂ ಕೋರ್ಟ್‌ಗೆ ಹಾಜರುಪಡಿಸಿಲ್ಲ ಎಂದರೆ ಏನರ್ಥ? ಒಬ್ಬ ಸಾಮಾನ್ಯ ಕೈದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಎಂದು ಹೈಕೋರ್ಟ್ ಆದೇಶಿಸಬೇಕೇ? ಜೈಲಿನ ಈ ನಡೆಯಿಂದ ನ್ಯಾಯಾಂಗದ ಸಮಯ ವ್ಯರ್ಥವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿತು. ಒಂದೇ ಠಾಣೆಯಲ್ಲಿ ದಾಖಲಾಗಿರುವ ಮತ್ತೊಂದು ಪ್ರಕರಣದಲ್ಲಿ ಕೈದಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ ಎಂಬುದನ್ನು ವಿವೇಚಿಸದೆ ಬಾಡಿ ವಾರಂಟ್ ಪೆಂಡಿಂಗ್ ಇರುವಾಗ ಜಾಮೀನು ರಹಿತ ವಾರಂಟ್ ಜಾರಿಗೆ ಹೆಣಗಾಡಿರುವುಕ್ಕೆ ಏನು ಹೇಳಬೇಕು? ಆರೋಪಿ ಸಿಕ್ಕಿಲ್ಲ ಎಂದು ಬರೆದಿಟ್ಟಿರುವ ಮಹಾಶಯ ಎಚ್‌ಎಎಲ್ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೆಬಲ್ ಮುತ್ತಣ್ಣ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು. ಅದರ ವರದಿಯನ್ನು ಸಲ್ಲಿಸಬೇಕು ಎಂದು ಆದೇಶಿಸಿತು.

ರಾಮ ಬಾಣ



ಕಲ್ಲು ತೂರಾಟ: ವಿಡಿಯೋ ವೈರಲ್

• **ಕಲಬುರಗಿ:** ಜಿಲ್ಲೆಯ ಚಿತ್ತಾಪುರ ತಾಲೂಕಿನ ರಾವೂರ್ ಗ್ರಾಮದ ಗೋಕುಲ್ ನಗರದ ಕಟ್ಟೆಯ ಮೇಲೆ ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ ಎರಡು ಸಮುದಾಯಗಳ ನಡುವೆ ನಡೆದ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಮತ್ತೊಂದು ವಿಡಿಯೋ ವೈರಲ್ ಆಗಿದೆ.



ಕಳೆದ ಫೆ.19ರಂದು ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ ಚಿತ್ತಾಪುರ ತಾಲೂಕಿನ ರಾವೂರ್ ಗ್ರಾಮದಲ್ಲಿ ಶಿವಾಜಿ ಭಾವಚಿತ್ರವಿಟ್ಟು ಜಯಂತಿ ಆಚರಣೆ ಮಾಡುವ ವೇಳೆ ಸೌಂಡ್ ವಿಚಾರವಾಗಿ ಕಿರಿಕ್ ಆಗಿ ಎರಡು ಸಮುದಾಯಗಳ ನಡುವೆ ಗಲಾಟೆಯಾಗಿತ್ತು. ಇದೀಗ ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮನೆಯ ಮಾಳಿಗೆ ಮೇಲೆ ಬಾಲಕನೊಬ್ಬ ಕೈಯಲ್ಲಿ ಕಲ್ಲು ಹಿಡಿದು ನಿಂತಿದ್ದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ 2 ಸಮುದಾಯಗಳ ನಡುವೆ ನಡೆದ ಗಲಾಟೆ ವೇಳೆ ಮಾಳಿಗೆ ಮೇಲಿಂದ ಕಲ್ಲಿನಿಂದ ಹಲ್ಲೆ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಎಂಟು ಜನರ ವಿರುದ್ಧ ಸುಮೋಟೋ

ಗಲಾಟೆ ವಿಚಾರಕ್ಕೆ ಸಂಬಂಧಿಸಿದಂತೆ ಇದೀಗ ವಾಡಿ ಪೊಲೀಸ್ ಠಾಣೆಯಲ್ಲಿ ಎಂಟು ಜನರ ವಿರುದ್ಧ ಬಿಎನ್‌ಎಸ್‌ಎಸ್ ಕಾಯ್ದೆ 126ರ ಅಡಿ ಸುಮೋಟೋ ಕೇಸ್ ದಾಖಲಾಗಿದೆ. ಗಲಾಟೆ ಬಳಿಕ ಎರಡು ಸಮುದಾಯದಿಂದ ಯಾರು ದೂರು ನೀಡದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸೊಮೋಟೋ ಕೇಸ್ ದಾಖಲಾಗಿದ್ದು, ಒಂದು ಕೋಮಿನ ಐದು ಜನ ಹಾಗೂ ಇನ್ನೊಂದು ಕೋಮಿನ ಮೂವರು ಜನರ ಮೇಲೆ ಎಫ್‌ಐಆರ್ ದಾಖಲಾಗಿದ್ದು, ಎರಡು ಕೋಮಿನ ಜನರಿಂದ ಶಾಂತಿ ಭಂಗಕ್ಕೆ ಯತ್ನ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

ಕಿಡಿ ನುಡಿ

• **ವಾಸುದೇವರಾವ್ ಕಕ್ಕೆನೇಜಿ**

◈ ದೇಶವನ್ನು ವಿರೋಧಿಸುವವರು ನಮ್ಮ ವಿರೋಧಿಗಳು, ದೇಶವನ್ನು ಪ್ರೀತಿಸುವ ಎಲ್ಲ ಜಾತಿ, ಮತ, ಧರ್ಮಗಳ ಜನ ನಮ್ಮವರು
– ಅಶೋಕ್ ರೈ
–ಮಾತು ನೂರಕ್ಕೆ ನೂರು ಸರಿ ಎನ್ನಲೇಬೇಕು, ಆದರೆ ಇದು ಬರೀ ಬಾಯಿ ಮಾತಾಗದೆ ಕೃತಿಯಲ್ಲಿ ಮೂಡಿಬರಬೇಕು!

ದಿನ ಭವಿಷ್ಯ

ಮೇಷ ನಿದ್ದೆ ಮತ್ತು ಆಹಾರ ಸೇವನೆ ಸರಿಯಾಗಿರಲಿ. ನಿಮ್ಮನ್ನು ಕಾಡುತ್ತಿರುವ ಒತ್ತಡ ನಿವಾರಣೆಗೆ ಇದು ಅಗತ್ಯ. ನೆಮ್ಮದಿ ದೂರ. ಧನವ್ಯಯ ಹೆಚ್ಚು.

ವೃಷಭ ಕ್ಲಿಷ್ಟ ಬಿಕ್ಕಟ್ಟು, ಅದರ ನಿಭಾವಣೆ ಕಷ್ಟ ಎನಿಸಬಹುದು. ಸಂಜೆ ವೇಳೆಗೆ ಎಲ್ಲವೂ ಸುರಳೀತ ಆಗುವ ಸಂಕೇತ ತೋರಲಿದೆ. ನಿರಾಳತೆ.

ಮಿಥುನ ಅಧಿಕ ಹೊಣೆ. ಆದರೆ ಸೂಕ್ತ ಸಹಕಾರ ಅಲಭ್ಯ. ಮಕ್ಕಳ ಏಳಿಗೆಯ ಚಿಂತೆ ಕಾಡಬಹುದು. ಹಿರಿಯರಿಗೆ ಆರೋಗ್ಯ ಸಮಸ್ಯೆ ಸಂಭವ.

ಕಟಕ ಗುರಿಯಿಂದ ವಿಚಲಿತಗೊಳಿಸುವ ಕೆಲವು ವಿಚಾರಗಳು ಕಾಡಬಹುದು. ಆತ್ತ ಗಮನ ಹರಿಸದಿರಿ. ಕೆಲವು ಚಿಂತೆ ಅಕಾರಣ.

ಸಿಂಹ ಸಮಸ್ಯೆ ತಾನಾಗಿ ಪರಿಹಾರ ಕಾಣಲು ಸಮಯ ಕೊಡಿ. ನಿಮ್ಮ ಪ್ರಯತ್ನ ಈಗಲೇ ಫಲ ನೀಡದು. ಹಣದ ವ್ಯವಹಾರ ನಿರಾಳ.

ಕನ್ಯಾ ಖಾಸಗಿ ಬದುಕಲ್ಲಿ ನಿರೀಕ್ಷಿತ ಫಲ ಇಂದು ದೊರಕದು. ನಿರಾಶೆ. ಆರೋಗ್ಯದ ಬಗ್ಗೆ ಚಿಂತೆ ಇದ್ದರೆ ನಿರಾಳತೆ ಸಿಗಲಿದೆ. ಧನವ್ಯಯ ಹೆಚ್ಚು.

ತುಲಾ ಹಲವಾರು ಹೊಣೆ ಒಮ್ಮೆಗೆ ಹೊತ್ತುಕೊಂಡು ಕಷ್ಟಪಡುವಿರಿ. ಕೆಲವರ ಜತೆ ಮುಸುಕಿನ ಗುದ್ದಾಟ. ತಾಳ್ಮೆಯಿಂದ ವರ್ತಿಸಿ, ಕಟು ಮಾತು ಆಡದಿರಿ.

ವೃಶ್ಚಿಕ ಏಕಕಾಲದಲ್ಲಿ ಬಹಳ ಕೆಲಸ ಆಗಬೇಕೆಂದು ಬಯಸುವಿರಿ. ಆದರಿಂದ ಒತ್ತಡ ಹೆಚ್ಚು. ಅಹಿತ ಆಹಾರ ಸೇವನೆಯಿಂದ ಹೊಟ್ಟೆ ಕೆಡಬಹುದು.

ಧನು ಬಾಕಿ ಇರುವ ಕೆಲಸ ಮೊದಲು ಮುಗಿಸಿ. ಅದುವೇ ನಿಮ್ಮ ಚಿಂತೆಗೆ ಕಾರಣವಾಗುತ್ತಿರುವುದು. ಅಜೀರ್ಣ ಸಮಸ್ಯೆಯಿಂದ ಮುಕ್ತಿ, ಆರೋಗ್ಯ ಸ್ಥಿರ.

ಮಕರ ನಿಮ್ಮ ಮೃದು ಧೋರಣೆ ನಿಮ್ಮನ್ನು ಸಮಸ್ಯೆಗೆ ನೂಕಬಹುದು. ಕೆಲವೇಳೆ ಕಠಿಣವಾಗಿ ವರ್ತಿಸಬೇಕು. ದಂಪತಿ ಮಧ್ಯೆ ಭಿನ್ನಾಭಿಪ್ರಾಯ.

ಕುಂಭ ಕಾಡುವ ಸಮಸ್ಯೆಗೆ ಪರಿಹಾರ ಹುಡುಕಿ. ಆದರಷ್ಟಕ್ಕೆ ಬಿಡಬೇಡಿ. ಆಪ್ತೇಷ್ಟರ ಕಾಳಜಿ ಇಂದು ಮುಖ್ಯವಾಗಲಿದೆ. ದೈಹಿಕ ನೋವು ಶಮನವಾಗಲಿದೆ.

ಮೀನ ವೃತ್ತಿಯಲ್ಲಿ ಯಶಸ್ಸು. ಸಂಗಾತಿ ಜತೆ ಭಿನ್ನಮತ ಇದ್ದರೆ ಅದರ ಪರಿಹಾರಕ್ಕೆ ಆದ್ಯತೆ ಕೊಡಿ. ಅಲರ್ಜಿ ಸಂಬಂಧಿ ಅನಾರೋಗ್ಯ ಬಾಧಿಸಬಹುದು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 1,4,6,2

ಪರೀಕ್ಷೆ ಬರೆದ 20,146 ವಿದ್ಯಾರ್ಥಿಗಳು | ಬೆಳಗಾವಿ ವಿದ್ಯಾರ್ಥಿಗಳೇ ಹೆಚ್ಚು

ಆಳ್ವಾಸ್ ಸೇರಲು ಉತ್ಸಾಹ

• **ಮೂಡುಬಿದಿರೆ:** ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ ಸೇರಲು ವಿದ್ಯಾರ್ಥಿಗಳು ಭಾರೀ ಪೈಪೋಟಿ ನಡೆಸಿದ್ದು, ಭಾನುವಾರ ಪ್ರವೇಶ ಪರೀಕ್ಷೆ ಸಾಂಗವಾಗಿ ನಡೆಯಿತು.

ಶಾಲೆ ಸೇರಲು ಬಯಸಿ 22 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಪೈಕಿ ಭಾನುವಾರ 20,146 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ ಬೆಳಗಾವಿ ಜಿಲ್ಲೆಯಿಂದ ಹೆಚ್ಚು ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಬೆಳಗಾವಿ ಜಿಲ್ಲೆಯ 7353 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಬಾಗಲಕೋಟೆ ಜಿಲ್ಲೆಯಿಂದ 4080 ಹಾಗೂ ವಿಜಯಪುರದಿಂದ ಕ್ರಮವಾಗಿ 2961 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. ಪರೀಕ್ಷಾ ಅರ್ಜಿ ಸಲ್ಲಿಕಾ ವ್ಯವಸ್ಥೆಯು ಕಳೆದ 3 ವರ್ಷದಿಂದ ಪ್ರತಿಭಾನ್ವಿತ ಮಕ್ಕಳನ್ನು ತಲುಪುವ ನಿಟ್ಟಿನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯನ್ನು ಕ್ಯುಆರ್ ಕೋಡ್ ಸಹಿತವಾಗಿ ವ್ಯವಸ್ಥೆಗೊಳಿಸಲಾಗಿತ್ತು.

ಮೂಡುಬಿದಿರೆಯಲ್ಲಿರುವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಪ್ರಾಯೋಜಕತ್ವದ ಕನ್ನಡ ಮಾಧ್ಯಮ ಶಾಲೆಗೆ ರಾಜ್ಯದಾದ್ಯಂತದಿಂದ ವಿದ್ಯಾರ್ಥಿಗಳು ನಾ ಮುಂದು ತಾಮುಂದು ಎಂದು ಪೈಪೋಟಿ ನಡೆಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಒಟ್ಟಾರೆ 22,874 ಅರ್ಜಿಗಳು ಸಲ್ಲಿಕೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಎರಡೂವರೆ ಸಾವಿರದಷ್ಟು ಹೆಚ್ಚುವರಿ ಅರ್ಜಿಗಳು ಸಲ್ಲಿಕೆಯಾಗಿದ್ದವು. ಆಳ್ವಾಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕ, ಡಾ.ಎಂ.ಮೋಹನ ಆಳ್ವರ ಕನಸಿನ ಕೂಸು ಈ ಕನ್ನಡ ಮಾಧ್ಯಮ ಶಾಲೆ. ಇಡೀ ರಾಜ್ಯದಲ್ಲಿ ಒಂದು ಮಾದರೀ ಶಾಲೆಯನ್ನಾಗಿ ಇದನ್ನು ರೂಪಿಸುವ ದೃಷ್ಟಿಯಿಂದ ವಿಶೇಷ ಮುತುವರ್ಜಿ ವಹಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಕನ್ನಡದ ಬಗೆಗಿರುವ ಪ್ರೀತಿ ಬಾಯಲ್ಲಿ ಇದ್ದರೆ ಸಾಲದು, ಬದಲಾಗಿ ಅದು ಕಾರ್ಯರೂಪದಲ್ಲಿರಬೇಕು' ಎಂಬ ಆಳ್ವರ ಅಭಿಪ್ರಾಯವೇ ಅವರಿಗೆ ಈ ಶಾಲೆಯ ಮೇಲಿರುವ, ಕನ್ನಡದ ಮೇಲಿರುವ ಪ್ರೀತಿಗೆ ಸಾಕ್ಷಿಯಾಗಿದೆ. ಶನಿವಾರವೇ ಮೂಡುಬಿದಿರೆಯತ್ತ ಕರ್ನಾಟಕ ದಾದ್ಯಂತದಿಂದ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸತೊಡಗಿದ್ದರು. ಇವರೆಲ್ಲರಿಗೂ ಸುಸಜ್ಜಿತ ವಸತಿ ವ್ಯವಸ್ಥೆಯನ್ನು ಆಳ್ವಾಸ್ ಸಂಸ್ಥೆ ಆಯೋಜಿಸಿತ್ತು.



ಏಕಕಾಲಕ್ಕೆ ಪರೀಕ್ಷೆ

ಭಾನುವಾರ ಆಳ್ವಾಸ್ ವಿದ್ಯಾಗಿರಿ ಮತ್ತು ಪುತ್ತಿಗೆ ಕ್ಯಾಂಪಸ್‌ನಲ್ಲಿ ಯಶೋಕಿರಣ ಬ್ಲಾಕ್, ಜಗನ್ಮೋಹನ, ಕಾಮರ್ಸ್‌ಬ್ಲಾಕ್, ಆಳ್ವಾಸ್ ಪದವಿ ಕಾಲೇಜು, ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ ಹೀಗೆ 5 ಕೇಂದ್ರಗಳಲ್ಲಿ ಪರೀಕ್ಷಾ ಕೊಠಡಿ ವ್ಯವಸ್ಥೆ ಮಾಡಲಾಗಿತ್ತು.ಆಯ್ಕೆಯಾದ ವಿದ್ಯಾರ್ಥಿಗಳು 6ನೇ ತರಗತಿಯಿಂದ 10ನೇ ತರಗತಿವರೆಗೆ ಉಚಿತ ವಸತಿ ಊಟೋಪಚಾರ ಸಹಿತ ಶಿಕ್ಷಣವನ್ನು ಪಡೆಯುತ್ತಾರೆ.

ಭಾನುವಾರ ಬೆಳಗ್ಗೆ ಪ್ರವೇಶ ಪರೀಕ್ಷೆ ನಡೆಯಿತು. ವಿವಿಧ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅತ್ಯಂತ ಶಿಸ್ತಿನ ವ್ಯವಸ್ಥೆಗಳನ್ನು ಮಾಡಲಾಗಿತ್ತು.

ಪಾರದರ್ಶಕ ವ್ಯವಸ್ಥೆ: ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವನ್ನು ಸಂಸ್ಥೆ ಒದಗಿಸಿಕೊಟ್ಟಿತ್ತು. ಅಕ್ಟೋಬರ್‌ನಲ್ಲಿ ಈ ಬಗ್ಗೆ ಅಧಿಕೃತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಅರ್ಜಿಗಳು ಸಲ್ಲಿಕೆಯಾಗಿರುವುದು ವಿಶೇಷವೇ ಸರಿ. ಕಳೆದ 18 ವರುಷಗಳಿಂದ ಇದೇ ಮಾದರಿಯಲ್ಲಿ ಪರೀಕ್ಷೆಗಳು ನಡೆಯುತ್ತಿದ್ದು, ಸಂಪೂರ್ಣ ಪಾರದರ್ಶಕ ವ್ಯವಸ್ಥೆಯನ್ನು ಅಳವಡಿಸಿ ಪ್ರವೇಶ ಪ್ರಕ್ರಿಯೆ ನಡೆಸಲಾಗುತ್ತಿದೆ.

ಮೂರು ಹಂತದಲ್ಲಿ ಆಯ್ಕೆ: ಕನ್ನಡ ಮಾಧ್ಯಮ ಶಾಲೆಗಾಗಿ ಮೂರು ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಪ್ರಾಥಮಿಕ ಹಂತ, ಮುಖ್ಯ ಹಂತ ಮತ್ತು ಸಂದರ್ಶನ ಹಂತ ಎಂದು ಗುರುತಿಸಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಒಎಂಆರ್ ಆಧಾರಿತ ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆ ಇದ್ದು ಉಳಿದ ಸ್ಪರ್ಧಾತ್ಮಕ ಪರೀಕ್ಷೆಯಂತೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ವಿದ್ಯಾರ್ಥಿಯ ಚಿಂತನಾ ಸಾಮರ್ಥ್ಯವನ್ನು ಗುರುತಿಸಲಾಗುತ್ತದೆ. ಇದರಲ್ಲಿ ಸಂಸ್ಥೆ ನಿಗದಿಪಡಿಸಿದ ಮಾನದಂಡ ಗಳಿಸಿದವರು ಮಾತ್ರವೇ ಮುಖ್ಯ ಹಂತಕ್ಕೆ ಆಯ್ಕೆಯಾಗುತ್ತಾರೆ.

ಮಾ. 2ರವರೆಗೆ ಚಂದ್ರು ನ್ಯಾಯಾಂಗ ಬಂಧನ

• **ಬೆಂಗಳೂರು:** ಗುತ್ತಿಗೆದಾರನಿಂದ 5 ಲಕ್ಷ ರೂ. ಹಣ ಪಡೆಯುತ್ತಿದ್ದ ಆರೋಪ ಎದುರಿಸುತ್ತಿರುವ ಗದಗ ಜಿಲ್ಲೆಯ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಸೇರಿದಂತೆ ಮೂವರನ್ನು ಮಾರ್ಚ್ 2ರವರೆಗೆ ನ್ಯಾಯಾಂಗ ಬಂಧನ ಕ್ಕೊಪ್ಪಿಸಿ, ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಆದೇಶಿಸಿದ್ದಾರೆ.

ಯಲಹಂಕದ ಜ್ಯುಡಿಷಿಯಲ್ ಲೇಔಟ್‌ನಲ್ಲಿರುವ ನ್ಯಾಯಾಧೀಶರ ನಿವಾಸದ ಮುಂದೆ ಚಂದ್ರು ಲಮಾಣಿ ಅವರನ್ನು ಭಾನುವಾರ ಲೋಕಾಯುಕ್ತ ಪೊಲೀಸರು ಹಾಜರುಪಡಿಸಿದ್ದರು. ಗುತ್ತಿಗೆದಾರನಿಂದ ಕಮಿಷನ್ ರೂಪದಲ್ಲಿ 5 ಲಕ್ಷ ರೂ. ಹಣ ಸ್ವೀಕರಿಸುತ್ತಿದ್ದ ಚಂದ್ರು ಲಮಾಣಿ, ಅವರ ಪಿಎಗಳು ಸೇರಿದಂತೆ ಮೂವರನ್ನು ಶನಿವಾರ ಲೋಕಾಯುಕ್ತ ಅಧಿಕಾರಿಗಳು ರೆಡ್ ಹ್ಯಾಂಡ್ ಆಗಿ ವಶಕ್ಕೆ ಪಡೆದಿದ್ದರು. ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದಲ್ಲಿರುವ ಬಾಲಾಜಿ ಆಸ್ಪತ್ರೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದರು. ಬಾಲಾಜಿ ಆಸ್ಪತ್ರೆಯು ಸ್ವತಃ ವೈದ್ಯರು ಕೂಡ ಆಗಿರುವ ಚಂದ್ರು ಲಮಾಣಿ ಅವರ ಒಡೆತನದಲ್ಲಿದೆ. ಲೋಕಾಯುಕ್ತ ಅಧಿಕಾರಿಗಳ ದಾಳಿ ವೇಳೆ ಶಾಸಕ ಚಂದ್ರು ಲಮಾಣಿ ಹಾಗೂ ಅವರ ಇಬ್ಬರು ಪಿಎಗಳಾದ ಮಂಜುನಾಥ್ ಹಾಗೂ ಗುರುನಾಯಕ್ ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದಿದ್ದರು.

ಮಧ್ಯರಾತ್ರಿ ಶಾಸಕ ಲಮಾಣಿ ಸೆರೆ

• **ಲಕ್ಷ್ಮೇಶ್ವರ:** ಗುತ್ತಿಗೆದಾರರಿಂದ ಲಂಚ ಪಡೆಯುತ್ತಿದ್ದ ವೇಳೆ ಸಿಕ್ಕಿ ಬಿದ್ದಿದ್ದ ಶಿರಹಟ್ಟಿ ಮತಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಮಧ್ಯರಾತ್ರಿ ಬಂಧಿಸಿ ಕರೆದೊಯ್ದಿದ್ದಾರೆ. ಲಕ್ಷ್ಮೇಶ್ವರ ಪಟ್ಟಣದ ಬಾಲಾಜಿ ಆಸ್ಪತ್ರೆಯಲ್ಲಿ ಗುತ್ತಿಗೆದಾರರಿಂದ ಲಂಚದ ಹಣ ಪಡೆಯು ತ್ತಿದ್ದ ವೇಳೆ ಡಾ.ಚಂದ್ರು ಲಮಾಣಿ ಅವರು ಲೋಕಾಯುಕ್ತ ಪೊಲೀಸರು ಬಲೆಗೆ ಬಿದ್ದಿದ್ದರು. ಶನಿವಾರ



ಆಸ್ಪತ್ರೆಯಲ್ಲಿ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದರಿಂದ ಶಾಸಕರು ಸರ್ಕಾರಿ ಪಿಎ ಮಂಜುನಾಥ ವಾಲ್ಮೀಕಿ ಹಾಗೂ ಖಾಸಗಿ ಪಿಎ ಗುರು ಲಮಾಣಿ ಅವರನ್ನು 12ಗಂಟೆ ತೀವ್ರ ವಿಚಾರಣೆ ನಡೆಸಿದ ಲೋಕಾಯುಕ್ತ ಪೊಲೀಸರು, ಶನಿವಾರ ತಡರಾತ್ರಿ ಶಾಸಕ ಡಾ.ಚಂದ್ರು ಲಮಾಣಿ ಹಾಗೂ ಸಹಾಯಕರನ್ನು ಬಂಧಿಸಿ ಗದಗಿನ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ಒಳಪಡಿಸಿ ಹೆಚ್ಚಿನ ವಿಚಾರಣೆಗಾಗಿ ಬೆಂಗಳೂರಿಗೆ ಕರೆದೊಯ್ದಿದ್ದಾರೆ. ಶನಿವಾರ ತಡರಾತ್ರಿ 1.35ರ ಸುಮಾರಿಗೆ ಶಾಸಕ ಡಾ. ಚಂದ್ರು ಲಮಾಣಿ ಅವರನ್ನು ಬಿಗಿ ಭದ್ರತೆಯಲ್ಲಿ ಪೊಲೀಸರು ಸರ್ಕಾರಿ ಕಾರಿನಲ್ಲಿ ಕರೆದುಕೊಂಡು ಹೋದ ಘಟನೆ ನಡೆಯಿತು. ಈ ವೇಳೆ ತಡರಾತ್ರಿಯಲ್ಲಿಯೂ ಅವರು ಅಭಿಮಾನಿಗಳು ಕಾಂಗ್ರೆಸ್ ಪಕ್ಷದ ವಿರುದ್ಧ ಘೋಷಣೆ ಕೂಗಿದ ಹೈಡ್ರಾಮಾ ನಡೆಸಿದ ಘಟನೆ ಕಂಡು ಬಂದಿತು. ಈ ವೇಳೆ ಮಾಧ್ಯಮಗಳೊಂದಿಗೆ ಶಾಸಕರು ಯಾವುದೇ ಪ್ರತಿಕ್ರಿಯೆ ನೀಡದೆ ಪೊಲೀಸ್ ಬಂದೋಬಸ್ತನಲ್ಲಿ ಕಾರು ಹತ್ತಿ ಹೋದರು.

ಜಾಗತಿಕ ಜ್ಞಾನ ಅಗತ್ಯ

• **ಬೆಂಗಳೂರು:** ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಕೇವಲ ಅಂಕಗಳಿಕೆಗೆ ಸೀಮಿತವಾಗದೆ, ಪಠ್ಯಪುಸ್ತಕದ ಗಡಿಯಾಚೆಗಿನ ಜಾಗತಿಕ ಜ್ಞಾನವನ್ನು ಮೈಗೂಡಿಸಿಕೊಳ್ಳಬೇಕು ಎಂದು ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ತಿಳಿಸಿದರು.

ನಗರದ ಮಿಥಿಕ್ ಸೊಸೈಟಿಯಲ್ಲಿ ಭಾನುವಾರ ನಡೆದ ಬಿ ಗುಡ್ ಡು ಗುಡ್ ಅಭಿಯಾನದ ಪ್ರಯುಕ್ತ ಕಾಲೇಜು ವಿದ್ಯಾರ್ಥಿಗಳಿಗಾಗಿ ಸಮರ್ಥ ಭಾರತ ಹಾಗೂ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದಿನ ಶಾಲಾ-ಕಾಲೇಜುಗಳಲ್ಲಿ ಬೋಧಿಸಲಾಗುತ್ತಿ ರುವ ಬಹುತೇಕ ಪಠ್ಯಕ್ರಮಗಳು ಸುಮಾರು 15 ವರ್ಷಗಳ ಹಿಂದೆ ರೂಪಿತವಾದವುಗಳಾಗಿವೆ. ಜೈವಿಕ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರದಲ್ಲಿ ಇಂದಿಗೂ 2006–07ನೇ ಸಾಲಿನ ಹಳೆಯ ಮಾಹಿತಿಗಳನ್ನೇ ಬೋಧಿಸಲಾಗುತ್ತಿದೆ. ಆಧುನಿಕ ಕೈಗಾರಿಕೆಗಳು ಬಳಸುತ್ತಿರುವ ತಂತ್ರಜ್ಞಾನಕ್ಕೂ ಮತ್ತು ತರಗತಿಯಲ್ಲಿ ಕಲಿಯುತ್ತಿರುವ ವಿಷಯಕ್ಕೂ ಬಹಳ ವ್ಯತ್ಯಾಸವಿದೆ ಎಂದರು.

ವಿದ್ಯಾರ್ಥಿಗಳು ತಮ್ಮ ಬಿಡುವಿನ ಸಮಯದಲ್ಲಿ, ಬೌದ್ಧಿಕ ಚರ್ಚೆಗಳು ನಡೆಯುವ ಕೇಂದ್ರಗಳಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಗೋಖಲೆ ಸಾರ್ವಜನಿಕ ವ್ಯವಹಾರಗಳ ಸಂಸ್ಥೆ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಂತಹ ಸಂಸ್ಥೆಗಳಿಗೆ ಭೇಟಿ ನೀಡಿದರೆ ಇನ್ನು ಹೆಚ್ಚಿನ ಜ್ಞಾನ ಲಭಿಸುತ್ತದೆ.
■ **ರಾಜೇಶ್ ಪದ್ಮಾರ್,** ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್

ಬರವಣಿಗೆ ಸ್ಪರ್ಧೆಯಲ್ಲ ಅದೊಂದು ಸಂಸ್ಕಾರ

ಪ್ರಸ್ತುತ ದಿನಗಳಲ್ಲಿ ನಾವು ಕಳುಹಿಸುವ ಒಂದು ಪುಟ್ಟ ಸಂದೇಶ ಕೂಡ ಸಾವಿರಾರು ಜನರಿಗೆ ತಲುಪುತ್ತದೆ. ಅಂತಹ ಸಂದರ್ಭದಲ್ಲಿ ಕನಿಷ್ಠ ಶಬ್ದಗಳನ್ನು ಬಳಸಿ ಗರಿಷ್ಠ ಸ್ಪಷ್ಟತೆಯನ್ನು ನೀಡುವುದು ಒಂದು ಕಲೆಯಾಗಿದೆ. ಪ್ರಬಂಧ ಸ್ಪರ್ಧೆಗಳು ಕೇವಲ ಬಹುಮಾನಕ್ಕಾಗಿ ಅಲ್ಲ, ಬದಲಾಗಿ ನಮ್ಮ ಆಲೋಚನೆಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುವ ಒಂದು ವ್ಯಾಯಾಮ ವಾಗಬೇಕು ಎಂಬುದು ಈ ಅಭಿಯಾನದ ಆಶಯ ಎಂದರು. ಸಾಮಾನ್ಯವಾಗಿ ಇಂದಿನ ಯುವಜನತೆ ಕೇವಲ ವ್ಯಾಲೆಂಟೈನ್ಸ್ ಡೇ, ಐಸ್‌ಕ್ರೀಮ್, ಚಾಕೊ ಲೇಟ್ ಮತ್ತು ಸಾಮಾಜಿಕ ಜಾಲತಾಣಗಳ ರೀಲ್ಸ್ ಗಳಲ್ಲಿ ಮುಳುಗಿದ್ದಾರೆ ಎಂಬ ನಕಾರಾತ್ಮಕ ಅಭಿಪ್ರಾಯ ಸಮಾಜದಲ್ಲಿದೆ. ಆದರೆ, ವಾಸ್ತವದಲ್ಲಿ ಅದಕ್ಕಿಂತ ಭಿನ್ನವಾದ ಒಂದು ದೊಡ್ಡ ಪ್ರಪಂಚವಿದೆ. ದೇಶದ ಬಗ್ಗೆ ಮಾತನಾಡುವ, ವಿವೇಕಾನಂದರ ತತ್ವಗಳನ್ನು ಅರಿಯುವ, ರಕ್ತದಾನ ಮಾಡುವ ಮತ್ತು ಗಿಡಗಳನ್ನು ನೆಡುವ ಮೂಲಕ ಸಮಾಜಮುಖಿ ಕೆಲಸಗಳಲ್ಲಿ ತೊಡಗಿ ರುವ ಸಾವಿರಾರು ಯುವಕರನ್ನು ನಾವು ಕಾಣುತ್ತಿದ್ದೇವೆ ಎಂದು ತಿಳಿಸಿದರು. ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಶರಣ್ಯ ಎಸ್, ದ್ವಿತೀಯ ಬಹುಮಾನ ಪಡೆದ ಭೂಮಿಕಾ ಎಚ್.ಕೆ., ತೃತೀಯ ಬಹುಮಾನ ಪಡೆದ ಅನುಷಾ ಜಿ.ಪಿ. ಹಾಗೂ ಸಮಾಧಾನಕರ ಬಹುಮಾನವನ್ನು ಗಳಿಸಿದ ಎಲ್ಲಾ ವಿಜೇತರಿಗೆ ಬಹುಮಾನವನ್ನು ನೀಡಿ ಅಭಿನಂದಿಸಲಾಯಿತು. ಈ ವೇಳೆ ಮಿಥಿಕ್ ಸೊಸೈಟಿಯ ಕೋಶಾಧಿಕಾರಿ ಕೆ.ಎನ್. ಹಿರಿಯಣ್ಣಯ್ಯ, ಚೇತನಾ ರಾಜೇಂದ್ರ ಇದ್ದರು.

ವಿಚಾರದ ಅಡಿಪಾಯವು ಬಹಳ ಮುಖ್ಯ

ತಂತ್ರಜ್ಞಾನ, ಯಾಂತ್ರಿಕತೆ, ಕೃತಕ ಬುದ್ಧಿಮತ್ತೆ ಮುಂತಾದ ಬೇರೆ ಬೇರೆ ಆಯಾಮಗಳಿಂದ ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ನಮ್ಮ ಮಾತು ಹಾಗೂ ಬರವಣಿಗೆಯ ಶೈಲಿಗೆ ನಮ್ಮಲ್ಲಿನ ವಿಚಾರದ ಅಡಿಪಾಯವು ಬಹಳ ಮುಖ್ಯವಾಗಿರುತ್ತದೆ. ಈ ಕೌಶಲ್ಯವನ್ನು ನಾವು ಪ್ರಬಂಧದ ಮೂಲಕ ರೂಢಿಸಿಕೊಳ್ಳಲು ಸಹಕಾರಿಯಾಗುತ್ತದೆ. ಜತೆಗೆ ಸ್ವಾಮಿ ವಿವೇಕಾನಂದರ ಚಿಂತನೆಗಳು ಮಾತು ಮತ್ತು ಬರೆವಣಿಗೆಯ ಕೌಶಲ್ಯದ ಮೂಲವನ್ನು ನಮಗೆ ತಿಳಿಸುತ್ತದೆ ಎಂದು ಅಂಕಣಕಾರ ಚೈತನ್ಯ ಹೆಗಡೆ ತಿಳಿಸಿದರು.

8 ಶಂಕಿತ ಉಗ್ರರ ಬಂಧನ

ಪುಟ ೧ ➡ ಈ ಗುಂಪಿನ ಹ್ಯಾಂಡ್ಲರ್ ಪ್ರಸ್ತುತ ಬಾಂಗ್ಲಾದಲ್ಲಿ ನೆಲೆಸಿರುವ ಕಾಶ್ಮೀರಿ ಮೂಲದ ವ್ಯಕ್ತಿ ಎಂದು ನಂಬಲಾಗಿದೆ.

ತನಿಖೆಗೆ ಕಾರಣವಾದ ಪೋಸ್ಟರ್‌ಗಳು: ಮೆಟ್ರೋ ಜಾಲದ ಒಳಗೆ ಸೇರಿದಂತೆ ದಿಲ್ಲಿಯ 10ಕ್ಕೂ ಹೆಚ್ಚು ಸ್ಥಳಗಳಲ್ಲಿ ಫ್ರೀ ಕಾಶ್ಮೀರ ಪೋಸ್ಟರ್‌ಗಳು ಕಾಣಿಸಿಕೊಂಡ ನಂತರ ಈ ಮಾಡ್ಯೂಲ್ ಬಗ್ಗೆ ತನಿಖೆ ಆರಂಭಿಸಲಾಗಿತ್ತು. ವಿಸ್ತೃತವಾದ ತನಿಖೆಯಿಂ ದ ತಮಿಳುನಾಡಿಗೆ ಜಾಲ ಹರಡಿಕೊಂಡಿರುವುದು ತಿಳಿದುಬಂದಿತ್ತು, ಇದರಿಂದ ಹೆಚ್ಚಿನ ಭಯೋತ್ಪಾದಕರ ಬಂಧನ ಸಾಧ್ಯವಾಗಿದೆ. ಈ ಪ್ರಕರಣ, ಜಮ್ಮು ಮತ್ತು ಕಾಶ್ಮೀರದಲ್ಲಿದ್ದ ಗೋಡೆ ಬರಹಗಳ ಜಾಡು ಹಿಡಿದು ತನಿಖಾಧಿಕಾರಿಗಳು ಕೆಂಪುಕೋಟೆ ಸ್ಫೋಟಕ್ಕೆ ಸಂಬಂಧಿಸಿದ ಶಂಕಿತರ ಬಂಧಿಸಿದ ಪ್ರಕರಣವನ್ನು ಹೋಲುತ್ತದೆ. ಅಧಿಕಾರಿಗಳು ಈ ಕಾರ್ಯಾಚರಣೆಯನ್ನು ಮಹತ್ವದ ಪ್ರಗತಿ ಎಂದು ಬಣ್ಣಿಸಿದ್ದಾರೆ. ಉಳಿದ ಶಂಕಿತರು, ಹಣಕಾಸಿನ ಮಾರ್ಗಗಳು ಮತ್ತು ಗಡಿಯಾಚೆಗಿನ ಸಂಪರ್ಕಗಳನ್ನು ಗುರುತಿಸಲು ಹೆಚ್ಚಿನ ತನಿಖೆ ನಡೆಯುತ್ತಿದೆ.

ಜೂನ್‌ನೊಳಗೆ ಸ್ಥಳೀಯ ಸಂಸ್ಥೆ ಚುನಾವಣೆ: ಮುಖ್ಯಮಂತ್ರಿ

ಪುಟ ೧ ➡ ಪಂಚಾಯತಿ ಚುನಾವಣೆಗಳು ಮುಗಿದ ನಂತರ ಗೋಕರ್ಣವನ್ನು ಪಟ್ಟಣ ಪಂಚಾಯತ್ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದರು. ಗಂಗಾವಳಿ ಸೇತುವೆಯಿಂದ ಅಂಕೋಲಾ ಮತ್ತು ಗೋಕರ್ಣದ ಜನತೆಗೆ ಸಾಕಷ್ಟು ಅನುಕೂಲ ಆಗಲಿದೆ. ಹಿಂದಿನ ಬಿಜೆಪಿ ಸರ್ಕಾರ ಈ ಸೇತುವೆ ನಿರ್ಮಾಣ ಪೂರ್ಣಗೊಳಿಸಲು ಆಸಕ್ತಿ ತೋರದ ಕಾರಣ ವಿಳಂಬವಾಗಿದೆ ಎಂದರು. ನಮ್ಮ ಸರ್ಕಾರ ಈ ಕೆಲಸ ಮಾಡಿದ್ದು ಜನತೆಗೆ ಗಂಗಾವಳಿ ನದಿ ದಾಟುವ ಕಷ್ಟ ಅಂತ್ಯವಾಗಿದೆ. ಪುಣ್ಯಕ್ಷೇತ್ರ ಗೋಕರ್ಣಕ್ಕೆ ಆಗಮಿಸುವ ಪ್ರವಾಸಿಗರಿಗೆ ಸುಮಾರು 18 ಕಿಮೀ ಪ್ರಯಾಣದ ದೂರ ಕಡಿಮೆಯಾಗಲಿದೆ ಎಂದರು.

ಬಿಜೆಪಿ ನಾಯಕರು ಚಂದ್ರು ಲಂಚ ಪ್ರಕರಣದಲ್ಲಿ ಏನು ಮಾತನಾಡ್ತಾರೆ: ಖರ್ಗೆ

• **ಬೆಂಗಳೂರು:** ಸರ್ಕಾರದ ವಿರುದ್ಧ ಮಾತನಾಡುವ ಬಿಜೆಪಿ ನಾಯಕರು, ಶಾಸಕ ಚಂದ್ರು ಲಮಾಣಿ ಲಂಚ ಪ್ರಕರಣದಲ್ಲಿ ಏನು ಮಾತನಾಡ್ತಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದ್ದಾರೆ.



ತಮ್ಮ ನಿವಾಸದ ಬಳಿ ಮಾಧ್ಯಮಗಳ ಬಳಿ ಮಾತನಾಡಿದ ಅವರು, ದಿಲ್ಲಿಯಿಂದ ಮಾಹಿತಿ ಬಂತು ಅಂತಾ ಎಐ ಶೃಂಗಸಭೆ ಕಾರ್ಯಕರ್ತರ ಪ್ರತಿಭಟನೆ ಬಗ್ಗೆ ಸುದ್ದಿಗೋಷ್ಠಿ ಮಾಡಿದ್ದಾರಲ್ಲ, ಇವಾಗ ಶಿರಹಟ್ಟಿಯಿಂದ ಇನ್ನೂ ಮಾಹಿತಿ ಬಂದಿಲ್ಲವೇ ಎಂದು ಪ್ರಶ್ನಿಸಿದ್ದಾರೆ. ರಾಹುಲ್ ಗಾಂಧಿ ಟೀಕಿಸಲು ದಿಲ್ಲಿಯಿಂದ ಮಾಹಿತಿ ಬರುತ್ತದೆ. ಆದರೆ, ಅವರ ಶಾಸಕರ ಬಗ್ಗೆ ಯಾಕೇ ಇನ್ನೂ ಮಾಹಿತಿ ಬಂದಿಲ್ಲ, ಈ ಪ್ರಶ್ನೆಗೆ ವಿಜಯೇಂದ್ರ, ಅಶೋಕ್, ಛಲವಾದಿ ಉತ್ತರ ಕೊಡಲಿ, ಬಿಜೆಪಿ ನಾಯಕರ ಹೇಳಿಕೆ ಗಮನಿಸಿದ್ದೇನೆ. ಮಾಹಿತಿ ಇಲ್ಲ, ತರಿಸಿಕೊಂಡು ನೋಡುವೆ ಅಂದಿದ್ದಾರೆ, ಇವಾಗ ಮಾತಾಡಲಿ ಎಂದು ವಾಗ್ದಾಳಿ ನಡೆಸಿದರು. ದೊಡ್ಡದಾಗಿ ವಿಧಾನಸೌಧದಲ್ಲಿ ಅಹೋರಾತ್ರಿ ಧರಣಿ ಮಾಡಿದವರೆಲ್ಲ ಯಾವಾಗ ರಾಜೀನಾಮೆ ನೀಡುತ್ತಾರೆ, ಛಲವಾದಿ ನೀಡುತ್ತಾರಾ, ಅಶೋಕ್ ನೀಡುತ್ತಾರಾ, ವಿಜಯೇಂದ್ರ ನೀಡುತ್ತಾರಾ, ಇದು ಕಾಂಗ್ರೆಸ್ ಷಡ್ಯಂತ್ರ ಅಂತಾರೆ. ಸ್ವಲ್ಪನೂ ಜ್ಞಾನವಿಲ್ಲವೇ ಎಂದು ಕಿಡಿಕಾರಿದ್ದಾರೆ.

ಭಾರತಕ್ಕೆ ವಿಶ್ವ ಮೆಚ್ಚುಗೆ

ಪುಟ ೧ ➡ **ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ:** ಎಐ ಸಹಾಯದಿಂದ ಭಾರತದ ಪುರಾತನ ಗ್ರಂಥ ಗಳು, ಜ್ಞಾನ ಸಂಪತ್ತು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸಿ, ಇಂದಿನ ಪೀಳಿಗೆಗೆ ಹೊಂದುವಂತೆ ರೂಪಾಂ ತರಿಸಲಾಗುತ್ತಿರುವುದು ಜಾಗತಿಕ ನಾಯಕರನ್ನು ಆಶ್ಚರ್ಯಗೊಳಿಸಿತು.

ಈ ಶೃಂಗಸಭೆಯು ಇದುವರೆಗೆ ನಡೆದ ಅತಿ ದೊಡ್ಡ ಎಐ ಸಮ್ಮೇಳನವಾಗಿದ್ದು, ಇದೇ ಸಂದರ್ಭದಲ್ಲಿ ಭಾರತವು ಮೇಡ್ ಇನ್ ಇಂಡಿಯಾ ಎಂಬ ಮೂರು ಎಐ ಮಾದರಿಗಳನ್ನು ಬಿಡುಗಡೆ ಮಾಡಿದೆ ಎಂದು ಅವರು ಹೇಳಿದರು.

ಟಿ-20 ವಿಶ್ವಕಪ್‌ನಲ್ಲಿ ಭಾರತೀಯ ಮೂಲದ ಆಟಗಾರರ ಸಾಧನೆ: ಟಿ-20 ವಿಶ್ವಕಪ್‌ನಲ್ಲಿ ಇತರ ರಾಷ್ಟ್ರಗಳ ಪರ ಆಡುತ್ತಿರುವ ಭಾರತೀಯ ಮೂಲದ ಆಟಗಾರರನ್ನು ಉಲ್ಲೇಖಿಸಿದ ಪ್ರಧಾನಿ, ಇದರಿಂದ ಭಾರತೀಯರಿಗೆ ಹೆಮ್ಮೆಯಾಗುತ್ತದೆ ಎಂದರು. ಕೆನಡಾ ತಂಡದಲ್ಲಿ ಅತಿ ಹೆಚ್ಚು ಭಾರತೀಯ ಮೂಲದ ಆಟಗಾರರು ಇದ್ದಾರೆ. ತಂಡದ ನಾಯಕ ದಿಲ್ಪ್ರೀತ್ ಬಜ್ವಾ ಪಂಜಾಬಿನ ಗುರುದಾಸ್ಪುರದಲ್ಲಿ ಜನಿಸಿದವರು. ನವ್ನೀತ್ ಧಾಲಿವಾಲ್ ಚಂಡೀಗಢ ಮೂಲದವರು. ಹರ್ಷ ಠಾಕರ್ ಮತ್ತು ಶ್ರೇಯಸ್ ಮುವಾ ಸೇರಿದಂತೆ ಹಲವರು ಕೆನಡಾವಷ್ಟೇ ಅಲ್ಲ, ಭಾರತದ ಗೌರವವನ್ನೂ ಹೆಚ್ಚಿಸುತ್ತಿದ್ದಾರೆ ಎಂದರು. ಇದು ಭಾರತೀಯತ್ವದ ಲಕ್ಷಣವಾಗಿದ್ದು, ಭಾರತೀಯರು ಎಲ್ಲೇ ಇದ್ದರೂ ತಮ್ಮ ತಾಯ್ನಾಡಿನೊಂದಿಗೆ ಸಂಪರ್ಕ ಉಳಿಸಿಕೊಂಡೇ ತಮ್ಮ ಕರ್ಮಭೂಮಿಯ ಅಭಿವೃದ್ಧಿಗೆ ಸಹಕಾರ ನೀಡುತ್ತಾರೆ ಎಂದು ಹೇಳಿದರು.

ರಾಜಾಜಿ ಉತ್ಸವದಲ್ಲಿ ಪ್ರತಿಮೆ ಅನಾವರಣ: ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಗುಲಾಮಗಿರಿಯ ಮನೋಭಾವದಿಂದ ಮುಕ್ತಿ ಕುರಿತು ಮಾತನಾಡಿದ್ದೇನೆ ಎಂದು ಪ್ರಧಾನಿ ನೆನಪಿಸಿದರು. ದೇಶವು ಈಗ ಗುಲಾಮಗಿರಿಯ ಚಿಹ್ನೆಗಳನ್ನು ಬಿಟ್ಟು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಚಿಹ್ನೆಗಳಿಗೆ ಮಹತ್ವ ನೀಡುತ್ತಿದೆ ಎಂದರು. ರಾಷ್ಟ್ರಪತಿ ಭವನದಲ್ಲಿ ಸೋಮವಾರ ರಾಜಾಜಿ ಉತ್ಸವ ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಕೇಂದ್ರ ಪ್ರಾಂಗಣದಲ್ಲಿ ಸಿ.ರಾಜಗೋಪಾಲಾಚಾರಿ ಅವರ ಪ್ರತಿಮೆಯನ್ನು ಅನಾವರಣ ಗೊಳಿಸಲಾಗುತ್ತದೆ. ಅವರು ಸ್ವತಂತ್ರ ಭಾರತದ ಮೊದಲ ಭಾರತೀಯ ಗವರ್ನರ್ ಜನರಲ್ ಆಗಿದ್ದರು.

ಜಯಲಲಿತಾಗೆ ಗೌರವ, ಮಮಂಗಂ ಉತ್ಸವ ಉಲ್ಲೇಖ: ಫೆ.24ರಂದು ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಯಾಗಿದ್ದ ಜೆ.ಜಯಲಲಿತಾ ಅವರಿಗೆ ಪ್ರಧಾನಿ ಗೌರವ ಸಲ್ಲಿಸಿದರು. ಸುಮಾರು 250 ವರ್ಷಗಳ ನಂತರ ಮತ್ತೆ ಜೀವಂತಗೊಂಡಿರುವ ಕೇರಳದ ಶತಮಾನಗಳ ಹಳೆಯ ಮಮಂಗಂ ಪರಂಪರೆಯನ್ನು 'ಕೇರಳ ಕುಂಭ' ಎಂದೂ ಕರೆಯಲಾಗುವ ಈ ಉತ್ಸವವನ್ನು ಮೋದಿ ಉಲ್ಲೇಖಿಸಿದರು.

570ಕ್ಕೂ ಹೆಚ್ಚು ಭತ್ತದ ತಳಿ

ಕೇರಳದ ತ್ರಿಶ್ಶೂರ್ ಜಿಲ್ಲೆಯ ಒಂದು ಗ್ರಾಮದಲ್ಲಿ 570ಕ್ಕೂ ಹೆಚ್ಚು ಭತ್ತದ ತಳಿಗಳನ್ನು ಯಶಸ್ವಿಯಾಗಿ ಬೆಳೆಯುತ್ತಿರುವುದು ಮತ್ತೊಂದು ಉದಾಹರಣೆ ಎಂದು ಅವರು ಹೇಳಿದರು. ಭಾರತವು ಪ್ರತಿವರ್ಷ ಸುಮಾರು 150 ಮಿಲಿಯನ್ ಟನ್ ಭತ್ತ ಉತ್ಪಾದಿಸುವ ಮೂಲಕ ಜಗತ್ತಿನ ಅತಿದೊಡ್ಡ ಭತ್ತ ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಿದೆ. ದೇಶೀಯ ಅವಶ್ಯಕತೆ ಪೂರೈಸುವುದರ ಜತೆಗೆ ಜಾಗತಿಕ ಮಾರುಕಟ್ಟೆಯಲ್ಲಿಯೂ ಭಾರತ ತನ್ನ ಸ್ಥಾನವನ್ನು ಬಲಪಡಿಸುತ್ತಿದೆ. ರೈತರ ಪರಿಶ್ರಮ ಮತ್ತು ತಂತ್ರಜ್ಞಾನ ಬಳಕೆಯೇ ಕೃಷಿ ರಫ್ತು ವೃದ್ಧಿಗೆ ಕಾರಣ ಎಂದು ಪ್ರಧಾನಿ ಹೇಳಿದ್ದಾರೆ. ರೈತರು ಮಣ್ಣಿನ ನಿಜವಾದ ಆರಾಧಕರು; ಅವರು ಮಣ್ಣನ್ನು ಚಿನ್ನವಾಗಿಸುವ ಶಕ್ತಿ ಹೊಂದಿದ್ದಾರೆ ಎಂದು ಪ್ರಶಂಸಿಸಿದರು.

ಒಡಿಶಾದ ಯುವಕನ ಕೃಷಿಗೆ ಮೆಚ್ಚುಗೆ

ಇದೇ ವೇಳೆ ಒಡಿಶಾದ ಯುವ ಕೃಷಿಕ ಹಿರೋಡ್ ಪಟೇಲ್ ಅವರ ಕೃಷಿ ಮಾದರಿಯನ್ನೂ ಪ್ರಧಾನಿ ಮೆಚ್ಚಿದರು. ಕೃಷಿ ಹೊಂಡದ ಸುತ್ತ ತರಕಾರಿ, ಬಾಳೆ ಮತ್ತು ತೆಂಗು ಬೆಳೆದು, ಹೊಂಡದಲ್ಲೇ ಮೀನು ಸಾಕಾಣಿಕೆ ಮಾಡುವ ಮೂಲಕ ಅವರು ಸಮಗ್ರ ಕೃಷಿ ಮಾದರಿಯನ್ನು ಅಳವಡಿಸಿಕೊಂಡಿದ್ದಾರೆ. ಇದನ್ನು ನೋಡಲು ವಿವಿಧ ಭಾಗಗಳಿಂದ ರೈತರು ಭೇಟಿ ನೀಡುತ್ತಿದ್ದಾರೆ.

ಕರ್ನಾಟಕದ ಕೃಷಿ ಉತ್ಪನ್ನಗಳಿಗೆ ಪ್ರಶಂಸೆ

ಪುಟ ೧ ➡ 2006ರಲ್ಲಿ ಜಿಐ ಟ್ಯಾಗ್ ಪಡೆದಿರುವ ಈ ಎಲೆ ಮೈಸೂರು ಭಾಗದ ಸಂಸ್ಕೃ ತಿ ಮತ್ತು ಪರಂಪರೆಯ ಪ್ರತೀಕವಾಗಿದೆ. ಮಾರುಕಟ್ಟೆಯಲ್ಲಿ ಇದಕ್ಕೆ ಸದಾ ಉತ್ತಮ ಬೇಡಿಕೆ ಇದೆ. ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಕಾಜಿ ನಿಂಬೆಹಣ್ಣು 2022ರಲ್ಲಿ ಜಿಐ ಮಾನ್ಯತೆ ಪಡೆದಿದೆ. ತೆಳುವಾದ ಸಿಪ್ಪೆ, ಹೆಚ್ಚಿನ ರಸ ಮತ್ತು ವಿಶಿಷ್ಟ ರುಚಿಯಿಂದ ಇದು ಖ್ಯಾತಿ ಪಡೆದಿದೆ.

ಪ್ರವೇಶ ಪರೀಕ್ಷೆ ಬರೆದ 20,146 ವಿದ್ಯಾರ್ಥಿಗಳು

ಪುಟ ೧ ➡ **ಬೆಳಗಾವಿ ಅಗ್ರ ಸ್ಥಾನ:** ಪರೀಕ್ಷೆ ಬರೆದ ವಿದ್ಯಾರ್ಥಿಗಳ ಪೈಕಿ ಬೆಳಗಾವಿ ಜಿಲ್ಲೆಯಿಂದ 7353 ವಿದ್ಯಾರ್ಥಿಗಳು ಅಗ್ರ ಸಂಖ್ಯೆಯಲ್ಲಿ ಹಾಜರಾಗಿದ್ದರು. ಉಳಿದಂತೆ ಬಾಗಲಕೋಟೆ ಜಿಲ್ಲೆಯಿಂದ 4080 ಹಾಗೂ ವಿಜಯಪುರದಿಂದ ಕ್ರಮವಾಗಿ 2961 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. ಪರೀಕ್ಷಾ ಅರ್ಜಿ ಸಲ್ಲಿಕಾ ವ್ಯವಸ್ಥೆಯು ಕಳೆದ 3 ವರ್ಷದಿಂದ ಪ್ರತಿಭಾನ್ವಿತ ಮಕ್ಕಳನ್ನು ತಲುಪುವ ನಿಟ್ಟಿನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯನ್ನು ಕ್ಯೂಆರ್ ಕೋಡ್ ಸಹಿತವಾಗಿ ವ್ಯವಸ್ಥೆಗೊಳಿಸಲಾಗಿತ್ತು.

ಮಕ್ಕಳ ಹಕ್ಕು ಕಾಪಾಡುವ ಭರಾಟೆಯಲ್ಲಿ ಶಿಕ್ಷಕರಿಗೆ ಬರೆ

ಸಾಗರ: ಮಕ್ಕಳ ಹಕ್ಕುಗಳನ್ನು ಕಾಪಾಡುವ ಭರಾಟೆ ಯಲ್ಲಿ ಶಿಕ್ಷಕರಿಗೆ ಆಗುತ್ತಿರುವ ಅವಮಾನ, ಶಿಕ್ಷಕ ಸಮೂಹ ಜನಮಾಧ್ಯಮದ ಎದುರು ಅನುಭವಿಸುತ್ತಿರುವ ಅವ ಮಾನ ಯಾರಿಗೂ ಕಾಣುತ್ತಿಲ್ಲ ಎಂದು ಹೊಸ ದಿಗಂತ ಸಮೂಹ ಸಂಪಾದಕ ವಿನಾಯಕ ಭಟ್ ಮೂರೂರು ತಿಳಿಸಿದರು.

ಇಲ್ಲಿನ ರಾಘವೇಶ್ವರ ಸಭಾಭವನದಲ್ಲಿ ಶ್ರೀ ಅಖಿಲ ಹವ್ಯಕ ಮಹಾಸಭಾ ವತಿಯಿಂದ ಭಾನುವಾರ ಆಯೋಜಿ ಸಿದ್ದ ಶಿವಮೊಗ್ಗ ಜಿಲ್ಲಾ ಹವ್ಯಕ ಶಿಕ್ಷಕ ಸಮಾವೇಶ 'ಜ್ಞಾನಮ್' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹಿಂದೆ ಶಿಷ್ಯರು ತಮ್ಮ ಗುರುಗಳನ್ನು ಶಾಲಾರಂಭಕ್ಕೆ ತಳಿರು ತೋರಣ ಹಾಕಿ ಬರಮಾಡಿ ಕೊಳ್ಳುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದ್ದು ಶಿಕ್ಷಕರೆ ತೋರಣ ಕಟ್ಟಿ ಶಾಲೆಯ ಬಾಗಿಲಿನಲ್ಲಿ ಮಕ್ಕಳಿಗೆ ಕೈಮುಗಿದು ಒಳಗೆ ಬನ್ನಿ ಎಂದು ಕರೆಯುವ ಸ್ಥಿತಿ ನಿರ್ಮಾಣವಾಗಿದೆ. ಮಕ್ಕಳ ಹಕ್ಕು ರಕ್ಷಣೆ ಬಗ್ಗೆ ಒತ್ತು ಕೊಡುವ ಭರಾಟೆಯಲ್ಲಿ ಶಿಕ್ಷಕ ಸಮೂಹದ ಹಕ್ಕು ಕಿತ್ತುಕೊಳ್ಳುವ ತನ್ಮೂಲಕ ಅವರನ್ನು ಅವಮಾನಿಸುವ ಕೆಲಸವಾಗುತ್ತಿರುವುದನ್ನು ಯಾರೂ ಗಮನಿಸದೆ ಇರುವುದು ವಿಪರ್ಯಾಸದ ಸಂಗತಿ. ರಸಹೀನ ಪಠ್ಯವನ್ನು ಒಲ್ಲದ ಮನಸ್ಸಿನಿಂದ ಬೋಧಿಸುವ ದುಸ್ಥಿತಿ ಶಿಕ್ಷಕ ಸಮೂಹದ್ದು. ಶಿಕ್ಷಣದ ಮೂಲಕ ಜ್ಞಾನಮ್ ಸಿಗಬೇಕಾಗಿತ್ತು. ಆದರೆ ಪಾಠಮ್ ಮಾತ್ರ ಮಕ್ಕಳಿಗೆ ಸಿಗುತ್ತಿದೆ. ಮಗು ಮೊದಲ ರ್‍ಯಾಂಕ್ ಬರುತ್ತಿದೆ. ಆದರೆ ಮಗುವಿನ ಜ್ಞಾನ ಬೆಳೆಯುತ್ತಿಲ್ಲ. ಅಂಕವನ್ನು ಮಾನದಂಡವಾಗಿ ಇರಿಸಿಕೊಂಡು ನೀಡುವ ಶಿಕ್ಷಣ, ಅದನ್ನು ಪಡೆಯುವ ಮಕ್ಕಳು ಯಾವತ್ತೂ ಜ್ಞಾನವಂತರಾಗಲು ಸಾಧ್ಯವಿಲ್ಲ ಎಂದು ಅಭಿಪ್ರಾಯಿಸಿದರು. ಶಿಕ್ಷಕರು ಮಕ್ಕಳಿಗೆ ನೈತಿಕ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಸಿ ಕೊಡುವ ತುರ್ತು ಅಗತ್ಯ ಇದೆ. ಪಾಠದಲ್ಲಿ ಮಕ್ಕಳಿಗೆ ನೈತಿಕತೆ, ಮಾನವೀಯತೆ, ಮೌಲ್ಯ ಪರಿಪಾಲನೆ ಸಿಗುತ್ತಿಲ್ಲ. ನಲವತ್ತೈದು ನಿಮಿಷದ ಒಂದು ಪಿರಿಯಡ್‌ನಲ್ಲಿ ಸಣ್ಣಸಣ್ಣ ಕಥೆಯನ್ನು ಮಕ್ಕಳಿಗೆ ಹೇಳುವ ಮೂಲಕ ಅವರಲ್ಲಿ ಮೌಲ್ಯ ತುಂಬುವ ಕೆಲಸವಾಗಬೇಕು. ಇತಿಹಾಸದಲ್ಲಿ ಘಟಿಸಿದ್ದು ಶೇ. 10ರಷ್ಟು ಮಾತ್ರ ಪಠ್ಯದಲ್ಲಿ ಸಿಗುತ್ತದೆ. ಶೇ. 90ರಷ್ಟು ಊಹಾಪೋಹದ್ದು ಎನ್ನುವ ಮಾತು ಇದೆ. ಆದರೂ ನಮ್ಮ ಶಿಕ್ಷಕ ಸಮೂಹ ಮಕ್ಕಳ ಜ್ಞಾನದ ಜೊತೆ ಚೆಲ್ಲಾಟವಾಡುತ್ತಿಲ್ಲ. ಪಠ್ಯದ ಜೊತೆ ಮಕ್ಕಳ ಬೌದ್ಧಿಕ ಶಕ್ತಿ ವೃದ್ಧಿಸುವ ಪಾಠಪ್ರವಚನಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಹೊಸ ದಿಗಂತ ಸಮೂಹ ಸಂಪಾದಕ ವಿನಾಯಕ ಭಟ್ ಮೂರೂರು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಹಾಸ್ಯ ಸಾಹಿತಿ ಭುವನೇಶ್ವರಿ ಹೆಗಡೆ, ಡಾ. ಗಿರಿಧರ ಕಜೆ, ಪ್ರಸನ್ನ ಕೆರೆಕೈ, ಆರ್.ಎಂ.ಹೆಗಡೆ ಬಾಳೆಸರ, ಶ್ರೀಧರ್ ಭಟ್ ಕೆಕ್ಕಾರು, ಪ್ರಧಾನ ಕಾರ್ಯದರ್ಶಿ ವೇಣು ವಿಘ್ನೇಶ ಸಂಪಾ ಉಪಸ್ಥಿತರಿದ್ದರು.



▸▸ ಹೊಸ ದಿಗಂತ ಸಮೂಹ ಸಂಪಾದಕ ವಿನಾಯಕ ಭಟ್ ಮೂರೂರು ಕಳವಳ

ಉತ್ತಮ ಪ್ರಜೆಯಾಗಿ ಬೆಳೆಸಿ

ಮನೆಯಲ್ಲಿ ತಂದೆತಾಯಿ ಶಿಕ್ಷಕರನ್ನು ನಂಬಿ ಶಾಲೆಗೆ ಕಳಿಸಿರುತ್ತಾರೆ. ಅವರು ಜೀವನೋಪಾಯಕ್ಕಾಗಿ ಬೇರೆಬೇರೆ ಉದ್ಯೋಗಕ್ಕೆ ಹೋಗಿರುತ್ತಾರೆ. ಶಿಕ್ಷಕರು ಶಾಲೆಗೆ ಬರುವ ಮಕ್ಕಳ ಮನಸ್ಸನ್ನು ಅರಿತು ಅವರನ್ನು ಉತ್ತಮ ಪ್ರಜೆಯಾಗಿ ನೀವು ರೂಪಿಸಬೇಕು. ಈಗಿನ ಮಕ್ಕಳು ತುಂಬಾ ಬುದ್ಧಿವಂತರಿರುತ್ತಾರೆ. ಅವರಿಗೆ ಜ್ಞಾನದ ಮಾರ್ಗವನ್ನು ತೋರಿಸಬೇಕಾಗಿದೆ. ಜನರು ಶಿಕ್ಷಕರನ್ನು ನೋಡುವ ಮನಸ್ಥಿತಿ ಸಹ ಬದಲಾಗಬೇಕು. ಇಂತಹ ಸಮಾವೇಶಗಳು ನಿಮ್ಮೊಳಗಿನ ಶಿಕ್ಷಕನನ್ನು ಇನ್ನಷ್ಟು ಜಾಗೃತಿಗೊಳಿಸಲು ಅವಕಾಶ ಕಲ್ಪಿಸುತ್ತದೆ ಎಂದು ವಿನಾಯಕ ಭಟ್ ಮೂರೂರು ಹೇಳಿದರು.


ಉದ್ಘಾಟನೆ...

ಅಂಕೋಲಾ ತಾಲೂಕಿನ ಮಂಜಗುಣಿ ಗ್ರಾಮದಿಂದ ಕುಮಟಾ ತಾಲೂಕಿನ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯನ್ನು ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಡಿಸಿಎಂ ಡಿಕೆ ಶಿವಕುಮಾರ್, ಸಚಿವ ಮಂಕಾಳ ವೈದ್ಯ, ಶಾಸಕರಾದ ಆರ್.ವಿ.ದೇಶಪಾಂಡೆ, ಭೀಮಣ್ಣನಾಯ್ಕ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಮಾಜಿ ಶಾಸಕ ಕೆ. ಸುರೇಶ್ ಗೌಡ ಕಾರು ಪಲ್ಟಿ

ಮಂಡ್ಯ: ಚಾಲಕನ ನಿಯಂತ್ರಣ ತಪ್ಪಿದ ಕಾರು ಪಲ್ಟಿಯಾದ ಪರಿಣಾಮ ಮಾಜಿ ಶಾಸಕ ಕೆ. ಸುರೇಶ್‌ಗೌಡ ಗಾಯಗೊಂಡಿರುವ ಘಟನೆ ತಾಲೂಕಿನ ಕೊಪ್ಪ-ಬಸರಾಳು ಮಧ್ಯದ ಮಾಚಗೊಂಡನಹಳ್ಳಿ ಗೇಟ್ ಬಳಿ ನಡೆದಿದೆ. ಮದ್ದೂರು ತಾಲೂಕು ಹೊಸಗಾವಿ ಗ್ರಾಮದ ಮಹದೇಶ್ವರ ದೇವಾಲಯದಲ್ಲಿ ಸುರೇಶ್‌ಗೌಡ ಅವರ ಆತ್ಮೀಯ ಸ್ನೇಹಿತರ ಮದುವೆ ಕಾರ್ಯ ಮುಗಿಸಿಕೊಂಡು ನಾಗಮಂಗಲಕ್ಕೆ ವಾಪಸ್ಸು ಬರುವಾಗ ಚಾಲಕನ ನಿಯಂತ್ರಣ ತಪ್ಪಿದ ಕಾರು ಉರುಳಿಬಿದ್ದು ಈ ದುರ್ಘಟನೆ ಸಂಭವಿಸಿದೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಪೊಲೀಸರು ಗಾಯಾಳು ಕೆ. ಸುರೇಶ್‌ಗೌಡ ಮತ್ತು ಅವರ ಕಾರು ಚಾಲಕನನ್ನು ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸುರೇಶ್‌ಗೌಡ ಅವರ ಕೈಗೆ ಪೆಟ್ಟು ಬಿದ್ದಿದ್ದರೆ, ಚಾಲಕನಿಗೆ ಗಂಭೀರ ಗಾಯಗಳಾಗಿವೆ. ಅಪಘಾತದ ರಭಸಕ್ಕೆ ಕಾರು ಭಾಗಶಃ ಜಖಂಗೊಂಡಿದೆ. ಸುರೇಶ್‌ಗೌಡ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವರ್ಗಾವಣೆ ಮಾಡುವಾಗ ಹುದ್ದೆ ತೋರಿಸಿ: ಹೈಕೋರ್ಟ್

ಬೆಂಗಳೂರು: ರಾಜ್ಯ ಸರ್ಕಾರಿ ಅಧಿಕಾರಿಗಳನ್ನು ವರ್ಗಾವಣೆ ಮಾಡುವಾಗ ಕಡ್ಡಾಯವಾಗಿ ಹುದ್ದೆಯನ್ನು ತೋರಿಸಬೇಕು. ಹುದ್ದೆ ತೋರಿಸದೆ ವರ್ಗಾವಣೆ ಮಾಡುವುದು ಸಾರ್ವಜನಿಕ ಹಣದ ದುರ್ವಿನಿಯೋಗ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಅಬಕಾರಿ ಉಪ ಆಯುಕ್ತ ಕೆ. ಅರುಣ್ ಕುಮಾರ್ ಅವರಿಗೆ ಹುದ್ದೆ ತೋರಿಸದೇ ವರ್ಗಾವಣೆ ಮಾಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಈ ತೀರ್ಪು ನೀಡಿದೆ. ಹುದ್ದೆ ತೋರಿಸದೆ ವರ್ಗಾವಣೆ ಮಾಡುವುದರಿಂದ ಕೆಲಸ ಮಾಡದ ಅಧಿಕಾರಿಗಳಿಗೆ ವೇತನ ನೀಡಬೇಕಾಗುತ್ತದೆ. ಇದು ತೆರಿಗೆದಾರರ ಹಣವನ್ನು ವ್ಯರ್ಥ ಮಾಡಿದಂತೆ. ಇಂತಹ ಕ್ರಮಗಳಿಂದ ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟಾಗುತ್ತದೆ ಎಂದು ನ್ಯಾ. ಎಸ್.ಜಿ. ಪಂಡಿತ್ ಮತ್ತು ನ್ಯಾ. ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ. ಹುದ್ದೆ ತೋರಿಸದೆ ವರ್ಗಾವಣೆ ಮಾಡುವ ಆದೇಶ ಹೊರಡಿಸಿದರೆ, ಅದಕ್ಕೆ ಇಲಾಖೆಯ ಮುಖ್ಯಸ್ಥರೇ ನೇರ ಹೊಣೆಗಾರರಾಗುತ್ತಾರೆ. ಅಂತಹ ಸಂದರ್ಭದಲ್ಲಿ ಅಧಿಕಾರಿಗಳು ಹುದ್ದೆಗಾಗಿ ಕಾಯುವ ಅವಧಿಯ ವೇತನವನ್ನು ಕಾರಣಕರ್ತರಾದ ಅಧಿಕಾರಿಯಿಂದಲೇ ವಸೂಲಿ ಮಾಡಬೇಕು ಎಂದು ನ್ಯಾಯಾಲಯ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಸಚಿವ ಶಿವಾನಂದ ಪಾಟೀಲರಿಗೆ ಮಾತೃ ವಿಯೋಗ

ಬೆಂಗಳೂರು: ಸಚಿವ ಶಿವಾನಂದ ಪಾಟೀಲ ಅವರ ತಾಯಿ ಗಂಗಾಬಾಯಿ ಸಿದ್ಧರಾಮಪ್ಪ ಪಾಟೀಲ (84) ಅವರು ವಯೋಸಹಜವಾಗಿ ಭಾನುವಾರ ಬೆಳಗ್ಗೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಸಂಜೆ ವಿಜಯಪುರ ನಗರದ ಜಮಖಂಡಿ ರಸ್ತೆಯಲ್ಲಿರುವ ತೋಟದಲ್ಲಿ ನೆರವೇರಿತು. ವಿವಿಧ ಪಕ್ಷಗಳ ಹಲವು ಮುಖಂಡರು, ಅಪಾರ ಅಭಿಮಾನಿಗಳು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಸಚಿವರಿಗೆ ಸಾಂತ್ವನ ಹೇಳಿದರು. ಮೃತರಿಗೆ ಪುತ್ರರಾದ ಶಿವಶರಣಗೌಡ ಪಾಟೀಲ, ಶಿವಾನಂದ ಪಾಟೀಲ ಹಾಗೂ ವಿಜುಗೌಡ ಪಾಟೀಲ, ಪುತ್ರಿ ಮಹಾದೇವಿ ಪಾಟೀಲ ಇದ್ದಾರೆ.



ಕಾರವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಂಪರ್ ಭರವಸೆ
ಜಿಲ್ಲೆಗಳಿಗೆ ಸ್ಪೆಷಾಲಿಟಿ ಆಸ್ಪತ್ರೆ

ಕಾರವಾರ: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರಸಕ್ತ ಸರ್ಕಾರದ ಅವಧಿಯಲ್ಲಿಯೇ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಕ್ಯಾನ್ಸರ್ ಘಟಕವನ್ನು ಸ್ಥಾಪಿಸಲು ಯೋಚಿಸಲಾಗಿದೆ. ಅದರಂತೆ ಕಾರವಾರದಲ್ಲೂ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗೆ ಈ ಸಲದ ಬಜೆಟ್ ನಲ್ಲೇ ಮಂಜೂರು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅವರು ಭಾನುವಾರ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಮತ್ತು ಮತ್ತು ಯಲ್ಲಾಪುರ ತಾಲೂಕಿನ ಖಾನಾಪುರ ತಾಳಗುಪ್ಪ ರಾಜ್ಯ ಹೆದ್ದಾರಿ 93ರ ಕಿ.ಮೀ 82.50 ರಲ್ಲಿ ಸೇತುವೆ ನಿರ್ಮಾಣ ಯಲ್ಲಾಪುರ ಪಟ್ಟಣದ ನಿರೀಕ್ಷಣ ಮಂದಿರದ ಹೊಸ ಕಟ್ಟಡ ನಿರ್ಮಾಣ ಹಾಗೂ ಮುಂಡಗೋಡ ತಾಲೂಕಿನ ಹೊಸ ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿಗಳ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ 22 ಜಿಲ್ಲೆಗಳಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜುಗಳಿವೆ. ಇದರ ಮುಖ್ಯ ಉದ್ದೇಶ ಸಾಮಾನ್ಯರು, ಬಡವರಿಗೆ ಅನುಕೂಲವಾಗಬೇಕು ಎನ್ನುವುದು. ಶ್ರೀಮಂತರು ಹಣ ಉಳ್ಳವರು ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ಎಲ್ಲ ಜಿಲ್ಲೆಗಳಲ್ಲಿ ಇನ್ನು ಮುಂದೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಬೇಕೆನ್ನುವದು ನಮ್ಮ ಸರ್ಕಾರದ ಯೋಚನೆಯಾಗಿದೆ. ಅದರಂತೆ ಕಾರ್ಯಶೀಲರಾಗುತ್ತೇವೆ. ಇದರ ಜೊತೆಗೆ ಕ್ಯಾನ್ಸರ್ ಘಟಕವು ಸೇರಲಿದೆ ಎಂದರು. 2016ರಲ್ಲಿ ನಾನು ಮುಖ್ಯಮಂತ್ರಿ ಮತ್ತು ದೇಶಪಾಂಡೆ ಸಚಿವರಿದ್ದಾಗ ಕಾರವಾರದಲ್ಲಿ ಮೆಡಿಕಲ್ ಕಾಲೇಜಿಗೆ ಶಂಕುಸ್ಥಾಪನೆ ಮಾಡಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ಅದು ಅಲ್ಲಿಯೆ ನಿಂತು ಉಳಿಯಿತು. ಈಗ 198 ಕೋ ರೂ. ವೆಚ್ಚದಲ್ಲಿ ನಮ್ಮ ಸರಕಾರದಲ್ಲಿ 450 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಿದ್ಧ ಮಾಡಿದೆ. ಇಲ್ಲಿ ಮೊದಲು ಜನರು ಚಿಕಿತ್ಸೆಗಾಗಿ ಹುಬ್ಬಳ್ಳಿ ಮತ್ತು ಮಂಗಳೂರಿಗೆ ಹೋಗಬೇಕಿತ್ತು. ಆದರೆ, ಮುಂಬರುವ ದಿನಗಳಲ್ಲಿ ಇಲ್ಲಿಯೇ ಸೌಲಭ್ಯ ದೊರೆಯಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಮಾತನಾಡಿದರು. ವೇದಿಕೆಯಲ್ಲಿ ಆಡಳಿತ ಸುಧಾರಣ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ, ಶಾಸಕರುಗಳಾದ ಸತೀಶ ಸೈಲ್, ಶಿವರಾಮ ಹೆಬ್ಬಾರ, ಭೀಮಣ್ಣ ನಾಯ್ಕ, ಗಣಪತಿ ಉಳ್ವೇಕರ್ ಹಾಗೂ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳು ಹಾಜರಿದ್ದರು.



ಆರೋಗ್ಯ ಸೇವೆಗೆ ಒತ್ತು

ಮುಖ್ಯಮಂತ್ರಿಗಳು ರಾಜ್ಯದ ಎಲ್ಲ ಜನರಿಗೆ ಆರೋಗ್ಯ ಸೇವೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದು, ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ನೀಡಲು ಮುಂದಾಗಿದ್ದಾರೆ. ಕಾರವಾರ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಘಟಕವೂ ಮಂಜೂರಾಗಿದೆ. ಅದೇ ರೀತಿ ಟ್ರಾಮಾ ಕೇಂದ್ರವೂ ಆಗಲಿದೆ. ಸುಮಾರು 20 ಕೋ.ರೂ ವಿವಿಧ ವೈದ್ಯಕೀಯ ಉಪಕರಣವನ್ನು ನೀಡಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪಾಟೀಲ್ ಹೇಳಿದರು.

ಎಲ್ಲೆಂದರಲ್ಲಿ ರಾಜಕೀಯ ಚರ್ಚೆ ಮಾಡಲ್ಲ: ಡಿಕೆಶಿ

ಬೆಂಗಳೂರು: ನಾನು ದೆಹಲಿಗೆ ಹೋಗುವುದು ಬರುವುದು ಇದ್ದೇ ಇರುತ್ತದೆ. ನಾನು ಹೋಗದೆ ಮತ್ಯಾರು ಹೋಗುತ್ತಾರೆ? ಅವರು ಯಾವಾಗ ಕರೆಯುತ್ತಾರೋ ಆಗೆಲ್ಲಾ ಹೋಗುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ ತಿಳಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ರಾಜ್ಯ ರಾಜಕೀಯದ ಬಗ್ಗೆ ಎಲ್ಲೆಂದರಲ್ಲಿ ಚರ್ಚೆ ಮಾಡುವುದಿಲ್ಲ. ಅದು ಸಾರ್ವಜನಿಕವಾಗಿ ಚರ್ಚಿಸುವ ವಿಚಾರವೂ ಅಲ್ಲ ಎಂದರು. ಪ್ರಿಯಾಂಕಾ ಗಾಂಧಿ ಅವರ ಜತೆಗೆ ಮಾತನಾಡಿರುವ ವಿಚಾರ ಬಗ್ಗೆ ಬಹಿರಂಗವಾಗಿ ಚರ್ಚಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.



ಪ್ರಧಾನಿ ಮೋದಿಯವರ ಬಗ್ಗೆ ರಾಹುಲ್ ಗಾಂಧಿ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ರಾಹುಲ್ ಗಾಂಧಿ ಅವರು ದೇಶದ ಹಿತಕ್ಕಾಗಿ ಏನು ಬೇಕೋ ಅದನ್ನು ಮಾಡುತ್ತಾರೆ, ಮಾತಾಡುತ್ತಾರೆ. ಅಮೆರಿಕದ ಜತೆಗಿನ ತೆರಿಗೆ ಒಪ್ಪಂದದಿಂದ ದೇಶದ ಪ್ರತಿ ರೈತನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ರಾಹುಲ್ ಗಾಂಧಿ ಅವರು ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ಚರ್ಚೆ ಮಾಡುತ್ತಾರೆ ಎಂದರು. ಸೋಮವಾರ (ಫೆ.23) ಕೋಲಾರ ಹಾಗೂ ಚಿಕ್ಕಬಳ್ಳಾಪುರ ಎರಡೂ ಸೇರಿಸಿ ಮನರೇಗಾ ಉಳಿಸಿ ಸಮಾವೇಶ ಹಮ್ಮಿಕೊಂಡಿದ್ದೇವೆ. ದೆಹಲಿಯಿಂದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಆಗಮಿಸುತ್ತಿದ್ದಾರೆ ಎಂದರು.

ರಸ್ತೆ ಕಾಮಗಾರಿ ಮುಗಿಸಲು ಏಪ್ರಿಲ್‌ಗಡುವು

ಶನಿವಾರ ಜಿಬಿಎ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಭೆ ಮಾಡಿದ್ದು, ಬೆಂಗಳೂರು ನಗರದಲ್ಲಿ 5065 ಕೋಟಿ ರೂ. ಮೊತ್ತದ ರಸ್ತೆ ಕಾಮಗಾರಿಗಳು ನಡೆಯುತ್ತಿವೆ. ಎಲ್ಲವನ್ನೂ ಏಪ್ರಿಲ್ ತಿಂಗಳಾಂತ್ಯದಲ್ಲಿ ಪೂರ್ಣಗೊಳಿಸಲು ಸೂಚಿಸಲಾಗಿದೆ. ಬೆಂಗಳೂರು ಸುತ್ತಮುತ್ತ 40 ಕಿ.ಮೀ ಒಳಗೆ ಗುಡ್ಡಗಳ ಅಕ್ಕಪಕ್ಕ ಜಾಗ ಕೊಟ್ಟರೆ ಸರ್ಕಾರ ಅದನ್ನು ಖರೀದಿ ಮಾಡಲಿದೆ. ಸುಮಾರು 100 ಎಕರೆಯಷ್ಟು ಖರೀದಿ ಮಾಡಲಾಗುವುದು ಎಂದು ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದರು. ಕುಮಾರಸ್ವಾಮಿ ಹಾಗೂ ಪರಮೇಶ್ವರ್ ಅವರ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಅವರು, ಪರಮೇಶ್ವರ್ ಅವರು ತಮ್ಮ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅಥವಾ ಕ್ಷೇತ್ರಕ್ಕೆ ಸಂಬಂಧಿಸಿದ ಇತರೆ ವಿಚಾರವಾಗಿ ಚರ್ಚೆ ಮಾಡಲು ಭೇಟಿಯಾಗಿರಬಹುದು. ರಾಜ್ಯ ಸಚಿವರು ಹಾಗೂ ಕೇಂದ್ರ ಸಚಿವರು ಭೇಟಿ ಮಾಡಿದ್ದಾರೆ ಎಂದು ತಿಳಿಸಿದರು.

ಬೆಳವಣಿಗೆ ಸಹಿಸದೆ ಟೀಕೆ: ಛಲವಾದಿ

ಬೆಂಗಳೂರು: ಸಚಿವ ಪ್ರಿಯಾಂಕ್ ಖರ್ಗೆ ಅವರದು ಪಿತ್ರಾರ್ಜಿತ ರಾಜಕಾರಣ, ನನ್ನದು ಸ್ವಯಾರ್ಜಿತ ರಾಜಕಾರಣ. ನಾನು ಬಿಜೆಪಿಯಲ್ಲಿ ಇಷ್ಟು ಮಟ್ಟಕ್ಕೆ ಬೆಳೆದಿರುವುದನ್ನು ಸಹಿಸದೇ ಪ್ರಿಯಾಂಕ್ ಟೀಕೆ ಮಾಡುತ್ತಿದ್ದಾರೆ ಎಂದು ವಿಧಾನ ಪರಿಷತ್‌ನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಅಪ್ಪ ರಾಜಕಾರಣಿ ಅಲ್ಲ; ಓದು ಬರಹ ತಿಳಿದವರಲ್ಲ. ನಾನು ಹಳ್ಳಿಯಲ್ಲಿ ಹುಟ್ಟಿ ಇವತ್ತು ಸ್ವಯಾರ್ಜಿತವಾಗಿ ಈ ಮಟ್ಟಕ್ಕೆ ಬೆಳೆದಿದ್ದೇನೆ. ಇದು ಸ್ವಯಾರ್ಜಿತ ರಾಜಕಾರಣ. ಅವರದು ಪಿತ್ರಾರ್ಜಿತ ರಾಜಕಾರಣ. ಅವರ ಅಪ್ಪನ ಹೆಸರು ಜೊತೆಯಲ್ಲಿ ಇಲ್ಲದೇ ಇದ್ದರೆ ಅವರು ಗ್ರಾಮ ಪಂಚಾಯತ್ ಸದಸ್ಯರಾಗಲೂ ಅರ್ಹರಲ್ಲ. ಪ್ರಿಯಾಂಕ್ ಖರ್ಗೆ ರಾಜಕಾರಣಿಯೇ ಅಲ್ಲ. ಅಪ್ಪನ ನೆರಳಲ್ಲಿ ಅಧಿಕಾರ ಅನುಭವಿಸುತ್ತಿದ್ದಾರೆ. ಅವರಿಗೆ ಯಾವ ಬದ್ಧತೆಯೂ ಇಲ್ಲ ಎಂದರು.



ಇಂದು ಚಾಮರಾಜ ನಗರ, ಮೈಸೂರು, ರಾಯಚೂರು, ಕಲಬುರಗಿಯಲ್ಲಿ ಪ್ರಿಯಾಂಕ್ ಖರ್ಗೆ ಅವರ ಫೋಟೊ ಇಟ್ಟುಕೊಂಡು ಚಪ್ಪಲಿಯಲ್ಲಿ ಹೊಡೆಯುತ್ತಿದ್ದಾರೆ. ದಲಿತರ 39 ಸಾವಿರ ಕೋಟಿ ರೂ.ಗಳನ್ನು ನುಂಗಿದರೂ ಒಂದು ಮಾತನಾಡದ ಅವರು ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಜನಪರವಾಗಿ ಕೆಲಸ ಮಾಡಿದ್ದರೆ ಹೀಗೆ ಮಾಡುತ್ತಿರಲಿಲ್ಲ ಎಂದು ತಿಳಿಸಿದರು. ಪ್ರಿಯಾಂಕ್ ಖರ್ಗೆ ಅವರು ಒಳ ಮೀಸಲಾತಿ ಬಗ್ಗೆ ಒಂದು ಮಾತೂ ಆಡಲಿಲ್ಲ. ಒಳ ಮೀಸಲಾತಿ ನ್ಯೂನತೆಗಳ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಗಮನ ಸೆಳೆದಿದ್ದೆ. ಅನ್ಯಾಯವಾಗುತ್ತಿದೆ ಎಂದು ಮುಖ್ಯಮಂತ್ರಿಗಳಿಗೆ ಸದನದಲ್ಲಿ ಎಚ್ಚರಿಸಿದ್ದೆ. ಆದರೆ, ಅವರು ಗಮನ ಹರಿಸಲಿಲ್ಲ. ಇದನ್ನು ಸರಿ ಮಾಡಿ ಎಂದು ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರಿಗೆ ಹೇಳಿದ್ದೆ. ಅವರೂ ಗಮನ ಹರಿಸಲಿಲ್ಲ. ಒಳಮೀಸಲಾತಿಯಲ್ಲಿ ಜನಾಂಗಗಳ ಲೋಪ ಅಲ್ಲ, ಅದು ಸರ್ಕಾರದ ಲೋಪ. ಇದನ್ನು ಸರ್ಕಾರವೇ ಸರಿ ಮಾಡಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ನ್ಯಾಯ ಯಾರ ಅಪ್ಪನ ಮನೆ ಆಸ್ತಿ ಅಲ್ಲ. ನಾನು ಪ್ರತಿಪಕ್ಷದ ನಾಯಕ ಆಗಲು ಸಾಮಾಜಿಕ ನ್ಯಾಯ ಕಾರಣ. ಸ್ವಾತಂತ್ರ್ಯ ಬಂದು 80 ವರ್ಷ ಆಗುತ್ತಿದ್ದರೂ ಅಂದಿನಿಂದ ನೀವು ದಲಿತರನ್ನು ವಂಚನೆ ಮಾಡುತ್ತಾ ಬಂದಿದ್ದೀರಿ ಎಂದು ಟೀಕಿಸಿದರು.

ಶಾಸಕ ಚಂದ್ರು ಲಮಾಣಿ ಬಂಧನ: ವ್ಯವಸ್ಥಿತ ಸಂಚು

ಶಾಸಕ ಚಂದ್ರು ಲಮಾಣಿ ಅವರನ್ನು ಲೋಕಾಯುಕ್ತ ದಾಳಿಯಲ್ಲಿ ಸಿಲುಕಿಸಿರುವುದು ವ್ಯವಸ್ಥಿತ ಸಂಚು. ನಮ್ಮ ಪಕ್ಷ ಇಂತಹ ಯಾವುದೇ ವಿಚಾರಗಳನ್ನು ಸಹಿಸುವುದಿಲ್ಲ. ಕಾಂಗ್ರೆಸ್‌ನವರು ಎಲ್ಲರನ್ನು ಟಾರ್ಗೆಟ್ ಮಾಡಿದ್ದಾರೆ. ಬೈರತಿ ಬಸವರಾಜ್, ಆರ್. ಅಶೋಕ, ವಿಜಯೇಂದ್ರ, ರಾಮಮೂರ್ತಿ, ಮುನಿರತ್ನ ಅವರನ್ನು ಟಾರ್ಗೆಟ್ ಮಾಡಿದರು ಎಂದು ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಕಾಡಾನೆ ದಾಳಿಗೆ ಮಹಿಳೆ ಸಾವು; ಪ್ರತಿಭಟನೆ

ಬಾಳೆಹೊನ್ನೂರು: ತಾಲೂಕಿನ ಹುಣಸೇಹಳ್ಳಿ ಸಮೀಪ ಪುರ ಗ್ರಾಮದ ಕಾಫಿ ತೋಟದಲ್ಲಿ ಭಾನುವಾರ ಕಾಡಾನೆ ದಾಳಿಗೆ ಬಳ್ಳಾರಿ ಮೂಲದ ಕಾರ್ಮಿಕ ಮಹಿಳೆಯೊಬ್ಬರು ಮೃಪಟ್ಟಿದ್ದಾರೆ.

ಒಂದು ವಾರದ ಅಂತರದಲ್ಲಿ ಆನೆ ದಾಳಿಯಿಂದ ಸಂಭವಿಸಿದ ಎರಡನೇ ಸಾವು ಇದಾಗಿದ್ದು, ಘಟನೆಯಿಂದ ರೊಚ್ಚಿಗೆದ್ದ ಸ್ಥಳೀಯರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದ್ದು, ಪರಿಸ್ಥಿತಿ ಉದ್ರಿಕ್ತಗೊಂಡ ಹಿನ್ನೆಲೆಯಲ್ಲಿ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಬಳ್ಳಾರಿ ಜಿಲ್ಲೆ ಹೊಸಪೇಟೆ ಮೂಲದ ಬೋರಮ್ಮ (33) ಎಂಬಾಕೆಯನ್ನು ನಾಗೇಶಗೌಡ ಎಂಬುವವರ ತೋಟದ ಲೈನ್ ಮನೆ ಬಳಿಯೇ ಕಾಡಾನೆ ತುಳಿದು ಸಾಯಿಸಿದೆ. ವಿಚಾರ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ನಂತರ ತರಾತುರಿಯಲ್ಲಿ ಬೋರಮ್ಮ ಅವರ ಶವವನ್ನು ಪ್ಲಾಸ್ಟಿಕ್ ನಲ್ಲಿ ಸುತ್ತಿ ಗೂಡ್ಸ್ ವಾಹನವೊಂದರಲ್ಲಿ ಶಿವಮೊಗ್ಗಕ್ಕೆ ಸಾಗಿಸಲು ಯತ್ನಿಸಿದರು. ಇಲಾಖೆ ಸಿಬ್ಬಂದಿಗಳ ಈ ನಡೆಗೆ ಕುಪಿತಗೊಂಡ ಸಾರ್ವಜನಿಕರು ಬಡವರ ಸಾವಿಗೆ ಬೆಲೆ ಇಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ, ಒಂದೇ ವಾರದಲ್ಲಿ ಒಂದೇ ತೋಟದಲ್ಲಿ ಇಬ್ಬರನ್ನು ಆನೆ ಕೊಂದು ಹಾಕಿದೆ. ಜಿಲ್ಲಾಡಳಿತವಾಗಲಿ, ಅರಣ್ಯ ಇಲಾಖೆಯಾಗಲಿ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಸ್ಥಳಕ್ಕೆ ಅರಣ್ಯ ಸಚಿವರು ಬರುವವರೆಗೆ ಶವ ಸಾಗಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಕಡಬಗೆರೆ ಬಳಿ ರಾಜ್ಯ ಹೆದ್ದಾರಿ ಮಧ್ಯದಲ್ಲೇ ಶವ ಇಟ್ಟು ಪ್ರತಿಭಟನೆ ಆರಂಭಿಸಿದರು. ರೈತ ಸಂಘ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು, ಸಾರ್ವಜನಿಕರು ಅರಣ್ಯ ಇಲಾಖೆ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದಲ್ಲದೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಇತರರು ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು. ಶೃಂಗೇರಿ ಕ್ಷೇತ್ರದ ಶಾಸಕ ಟಿ.ಡಿ. ರಾಜೇಗೌಡ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವೊಲಿಸಲು ಪ್ರಯತ್ನಿಸಿದರೂ ಅರಣ್ಯ ಸಚಿವರು ಸ್ಥಳಕ್ಕೆ ಬರಲೇಬೇಕೆಂದು ಪ್ರತಿಭಟನಕಾರರು ಪಟ್ಟುಹಿಡಿದರು.

ಲಾಠಿ ಪ್ರಹಾರ: ಕಡಬಗೆರೆಯಲ್ಲಿ ಶವವಿಟ್ಟು ಪ್ರತಿಭಟಿಸಿದ ಹಿನ್ನಲೆಯಲ್ಲಿ ವಿರಾಜಪೇಟೆ ಬೈಂದೂರ್ ರಾಜ್ಯ ಹೆದ್ದಾರಿಯಲ್ಲಿ ಸುಮಾರು 2 ಕಿಲೋಮೀಟರ್ ನಷ್ಟು ಟ್ರಾಫಿಕ್ ಜಾಮ್ ಉಂಟಾಗಿತ್ತು. ಸಂಜೆ ವೇಳೆಗೆ ಪೊಲೀಸರು ಕೆಲವು ಪೊಲೀಸರನ್ನು ಬಂಧಿಸಿ ವಾಹನದಲ್ಲಿ ಕರೆದೊಯ್ಯಲು ಮುಂದಾದರು. ಇದರಿಂದ ರೊಚ್ಚಿಗೆದ್ದ ಉಳಿದವರು ಪೊಲೀಸ್ ವಾಹನಕ್ಕೆ ಮುತ್ತಿಗೆ ಹಾಕಿ ಅಲುಗಾಡಿಸಲಾರಂಭಿಸಿದರು.

ಮಹಿಳೆಕೊಂದ ಆನೆ ಸೆರೆ: ಕಾಡಾನೆಗಳ ಉಪಟಳದಿಂದ ಬೇಸತ್ತು ಒಂದೆಡೆ ಪ್ರತಿಭಟನೆ ನಡೆಯುತ್ತಿದ್ದರೆ, ಅತ್ತ ಅರಣ್ಯ ಸಿಬ್ಬಂದಿಗಳು ಸಾಕಾನೆಗಳ ನೆರವಿನೊಂದಿಗೆ ಬೋರಮ್ಮನನ್ನು ಕೊಂದ ಕಾಡಾನೆಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾದರು.



₹20 ಲಕ್ಷ ಪರಿಹಾರದ ಚೆಕ್ ವಿತರಣೆ

ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟ ಬೋರಮ್ಮ ಕುಟುಂಬಕ್ಕೆ 20ಲಕ್ಷ ರೂ. ಪರಿಹಾರದ ಚೆಕ್ಕನ್ನು ಶಾಸಕ ಟಿ.ಡಿ. ರಾಜೇಗೌಡ ಸಂತ್ರಸ್ತ ಕುಟುಂಬಕ್ಕೆ ಹಸ್ತಾಂತರಿಸಿದರು.

ಎಸ್‌ಐಆರ್ ಪೂರ್ವ ಸಿದ್ಧತೆ ಜೋರು | ಮತದಾರರ ಗುರುತಿನ ಚೀಟಿ ವಿಶೇಷ ಪರಿಶೀಲನೆ
ರಾಜ್ಯದಲ್ಲಿ ಶೇ.67ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣ

▸ ವೀರಣ್ಣ ಬಳಿಗಾರ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗವು ಈಗಾಗಲೇ ದೇಶದ ಹಲವು ರಾಜ್ಯ ಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿದೆ. ರಾಜ್ಯದಲ್ಲಿ ಎಸ್‌ಐಆರ್ ಪೂರ್ವ ಸಿದ್ಧತಾ ಪ್ರಕ್ರಿಯೆಗೆ ಚುನಾವಣಾ ಆಯೋಗ ಕಳೆದ ಡಿಸೆಂಬರ್ ತಿಂಗಳಿನಲ್ಲೇ ಚಾಲನೆ ನೀಡಿದೆ. ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪೂರ್ವ ಸಿದ್ಧತೆ ಚುರುಕಾಗಿ ನಡೆದಿದ್ದು, ಈ ಹಿನ್ನೆಲೆಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ.

ರಾಜ್ಯದಲ್ಲಿ ಎಸ್‌ಐಆರ್ ಪೂರ್ವ ಸಿದ್ಧತೆಯ ಭಾಗವಾಗಿ 2002ರ ಮತದಾರರ ಪಟ್ಟಿಯನ್ನು 2025ರ ಹೋಲಿಕೆ (ಲಿಂಕ್) ಮಾಡಲಾಗುತ್ತಿದ್ದು, ರಾಜ್ಯದ 5.547 ಕೋಟಿ ಮತದಾರರ ಪೈಕಿ 3 ಕೋಟಿಗೂ ಅಧಿಕ ಮತದಾರರ ವಿವರಗಳು ತಾಳೆಯಾಗಿವೆ ಎಂದು ತಿಳಿದು ಬಂದಿದೆ. ಮೃತಪಟ್ಟವರು, ವಿಳಾಸ ಬದಲಾದವರು, ಒಂದಕ್ಕಿಂತ ಹೆಚ್ಚು ಕಡೆ ಮತದಾರರ ಪಟ್ಟಿಯಲ್ಲಿ ಇರುವವರ ವಿವರವನ್ನು ಅರ್ಹ ದಾಖಲೆಗಳನ್ನು ಕಲೆ ಹಾಕುಲಾಗುತ್ತಿದ್ದು, ದಾಖಲೆ ಒದಗಿಸಿದವರು ಮತದಾರರ ಪಟ್ಟಿಯಲ್ಲಿ ಉಳಿಯುತ್ತಾರೆ. ಇದರಿಂದ ಅರ್ಹ ಮತದಾರರ ಸಂಖ್ಯೆ ಅಂದಾಜು ಸಿಗಲಿದೆ. ಇದರಿಂದ ಕೇಂದ್ರ ಚುನಾವಣಾ ಆಯೋಗವು ಘೋಷಣೆ ಮಾಡಿದ ಸಂದರ್ಭದಲ್ಲಿ ಸಹಾಯವಾಗಲಿದೆ.

ಬಿಹಾರದಲ್ಲಿ ಕೈಗೊಂಡ ಎಸ್‌ಐಆರ್ ಯಶಸ್ವಿಯಾದ ನಂತರ ಕೇಂದ್ರ ಚುನಾವಣಾ ಆಯೋಗವು ಪಶ್ಚಿಮ ಬಂಗಾಳ, ತಮಿಳುನಾಡು, ಉತ್ತರ ಪ್ರದೇಶ ಸೇರಿದಂತೆ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಗುರುತಿನ ಚೀಟಿಯ ವಿಶೇಷ ಪರಿಶೀಲನೆ (ಎಸ್‌ಐಆರ್) 2ನೇ ಹಂತವನ್ನು ಮುಗಿಸಲಾಗಿದೆ. ಬರುವ ಏಪ್ರಿಲ್‌ನಲ್ಲಿ ರಾಜ್ಯದಲ್ಲೂ ಜಾರಿಯಾಗುವ ಸಾಧ್ಯತೆ ಇರುವುದರಿಂದ ಮುಖ್ಯಚುನಾವಣಾಧಿಕಾರಿ ಅವರ ಸೂಚನೆ ಮೇರೆಗೆ ಪೂರ್ವ ಸಿದ್ಧತೆ ಕೈಗೊಳ್ಳಲಾಗಿದೆ.



ವಿವಿಧ ಜಿಲ್ಲೆಗಳಲ್ಲಿ ಶೇ.100 ಪೂರ್ಣ

ರಾಜ್ಯದಲ್ಲಿ ಒಟ್ಟಾರೆ ಶೇ.67 ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದ್ದು, ವಿವಿಧ ಜಿಲ್ಲೆಗಳಲ್ಲಿ ಶೇ.100 ರಷ್ಟು ಪೂರ್ಣಗೊಂಡಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಪ್ರಗತಿಯಲ್ಲಿದೆ. 2002ರ ಮತಪಟ್ಟಿಯನ್ನು 2005ರ ಮತಪಟ್ಟಿಗೆ ಲಿಂಕ್ ಮಾಡಲಾ ಗುತ್ತಿದೆ, ಇದು ಎಸ್‌ಐಆರ್ ಪೂರ್ವ ಸಿದ್ಧತೆ ಕಾರ್ಯವಾಗಿದ್ದು, ಯಾವುದೇ ಡೆಡ್‌ಲೈನ್ ಇಲ್ಲ. ಕೇಂದ್ರ ಚುನಾವಣಾ ಆಯೋಗ ರಾಜ್ಯದಲ್ಲಿ ಎಸ್‌ಐಆರ್ ಘೋಷಣೆ ಮಾಡಿದರೆ, ಕೆಲಸದ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಈ ಕಾರ್ಯವನ್ನು ಕೈಗೊಳ್ಳಲಾಗಿದೆ ಎಂದು ಆಯೋಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸರ್ಕಾರದಿಂದ ಆಕ್ಷೇಪ ಇದೆ

ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ರಾಜ್ಯ ಸರ್ಕಾರದಿಂದ ಆಕ್ಷೇಪ ಇದೆ. ರಾಜ್ಯದಲ್ಲಿ ನಡೆಸಬೇಕೋ, ಬೇಡವೋ ಎಂಬ ಬಗ್ಗೆ ಇತ್ತೀಚಿಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿದ್ದು, ಈ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವಂತೆ ಕಾನೂನು ಇಲಾಖೆಗೆ ಸಂಪುಟ ಸಭೆ ಸೂಚನೆ ನೀಡಿದೆ. ಎಸ್‌ಐಆರ್‌ಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನ ಹಾಗೂ ರಾಜ್ಯ ಚುನಾವಣಾ ಆಯೋಗ ಈಗಾಗಲೇ ನಡೆಸುತ್ತಿರುವ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯನ್ನೂ ಆಧಾರವಾಗಿಟ್ಟುಕೊಂಡು ರಾಜ್ಯ ಸರ್ಕಾರ ತನ್ನ ಮುಂದಿನ ನಡೆಯನ್ನು ನಿರ್ಧರಿಸಲಿದೆ. ಈ ಬಗ್ಗೆ ಮುಂದಿನ 15 ದಿನಗಳೊಳಗಾಗಿ ಅಧ್ಯಯನ ನಡೆಸಿ ವರದಿಯನ್ನು ಸಂಪುಟಕ್ಕೆ ಸಲ್ಲಿಸಲು ಸೂಚನೆ ನೀಡಲಾಗಿದೆ. ಸರ್ಕಾರದ ನಿಲುವು ಏನೇ ಆಗಿದ್ದರೂ ಆಯೋಗವು ಎಸ್‌ಐಆರ್‌ಗೆ ತನ್ನ ಪೂರ್ವ ಸಿದ್ಧತೆಯನ್ನು ನಡೆಸುತ್ತಿದೆ.

ಫೆ.28ಕ್ಕೆ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 55ನೇ ಸುವರ್ಣ ಸಂಭ್ರಮ ಪ್ರಯುಕ್ತ ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಹಾಗೂ ಸಂಘದ ಸುವರ್ಣೋತ್ಸವ ಸಮಾರಂಭ ಕಾರ್ಯಕ್ರಮ ಫೆ.28 ರಂದು ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಜರುಗಲಿದೆ.

ಸಮ್ಮೇಳನದ ಬಗ್ಗೆ ಮಾಹಿತಿ ನೀಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸ ಲಿದ್ದಾರೆ. ಸುವರ್ಣ ಸಂಭ್ರಮವನ್ನು ಡಿಸಿಎಂ ಡಿ.ಕೆ.ಶಿವಕುಮಾರ ಲೋಕಾರ್ಪಣೆ ಮಾಡಲಿದ್ದಾರೆ. ರಾಜ್ಯದ 1.80 ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಟ್ಯಾಕ್ಸ್ ಇ-ಫೈಲಿಂಗ್ ಹಾಗೂ ಬಾಲಾ ಸಂಜೀವಿನಿ ಯೋಜನೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಮಧು ಬಂಗಾರಪ್ಪ ಲೋಕಾರ್ಪಣೆ ಮಾಡಲಿದ್ದಾರೆ ಎಂದರು. ಸಮ್ಮೇಳನದ ವಿಶೇಷ ಆಹ್ವಾನಿತರಾಗಿ ಸಚಿವರಾದ ರಾಮಲಿಂಗಾ ರೆಡ್ಡಿ, ಡಾ ಜಿ. ಪರಮೇಶ್ವರ, ಎಚ್.ಕೆ. ಪಾಟೀಲ್ ಸೇರಿದಂತೆ ಹಲವು ಗಣ್ಯರು ಆಗಮಿಸಲಿದ್ದಾರೆ ಎಂದು ಹೇಳಿದರು.

ಪ್ರಾಥಮಿಕ ಶಿಕ್ಷಣ ಹಾಗೂ ಸವಾಲುಗಳ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಶಿಕ್ಷಕರ ಜವಾಬ್ದಾರಿಗಳು ಹಾಗೂ ತಲ್ಲಣಗಳು ಕುರಿತು ಖ್ಯಾತ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಉಪನ್ಯಾಸ ನೀಡಲಿದ್ದಾರೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್, ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಪಾದಕೀಯ

ನಾಶವಾಗಬೇಕಾದ 'ವೋಕಿಸಂ' ಬೇರು

ಕೆಲ ವರ್ಷಗಳ ಹಿಂದೆ 'ವೋಕಿಸಂ' ಎಂಬ ಪದ ಕೇಳಿಬಂದಾಗ ಬಹುತೇಕರಿಗದು ಅಪರಿಚಿತವಾಗಿತ್ತು. ಮುಂಬರುವ ದಿನಗಳಲ್ಲಿ ಆಂತರಿಕ ದಂಗೆ-ಗಲಭೆ ಮತ್ತು ಅಶಾಂತಿಯ ವಾತಾವರಣವನ್ನು ಸೃಷ್ಟಿಸಲು ವಿದೇಶಿ ಶಕ್ತಿಗಳು ಅದರ ಮೂಲಕ ಪ್ರಯತ್ನಿಸುತ್ತಾರೆ ಎಂದು ಸಮಾಜ ಕಾಳಜಿಯ ಕೆಲವು ಸಂಘಟನೆಗಳು ಎಚ್ಚರಿಸಿದಾಗಲೂ ಜನರಿಗೆ ಅಪಾಯದ ಅರಿವಾಗಿರಲಿಲ್ಲ. ಸಿಎಎ ಗಲಭೆಗಳು ವೋಕಿಸಂನ ಒಂದು ಭಾಗ ಎಂದಾಗಲೂ ಅರ್ಥವಾಗಿರಲಿಲ್ಲ. ಇವೆಲ್ಲವೂ ಭಾರತದಲ್ಲಿ ನಡೆಯಲು ಸಾಧ್ಯವಿಲ್ಲ ಎಂದು ಅಂದುಕೊಂಡವರೇ ಹೆಚ್ಚು. ಆದರೆ ವೋಕಿಸಂ ಭಾರತದಲ್ಲಿ ತನ್ನ ಕೆಲಸವನ್ನು ತಾನು ಮಾಡುತ್ತಲೇ ಇತ್ತು. ಎರಡು ದಿನಗಳ ಹಿಂದೆ ಎಐ ಇಂಫಾಕ್ಟ್ ಶೃಂಗಸಭೆಯಲ್ಲಿ ಅರೆಬೆತ್ತಲೆಯಾಗಿ ಪ್ರತಿಭಟಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಈ ಮಾದರಿಯ ವೋಕಿಸಂನಿಂದ ಪ್ರೇರಿತರಾಗಿದ್ದರು ಎನ್ನುವ ಅಂಶ ಅದರ ಅಪಾಯವನ್ನು ಎತ್ತಿ ತೋರಿಸಿದೆ. ನೇಪಾಳದಲ್ಲಿ ನಡೆದ ಜೆನ್ ಝಿ ರೀತಿಯ ಹೋರಾಟಕ್ಕೆ ಅವರು ಯತ್ನಿಸಿದ್ದರು ಎನ್ನುವುದು ತನಿಖೆಯಲ್ಲಿ ತಿಳಿದುಬಂದಿದೆ.

ಮಹಿಳಾ ಹಕ್ಕು, ಮಾನವಹಕ್ಕು, ಅಲ್ಪಸಂಖ್ಯಾತ ರಕ್ಷಣೆ, ಮಕ್ಕಳ ಹಕ್ಕು, ಸರ್ವಾಧಿಕಾರಿ ವಿರೋಧಿ ಧೋರಣೆ, ಪರಿಸರ ಕಾಳಜಿ, ಪ್ರಾಣಿದಯೆ...ಹೀಗೆ ಅನೇಕ ಕಾರಣಗಳಿಗಾಗಿ ನಡೆಯುವ ಹೋರಾಟಕ್ಕೆ ಸಮಾಜಿಕ ಜಾಗೃತಿಯ ಅವಶ್ಯಕತೆ ಇಲ್ಲ. ಸಮಾಜ ಮೇಲೇಳಲು ಅನೇಕ ಕಾರಣಗಳಿರುತ್ತವೆ. ಜೊತೆಗೆ ಎಲ್ಲಾ ಹೋರಾಟಗಳು ಕ್ರಾಂತಿಯಾಗಬೇಕೆಂದಿಲ್ಲ. ಸಮಾಜವೇ ಅದಕ್ಕೆ ಮದ್ದನ್ನು ಮಾಡಿಕೊಳ್ಳುತ್ತದೆ. ಆದರೆ ಭಾರತ ವಿರೋಧಿ ಶಕ್ತಿಗಳನ್ನು ಕ್ರಾಂತಿಗೆ ಪ್ರೇರೇಪಿಸುವ ಮಾರ್ಗವೇ ಈ ವೋಕಿಸಂ. ಜಗತ್ತಿನಲ್ಲಿನ್ನೂ ಅಪಸವ್ಯಗಳಿವೆ, ಅನ್ಯಾಯವನ್ನು ಪ್ರತಿಭಟಿಸಬೇಕಿದೆ, ಸಮಾಜದಲ್ಲಿ ಅದಕ್ಕೆ ಮದ್ದಿಲ್ಲ, ತಾನೇ ಅದಕ್ಕೆ ಪರಿಹಾರ ಎನ್ನುವ ಉಮೇದಿನ ಸ್ಥಿತಿಯನ್ನು ಹೆಚ್ಚಿಸುವುದು ವೋಕಿಸಂನ ಕಾರ್ಯ. ಅದರ ಗುರಿಸಾಧನೆಗಾಗಿ ಪಾಶ್ಚಾತ್ಯ ವಿಶ್ವವಿದ್ಯಾಲಯಗಳು, ಶತ್ರುದೇಶಗಳು, ರಿಲಿಜನ್ ಮಾರುವವರ ತಂಡ ಜೊತೆಯಾಗುತ್ತದೆ. ಸಮಾಜದ ಅಮಾಯಕ ಪೀಳಿಗೆಯನ್ನು ಗುರಿಯಾಗಿರಿಸಿ ತನ್ನ ಕಾರ್ಯವನ್ನು ಅದು ಸಾಧಿಸಿಕೊಳ್ಳುತ್ತದೆ. ಸಮಸ್ಯೆಗಳ ಗುಚ್ಛಗಳನ್ನು ಹಿಡಿದು ಸಮಾಜದ ಶಕ್ತಿಯನ್ನು ಮರೆಸುವುದೇ ವೋಕಿಸಂ ಪ್ರವೃತ್ತಕರ ಉದ್ದೇಶ. ಇಂಥ ವೋಕಿಸಂ ವಾರಿಸುದಾರರಿಗೆ ಸುಲಭವಾಗಿ ಸಿಗುವವರೇ ಜೆನ್ ಝಿ ಎಂಬ ಮಾಗದ ವಾರ್ಗ. ಹರೆಯದ ಬಿಸಿರಕ್ತ ಮತ್ತು ಅನ್ಯಾಯವನ್ನು ಏಕಕೋನದಿಂದ ನೋಡುವ ಈ ವರ್ಗ ವೋಕಿಸಂಗೆ ಸುಲಭದ ತುತ್ತಾಗುತ್ತಾರೆ. ಇಂಥವರ ಯಾವ ಕ್ರಾಂತಿಯೂ ಸಂಪೂರ್ಣವಾಗಿ ಯಶಸ್ವಿಯಾದ ಮತ್ತು ಉಳಿಸಿಕೊಳ್ಳುವ ಪ್ರಬುದ್ಧತೆ ಇಲ್ಲ.

ಅನ್ಯ ದೇಶಗಳಲ್ಲಿ ಇಂಥ ಹೋರಾಟಗಳು ನಡೆದಿರಬಹುದು. ಆದರೆ ಭಾರತದಲ್ಲಿ ಇದನ್ನು ಪ್ರಯೋಗಕ್ಕಿಳಿಸಿದ್ದು ಕಾಂಗ್ರೆಸ್. ತನ್ನ ಬೇಳೆ ಬೇಯಿಸಿಕೊಳ್ಳಲು ಜೆನ್ ಝಿಗಳನ್ನು ಎತ್ತಿಕಟ್ಟಲು ಸುಲಭದ ಉಪಾಯವಾಗಿ ಆಡಳಿತ ವಿರೋಧಿ ಧೋರಣೆಯನ್ನು ಅವರಲ್ಲಿ ಬಿತ್ತುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ನಿಜವಾದ ಹೋರಾಟ ಮತ್ತು ಪರಿವರ್ತನೆಯ ಉದ್ದೇಶ ಅಡಗಿರುವ ಯಾವುದೇ ಹೋರಾಟದಲ್ಲಿ ದೇಶದ ಮಾನ ಕಳೆಯುವ ಮನೋಭಾವ ಇರುವುದಿಲ್ಲ. ಆದರೆ ಶೃಂಗಸಭೆಯಲ್ಲಿ ನಡೆದಿರುವುದು ಅರಾಷ್ಟ್ರೀಯ ಕೃತ್ಯ. ಇವೆಲ್ಲಕ್ಕೂ ವೋಕಿಸಂ ಬೇರಿದೆ ಎನ್ನುವುದನ್ನು ಸಮಾಜ ಮರೆಯಬಾರದು.

ಅದ್ದೂರಿ ಮದುವೆಗಳಿಗೊಂದು ನಿಯಂತ್ರಣ ರೇಖೆ

ಮದುವೆ ಸಮಾರಂಭಗಳನ್ನು ಅದ್ದೂರಿಯಾಗಿ ನಡೆಸಿದರೆ ಸಾಮಾಜಿಕ ಸ್ಥಾನಮಾನ ಹೆಚ್ಚುತ್ತದೆಂಬ ಭ್ರಮೆ ಹಲವರಲ್ಲಿದೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com




ಧನುರ್ಮಾಸ ಮುಗಿಯುತ್ತಿದ್ದಂತೆ ಮದುವೆ, ಮುಂಜಿ, ಉಪನಯನ, ನಾಮಕರಣಗಳ ಸಡಗರ ಶುರುವಿಟ್ಟು ಕೊಂಡಿದೆ. ಇನ್ನು ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳ ಪೂರ್ತಿ ಮಂಗಳಕಾರ್ಯಗಳದ್ದೇ ಪಾರುಪತ್ಯ. ಕಲ್ಯಾಣ ಮಂದಿರ, ರೆಸಾರ್ಟ್‌ಗಳಿಗೆ ಎಲ್ಲಿಲ್ಲದ ಬೇಡಿಕೆ. ಮದುವೆಗೆ ಮುಹೂರ್ತ ನೋಡುವುದಕ್ಕೆ ಮೊದಲು ಯಾವ ಕಲ್ಯಾಣ ಮಂದಿರದಲ್ಲಿ ಲಭ್ಯತೆ ಇದೆ ಎಂಬುದನ್ನು ಖಾತ್ರಿಪಡಿಸಿಕೊಂಡು ಆ ದಿನವೇ ಮುಹೂರ್ತ ಹೊಂದಿಸಿಕೊಳ್ಳಬೇಕಾದ ಕಾಲವಿದು. ಏಕೆಂದರೆ ಹಿಂದಿನಂತೆ ಈಗ ಮದುವೆಗಳನ್ನು ಮನೆಗಳಲ್ಲಿ ಯಾರು ಮಾಡಲಾಗುತ್ತಿಲ್ಲ. ಬಂಧು ಬಳಗ, ಆಪ್ತೇಷ್ಟರು, ಪರಿಚಿತರನ್ನು ಗೂಡಿನಂತಹ ಮನೆಗೆ ಕರೆದು ಆದರಿಸಲು ಆಗುವುದಿಲ್ಲ. ಅವರವರ ಘನತೆ, ಆರ್ಥಿಕ ಸ್ಥಿತಿಗೆ ತಕ್ಕಂತೆ ಸುಸಜ್ಜಿತ ಕಲ್ಯಾಣ ಮಂಟಪಗಳನ್ನು ಮೊದಲೇ ಗೊತ್ತು ಪಡಿಸಿಕೊಳ್ಳಬೇಕಾಗುತ್ತದೆ.

ಕಾಲ ಬದಲಾದಂತೆ ಮದುವೆಗಳ ರೀತಿ ನೀತಿಗಳೂ ಬದಲಾಗುತ್ತಿರುವುದು ಗಮನಾರ್ಹ. ಮೊದಲೆಲ್ಲ ಮದುವೆಯೆಂದರೆ ಎರಡು ಕುಟುಂಬಗಳ ಬಂಧು ಬಾಂಧವರ ಸಮಕ್ಷಮದಲ್ಲಿ ಸಾಂಪ್ರದಾಯಿಕ ವಿಧಿ ವಿಧಾನಗಳ ಮೂಲಕ ನಡೆಯುತ್ತಿದ್ದ ಒಂದು ವಿಧಿಯಾಗಿತ್ತು. ಅಲ್ಲಿ ಮಾತುಕತೆ, ನಗು, ಸ್ನೇಹಮಿಲನ, ಬಾಂಧವ್ಯದ ಬೆಸುಗೆ ಎದ್ದು ಕಾಣುತ್ತಿತ್ತು. ಆಹ್ವಾನಿತ ಪ್ರತಿಯೊಬ್ಬರನ್ನೂ ಮದುವೆ ಮನೆಯಲ್ಲಿ ಪ್ರೀತಿಯಿಂದ ಮಾತನಾಡಿಸಿ, ಉಪಚರಿಸುವ ಆಪ್ತ ದೃಶ್ಯಗಳನ್ನು ಕಾಣಬಹುದಿತ್ತು. ಪರಿಚಿತರಿಗೆ, ಬಂಧುಗಳಿಗೆ ಮನೆಗೆ ತೆರಳಿ ಆಮಂತ್ರಣ ಪತ್ರ ನೀಡಿ ಗೌರವಪೂರ್ವಕವಾಗಿ ಆಹ್ವಾನಿಸುವ ಪರಿಪಾಠವಿತ್ತು.

ಈಗ ಮನೆ ಮನೆಗೆ ಹೋಗಿ ಆಮಂತ್ರಿಸುವ ದೃಶ್ಯ ಕಾಣಿಸುತ್ತಿಲ್ಲ (ಪೇಟೆ ಪಟ್ಟಣ ಪ್ರದೇಶಗಳಲ್ಲಿ ಈಗ ಅದು ಸಾಧ್ಯವೂ ಇಲ್ಲ). ಈಗೇನಿದ್ದರೂ ವಾಟ್ಸಾಪ್ ಮೂಲಕ ಮದುವೆ ಆಮಂತ್ರಣದ ಸಂದೇಶ. ಮದುವೆಯ ಎಲ್ಲ ವ್ಯವಸ್ಥೆಗಳನ್ನು ಇವೆಂಟ್ ಮ್ಯಾನೇಜ್‌ಮೆಂಟ್ ಸುಪರ್ದಿಗೆ ವಹಿಸಲಾಗಿರುತ್ತದೆ. ಹಾಗಾಗಿ ಅಲ್ಲಿ ನಿಮ್ಮನ್ನು ನಿಮಗೆ ಪರಿಚಯವಿರದ ಯಾರೋ ಸ್ವಾಗತಿಸುತ್ತಾರೆ. ಯಾರೋ ಊಟ ಬಡಿಸುತ್ತಾರೆ. ಇನ್ಯಾರೋ ಫಲ ತಾಂಬೂಲ ನೀಡುತ್ತಾರೆ. ಮದುವೆ ಮನೆಯ ಹಿರಿಯರು ನಿಮ್ಮನ್ನು ಕರೆದು ಮಾತನಾಡಿಸಿದರೆ ಅದೇ ನಿಮ್ಮ ಪುಣ್ಯ. ಅಂತಹ ಮದುವೆ ಸಮಾರಂಭದಲ್ಲಿ ಸಡಗರ ಸಂಭ್ರಮಕ್ಕೇನೂ ಕೊರತೆ ಇರುವುದಿಲ್ಲ. ಅದ್ದೂರಿ ವೇದಿಕೆ, ಹೂವಿನ ಅಲಂಕಾರ, ಮದುವೆಗೆ ಬಂದವರೆಲ್ಲರನ್ನೂ ಮೇಲಿನಿಂದಲೇ ಸೆರೆಹಿಡಿಯುವ ಡ್ರೋಣ್ ಕ್ಯಾಮೆರಾಗಳು, ಮದುವೆ ರಿಸೆಪ್ಶನ್ ಸಮಾರಂಭದಲ್ಲಿ ತಿನ್ನಲಾರದಷ್ಟು ವಿವಿಧ ಬಗೆಯ ಆಹಾರವ್ಯಂಜನಗಳು. ನಾನು ಭಾಗವಹಿಸಿದ ಸ್ನೇಹಿತರ ಮನೆಯ ರಿಸೆಪ್ಶನ್ ನಲ್ಲಿ 40ಕ್ಕೂ ಹೆಚ್ಚು ತಿಂಡಿ ತಿನಿಸುಗಳಿದ್ದವು. ಅಷ್ಟೊಂದು ಪದಾರ್ಥಗಳನ್ನು ತಿನ್ನಲು ಯಾರಿಗೆ ತಾನೇ ಸಾಧ್ಯ? ತಿನ್ನುವ ಆಸೆಯಿಂದ ತಟ್ಟೆಗೆ ಬಡಿಸಿಕೊಂಡ ಐಟಂಗಳನ್ನು ತಿನ್ನಲಾಗದೆ ಹಾಗೇ ಬಿಟ್ಟವರೇ ಹೆಚ್ಚು.

ಮದುವೆ ಸಮಾರಂಭಗಳನ್ನು ಅದ್ದೂರಿಯಾಗಿ ನಡೆಸಿದರೆ ತಮ್ಮ ಸಾಮಾಜಿಕ ಸ್ಥಾನಮಾನ ಹೆಚ್ಚುತ್ತದೆಂಬ ಭ್ರಮೆ ಹಲವರಲ್ಲಿದೆ. ಸೆಲೆಬ್ರಿಟಿಗಳ ವಿವಾಹ ಮಹೋತ್ಸವದ ವೈಭವ ಇಂಥವರನ್ನು ಪ್ರಚೋದಿಸಿ ಬಿಡುತ್ತದೆ. ಸಾಲ ಸೋಲ ಮಾಡಿಯಾದರೂ ಮದುವೆಯನ್ನು ಸಾಧ್ಯವಾದಷ್ಟು ವೈಭವೋಪೇತವಾಗಿ ಮಾಡಬೇಕೆಂಬ ಭ್ರಮೆಗೆ ಹಲವರು ಸಿಲುಕಿದ್ದಾರೆ. ಎರಡು ವರ್ಷಗಳ ಹಿಂದೆ ಮುಂಬೈ ಮಹಾನಗರಿಯಲ್ಲಿ ನಡೆದ ಉದ್ಯಮಪತಿ ಮುಖೇಶ್ ಅಂಬಾನಿಯ ಕಿರಿಯ ಪುತ್ರ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ಅದ್ದೂರಿ ಮದುವೆ ಎಲ್ಲೆಡೆ ಭಾರೀ ಸುದ್ದಿಯಾಗಿತ್ತು. ಆ ಮದುವೆಗೆ ಖರ್ಚು ಮಾಡಿದ ಒಟ್ಟು ಹಣ ಬರೋಬ್ಬರಿ 5 ಸಾವಿರ ಕೋಟಿ ರೂ. ಇಂಗ್ಲೆಂಡ್‌ನ ರಾಜಕುಮಾರಿ ಡಯಾನಾ, ಅರಬ್‌ನ ಯುವ ರಾಜಕುಮಾರನ ಮದುವೆಗೂ ಇಷ್ಟು ಹಣ ವೆಚ್ಚ ಮಾಡಿರಲಿಲ್ಲವಂತೆ. ಆದರೆ ಮುಖೇಶ್ ಅಂಬಾನಿ ತನ್ನ ಕಿರಿಯ ಪುತ್ರನ ಮದುವೆಗೆ ಖರ್ಚು ಮಾಡಿದ್ದು ತನ್ನ ಒಟ್ಟು ಆಸ್ತಿ ಮೌಲ್ಯದ ಕೇವಲ 0.5% ನಷ್ಟು ಮಾತ್ರ. 1% ನಷ್ಟು ಹಣವನ್ನೂ ಈ ಮದುವೆಗೆ ವೆಚ್ಚ ಮಾಡಿರಲಿಲ್ಲ. (ಮುಖೇಶ್ ಅಂಬಾನಿಯ ಒಟ್ಟು ಆಸ್ತಿ ಮೌಲ್ಯ 10 ಲಕ್ಷ ಕೋಟಿ ರೂ.)

ಆದರೆ ಮಧ್ಯಮ ವರ್ಗದವರು, ಸಾಮಾನ್ಯ ಜನರು ತಮ್ಮ ಮನೆಯಲ್ಲೊಂದು ಮದುವೆ ನಡೆದರೆ ತಮ್ಮ ಒಟ್ಟು ಆದಾಯದ ನಾಲ್ಕೈದು ಪರ್ಸೆಂಟ್ ಹಣವನ್ನು ಖರ್ಚು ಮಾಡುವುದು ಸರ್ವೇಸಾಮಾನ್ಯವಾಗಿ ಬಿಟ್ಟಿದೆ. ಕೆಲವರು ಇನ್ನೂ ಹೆಚ್ಚು ಖರ್ಚು ಮಾಡುತ್ತಾರೆ. ಸಾಲಸೋಲ ಮಾಡಿ ಆಮೇಲೆ ಸ್ವಂತದ ಬದುಕಿಗೆ ತೊಂದರೆ ತಂದುಕೊಳ್ಳುತ್ತಾರೆ ಎಂಬುದು ಪ್ರತಿದಿನದ ವಿದ್ಯಮಾನಗಳಿಂದ ಸ್ಪಷ್ಟವಾಗುವ ಸಂಗತಿ. ದುಬಾರಿ ಆಮಂತ್ರಣ ಪತ್ರ, ದುಬಾರಿ ಡೆಕೋರೇಷನ್, ಮದುಮಗಳಿಗೆ ದುಬಾರಿ ವೆಚ್ಚದಲ್ಲಿ ಶೃಂಗಾರ .....ಇವೆಲ್ಲ ನಿಜಕ್ಕೂ ಅಗತ್ಯವಿದೆಯೇ?



ಮೊದಮೊದಲು ಮದುವೆಯ ನಿಶ್ಚಿತಾರ್ಥ ಎನ್ನುವುದು ಗಂಡು ಹೆಣ್ಣಿನ ಕುಟುಂಬಗಳಿಗೆ ಸೀಮಿತವಾದ ಒಂದು ಪುಟ್ಟ ಕಾರ್ಯಕ್ರಮವಾಗಿತ್ತು. ಆದರೆ ಈಗ ಅದರ ಸ್ವರೂಪವೂ ಬದಲಾಗಿದೆ. ಮನೆಗಳಲ್ಲಿ ನಡೆಯುತ್ತಿದ್ದ ನಿಶ್ಚಿತಾರ್ಥ ಈಗ ಕಲ್ಯಾಣ ಮಂದಿರ, ರೆಸಾರ್ಟ್‌ಗಳಿಗೆ ಸ್ಥಳಾಂತರಗೊಂಡಿದೆ. ಬೆಂಗಳೂರಿನಲ್ಲಿ ನಿಶ್ಚಿತಾರ್ಥ ಅರಮನೆ ಮೈದಾನಕ್ಕೆ ಕಾಲಿಟ್ಟಿದೆ. ಕೆಲವು ಪ್ರತಿಷ್ಠಿತ ಕುಟುಂಬಗಳ ನಿಶ್ಚಿತಾರ್ಥ ಕಾರ್ಯಕ್ರಮಕ್ಕೆ ಖರ್ಚಾಗುವ ಹಣದಲ್ಲಿ ಮಧ್ಯಮ ವರ್ಗದವರ ಮೂರ್ನಾಲ್ಕು ಮದುವೆಗಳನ್ನು ಮಾಡಿ ಮುಗಿಸಬಹುದು!

ಇನ್ನು 'ಪ್ರಿ ವೆಡ್ಡಿಂಗ್ ಶೂಟ್' ಎಂಬ ಹೊಸತೊಂದು ಬಂದಳಿಕೆ ಮದುವೆಗೆ ಅಂಟಿಕೊಂಡಿರುವುದು ವಿಪರ್ಯಾಸ. ವಾಸ್ತವವಾಗಿ ಅದಾವುದೂ ಭಾರತೀಯ ಪರಂಪರೆಯ ಪದ್ಧತಿಯಲ್ಲ. ಆದರೆ ಅದರ ಅಗತ್ಯವಾದರೂ ಏನು ಎಂದು ಪ್ರಾಜ್ಞರು ಇದುವರೆಗೂ ಪ್ರಶ್ನಿಸಿಲ್ಲ. ಮನೆಯ ಹಿರಿಯರು ಅದರ ಔಚಿತ್ಯದ ಬಗ್ಗೆ ಚಕಾರವೆತ್ತುತ್ತಿಲ್ಲ. ವಧು-ವರರಿಬ್ಬರೂ ಅರೆನಗ್ನರಾಗಿ ಯಾವುದೋ ಬೆಟ್ಟ, ಯಾವುದೋ ಕೆರೆಯ ಬಳಿ ನಿಂತು ಅಥವಾ ಕೆರೆಯಲ್ಲಿ ಅರ್ಧ ಮುಳುಗಿ ಫೋಟೋ ಶೂಟ್ ಮಾಡಿಸಿಕೊಳ್ಳುವುದು ಯಾವ ಕರ್ಮಕ್ಕೆ? ಕೆಲವು ಬಾರಿ ಇಂತಹ ಫೋಟೋಶೂಟ್ ಸಂದರ್ಭದಲ್ಲಿ ಅವಘಡಗಳಾಗುವುದು ಉಂಟು.

ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರ, ಚಾಮರ ವಜ್ರ, ಪ್ರಿನ್ಸೆಸ್‌ಗ್ರೀನ್ ಮೊದಲಾದ ಮದುವೆ ಹಾಲ್‌ಗಳ ದಿನವೊಂದರ ಬಾಡಿಗೆಯೇ 4.5 ಲಕ್ಷ ರೂ.ಗಳಿಂದ 20 ಲಕ್ಷ ರೂ.ಗಳವರೆಗೆ. ಈ ಮೊತ್ತದಲ್ಲಿ ಅಡುಗೆ, ಉಪಚಾರ, ಹೂವಿನ ಅಲಂಕಾರ, ವಿದ್ಯುತ್ ಅಲಂಕಾರ, ಬ್ಯಾಂಡ್ ಸೆಟ್, ವಿಡಿಯೋ, ಡ್ರೋಣ್ ಕೆಮೆರಾ ಇತ್ಯಾದಿ ಇತರೆ ಖರ್ಚುಗಳು ಸೇರುವುದಿಲ್ಲವೆಂಬುದನ್ನು ನೆನಪಿಡಿ. ನೆಲದ ಬಾಡಿಗೆಯೇ ಅಷ್ಟು. ರಾಜಸ್ಥಾನದ ಜೈಪುರದಲ್ಲಿರುವ ವಿವಿಧ ಅರಮನೆಗಳಲ್ಲಿ ಮದುವೆಗೆ ದಿನವೊಂದರ ಬಾಡಿಗೆ ಬರೋಬ್ಬರಿ 25 ರಿಂದ 30 ಲಕ್ಷ ರೂಪಾಯಿ. ಅಲ್ಲಿ ಅತಿಥಿಗಳಿಗೆ ವಿತರಿಸಲಾಗುವ ಪ್ರತಿ ಊಟಕ್ಕೆ 2500 ರೂ. ಗಳಿಂದ 5000 ರೂ.ಗಳವರೆಗೆ. ಅಲ್ಲಿಗೆ ಹೋಗಿ ಮದುವೆ ಮಾಡಿಕೊಳ್ಳುವ ಸೆಲೆಬ್ರಿಟಿಗಳು,ಗಣ್ಯರು ಹಾಗಿದ್ದರೆ ಒಂದು ಮದುವೆ ಸಮಾರಂಭಕ್ಕೆ ಎಷ್ಟು ಖರ್ಚು ಮಾಡುತ್ತಾರೆಂಬುದನ್ನು ನೀವೇ ಲೆಕ್ಕ ಹಾಕಿಕೊಳ್ಳಿ (ಗಾಬರಿ ಮಾತ್ರ ಆಗಬೇಡಿ!). ಎರಡು ಜೀವಗಳನ್ನು ಪ್ರೀತಿಯಿಂದ ಬೆಸೆಯುವ ಒಂದು ಸಮಾರಂಭ ವ್ಯಾಪಾರೀಕರಣಕ್ಕೆ ಒಳಪಟ್ಟು ಈಗ ಅದೊಂದು ದಂಧೆಯೇ ಆಗಿಬಿಟ್ಟಿದೆ.

ಮದುವೆ ಸಮಾರಂಭಗಳು ದುಂದು ವೆಚ್ಚದ ವಿದ್ಯಮಾನಗಳಾಗಿ ಬಿಟ್ಟಿರುವುದು ಹಲವು ಪ್ರಾಜ್ಞರನ್ನು ಚಿಂತೆಗೀಡು ಮಾಡಿದೆ. ಹಬ್ಬ, ಮದುವೆ ಆಚರಣೆಗಳಲ್ಲಿ ಆಧುನಿಕತೆಯ ಗಾಳಿ ಬೀಸುತ್ತಿದೆ ಎಂಬ ಮಾತು ಒಂದೆಡೆಯಾದರೆ, ನಮ್ಮ ಪರಂಪರೆ, ಪದ್ಧತಿ, ಸಂಸ್ಕೃತಿ ನಾಶವಾಗುತ್ತಿದೆ, ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಅಧಿಕವಾಗುತ್ತಿದೆ , ನಮ್ಮತನ ಕಳೆದು ಹೋಗುತ್ತಿದೆ ಎಂಬ ಆತಂಕದ ಕೂಗು ಇನ್ನೊಂದೆಡೆ. ಈ ಹಿನ್ನೆಲೆಯಲ್ಲಿ ನಮ್ಮ ಪರಂಪರೆ, ಸಂಸ್ಕೃತಿ ಪೋಷಿಸುವ ದೃಷ್ಟಿಯಿಂದ ಒಂದಷ್ಟು ಸ್ವಾಗತಾರ್ಹ ಪ್ರಯತ್ನಗಳು ಪ್ರಾರಂಭವಾಗಿರುವುದು ಸಮಾಧಾನಕರ ಸಂಗತಿ. ಉತ್ತರಾಖಂಡ್‌ನ ಚಕ್ರಾತಾ ಪ್ರಾಂತ್ಯದ ಸುಮಾರು 25 ಹಳ್ಳಿಗಳಲ್ಲಿ ಸಂಪ್ರದಾಯ, ಪರಂಪರೆ, ನಮ್ಮತನದ ಉಳಿವಿನ ಹಿನ್ನೆಲೆಯಲ್ಲಿ ಮದುವೆ ಸಮಾರಂಭದ ಕುರಿತು ಕೈಗೊಳ್ಳಲಾದ ಸಾಮೂಹಿಕ ನಿರ್ಣಯ ವಿಶಿಷ್ಟ ಕಾರಣಕ್ಕಾಗಿ ಸುದ್ದಿಗೆ ಗ್ರಾಸವಾಗಿದೆ.

ಆ ನಿರ್ಣಯದ ಪ್ರಕಾರ ಈ ಪ್ರದೇಶದಲ್ಲಿ ಇನ್ನು ಮುಂದೆ ಐಷಾರಾಮಿ, ಅದ್ದೂರಿ, ವೈಭವೋಪೇತ, ದುಬಾರಿ ವೆಚ್ಚದ ಮದುವೆ ಸಮಾರಂಭ ನಡೆಸುವಂತಿಲ್ಲ. ದುಬಾರಿ ವೆಚ್ಚದ ಉಡುಗೊರೆಯನ್ನು ನೀಡುವಂತಿಲ್ಲ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಯಂತೆ ಅವರವರ ಆರ್ಥಿಕ ಸ್ಥಿತಿಗೆ ತಕ್ಕಂತೆ ಸರಳವಾಗಿ ಮದುವೆ ಸಮಾರಂಭ ಏರ್ಪಡಿಸಬೇಕು. ಮದುವೆಗಳಲ್ಲಿ ಡಿಜೆ ಕುಣಿತ, ಸಂಗೀತ, ಕುಡಿತಗಳಿಗೆ ಅವಕಾಶವಿಲ್ಲ. ಆಧುನಿಕ ತಿಂಡಿ -ತೀರ್ಥಗಳಿಗೂ ಅವಕಾಶವಿಲ್ಲ. ಸ್ಥಳೀಯವಾದ ಊಟ -ತಿಂಡಿಗೇ ಆದ್ಯತೆ ಇರಬೇಕು. ಮದುವೆ ಖರ್ಚು ಹೊರೆಯಾಗಬಾರದು. ಡಿಜೆ ಕುಣಿತ, ಮದ್ಯಪಾನದ ಬದಲು ಸ್ಥಳೀಯ ಜಾನಪದ ಸಂಗೀತ ನೃತ್ಯಕ್ಕೆ ಆದ್ಯತೆ ನೀಡಿ ಸಂಭ್ರಮಿಸೋಣ ಎಂಬ ತೀರ್ಮಾನ ಕೈಗೊಳ್ಳಲಾಗಿದೆ. ಈ ತೀರ್ಮಾನ ಒಂದು ಒಳ್ಳೆಯ ಬೆಳವಣಿಗೆ ಎಂದು ಹಲವರು ಸ್ವಾಗತಿಸಿದ್ದಾರೆ. ಈ ನಿರ್ಧಾರವನ್ನು ಕೆಲವು ಪ್ರಮುಖರು ಸೇರಿ ಮಾಡಿರುವರಾದರೂ ಇದೊಂದು ಸಮಾಜ ಹಿತಕ್ಕೆ ಪೂರಕವಾದ ನೀತಿ ಸಂಹಿತೆಯಾಗಿದೆ. ಈ ನೀತಿ ಸಂಹಿತೆಯನ್ನು ಉಲ್ಲಂಘಿಸಿದಲ್ಲಿ 10 ಲಕ್ಷದವರೆಗೂ ದಂಡ ಕಟ್ಟಬೇಕೆಂಬ ಎಚ್ಚರಿಕೆಯನ್ನು ನೀಡಲಾಗಿದೆ. ಈ ದಂಡದ ಮೊತ್ತವನ್ನು ನಿರ್ಧರಿಸುವ ಅಧಿಕಾರ ಊರ ಪ್ರಮುಖರದ್ದು. ಇದೇನಾದರೂ ಅಂದುಕೊಂಡಂತೆ ಕಾರ್ಯಗತವಾದರೆ ಒಂದು ದೊಡ್ಡ ಕ್ರಾಂತಿಯೇ ಆದಂತೆ ಎಂದು ಆ ನೀತಿಸಂಹಿತೆ ರೂಪಿಸಿದ ಸಮಿತಿಯ ಮುಖ್ಯಸ್ಥರು ಹೇಳಿಕೆ ನೀಡಿದ್ದಾರೆ.

ಮದುವೆ ಸಮಾರಂಭಗಳಲ್ಲಿ ಪೋಲು ಮಾಡುವ ಆಹಾರ ಪದಾರ್ಥಗಳದು ಇನ್ನೊಂದು ಸಮಸ್ಯೆ. ಊಟಕ್ಕೆ ಕುಳಿತಾಗ ನಮಗೆ ಅಗತ್ಯವಿದ್ದಷ್ಟೇ ಆಹಾರ ಪದಾರ್ಥಗಳನ್ನು ಕೇಳಿ ಪಡೆದುಕೊಂಡರೆ ಪೋಲಾಗುವ ಆಹಾರ ಪದಾರ್ಥದ ಪ್ರಮಾಣವನ್ನು ತಗ್ಗಿಸಬಹುದು. ಊಟವಾದ ಬಳಿಕ ಎಂಜಲೆಲೆಗಳನ್ನು ಸುಮ್ಮನೆ ಒಮ್ಮೆ ವೀಕ್ಷಿಸಿದರೆ ರಾಶಿ ರಾಶಿ ಆಹಾರ ಪದಾರ್ಥಗಳನ್ನು ಗುಡ್ಡೆ ಹಾಕಿರುವ ಎಲೆಗಳು ಹೆಚ್ಚಿರುತ್ತವೆ. ಪೋಲಾಗುವ ಆಹಾರ ಪದಾರ್ಥಗಳಿಂದ ಹಸಿದ ಅದೆಷ್ಟೋ ಹೊಟ್ಟೆಗಳನ್ನು ತಣಿಸಬಹುದು. ಹಸಿವಿನ ಆ ಮುಖಗಳಲ್ಲಿ ಮಂದಹಾಸ ಅರಳಿಸಬಹುದು ಎಂಬುದು ನಮಗೇಕೆ ಹೊಳೆಯುತ್ತಿಲ್ಲ?

ಸರಳ, ನಿರಾಡಂಬರ, ಅರ್ಥಪೂರ್ಣ ಮದುವೆ ಸಮಾರಂಭ ಆಚರಣೆಯ ಮೂಲಕ ಮದುವೆ ಎಂಬ ಪವಿತ್ರ ವಿಧಿಗೆ ಹೊಸ ಮುನ್ನುಡಿ ಬರೆಯುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಲಿ.

ತಾರುಣ್ಯದ ತಲ್ಲಣಗಳು

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



'ಹುಚ್ಚುಕೋಡಿ ಮನಸು ಅದು ಹದಿನಾರರ ವಯಸು! ಎಂಬುದನ್ನು ಕೇಳಿದ್ದೇವಲ್ಲವೇ? ಹಾಗಂದ್ರೇನು? ನಮ್ಮ ಮಗ ಮೊದಲಿಗೆ ಎಷ್ಟು ಸಭ್ಯವಾಗಿದ್ದ. ಒಂದೂ ಎದುರು ಮಾತಾಡಿದವನಲ್ಲ. ಈಗ ಯಾಕೋ ಏನೋ ಒಂಥರಾ ಆಗಿದಾನೆ. ಏನು ಕೇಳಿದ್ರೂ ಅದೆಲ್ಲ ನಂಗೊತ್ತಿಲ್ಲಮ್ಮಾ, ನೀ ಸುಮ್ಮಿರಮ್ಮ ಅಂತ ರೇಗ್ತಾನೆ ಎಂಬುದು ತಾಯಿ ಗಂಗಮ್ಮನ ಅಳಲು. ನಮ್ಮ ಮಗಳು ಮೊದ ಮೊದಲು 'ನೋಡಮ್ಮಾ ನಿನಗೆ ಈ ಚೂಡಿದಾರ ಚೆನ್ನಾಗಿ ಕಾಣುತ್ತೆ ಕಣೆ. ಅದ್ನೇ ಹಾಕ್ಕೊಳಮ್ಮಾ' ಅಂದ್ರೆ ಮರು ಮಾತಿಲ್ಲದೇ ಹಾಕ್ಕೊಂಡು ಬರ್‍ತಿದ್ಲು. ಆದ್ರೆ ಈಗೀಗ ಯಾಕೋ, ನಾನೇನಾದ್ರೂ ಹೇಳಿದ್ರೆ ಅದಕ್ಕೆ ಒರಟು ಒರಟಾಗಿ ಉತ್ತರಕೊಡ್ತಾಳೆ. ಮೊನ್ನೆ ದಿನ ಒಂದು ಚೂಡಿದಾರ ಹಾಕ್ಕೊಂಡಿದ್ಲು. ಅಲ್ಲಮ್ಮಾ ಇದು ನಿನಗೆ ಚೆನ್ನಾಗಿ ಕಾಣ್ಸೋಲ್ಲ ಬೇರೆದನ್ನು ತೋರಿಸಿ ಅದನ್ನು ಹಾಕ್ಕೋಳೇ ಅಂತ ಸಮಾಧಾನದಿಂದ ಹೇಳ್ದೆ. ಅದಕ್ಕೆ ಅವಳು ಇಲ್ಲಮ್ಮಾ ಇದೇ ನನಗೆ ಚೆನ್ನಾಗಿ ಕಾಣ್ಸುತ್ತೆ. ನನ್ನ ಫ್ರೆಂಡ್ಸ್ ಎಲ್ರೂ ಎಷ್ಟು ಒಳ್ಳೊಳ್ಳೆ ಚೂಡಿದಾರ ಹಾಕ್ಕೊಂಡು ಬರ್‍ತಾರೆ ಗೊತ್ತಾ. ನನಗೆ ಇದೇ ಚೆನ್ನಾಗಿ ಕಾಣುತ್ತೆ. ಅದೂ ಅಲ್ದೇ ಇದನ್ನು ನನ್ನ ಫ್ರೆಂಡ್ಸಿಗೆ ವಾಟ್ಸ್ ಆ್ಯಪ್‌ನಲ್ಲಿ ತೋರಿಸ್ದೆ. ಅದನ್ನು ನೋಡಿ ಅವರು ಹೈಕ್ಲಾಸ್ ಇದೆ ಕಣೇ. ನಿನಗೆ ತುಂಬಾ ಚೆನ್ನಾಗಿ ಕಾಣ್ಸುತ್ತೆ ಅಂತ ಹೇಳಿದ್ರು. ಹಾಗಾಗಿ ಇದನ್ನೇ ಹಾಕ್ಕೋಳ್ತೇನಮ್ಮಾ ಅಂತ ಹಟ ಹಿಡಿದು, ನನ್ನ ಮಾತು ಕೇಳ್ದೇ ಕ್ಲಾಸಿಗೆ ಹೋದ್ಲು ಎಂಬುದು ತಾಯಿ ಮಮ್ತಾಳ ಅಳಲು.

ಹೀಗೆ ಒಬ್ಬೊಬ್ಬ ಪೋಷಕರದೂ ತಮ್ಮ ಮಕ್ಕಳ ಕುರಿತು ಒಂದೊಂದು ಹೇಳಿಕೆಗಳು. ಹಾಗಾದರೆ ಇದಕ್ಕೆಲ್ಲಾ ಕಾರಣ ಏನು? ಆ ಮಕ್ಕಳ ವಯಸ್ಸೆಷ್ಟು? ಅವರು ಯಾಕೆ ಹೀಗೆ ವರ್ತಿಸುತ್ತಾರೆ? ಎಂಬುದು ಅನೇಕ ಪೋಷಕರ ಪ್ರಶ್ನೆ. ಇದಕ್ಕೆ ಕಾರಣ ಮಕ್ಕಳು ಬಾಲ್ಯ ಕಳೆದು ತಾರುಣ್ಯವನ್ನು ತಲುಪಿದ್ದಾರೆ. ತಾರುಣ್ಯಕ್ಕೆ ಹರೆಯ ಅಥವಾ ಯೌವ್ವನ ಎಂದೂ ಕರೆಯುತ್ತಾರೆ. ಈ ಅವಧಿಯಲ್ಲಿ ಹಲವಾರು ಬದಲಾವಣೆಗಳು ಕಾಣುತ್ತವೆ. ಬದಲಾವಣೆಗಳಿಂದ ಅವರ ಮನಸ್ಸು ತಲ್ಲಣಕ್ಕೊಳಗಾಗುತ್ತದೆ ಎಂಬ ಅಂಶ ಪೋಷಕರ ಅರಿವಿಗೆ ಬರುವುದಿಲ್ಲ. ಅವರು ಹೇಳುವುದುಃ ಅಯ್ಯೋ ಈಗ ಕಾಲ ಕೆಟ್ಟು ಹೋಗಿದೇರಿ. ಈ ಮಕ್ಕಳನ್ನು ಹೇಗೆ ನಿಭಾಯಿಸೋದು ಎನ್ನೋದೇ ಒಂದು ದೊಡ್ಡ ಸಮಸ್ಯೆಃ ಎನ್ನುತ್ತಾರೆ. ತಮ್ಮ ಮಕ್ಕಳು ಈಗ ತಾರುಣ್ಯದ ಅಥವಾ ಹರೆಯದ ಹೊಸ್ತಿಲಲ್ಲಿದ್ದಾರೆ. ಈ ಅವಧಿಯಲ್ಲಿ ಸಮಗ್ರವಾಗಿ ಅಂದರೆ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಲೈಂಗಿಕವಾಗಿ ಹಲವು ಬದಲಾವಣೆಗಳಾಗುತ್ತವೆ. ಈ ದಿಸೆಯಲ್ಲಿ ತಾರುಣ್ಯದ ಕುರಿತಾದ ಹಲವು ವಿಷಯಗಳನ್ನು ಪೋಷಕರು ತಿಳಿದುಕೊಳ್ಳುವುದು ಅವಶ್ಯ.

ಮಾನವನ ಜೀವಿತಾವಧಿಯಲ್ಲಿ ಅತ್ಯಂತ ಮಹತ್ವವಾದ ಮೆಟ್ಟಿಲು ತಾರುಣ್ಯ ಅಥವಾ ಹರೆಯ. ಈ ಅವಧಿಯು ಸುಮಾರು ಹನ್ನೆರಡನೇ ವಯಸ್ಸಿನಿಂದ ಇಪ್ಪತ್ತನೇ ವಯಸ್ಸಿನ ವರೆಗೆ ಎಂದು ಹೇಳಬಹುದು. ಇದಕ್ಕೆ ಇಂಗ್ಲೀಷಿನಲ್ಲಿ 'ಟೀನೇಜ್' ಎಂದು ಕರೆಯುತ್ತಾರೆ. ಮನೋ ವೈದ್ಯಕೀಯದಲ್ಲಿ ಇದಕ್ಕೆ 'ಅಡೋಲೆಸೆನ್ಸ್' (Adolesence) ಎಂದು ಕರೆಯುತ್ತಾರೆ. ಪರಾವಲಂಬಿತನದ ಬಾಲ್ಯಾವಸ್ಥೆಯನ್ನು ತೊರೆದು ಇನ್ನೂ ಪ್ರೌಢತ್ವದ ಸ್ವತಂತ್ರತೆಯನ್ನು ತಲುಪದೇ ಇರುವ ಅವಧಿಯೇ ಹರೆಯ. ಹರೆಯ ಒಂದು ಸಂಕ್ರಮಣದ ಕಾಲವೂ ಹೌದು. ಈ ಅವಧಿಯಲ್ಲಿ ಎಷ್ಟು ಮಹತ್ವದ್ದೆಂದರೆ, ಹರೆಯದಲ್ಲಿ ಸರಿಯಾದ ಪ್ರೋತ್ಸಾಹ, ಮಾರ್ಗದರ್ಶನ, ಹಿತವಾದ ಕೌಟುಂಬಿಕ ಪರಿಸರ ಮತ್ತು ಒಳ್ಳೆಯ ಸಾಮಾಜಿಕ ಬೆಂಬಲ ದೊರೆತಾಗ, ಅದರಿಂದ ಹರೆಯದ ಮನಸ್ಸು ಭವಿಷ್ಯದಲ್ಲಿ ಸಾಧನೆ ಮಾಡಲು ಸಜ್ಜಾಗುತ್ತದೆ. ಆತ್ಮವಿಶ್ವಾಸದಿಂದ ಮುನ್ನುಗ್ಗಿ ಯಶಸ್ಸನ್ನು ಸಾಧಿಸುವತ್ತ ಚಲಿಸುತ್ತದೆ. ನಕಾರಾತ್ಮಕ ಅಂಶಗಳಿಂದ ಕೂಡಿದ, ಕೌಟುಂಬಿಕ ಮತ್ತು ಸಾಮಾಜಿಕ ಪರಿಸರಗಳು, ಮಗುವನ್ನು ಅರ್ಥ ಮಾಡಿಕೊಳ್ಳದ ಪೋಷಕರು, ಪ್ರೀತಿ ಮತ್ತು ಆತ್ಮೀಯತೆಯ ಕೊರತೆ ಇವುಗಳಿಂದ ಹರೆಯದವರ ಭವಿಷ್ಯವೇ ಕುಂಠಿತಗೊಳ್ಳುವ ಸಂಭವ ಹೆಚ್ಚು. ಸಾಮಾಜಿಕ ಜಾಲತಾಣಗಳಾದ ವಾಟ್ಸ್ ಆ್ಯಪ್, ಫೇಸ್‌ಬುಕ್, ಯೂಟ್ಯೂಬ್, ಇನ್‌ಸ್ಟಾಗ್ರಾಂ ಮತ್ತು ವೀಡಿಯೋ ಚಿತ್ರಗಳು ಅಪಕ್ವವಾದ ಹರೆಯದ ಮನಸ್ಸನ್ನು ಇನ್ನಷ್ಟು ತಪ್ಪು ದಾರಿಗೆಳೆದು ಅವರ ಭವಿಷ್ಯವು ನರಕ ಸದೃಶವಾಗುತ್ತದೆ.

ಹೆಚ್ಚಿನ ಪೋಷಕರು ಈ ಕಾಲದ ಮಕ್ಕಳು ಕೆಟ್ಟು ಹೋಗಿದ್ದಾರೆ. ನಮ್ಮ ಕಾಲದಲ್ಲಿ ಮಕ್ಕಳು ಹೀಗಿರಲಿಲ್ಲ. ಈಗ ಕಾಲ ಕೆಟ್ಟಿದೆ ಎಂದು ಹೇಳುವುದನ್ನು ನಾವು ಕೇಳುತ್ತೇವೆ. ಆದರೆ ಕಾಲ ಯಾವಾಗಲೂ ತನ್ನಷ್ಟಕ್ಕೆ ತಾನು ಓಡುತ್ತಿರುತ್ತದೆ. ಅದು ಕೆಡಲು ಸಾಧ್ಯವಿಲ್ಲ. ಮಕ್ಕಳೂ ಎಂದಿನಂತೆಯೇ ಇದ್ದಾರೆ. ಆದರೆ ಅವರ ಸುತ್ತ ಇರುವ ಕುಟುಂಬ ಮತ್ತು ಪರಿಸರಗಳ ಬದಲಾವಣೆಗಳಿಂದ ಹರೆಯದ ಮನಸ್ಸು ದಾರಿ ತಪ್ಪುತ್ತದೆ. ಇದಕ್ಕೆ ಅವಶ್ಯವಿರುವುದು ಆತ್ಮೀಯ, ಪ್ರೀತಿಯ, ಸಕಾರಾತ್ಮಕ ಮಾರ್ಗದರ್ಶನ.

ಹರೆಯದ ಅವಧಿಯಲ್ಲಿ ದೈಹಿಕ, ಮಾನಸಿಕ, ಲೈಂಗಿಕ ಮತ್ತು ಸಾಮಾಜಿಕ ಬದಲಾವಣೆಗಳಾಗುತ್ತವೆ. ಮನೋವಿಕಾಸದಿಂದ ಹಲವಾರು ಸಂದೇಹಗಳು ಮತ್ತು ಪ್ರಶ್ನೆಗಳು ಪುಟಿದೇಳುತ್ತವೆ. ಇವುಗಳಿಂದ ಹರೆಯದ ಮನಸ್ಸು ಒತ್ತಡಗಳಿಗೆ ಸಿಲುಕುತ್ತದೆ. ಅದೇ ರೀತಿ ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಬರುವ ಒತ್ತಡಗಳನ್ನು ನಿಭಾಯಿಸಿ, ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ ಮುನ್ನಡೆದರೆ ಹರೆಯದವರ ಭವಿಷ್ಯವು ಹಸನಾಗುತ್ತದೆ. ಇದಕ್ಕೆ ಪಾಲಕರ ಮುಕ್ತವಾದ ಪ್ರೀತಿಯ ಮಾತುಗಳು, ಪ್ರೋತ್ಸಾಹ, ಆತ್ಮೀಯತೆಯ ಸಂವಹನ, ಮಕ್ಕಳ ಅನಿಸಿಕೆಗಳನ್ನು ಆಲಿಸಿ, ಅರ್ಥ ಮಾಡಿಕೊಳ್ಳುವುದು ಮತ್ತು ಸಕಾರಾತ್ಮಕ ಮಾರ್ಗದರ್ಶನ ಅತ್ಯವಶ್ಯ.

ಸುಮಾರು ಶೇಕಡ ನಲವತ್ತು ಭಾಗದ ಮಾನಸಿಕ ಕಾಯಿಲೆಗಳು ಪ್ರಾರಂಭವಾಗುವುದು ಹರೆಯದಲ್ಲಿ ಎಂಬುದು ಅಧ್ಯಯನಗಳ ವರದಿ. ಸಮಾಜದಲ್ಲಿರುವ ತಪ್ಪು ಕಲ್ಪನೆಗಳಿಂದ ಪೋಷಕರು ಇವುಗಳ ಕುರಿತು ಗಮನ ನೀಡುವುದಿಲ್ಲ. ಒಮ್ಮೆ ಗಮನಕ್ಕೆ ಬಂದರೂ ಅದರ ಕುರಿತು ತಾತ್ಸಾರ ಅಥವಾ ತಮ್ಮ ಸಾಮಾಜಿಕ ಪ್ರತಿಷ್ಠೆಯಿಂದ ಎಲ್ಲಿ ತಮ್ಮ ಕುಟುಂಬಕ್ಕೆ ಅವಮಾನವಾಗುವುದೋ ಎಂಬ ಆತಂಕ. ಕೆಲವು ಪೋಷಕರು ಹರೆಯದವರಿಗೆ ಮಾನಸಿಕ ಕಾಯಿಲೆಗಳೆಲ್ಲಿ ಬರುತ್ತದೆ? ಅವರಿಗೇನೂ ಜವಾಬ್ದಾರಿಯಿಲ್ಲ. ಹಾಗಾಗಿ ಮನೋರೋಗಗಳು ಎಲ್ಲಿಂದ ಬರಬೇಕು ಎನ್ನುತ್ತಾರೆ. ಇದು ಮನೋರೋಗ ಕುರಿತು ಅವರಿಗಿರುವ ಅಜ್ಞಾನ. ಕೆಲವು ಪೋಷಕರು ಮನೋವೈದ್ಯರ ಹತ್ತಿರ ಹೋಗಲು ಹಿಂಜರಿಯುತ್ತಾರೆ. ಮನೋವೈದ್ಯರು ನಿದ್ದೆ ಮಾತ್ರೆಗಳನ್ನು ಕೊಟ್ಟು ಮಗುವಿನ ಆರೋಗ್ಯವನ್ನು ಹಾಳು ಮಾಡುತ್ತಾರೆ ಎಂಬ ಭಯ. ಈ ಕಾರಣಗಳಿಂದ ದೆವ್ವ, ಭೂತ, ಪಿಶಾಚಿ, ದೇವಸ್ಥಾನ, ತಾಯತ, ಜ್ಯೋತಿಷ್ಯ, ಹೋಮ, ಹವನ ಇತ್ಯಾದಿಗಳಿಗೆ ಮೊರೆಹೋಗುತ್ತಾರೆ. ಇದರ ಅಂತಿಮ ಪರಿಣಾಮ ಹರೆಯದ ಮಗು ಕಲಿಕೆಯಲ್ಲಿ ಹಿಂದುಳಿಯುತ್ತದೆ. ಅದಕ್ಕೆ ಪೋಷಕರಿಂದ ಕಟು ಶಬ್ದಗಳ ಬೈಗುಳ. ಇದರ ಅಂತಿಮ ಫಲ ಹರೆಯದವರ ಭವಿಷ್ಯ ಹಾಳಾಗುತ್ತದೆ. ಹರೆಯದವರ ಒತ್ತಡಗಳನ್ನು ನೀಗುವಲ್ಲಿ ಮತ್ತು ಸವಾಲುಗಳನ್ನು ಎದುರಿಸುವಲ್ಲಿ ಪೋಷಕರ ಪಾತ್ರವೇನು? ಸಮಾಜದ ಪಾತ್ರ ಏನು? ಎಂಬ ಹಲವಾರು ಪ್ರಶ್ನೆಗಳ ಕುರಿತು ಮಾಹಿತಿ ನೀಡಲು ಈ ಲೇಖನಗಳ ಸರಮಾಲೆಯೇ ತಾರುಣ್ಯದ ತಲ್ಲಣಗಳು.

(ಲೇಖಕರು ಖ್ಯಾತ ಮನೋರೋಗ ತಜ್ಞರು, ಶಿವಮೊಗ್ಗ)


'ಹಿಡನ್ ಚಾರ್ಜ್'ಗಳ ಹುಡುಕಾಟದಲ್ಲಿ...

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ನಿಂಗೇಶಿ ಈಗೀಗ ಆನ್‌ಲೈನ್ ಶಾಪಿಂಗ್‌ನ ಮೋಹಕ್ಕೆ ಬಿದ್ದಿದ್ದಾನೆ. ಹಿಂದೆ ತನ್ನ ಅಜ್ಜ, ಅಪ್ಪನ ಜೊತೆಗೆ ಜಾತ್ರೆ ಹಾಗೂ ಸಂತೆಗಳಲ್ಲಿ ತಿರುಗಾಡುವಾಗ ಬೇಕಾದ ವಸ್ತುವನ್ನು ಖರೀದಿಸಲೆಂದು ಹತ್ತಾರು ಅಂಗಡಿಗಳನ್ನು ಹತ್ತಿಳಿದು ಆತನಿಗೆ ಅಭ್ಯಾಸವಿತ್ತು. ನಿಂಗೇಶಿಗೆ ಸರಿಯಾಗಿ ನೆನಪಿದೆ, ಅಲ್ಲೆಲ್ಲ ಅಂಗಡಿಗಳು ಒಂದು ನಿಗದಿತ ಲೈನ್‌ನಲ್ಲಿ ಇರುತ್ತಿದ್ದವು. ಆದರೆ ಈಗ ಹಾಗಲ್ಲ. ಅವನು ಹೊಕ್ಕಿ ಹೊರಬರುವ, ಮಿನಿಮೈಸ್ ಮಾಡಿ ಬದಿಗಿಟ್ಟು ಮತ್ತೊಂದರ ಒಳಗೆ ಪ್ರವೇಶಿಸುವ ಈ ಅಂಗಡಿಗಳು ಆನ್‌ಲೈನ್ ಸ್ವರೂಪದವು. ಈಗಲೂ ಈತ ಈ ಆನ್‌ಲೈನ್ ಅಂಗಡಿಗಳನ್ನು ಮಿನಿಮೈಸ್ ಮಾಡಿಟ್ಟಾಗ ಒಂದು ರೀತಿ ಲೈನ್‌ನಲ್ಲೇ ಇರುವಂತೆಯೇ ಗೋಚರಿಸುತ್ತವೆ. ಸ್ಕ್ರಾಲ್ ಬ್ಯಾಕ್ ಮಾಡುತ್ತಾ ಬೇಕೆನಿಸಿದ ಕಡೆಗೆ ಮತ್ತೆ ಹೋಗಿ ಆರ್ಡರ್ ಮಾಡಿಕೊಳ್ಳುವುದು ರೂಢಿ ಯಾಗಿದೆ. ಆದರೆ ಇಲ್ಲೊಂದು ಬಹುಮುಖ್ಯವಾದ ವ್ಯತ್ಯಾಸವಿದೆ. ಆ ಕಾಲದಲ್ಲಿ 150 ರುಪಾಯಿಯ ಚಪ್ಪಲಿ ಎಂದರೆ ಕೊನೆಗೆ ಅಪಾರ ಚೌಕಾಸಿಯ ಚತುರತೆ ಮೆರೆದು ಅದನ್ನು 70 ಇಲ್ಲವೇ 90 ರೂಪಾಯಿಗೇ ಖರೀದಿಸ ಲಾಗುತ್ತಿತ್ತು. ಆದರೆ ಈಗ ಹಾಗಲ್ಲ 750 ಅಂತ ಕಂಡಿದ್ದು, ಅದೇನೇನೋ ಆಫರ್‌ಗಳೆಲ್ಲವೂ ಸೇರಿಯೂ ಕೊನಗೆ ಕೊಳ್ಳುವಾಗ ಅದರ ಬೆಲೆ 900- 950 ಹತ್ತಿರ ಹೋಗಿರುತ್ತದೆ. 35% ಆಫ್ ಎಂಬ ಲೇಬಲ್ ನಮ್ಮನ್ನು ಅಣಕಿಸು ವಂತಿರುತ್ತದೆ. ಇದ್ಯಾಕೆ ಹೀಗಾಗುತ್ತದೆ ಎನ್ನುವುದನ್ನು ಪತ್ತೆ ಮಾಡಲು ಇಳಿದರೆ, ಅಷ್ಟು ಸುಲಭಕ್ಕೆ ನೇರಾನೇರ ಕಣ್ಣಿಗೆ ಬೀಳದ 'ಹಿಡನ್ ಚಾರ್ಜಸ್' ಗಳ ಹೈಡ್&ಸೀಕ್ ಆಟ ಗಮನಕ್ಕೆ ಬರುತ್ತದೆ. ಅವು ಕದ್ದುಮುಚ್ಚಿ ಅಸಲಿ ಬೆಲೆಯ ಜೊತೆಗೆ 'ನೀನೆಲ್ಲೋ ನಾನಲ್ಲೇ' ಎನ್ನುತ್ತಾ ಸೇರಿಕೊಳ್ಳುತ್ತವೆ.

'ಕಣ್ಣಿಗೆ ಕಾಣದ ಆದರೆ ಜೇಬಿಗೆ ಖೋತಾ' ಆಗಿ ಪರಿಣಮಿಸುವ ಈ ಅಡಗಿರುವ ಶುಲ್ಕಗಳು ವಿವಿಧ ಹೆಸರುಗಳೊಂದಿಗೆ ನಮ್ಮ ಖರೀದಿಯ ಜೊತೆಗೆ ಸೇರಿಕೊಳ್ಳುತ್ತವೆ. ಆದ್ದರಿಂದ ಹಿಡನ್ ಚಾರ್ಜಸ್ ಎಂಬ ಕಂಪೆನಿಗಳ ಹಿಡನ್ ಅಜೆಂಡಾದ ಬಗ್ಗೆ ಸೂಕ್ತ ಎಚ್ಚರಿಕೆ ಇರಬೇಕಾಗುತ್ತದೆ. ಕೆಲವೊಮ್ಮೆ ಆ ಪರಿ ಹೇಗಿರುತ್ತದೆ ಎಂದರೆ, ಹಿರಣ್ಯಕಶಿಪು ಪ್ರಹ್ಲಾದನಲ್ಲಿ ಕಂಬ ಕಂಬವನ್ನೂ ತೋರಿಸಿ ಇಲ್ಲಿ ಅಡಗಿರುವನೇ ನಿನ್ನ ಹರಿ, ಇಲ್ಲಿ ಅಡಗಿರುವನೇ ನಿನ್ನ ಹರಿ ಎಂದು ಕೇಳಿದಂತೆ, ಪ್ರತೀ ಆರ್ಡರ್ ಮಾಡುವ ಮುನ್ನವೂ, ಪ್ರತೀ ಖರೀದಿಗೆ ಮುಂದಾಗುವ ಮೊದಲು ಇದರಲ್ಲಿ ಅಡಗಿದೆಯೇ ಆ ಹೆಚ್ಚುವರಿ ಶುಲ್ಕ, ಅಲ್ಲಿ ಏನೇನೂ ಹೆಚ್ಚುವರಿ ಶುಲ್ಕ ಇದ್ದಾವು, ಇದರಲ್ಲೇನಾದರೂ ಬೇರೆ ಹಿಡನ್ ಚಾರ್ಜಸ್ ಇದೆಯೇ ಎಂದು ಪರಿ ಪರಿಯಾಗಿ ಕೇಳಿ, ಅದು ಇದೆಯೋ ಇಲ್ಲವೋ ಎನ್ನುವುದನ್ನು ಖಾತ್ರಿಪಡಿಸಿಕೊಂಡೇ ಮುಂದೆ ಸಾಗಬೇಕಾಗುತ್ತದೆ. ಹಾಗೆ ನೋಡಿದರೆ, ಗ್ರಾಹಕರಿಂದ ಸಾಧ್ಯವಾದಷ್ಟೂ ಹೆಚ್ಚು ಹಣ ಪೀಕಿಸಲೇಬೇಕು ಎಂಬ ಮಾರಾಟಗಾರರ ತಂತ್ರ-ಕುತಂತ್ರಗಳ ಸಾಫ್ಟ್ ಆವೃತ್ತಿಯೇ ಈ ಅಡಗಿರುವ ಶುಲ್ಕಗಳ ಶೂಲ. ಅವುಗಳಿಗೂ ಬಗೆ ಬಗೆಯ ಉತ್ಪನ್ನ ಹಾಗೂ ಸರಕು-ಸೇವೆಗಳೇ ಅತ್ಯಂತ ಸುರಕ್ಷಿತ ಅಡಗುತಾಣ. ತಿಗಣೆ, ಜಿರಳೆ ಕಾಟ ಹೆಚ್ಚಿರುವ ಮನೆ ಅಥವಾ ಅಂಗಡಿಯಿಂದ ಯಾವುದಾದರೂ ವಸ್ತುವನ್ನು ನಮ್ಮ ಮನೆಗೆ ತಂದರೆ ಕೆಲವೊಮ್ಮೆ ಅವುಗಳ ಜೊತೆಗೆ ಯಾರಿಗೂ ಗೊತ್ತಾಗದಂತೆ ಒಂದೆರಡು ಜಿರಳೆ, ತಿಗಣೆಗಳೂ ಬಂದು ನಮ್ಮ ಮನೆಯನ್ನು ಸೇರುತ್ತವಲ್ಲ ಹಾಗೆಯೇ ಈ ಅಡಗಿ ಕುಳಿತ ಶುಲ್ಕಗಳ ಅಟಾಟೋಪ!



ನಮ್ಮ ನಿಂಗೇಶಿಗೆ ಒಂದು ಜೊತೆ ಶೂ ಕೊಳ್ಳಬೇಕಿತ್ತು. ತನಗೆ ಬೇಕಾದ ಬಣ್ಣ, ಗಾತ್ರ, ವಿನ್ಯಾಸ ಹಾಗೂ ಗುಣಮಟ್ಟಕ್ಕಾಗಿ ಹತ್ತಾರು ಆನ್‌ಲೈನ್ ಅಂಗಡಿಗಳನ್ನು ಎಡತಾಕಿದ. ಕೊನೆಗೂ ಒಂದೆಡೆ ಕಾಣಿಸಿದ 850/- ಬೆಲೆಯ ಶೂ ಮೆಚ್ಚುಗೆಯಾಯಿತು. ಬೇರೆಡೆ ಆದರೆ, ಆಫ್‌ಲೈನ್‌ನಲ್ಲಾದರೆ ಏನಿಲ್ಲವೆಂದರೂ 1000-1200 ರ ಕಡಿಮೆ ಇದು ಸಿಕ್ಕಲಿಕ್ಕೆ ಸಾಧ್ಯವೇ ಇಲ್ಲ. ಸದ್ಯ ನನಗೆ ಅತ್ಯುತ್ತಮ ಡೀಲ್ ಸಿಕ್ಕಿದೆ ಅಂತ ಖುಷಿಯಲ್ಲಿ ಹಿರಿ ಹಿರಿ ಹಿಗ್ಗುತ್ತಾ ಆರ್ಡರ್ ಪ್ಲೇಸ್ ಮಾಡಲು ಮುಂದಾದ, ಯಾವುದಕ್ಕೂ ಇರಲಿ ಎಂದು, ಕೊನೆಯದಾಗಿ ಇನ್ನೊಮ್ಮೆ ಬೆಲೆಯ ಕಾಲಮ್‌ನ್ನು ಪರೀಕ್ಷಿಸಿದ. ಅಲ್ಲಿ 1130/- ಎಂದು ತೋರಿಸಿದ್ದು ನೋಡಿ ಬೆಚ್ಚಿ ಕುಳಿತ. ಮತ್ತೊಮ್ಮೆ ಕಣ್ಣುಜ್ಜಿಕೊಂಡು, ತನ್ನ ಆರ್ಡರ್‌ನ್ನೆಲ್ಲಾ ಆದ್ಯಂತ ಪರಿಶೀಲಿಸಿ, ಒಳಗೆ ಹುದುಗಿಸಿಟ್ಟಿದ್ದ ಬೆಲೆಯ ವಿವರವನ್ನು ತೆರೆದು ನೋಡಿದರೆ ನಿಂಗೇಶಿಗೆ ನಿಂತಲ್ಲೇ ಸಣ್ಣಗೆ ಶಾಕ್ ಹೊಡೆದಂತಾಯಿತು. ಅದರ ಬೆಲೆಯೇನೋ ಜಸ್ಟ್ 850/- ಹೌದು. ಆದರೆ ಅದರೊಂದಿಗೆ ಅವರು ಬಂದರೆ ನಾವೂ ಬರುತ್ತೇವೆ ಎಂದು ಸಾಲುಗಟ್ಟಿ ನಿಂತಿರುವ ಪ್ಲಾಟ್ ಫಾರ್ಮ್ ಶುಲ್ಕ, ಹ್ಯಾಂಡಲಿಂಗ್ ಶುಲ್ಕ, ಜಿಎಸ್‌ಟಿ, ಕನ್ವೀನಿಯನ್ಸ್ ಶುಲ್ಕ, ಡೆಲಿವರಿ ಶುಲ್ಕ, ಪ್ಯಾಕಿಂಗ್ ಶುಲ್ಕ ಇನ್ನೊಂದು ಮತ್ತೊಂದು ಎಲ್ಲವೂ ಸೇರಿ ದೊಡ್ಡ ದಿಬ್ಬಣದಂತೆ ನೆರೆದಿದ್ದವು. ಅದರ ಮುಂದೆ ನಿಂಗೇಶಿಯ ಶೂ ಖರೀದಿಯ ಆಸಕ್ತಿಯೇ ಬತ್ತಿ ಬರಡಾಯಿತು. ಈ ಹಿಡನ್ ಚಾರ್ಜ್‌ಗಳ ಹಿಂಡಿನ ದಾಳಿಯಿಂದ ತಪ್ಪಿಸಿಕೊಳ್ಳುವುದು ಎಂಥೋ ಏನೋ ಎನ್ನುತ್ತಾ ಆತ ಆ್ಯಪ್‌ನ್ನು ಮುಚ್ಚಿಟ್ಟು, ನಿಟ್ಟುಸಿರು ಹೊರಚೆಲ್ಲಿ ತಣ್ಣಗೆ ಕುಳಿತ.

'ಬರಿಗಣ್ಣಿಗೆ ಕಾಣದ ಅದೆಷ್ಟೋ ಸಂಗತಿಗಳು ಈ ಲೋಕದಲ್ಲಿವೆ' ಎಂಬ ಮಾತನ್ನು ನಾವು ಲೌಕಿಕ, ಅಲೌಕಿಕ ಅಂತೆಲ್ಲಾ ಆಲೋಚಿಸಿ, ತತ್ವ ಸಿದ್ಧಾಂತಗಳ ಹಿನ್ನೆಲೆಯಲ್ಲೆಲ್ಲಾ ಗ್ರಹಿಸಲು ಯತ್ನಿಸುತ್ತೇವೆ. ಆದರೆ ಬರಿಗಣ್ಣಿಗೆ, ಅಷ್ಟು ಸುಲಭಕ್ಕೆ ಮೇಲ್ನೋಟಕ್ಕೆ ಕಾಣಿಸದ ಆ ಸಂಗತಿಗಳಲ್ಲಿ ಇಂಥ ಹಿಡನ್ ಚಾರ್ಜಸ್‌ಗಳೂ ಇರುತ್ತವೆ ಎನ್ನುವುದು ಮಾತ್ರ ಅಷ್ಟು ಸುಲಭಕ್ಕೆ ಅರ್ಥಮಾಡಿಕೊಳ್ಳಲಾಗದು. ಹೇಗೆ ಮನುಷ್ಯರ ಒಳಗೆ ವಿವಿಧ ಪ್ರತಿಭೆಗಳು ಅಡಗಿರುತ್ತವೆಯೋ, ಬಟ್ಟೆಗಳಲ್ಲಿ ಕಲೆ-ವಾಸನೆ ಅಡಗಿರುತ್ತದೆಯೋ, ಹಲ್ಲಿನ ಸಂಧಿಗಳಲ್ಲಿ ಕೀಟಾಣುಗಳು ಅಡಗಿರುವವೋ ಹಾಗೆಯೇ ಬೆಲೆಯ ಆಳದಲ್ಲಿ ಈ ಹೆಚ್ಚುವರಿ ಶುಲ್ಕಗಳೂ ಸಹ ಅಡಗಿರುತ್ತವೆ ಎನ್ನುವುದನ್ನು ನಾವೆಲ್ಲರೂ ಮನಗಾಣಲೇಬೇಕು. ಹೇಗೆ ಸುಪ್ತ ಪ್ರತಿಭೆಯೊಂದನ್ನು ಹೊರಗೆಳೆದು ನಾಲ್ಕು ಜನರ ಕಣ್ಣಿಗೆ ಬೀಳುವಂತೆ ಮಾಡುವುದು ಕಷ್ಟವೋ ಹಾಗೆಯೇ ಈ ಗುಪ್ತ ಶುಲ್ಕಗಳನ್ನೂ ಬಟಾಬಯಲು ಮಾಡಿ, ಎಲ್ಲರಿಗೂ ಥಟ್ಟನೇ ಅರ್ಥೈಸುವುದೂ ಸಹ ಅಷ್ಟೇ ಕಷ್ಟದ ಕೆಲಸ. ಆದಕ್ಕೆ ನಮ್ಮಲ್ಲಿ ವಿಶೇಷವಾದ ಒಳನೋಟ ಅಂದರೆ ಒಳಗೆ ಅಡಕವಾಗಿರುವ ದರ ವಿವರ ತೆರೆದು ನೋಡುವುದು, ಲೆಕ್ಕಾಚಾರದ ಚಾಕಚಕ್ಯತೆ ಅರ್ಥಾತ್ ಅದಕ್ಕೆ ಅಷ್ಟಾದರೆ ಬಿಲ್ ಏಕೆ ಇಷ್ಟಾಯಿತು ಎನ್ನುವುದನ್ನೆಲ್ಲಾ ಮೌಖಿಕವಾಗಿಯೇ ಲೆಕ್ಕಹಾಕಿ ಕೂಡಿ ಕಳೆದು ಬಾಗಿಸಿ ಕಂಡುಕೊಳ್ಳುವ ಲೆಕ್ಕದ ಚತುರಮತಿ ಇರಬೇಕಾದುದು ಅವಶ್ಯಕವಾಗಿದೆ. ಇವುಗಳ ಬೆನ್ನು ಹತ್ತಿ ಹೋದಾಗ ಒಂದಂತೂ ಅರ್ಥವಾಗುತ್ತದೆ ಅದೇನೆಂದರೆ, ನಾವು ಖರೀದಿಸುವ ವಸ್ತುಗಳೇನೋ ಸಸ್ತಾ. ಆದರೆ ಅವುಗಳ ಜೊತೆಗೆ ಬರುವ ಹೆಚ್ಚುವರಿ ಶುಲ್ಕಗಳೇ ನಮಗೆ ಸುಸ್ತು ತರಿಸುವುದು.

ನಿಂಗೇಶಿ ಇದನ್ನೆಲ್ಲಾ ತಿಳಿದುಕೊಂಡ ಮೇಲೆ ಇವುಗಳ ಬಗ್ಗೆ ಇನ್ನೂ ಹೆಚ್ಚೇ ಜಾಗೃತನಾಗಲಾರಂಭಿಸಿದ. ಆಗಲೇ ಆತನಿಗೆ ಈ ಹಿಡನ್ ಚಾರ್ಜಸ್‌ಗಳ ಹತ್ತು ಹಲವು ಅವತಾರಗಳು ಅನುಭವಕ್ಕೆ ಬರಲಾರಂಭಿಸಿದ್ದು. ರೆಸ್ಟೋರೆಂಟ್‌ಲಿ ಬರ್ಗರ್ ಆರ್ಡರ್ ಮಾಡಿದರೆ ಅದರೊಂದಿಗೆ ಸರ್ವೀಸ್ ಚಾರ್ಜ್ ಕೂಡಾ ಬಿಲ್ಲಲ್ಲಿ ಬಿಳಿನಗೆ ಬೀರುತ್ತಿತ್ತು. ಅವತ್ತೊಂದಿನ ಕ್ಯಾಬ್ ಬುಕ್ ಮಾಡಿದ್ದ ನಿಂಗೇಶಿ ಅದರೊಂದಿಗೆ ಠಳಾಯಿಸಿದ ಪೀಕ್-ಅವರ್ -ಚಾರ್ಜ್ ನೋಡಿ ಅಕ್ಷರಶಃ ಪೆಕರನಂತಾಗಿ ಹೋಗಿದ್ದ. ಆತನ ಅಂದಿನ ಪ್ರಯಾಣದಲ್ಲಿ, ಆತನಿಗಿಂತಲೂ ಆತನ ಬಿಲ್ ಆತನನ್ನು ಬಿಟ್ಟು ಇನ್ನೂ ಬಹಳ ದೂರ ಚಲಿಸಿದ್ದಂತೂ ಸುಳ್ಳಲ್ಲ. ಐಷರಾಮಿ ಲಾಡ್ಜ್‌ಲ್ಲಿ ರೂಮ್ ಮಾಡಿಕೊಂಡು ಉಳಿದಿದ್ದ ಆತನಿಗೆ ಅಲ್ಲಿನ ಲಾಂಡ್ರಿ ಶುಲ್ಕ, ರೆಸಾರ್ಟ್ ಶುಲ್ಕ, ವೈ-ಫೈ ಶುಲ್ಕ ಇತ್ಯಾದಿಯನ್ನೆಲ್ಲಾ ನೋಡಿ, 'ಸದ್ಯ ಇಲ್ಲಿ ಉಸಿರಾಡಿದ ತಣ್ಣನೆಯ ಪ್ರಶಾಂತವಾದ ಗಾಳಿಗೆ ಯಾವುದೇ ಶುಲ್ಕ ವಿಧಿಸಲ್ಲವಲ್ಲ, ಅಬ್ಬಾ ಬಚಾವ್!' ಎಂದುಕೊಂಡು ಅಲ್ಲಿಂದ ಹೊರಟ.

ಹೀಗೆ ಬದುಕಲ್ಲಿ ಎದುರಾಗುವ ವ್ಯಕ್ತಿ, ವಿಷಯ, ವಸ್ತುಗಳಲ್ಲೂ ಕೆಲವೊಮ್ಮೆ ಇಂಥದ್ದೇ ಹಿಡನ್ ಚಾರ್ಜಸ್‌ನಂಥ ಅಂಶಗಳು ಕಂಡು ಬರುವುದಿದೆ. ಆತ್ಮೀಯತೆಯೊಂದಿಗೆ ಆರಂಭವಾದದ್ದು ಬರು ಬರುತ್ತಾ ಆಕ್ರೋಶ, ಆಪಾದನೆಗೆ ತಿರುಗುವುದು, ನಲಿವಿನಲ್ಲಿ ಜೊತೆಯಾದದ್ದು ಅಷ್ಟೇ ಸಹಜವಾಗಿ ನೋವಿಗೆ ತಿರುಗುವುದು, ಬಹಳ ಉಪಯುಕ್ತ ಅನಿಸಿಕೊಂಡಿದ್ದು ಯಾವುದೋ ಹೆಚ್ಚುವರಿ ಖರ್ಚಿಗೆ ದಾರಿಯಾಗುವುದು, ಅದಾವುದೋ ಸರಾಗವಾಗಿ ಆಗುವುದು ಎಂದು ಕೈ ಹಾಕಿದ್ದು ಇನ್ನಾವುದೋ ವ್ಯತಿರಿಕ್ತ ತಿರುವು ಪಡೆದುಕೊಂಡು ಬೆಚ್ಚಿ ಬೀಳಿಸುವಂತೆ ಮಾಡುವುದಿದೆ. ಅದರಲ್ಲಿ ಅಡಗಿರುವ ಈ ಯಾವ ಪರಿಣಾಮಗಳೂ ಒಮ್ಮಿಂದೊಮ್ಮೆಗೇ ನೇರಾನೇರ, ಸುಸ್ಪಷ್ಟವಾಗಿ ಕಾಣಿಸುವಂಥವಲ್ಲ. ಹಾಗಂತ ಅವುಗಳು ಇರುವ ಮಾತ್ರಕ್ಕೆ ಎಲ್ಲವನ್ನೂ ಬಿಟ್ಟು ಎಲ್ಲೋ ದೂರ ಸರಿದು ಬಿಡಲಾ ದೀತೇ? ಇಲ್ಲ. ಆದರೆ ಎಲ್ಲೇ ಆಗಲಿ, ಇಂಥ ಹಿಡನ್ ಚಾರ್ಜಸ್‌ಗಳ ಭಾರವನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಿಕೊಳ್ಳುವೆಡೆಗಿನ ಪ್ರಯತ್ನ ಒಳ್ಳೆಯದೇ!

ಓವರ್‌ಡೋಸ್: ಮಾರುವ ಬೆಲೆ ಮೇಲೆ ಈ ಹೆಚ್ಚುವರಿ ಶುಲ್ಕಗಳೆಲ್ಲ ಸೇರಿ, ಬಿಲ್ ಕಾಣಿಸುವ ಒಟ್ಟು ಮೊತ್ತವನ್ನು 'ಯಾಮಾರುವ' ಬೆಲೆ ಎನ್ನಬಹುದು!

ಕಿರುಸುದ್ದಿ

ನವಕಾನೂನು ಪದವೀಧರರಿಗೆ ಪ್ರೋತ್ಸಾಹಧನ : ಅರ್ಜಿ ಆಹ್ವಾನ

ಉಡುಪಿ: ಜಿಲ್ಲೆಯ ಅರ್ಹ ನವ ಕಾನೂನು ಪದವೀಧರರಿಗೆ ವಕೀಲರ ವೃತ್ತಿಯಲ್ಲಿ ಉತ್ತೇಜನ ನೀಡಲು ಪ್ರತಿ ತಿಂಗಳು ರೂ. 2,000ಗಳ ಪ್ರೋತ್ಸಾಹಧನ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು 2024 ರ ಜೂನ್ 1ರಿಂದ 2025 ರ ಮೇ 31ರ ಅವಧಿಯೊಳಗೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ವಕೀಲರ ವೃತ್ತಿಗೆ ನೋಂದಾಯಿಸಿಕೊಂಡಿರಬೇಕು. ಅಭ್ಯರ್ಥಿಯ ಅಥವಾ ಅವರ ಕುಟುಂಬದ ವಾರ್ಷಿಕ ಆದಾಯವು ರೂ.40,000/- ಮೀರಿರಬಾರದು. ಅರ್ಜಿಯೊಂದಿಗೆ ಕಡ್ಡಾಯವಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು. ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದವರು ಅಥವಾ ಸೇವೆಯಿಂದ ವಜಾಗೊಂಡವರು ಈ ಯೋಜನೆಯಡಿ ಅರ್ಜಿ ಸಲ್ಲಿಸಲು ಅನರ್ಹರಾಗಿದ್ದು ಈಗಾಗಲೇ ಸರ್ಕಾರದ ಬೇರೆ ಯಾವುದೇ ಯೋಜನೆಯಡಿ ಇಂತಹ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳು ಈ ಯೋಜನೆಗೆ ಅರ್ಹರಾಗಿರುವುದಿಲ್ಲ. ಅರ್ಜಿ ಸಲ್ಲಿಸಲು ಮಾರ್ಚ್ 17 ಕೊನೆಯ ದಿನ. ನೇಮಕಾತಿ ಅಧಿಸೂಚನೆ, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಜಿಲ್ಲಾ ನ್ಯಾಯಾಧೀಶರು / ಅಧ್ಯಕ್ಷರು, ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನದ ಅನುದಾನವನ್ನು ಬಿಡುಗಡೆ ಮಾಡುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ, ಉಡುಪಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಯಾಣಿಕರಿಗೆ ಗಾಯ: ಬಸ್ ಚಾಲಕನಿಗೆ ಶಿಕ್ಷೆ

ಕುಂದಾಪುರ : ಕುಂದಾಪುರ ತಾಲೂಕು ಆನಗಳ್ಳಿ ಗ್ರಾಮದ ಹೇರಿಕುದ್ರು ಸೇತುವೆ ರಾ.ಹೆ.66 ರಲ್ಲಿ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಒಮ್ಮೆಲೆ ಬ್ರೇಕ್ ಹಾಕಿದ ಪರಿಣಾಮ ಪ್ರಯಾಣಿಕರು ಗಾಯಗೊಂಡ ಪ್ರಕರಣದಲ್ಲಿ ಬಸ್ ಚಾಲಕ ಸಂಜಯ್ ಶಾನುಭಾಗ್ ಅವರಿಗೆ ಕುಂದಾಪುರದ 1ನೇ ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶೆ ಶ್ರುತಿಶ್ರೀ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. 2019ರ ಜುಲಾಯಿ 30ರಂದು ಹೇರಿಕುದ್ರು ಸೇತುವೆ ರಾ.ಹೆ.66 ರಲ್ಲಿ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಸಂಜಯ್ ಶಾನುಭಾಗ್ ಎಂಬವರು ಬಸ್ಸಿನ ಎದುರಿನಲ್ಲಿ ಹೋಗುತ್ತಿದ್ದ ವಾಹನವನ್ನು ನೋಡಿ ಒಮ್ಮೆಲೆ ಬ್ರೇಕ್ ಹಾಕಿದ ಪರಿಣಾಮ ಪ್ರಯಾಣಿಕರಾದ ನಾಗಮ್ಮ, ಲಲಿತಾ, ರೇಣುಕಾ, ಮಕ್ಕಳಾದ ಆರಾಧ್ಯ ಮತ್ತು ಐಶ್ವರ್ಯ ಬಸ್ಸಿನೊಳಗೆ ಬಿದ್ದು ಗಾಯಗೊಂಡಿದ್ದರು. ಗಾಯಗೊಂಡವರನ್ನು ಬಸ್ಸಿನ ಚಾಲಕ ಚಿಕಿತ್ಸೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗದೆ ಹತ್ತಿರದ ಪೊಲೀಸ್ ಠಾಣೆ ಮಾಹಿತಿ ನೀಡದೆ ಘಟನಾ ಸ್ಥಳದಿಂದ ಪರಾರಿಯಾಗಿದ್ದರು. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸರ್ಕಾರದ ಪರ ಸಹಾಯಕ ಸರ್ಕಾರಿ ಅಭಿಯೋಜಕಿ ಉಮಾ ದಾಮೋದರ ನಾಯ್ಕ ವಾದಿಸಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸತೀಶ ಭಂಡಾರಿ, ಪೆಜತ್ತಬೆಟ್ಟು ಹೌಸ್, ಬೊಂಡಂತಿಲ, ಕಲ್ಲುರ್ಡೇಲು ಶ್ರೀ ಸದಾಶಿವ ದೇವಸ್ಥಾನದ ವಠಾರ.
2. ಶಿವಾನಂದ ಅಮೀನ್, 'ಶಾಂತಿ ನಿವಾಸ', ನಡಿಗುತ್ತು ಮನೆ, ನಿಡ್ಡೋಡಿ.
3. ಕುಟ್ಟಿ ಶೆಟ್ಟಿ ಮತ್ತು ಮಕ್ಕಳು, ಮೆನ್ನಬೆಟ್ಟು, ಕಿನ್ನಿಗೋಳಿ.
4. ಭೋಜನಾಥ ಗೌಡ, ಮಧ್ವ ಕಲ್ಪನೆ, ಕಾರಿಂಜ, ಬಂಟ್ವಾಳ (ತಾ).
5. ಸದಾಶಿವ ಭಜನಾ ಮಂದಿರ, ಒಳಮೊಗ್ರು, ಕುಂಬ್ರ, ಪುತ್ತೂರು (ತಾ).
6. ಜಯಂತಿ ಆಚಾರ್ಯ ಮತ್ತು ಮಕ್ಕಳು, ಮೇಗಿನ ಕೂರಿಯಾಳ, ಸೊರ್ನಾಡು, ಬಂಟ್ವಾಳ (ತಾ).
7. ದಿ| ರಾಧಾಬಾಯಿ ಸೀತಾರಾಮ ಶೆಟ್ಟಿ ಸ್ಮರಣಾರ್ಥ ಮಕ್ಕಳು, ಮೊಮ್ಮಕ್ಕಳು, ಕೊಡೆತ್ತೂರುಗುತು- ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ಅರಳಾಪುರದಲ್ಲಿ
ಡಾ. ಯುವರಾಜ್ ಎ.ಆರ್. S/o. ರಾಜ್‌ಕುಮಾರ್ ಎ.ಕೆ.

ಶ್ರೀ ಸಾಲಿಗ್ರಾಮ ಮೇಳ
ಬಂಕಿಕೊಡ್ಲುವಿನಲ್ಲಿ-ಸಂಪೂರ್ಣ ನಾಗಶ್ರೀ

ಶ್ರೀ ಪೆರ್ಡೂರು ಮೇಳ
ಮರವಂತೆಯಲ್ಲಿ- ಚದುರಂಗ

ಶ್ರೀ ಹನುಮಗಿರಿ ಮೇಳ
ಎಡನೀರಿನಲ್ಲಿ

ಶ್ರೀ ಪಾವಂಜೆ ಮೇಳ
ಕಬ್ಬಿನಾಲೆಯ ರಘುವೀರಕೃಪಾದಲ್ಲಿ
ರಾಮ ರಾಮ ಶ್ರೀರಾಮ



ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಅವರು ಶನಿವಾರ ಹುದಿಕೇರಿಯಲ್ಲಿ ಶಾಸಕರ ಅನುದಾನದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಆಟೋ ರಿಕ್ಷಾ ತಂಗುದಾಣ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರೀರ ನವೀನ್, ವಲಯ ಅಧ್ಯಕ್ಷ ಚಂಗುಲಂಡ ಸೂರಜ್, ಡಿಸಿಸಿ ಸದಸ್ಯ ಪೆಮ್ಮಂಡ ರಾಜ ಕುಶಾಲಪ್ಪ, ಹಿರಿಯರು ಚೆಕ್ಕೇರ ವಾಸು ಕುಟ್ಟಪ್ಪ, ಜಿಮ್ಮಿ ಕಾಟಿಮಾಡ ಅಣ್ಣಯ್ಯ, ಚೆಕ್ಕೇರ ಸುಧೀರ್, ಪಕ್ಷದ ಮುಖಂಡರಾದ ಅಜ್ಜಿಕುಟ್ಟಿರ ಗಿರೀಶ್, ಪಮ್ಮು, ನೊರೇರ ಮನೋಹರ್, ರಮೇಶ್, ಬಿಪಿನ್, ರೋನಿ, ಮದನ್ ಮಂದಣ್ಣ, ಕಿಸು, ಹುದಿಕೇರಿ ವಲಯ ಯುವ ಘಟಕದ ಅಧ್ಯಕ್ಷ ರೀಕ್ಷಿತ್ ಕಾರ್ಯಪ್ಪ, ಮೌನ, ಮಂಜು ದೇವಯ್ಯ, ಬಾನಂಗಡ ಅರುಣ್, ಆಟೋ ಚಾಲಕ ಮಾಲೀಕರ ಸಂಘದ ದರ್ಶನ್ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ದೇಶದ ಅಭಿವೃದ್ಧಿಯ ಪ್ರತಿ ಹಂತದಲ್ಲೂ ನಮ್ಮ ಕೊಡುಗೆ ಇರಲಿ: ಡಾ. ಜಯಪ್ರಕಾಶ್

ಕುಂದಾಪುರ : ವ್ಯಕ್ತಿಗಿಂತ ದೇಶ ದೇಶ ದೊಡ್ಡದು. ದೇಶದ ಅಭಿವೃದ್ಧಿಯ ಪ್ರತಿ ಹಂತದಲ್ಲೂ ನಮ್ಮ ಕೊಡುಗೆ ಇರಬೇಕು. ಭಾರತವು ಶಾಂತಿಪ್ರಿಯ ರಾಷ್ಟ್ರ. ಯುದ್ಧದಿಂದ ಮಾನವೀಯತೆ ಕುಸಿಯುತ್ತದೆ. ಸಾವು -ನೋವುಗಳಾಗುತ್ತವೆ ಹೊರತು ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ ಎಂದು ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಇದರ ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಕೆ.ಜಯಪ್ರಕಾಶ್ ರಾವ್ ಹೇಳಿದರು.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ ಆಂತರಿಕ ಗುಣಮಟ್ಟ ಮತ್ತು ಭರವಸೆ ಕೋಶದ ಮತ್ತು ಪತ್ರಿಕೋದ್ಯಮ ವಿಭಾಗದ ಆಶ್ರಯದಲ್ಲಿ ಮಂಗಳವಾರ ನಡೆದ 'ತಿಂಗಳ ಅತಿಥಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ತಾಂತ್ರಿಕವಾಗಿ ಮತ್ತು ಬಾಹ್ಯಾಕಾಶ, ಉಪಗ್ರಹ ಮತ್ತು ಸೇನಾ ವಲಯದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಹೊಂದುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡ ನಾವುಗಳು ಜಗತ್ತಿನ ಪ್ರಬಲ ದೇಶಗಳಿಗೆ ಪೈಪೋಟಿ ಕೊಡುವಷ್ಟು ಬೆಳೆದಿದ್ದೇವೆ. ಇದರ ಹಿಂದೆ ನಮ್ಮದೇ ದೇಶದ ಪ್ರತಿಭಾನ್ವಿತ ವಿಜ್ಞಾನಿಗಳು, ಅಭಿಯಂತರರು, ತಂತ್ರಜ್ಞರು ತಮ್ಮ ಕೊಡುಗೆ ನೀಡಿದ್ದಾರೆ. ಅದರಲ್ಲೂ ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರ ಕೊಡುಗೆ ಅತಿ ದೊಡ್ಡದು. ಅವರು ಕೇವಲ ಬಾಹ್ಯಾಕಾಶವನ್ನು ಬೆಳೆಸಲಿಲ್ಲ. ಮಾನವೀಯತೆ, ಭ್ರಾತೃತ್ವ, ಸಹಬಾಳ್ವೆ, ರಾಷ್ಟ್ರೀಯತೆಯನ್ನು ಬೆಳೆಸಿದರು. ಅವರೊಂದಿಗೆ ಒಡನಾಟವೇ ಅದ್ಭುತ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಂಡಾರ್ಕಾರ್ಸ್ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಶುಭಕರಾಚಾರಿ ವಹಿಸಿದ್ದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸೋಮಶೇಖರ್ ಪಡುಕೆರೆ ಅವರನ್ನು ಸನ್ಮಾನಿಸಲಾಯಿತು. ಭಂಡಾರ್ಕಾರ್ಸ್ ಕಾಲೇಜಿನ ಆಡಳಿತ ಮಂಡಳಿಯ ಕಾರ್ಯದರ್ಶಿ ಯು.ಎಸ್.ಶೆಣೈ, ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ನಿಶಾ ಎಂ., ಆಂತರಿಕ ಗುಣಮಟ್ಟ ಮತ್ತು ಭರವಸೆ ಕೋಶದ ಸಂಯೋಜಕ ಪ್ರೊ.ಸತ್ಯನಾರಾಯಣ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಶಶಿಕಾಂತ ಹತ್ವಾರ್ ಉಪಸ್ಥಿತರಿದ್ದರು. ಕೀರ್ತಿ ಪಟಗಾರ ಕಾರ್ಯಕ್ರಮದ ನಿರ್ವಹಿಸಿದರು.

ಕೊಡಗು ಜಿಲ್ಲಾ ನಿವೃತ್ತ ಪೊಲೀಸ್ ಕ್ಷೇಮಾಭಿವೃದ್ಧಿ ಸಂಘ

ಮರಣ ನಿಧಿ ಮೊತ್ತ ಏರಿಕೆ

ಮಡಿಕೇರಿ : ಕೊಡಗು ಜಿಲ್ಲಾ ನಿವೃತ್ತ ಪೊಲೀಸ್ ಕ್ಷೇಮಾಭಿವೃದ್ಧಿ ಸಂಘದಿಂದ ನೀಡಲಾಗುತ್ತಿದ್ದ ಮರಣ ನಿಧಿಯ ಮೊತ್ತ ರೂ.5 ಸಾವಿರವನ್ನು ರೂ.10 ಸಾವಿರಕ್ಕೆ ಏರಿಕೆ ಮಾಡಲಾಗಿದ್ದು, ಸದಸ್ಯರು ಇದರ ಲಾಭ ಪಡೆದುಕೊಳ್ಳುವಂತೆ ಸಂಘದ ಉಪಾಧ್ಯಕ್ಷ ಚೊಕ್ಕಾಡಿ ಎನ್. ಅಪ್ಪಯ್ಯ ಮನವಿ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 20 ವರ್ಷಗಳಿಂದ ಕೊಡಗು ಜಿಲ್ಲಾ ನಿವೃತ್ತ ಪೊಲೀಸ್ ಕ್ಷೇಮಾಭಿವೃದ್ಧಿ ಸಂಘವು ನಿವೃತ್ತ ಪೊಲೀಸರ ಯೋಗಕ್ಷೇಮಕ್ಕೆ ಬದ್ಧವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಸದಸ್ಯರು ಮರಣ ಹೊಂದಿದಾಗ ಮೃತರ ಕುಟುಂಬಕ್ಕೆ ಸಂಘವು ಮರಣ ನಿಧಿಯ ಮೂಲಕ ರೂ.5 ಸಾವಿರವನ್ನು ಅಂತ್ಯಕ್ರಿಯೆಯ ಸಂದರ್ಭ ನೀಡುತ್ತಿದೆ. ಈಗ ಇರುವ ರೂ.5 ಸಾವಿರದ ಮೊತ್ತವನ್ನು 10 ಸಾವಿರಕ್ಕೆ ಏರಿಕೆ ಮಾಡಲು ಸಂಘ ನಿರ್ಧರಿಸಿದೆ. ಏರಿಕೆಯಾದ ಮೊತ್ತವನ್ನು 2027 ಜನವರಿ 27 ರ ನಂತರ ಮರಣ ಹೊಂದುವ ಸದಸ್ಯರ ಕುಟುಂಬಕ್ಕೆ ನೀಡುವ ನಿಯಮವನ್ನು ಜಾರಿಗೆ ತರಲಾಗುವುದು ಎಂದರು.

ಈ ಹಿಂದೆ ಮರಣ ನಿಧಿಯಲ್ಲಿ ಪಡೆದ ಸದಸ್ಯತ್ವಕ್ಕೆ ರೂ.5 ಸಾವಿರವನ್ನು ನೀಡಲಾಗುತ್ತಿತ್ತು. ಇದೀಗ ಮರಣ ನಿಧಿ ಮೊತ್ತದ ಏರಿಕೆಗೆ ಅನುಗುಣವಾಗಿ ಮತ್ತೊಮ್ಮೆ ಸದಸ್ಯತ್ವ ಪಡೆಯಲು ನಿವೃತ್ತ ಪೊಲೀಸರು ತಲಾ ರೂ.1 ಸಾವಿರ ಜೀವಮಾನ ಶುಲ್ಕವನ್ನು ಪಾವತಿಸಬೇಕು. ಪತಿ ಹಾಗೂ ಪತ್ನಿ ತಲಾ ರೂ.1 ಸಾವಿರ ನೀಡಿ ಸದಸ್ಯತ್ವ ಪಡೆಯಬೇಕು. ಪತಿ ಅಥವಾ ಪತ್ನಿ ಇವರಿಬ್ಬರಲ್ಲಿ ಒಬ್ಬರು ಮಾತ್ರ ಇದ್ದರೆ ರೂ.1 ಸಾವಿರ ಪಾವತಿಸಿ ಸದಸ್ಯತ್ವ ಪಡೆಯಬೇಕು. ಮರಣ ನಿಧಿಯ ಲಾಭವನ್ನು ಪತಿ ಹಾಗೂ ಪತ್ನಿ ಇಬ್ಬರಿಗೂ ರೂ.10 ಸಾವಿರದಂತೆ ನೀಡಲಾಗುವುದು. ಆದ್ದರಿಂದ ಸದಸ್ಯತ್ವ ಪಡೆಯುವ ಮೂಲಕ ಮರಣ ನಿಧಿಯ ಲಾಭ ಪಡೆದುಕೊಳ್ಳುವಂತೆ ಕೋರಿದರು.



2027 ಜನವರಿ 27 ರೊಳಗೆ ಸದಸ್ಯರು ಮರಣ ಹೊಂದಿದರೆ ಈ ಹಿಂದಿನ ನಿಯಮದಂತೆ ರೂ.5 ಸಾವಿರವನ್ನು ಮೃತರ ಕುಟುಂಬಕ್ಕೆ ನೀಡಲಾಗುವುದು ಮತ್ತು ಹೊಸದಾಗಿ ಪಾವತಿಸಿರುವ ಸದಸ್ಯತ್ವ ಶುಲ್ಕ ರೂ.1 ಸಾವಿರವನ್ನು ಹಿಂದಿರುಗಿಸಲಾಗುವುದು. ಈ ಕುರಿತು ಸಂಘದ ಸಭೆಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಪ್ರತಿ ವರ್ಷ ಮಾರ್ಚ್ 31 ರೊಳಗೆ ಆರೋಗ್ಯ ಭಾಗ್ಯ ವಿಮಾ ಶುಲ್ಕವನ್ನು ಪಾವತಿಸುವ ಮೂಲಕ ಸದಸ್ಯರು ಆರೋಗ್ಯ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಚೊಕ್ಕಾಡಿ ಎನ್.ಅಪ್ಪಯ್ಯ ತಿಳಿಸಿದರು.

ಸಂಘದ ಕಾರ್ಯದರ್ಶಿ ಕಾವೇರಪ್ಪ ಎಂ.ಕೆ. ಮಾತನಾಡಿ, ಸಂಘದಲ್ಲಿ 1050 ಸದಸ್ಯರಿದ್ದು, ಮರಣ ನಿಧಿಯ ಮೊತ್ತವನ್ನು 10 ಸಾವಿರಕ್ಕೆ ಏರಿಕೆ ಮಾಡಿರುವ ಕ್ರಮವನ್ನು 900 ಕ್ಕೂ ಅಧಿಕ ಸದಸ್ಯರು ಒಪ್ಪಿಕೊಂಡಿದ್ದಾರೆ. ಈ ಯೋಜನೆಯ ಸದುಪಯೋಗಕ್ಕಾಗಿ ಈಗಾಗಲೇ ಸುಮಾರು 200 ಸದಸ್ಯರು ತಲಾ ರೂ.1 ಸಾವಿರ ಪಾವತಿಸಿ ಸದಸ್ಯತ್ವ ಪಡೆದುಕೊಂಡಿದ್ದಾರೆ. ಮರಣ ನಿಧಿಗಾಗಿ ಸದಸ್ಯತ್ವ ಪಡೆಯಲು ಆಸಕ್ತಿ ಇರುವವರು ಜೂ.30 ರೊಳಗೆ ಹೆಸರು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಆಸಕ್ತರು ಮೊ.ಸಂ 9448587975 ನ್ನು ಸಂಪರ್ಕಿಸಬಹುದಾಗಿದೆ ಎಂದ ಅವರು, 2027 ಜನವರಿ 27 ರೊಳಗೆ ಮರಣ ಹೊಂದಿದವರಿಗೂ ರೂ.10 ಸಾವಿರ ನೀಡಬೇಕೆ ಎನ್ನುವ ಬಗ್ಗೆ ಸಂಘದ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ನಿರ್ದೇಶಕರುಗಳಾದ ಕೆ.ವೈ.ಹಮೀದ್ ಹಾಗೂ ಎನ್.ಎ.ಜಗದೀಶ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿದ ಕಾರ್ಕಳ ಶಾಸಕ



ಕಾರ್ಕಳ: ಕಾರ್ಕಳದ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯಲ್ಲಿ (ಕೆ.ಜಿ.ಟಿ.ಟಿ.ಐ) ಸೋಮವಾರ ನಡೆದ ಸಮಾರಂಭದಲ್ಲಿ 80ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಶಾಸಕ ವಿ. ಸುನಿಲ್ ಕುಮಾರ್ ಅವರು ಕೌಶಲ್ಯತಾ ಪ್ರಮಾಣ ಪತ್ರಗಳನ್ನು ವಿತರಿಸಿದರು.

ಬಳಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳಿಗೆ ಜಾಗತಿಕ ಮಟ್ಟದ ತಾಂತ್ರಿಕ ತರಬೇತಿ ನೀಡುವ ಉದ್ದೇಶದಿಂದ ಈ ಸಂಸ್ಥೆಯನ್ನು ಕಾರ್ಕಳಕ್ಕೆ ತರಲಾಗಿದೆ. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಪದವಿಯ ಜೊತೆಗೆ ಉದ್ಯೋಗಾಧಾರಿತ ಕೌಶಲವೂ ಅನಿವಾರ್ಯವಾಗಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕು ಎಂದರು. ಇದೇ ವೇಳೆ ಐಟಿ ಎಸೆನ್ಶಿಯಲ್ಸ್, ಟ್ಯಾಲಿ ಹಾಗೂ ಸಿಎನ್‌ಸಿ ಮಷಿನಿಸ್ಟ್ ಕೋರ್ಸ್ ಪೂರೈಸಿದ ವಿಟಿಯು ಮತ್ತು ಗ್ರಾಂಡ್ಸ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕ ಡಾ. ಗಿರಿಧರ್ ಸಾಲಿಯಾನ್ ಸ್ವಾಗತಿಸಿ ಮಾತನಾಡಿ, ಜರ್ಮನ್ ತಂತ್ರಜ್ಞಾನದ ಸಹಯೋಗದೊಂದಿಗೆ ಇಲ್ಲಿ ಅಂತರಾಷ್ಟ್ರೀಯ ಮಟ್ಟದ ತರಬೇತಿ ನೀಡಲಾಗುತ್ತಿದೆ. ಈಗಾಗಲೇ ನೂರಾರು ವಿದ್ಯಾರ್ಥಿಗಳು ಇಲ್ಲಿ ತರಬೇತಿ ಪಡೆದು ಉದ್ಯೋಗ ಹಾಗೂ ಸ್ವಂತ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ವೇದಿಕೆಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲೆ ಸಹನಾ, ಹೆಬ್ರಿ ಕಾಲೇಜು ಪ್ರಾಂಶುಪಾಲ ಡಾ. ವಿದ್ಯಾಧರ್ ಹೆಗ್ಡೆ ಎಸ್., ಮುನಿಯಾಲು ಕಾಲೇಜು ಪ್ರಾಂಶುಪಾಲ ಪ್ರೊ. ಸುಧಾಕರ್ ಕೆ.ಜಿ., ವಸತಿ ನಿಲಯ ಆರಕ್ಷಕಿ ಜಯಂತಿ ಸುರೇಶ್ ಶೆಟ್ಟಿ, ಉಪನ್ಯಾಸಕರಾದ ದೀಪಿಕಾ, ಗೌತಮ್, ವಿಂದ್ಯಾ ಹಾಗೂ ಸುಶ್ಮಿತಾ ಉಪಸ್ಥಿತರಿದ್ದರು. ರಕ್ಷಿತ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಸಾಲಿಗ್ರಾಮ-ಪಾರಂಪಳ್ಳಿ ರಘು ಮಧ್ಯಸ್ಥರ ಮನೆಯಂಗಳದಲ್ಲಿ ಪುಟಾಣಿ ಮೇಳ



ಕೋಟ: ಇಲ್ಲಿನ ಸಾಲಿಗ್ರಾಮದ ಪ್ರಸಿದ್ಧ ರೈತರಾದ ರಘು ಮಧ್ಯಸ್ಥ ಪಾರಂಪಳ್ಳಿ ಮನೆಯಂಗಳದಲ್ಲಿ ಗುರುವಾರ ವಿಶಿಷ್ಟವಾದ ಕಾರ್ಯಕ್ರಮವೊಂದನ್ನು ಆಯೋಜಿಸಲಾಯಿತು.

ಇಲ್ಲಿನ ಪರಿಸರದ ಗೆಂಡೆಕೆರೆ ಅಂಗನವಾಡಿ ಕೇಂದ್ರದ ಮುದ್ದು ಪುಟಾಣಿಗಳು ರಘು ಮಧ್ಯಸ್ಥ ಮನೆಯಂಗಳದಲ್ಲಿದ್ದ ವಿವಿಧ ತಳಿಯ ಗೋವುಗಳ ವಿಕ್ಷೀಸಿ ಅದರ ಬಗ್ಗೆ ಮಾಹಿತಿ ಪಡೆದರು.

ಇದೇ ವೇಳೆ ಪುಟಾಣಿಗಳಿಗೆ ವಿವಿಧ ಕ್ರೀಡೆಗಳನ್ನು ಏರ್ಪಡಿಸಳಯಿತು. ಪುಟಾಣಿಗಳಿಗೆ ವಿವಿಧ ತರಹದ ಬಹುಮಾನಗಳನ್ನು ನೀಡಲಾಯಿತು.

ಕಾರ್ಯಕ್ರಮ ಆಯೋಜಕ ರಘೂ ಮಧ್ಯಸ, ಸ್ಥಳೀಯರಾದ ವತ್ಸಲ ಸೋಮಯಾಜಿ,ಗೀತಾ ಹಂದೆ,ಕಸಾಪ ತಾಲೂಕು ಅಧ್ಯಕ್ಷ ರಾಮಚಂದ್ರ ಐತಾಳ್ ಗುಂಡ್ಮಿ, ಸಾಮಾಜಿಕ ಜಾಲತಾಣದ ಶ್ರೀನಿವಾಸ ಉಪಾಧ್ಯಾ, ಶಾಂತಾ ಪೂಜಾರಿ, ರವೀಂದ್ರ ಐತಾಳ್, ಅಂಗನವಾಡಿ ಶಿಕ್ಷಕಿ ಶಾಲಿನಿ ಉಪಸ್ಥಿತರಿದ್ದರು.

ಯುವ ಚಿತ್ರಕಲಾವಿದೆ ಮೇಘನಾ ಮಧ್ಯಸ್ಥ ಪುಟಾಣಿಗಳಿಗೆ ಚಿತ್ರ ಬಿಡಿಸುವ ಸ್ಪರ್ಧೆಯನ್ನು ನೆರವೇರಿಸಿದರು.ಸುಜಾತ ಬಾಯರಿ ಮಕ್ಕಳಿಗೆ ವಿವಿಧ ತರಹದ ಆಟೋಟ ಸ್ಪರ್ಧೆ ಸೇರಿದಂತೆ ಕಾರ್ಯಕ್ರಮವನ್ನು ನಿರ್ವಹಿಸಿದರು.

ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನಲ್ಲಿ

ಸಾಮರ್ಥ್ಯ ವೃದ್ಧಿ ಕಾರ್ಯಾಗಾರ

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ವ್ಯವಹಾರ ನಿರ್ವಹಣಾ ವಿಭಾಗವು ಇನ್‌ಸ್ಟಿಟ್ಯೂಷನ್ಸ್ ಇನೋವೇಶನ್ ಕೌನ್ಸಿಲ್ ಸಹಯೋಗದಲ್ಲಿ ವಿನ್ಯಾಸ ಚಿಂತನೆ, ವಿಮರ್ಶಾತ್ಮಕ ಚಿಂತನೆ ಮತ್ತು ನಾವೀನ್ಯತೆ ವಿನ್ಯಾಸದ ಕುರಿತು ಸಾಮರ್ಥ್ಯ ವೃದ್ಧಿ ಕಾರ್ಯಾಗಾರ ಪಿಜಿ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದವಿದ್ಯಾರಶ್ಮಿಸಮೂಹಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಅಡ್ವೊಕೇಟ್ ಅಶ್ವಿನ್ ಎಲ್. ಶೆಟ್ಟಿ ಅವರು ಡಿಸೈನ್ ಥಿಂಕಿಂಗ್‌ನ ವಿವಿಧ ಆಯಾಮಗಳನ್ನು, ಪ್ರಕೃತಿಯನ್ನು ಸೂಕ್ಷ್ಮತೆಯಿಂದ ಅರಿಯುವ ಪ್ರಯತ್ನ ಮತ್ತು ಕ್ರಿಯಾಶೀಲರಾಗಿ ಯೋಚನೆಗಳನ್ನು ರೂಪಿಸುವ ಅಗತ್ಯತೆಯನ್ನು ವಿವರಿಸಿ ಕೃತಕ ಬುದ್ಧಿಮತ್ತೆಯನ್ನು ನಮ್ಮ ನೈಜ ಸಾಮರ್ಥ್ಯ ಗೆಲ್ಲಬಹುದು. ಜ್ಞಾನದ ಮೂಲಕ ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಅಗತ್ಯತೆ ಇದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಫಾ.ಡಾ. ಆ್ಯಂಟನಿ ಪ್ರಕಾಶ್ ಮೊಂತೆರೊ, ನಿಮ್ಮ ವೃತ್ತಿಜೀವನವನ್ನು ಹಂತ ಹಂತವಾಗಿ ನಿರ್ಮಿಸಿಕೊಳ್ಳಿ. ನಾವು ದೊಡ್ಡ ವಿಷಯಗಳ ಬಗ್ಗೆ ಯೋಚಿಸುತ್ತೇವೆ. ಆದರೆ, ಆ ದೊಡ್ಡ ಸಾಧನೆಗಳನ್ನು ಸಣ್ಣ ಸಣ್ಣ ಗುರಿಗಳನ್ನು ತಲುಪುವ ಮೂಲಕವೇ ಪಡೆಯಲು ಸಾಧ್ಯ. ಒಂದು ಕಾಲೇಜ್ ಉನ್ನತ ಮಟ್ಟಕ್ಕೇರುವುದು ಮೂಲಭೂತವಾಗಿ ಅಲ್ಲಿನ ಶಿಸ್ತು, ಕಠಿಣ ಪರಿಶ್ರಮ ಮತ್ತು ನಡವಳಿಕೆಯ ಮಾದರಿಯಿಂದ. ನೀವು ನಿಮ್ಮೊಳಗೆ ಒಬ್ಬ ಜವಾಬ್ದಾರಿಯುತ ನಾಗರಿಕರನ್ನು ಬೆಳೆಸಿಕೊಳ್ಳಬೇಕು. ಸಣ್ಣ ವಿಷಯಗಳನ್ನು ಶ್ರದ್ಧೆಯಿಂದ ಕಲಿಯಿರಿ, ಆಗ ನೀವು ನಿಜವಾಗಿಯೂ ಶ್ರೇಷ್ಠರಾಗುತ್ತೀರಿ ಎಂದು ಹೇಳಿದರು.



» ಕೃತಕ ಬುದ್ಧಿಮತ್ತೆಯನ್ನು ನಮ್ಮ ನೈಜ ಸಾಮರ್ಥ್ಯ ಗೆಲ್ಲಬಹುದು. ಜ್ಞಾನದ ಮೂಲಕ ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಅಗತ್ಯತೆ ಇದೆ

» ನಿಮ್ಮ ವೃತ್ತಿಜೀವನವನ್ನು ಹಂತ ಹಂತವಾಗಿ ನಿರ್ಮಿಸಿಕೊಳ್ಳಿ.

ಕಾರ್ಯಕ್ರಮದಲ್ಲಿ ವ್ಯವಹಾರ ನಿರ್ವಹಣಾ ವಿಭಾಗದ ಡೀನ್ ಹಾಗೂ ಮುಖ್ಯಸ್ಥ ಡಾ. ರಾಧಾಕೃಷ್ಣ ಗೌಡ, ಕಾರ್ಯಕ್ರಮದ ಸಂಯೋಜಕ ಪ್ರಶಾಂತ್ ರೈ, ಸಂಚಾಲಕಿ ಪುಷ್ಪಾ ಎನ್., ಪಿ.ಆರ್.ಓ. ಡಾ. ಭಾರತಿ ಎಸ್. ರೈ ಮತ್ತು ವಿಭಾಗದ ಉಪನ್ಯಾಸಕರಾದ ಅಭಿಷೇಕ್ ಸುವರ್ಣ, ಶೃತಿ ಮತ್ತು ಸಿಂಚನ ಉಪಸ್ಥಿತರಿದ್ದರು.

ರಿಸೀತಾ, ಅಪೇಕ್ಷಾ ಮತ್ತು ನೀಧಿ ಪ್ರಾರ್ಥಿಸಿದರು. ಪ್ರಥಮ ಬಿಬಿಎ ವಿದ್ಯಾರ್ಥಿಗಳಾದ ಕೃಷ್ಣಾವಂಶಿ ಸ್ವಾಗತಿಸಿ, ಮೋನಿಷಾ ವಂದಿಸಿದರು. ಅಬ್ದುಲ್ ಖಾದರ್ ಕಾರ್ಯಕ್ರಮ ನಿರ್ವಹಿಸಿದರು.

ಕಾಟುಕುಕ್ಕೆ ಕೋಲಾರ್‌ಗುತ್ತು ತರವಾಡು ದೈವಸ್ಥಾನದಲ್ಲಿ ಉತ್ಸವ



ಮಂಗಳೂರು: ಕಾಸರಗೋಡು ಜಿಲ್ಲೆಯ ಕಾಟುಕುಕ್ಕೆ ಕೋಲಾರ್‌ಗುತ್ತು ತರವಾಡು ಯಾದವ (ಮಣಿಯಾಣಿ) ಸಮುದಾಯದ ತರವಾಡು ಮನೆಯಲ್ಲಿ ಪೂರ್ವ ಪದ್ಧತಿಯಂತೆ ನಡೆದುಕೊಂಡು ಬರುವ ಹರಿಸೇವೆ ಮತ್ತು ಶ್ರೀ ಧರ್ಮದೈವಗಳ ನರ್ತನಾದಿ ಉತ್ಸವ ಕುಟುಂಬದ ಹಿರಿಯರಾದ ಕೃಷ್ಣ ಮಣಿಯಾಣಿ ಕೋಲಾರ್‌ಗುತ್ತು ಮಿಂಚಿಪದವು ಕಬ್ಬಿನ ಹಿತ್ತಿಲು ಅವರ ಉಪಸ್ಥಿತಿಯಲ್ಲಿ ನೆರವೇರಿತು.

ಮೊದಲ ದಿನ ಗಣಪತಿ ಹೋಮ, ನಾಗ ರಕೇಶ್ವರೀ ತಂಬಿಲ ಶ್ರೀ ವೆಂಕಟರಮಣ ದೇವರಿಗೆ ಹರಿಸೇವೆ, ಅನ್ನದಾನ, ಶ್ರೀ ದೈವಗಳ ಭಂಡಾರ ತೆಗೆಯುವುದು, ತೊಡಂಜಲ್, ಮೋಂದಿಕೋಲ, ರಾತ್ರಿ ಅನ್ನದಾನದ ಬಳಿಕ ಕೊರತ್ತಿಯಮ್ಮನ ನೃತ್ಯೋತ್ಸವ ನಡೆಯಿತು.

ಮರುದಿನ ಶ್ರೀ ರಕೇಶ್ವರೀ ದೈವದ ನೃತ್ಯೋತ್ಸವ, ಅರಸಿನ ಹುಡಿ ಪ್ರಸಾದ ವಿತರಣೆ, ಅನ್ನದಾನ, ಬಳಿಕ ಪಡಿಞ್ಞಾರ್ ಚಾಮುಂಡಿ ದೈವದ ನೃತ್ಯೋತ್ಸವ, ಅರಸಿನ ಹುಡಿ ಪ್ರಸಾದ ವಿತರಣೆ, ನಂತರ ಗುಳಿಗ ಕೋಲ, ಪ್ರಸಾದ ವಿತರಣೆ ನಡೆದು ದೈವಗಳ ಭಂಡಾರ ಇಳಿಯುವುದರೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಹಿರಿಯ ಲೇಖಕಿ ಬಿ.ಎಂ. ರೋಹಿಣಿಗೆ ಅಭಿನಂದನೆ, 'ಆರೋಹಿಣಿ' ಗ್ರಂಥ ಗೌರವ ಸಮಾರಂಭ

ಇರುವೆ ರೀತಿಯ ನಿರಂತರ ಚಲನೆಯ ಬದುಕು : ಡಾ. ಎಚ್.ಎಸ್. ಅನುಪಮಾ

ಮಂಗಳೂರು: ಬಿ.ಎಂ. ರೋಹಿಣಿ ಅಭಿನಂದನಾ ಸಮಿತಿ, ಮಂಗಳ ಗಂಗೋತ್ರಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಹಂಪನಕಟ್ಟೆಯ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ರವೀಂದ್ರ ಕಲಾ ಭವನದಲ್ಲಿ ಹಿರಿಯ ಲೇಖಕಿ ಬಿ.ಎಂ. ರೋಹಿಣಿ ಅವರಿಗೆ ಅಭಿನಂದನೆ ಮತ್ತು 'ಆರೋಹಿಣಿ' ಗ್ರಂಥ ಗೌರವ ಸಮಾರಂಭ ಶನಿವಾರ ನಡೆಯಿತು.

ಈ ವೇಳೆ ಬಿ.ಎಂ. ರೋಹಿಣಿ ಅವರನ್ನು ಅಭಿನಂದಿಸಿ, ಆರೋಹಿಣಿ ಗ್ರಂಥ ಸಮರ್ಪಣೆ ಮಾಡಲಾಯಿತು. ಗ್ರಂಥಾವಲೋಕನ ಮಾಡಿದ ಹಿರಿಯ ಲೇಖಕಿ, ಸಂಘಟಕಿ ಡಾ.ಎಚ್.ಎಸ್. ಅನುಪಮಾ, ಇರುವೆ ಗೋಡೆಯ ಮೇಲೆ ಒಬ್ಬಂಟಿಯಾಗಿದ್ದರೂ ಮುಂದೆ ತನ್ನವರ ಜತೆ ಸೇರುವೆನೆಂದು ನಿರ್ಭೀತಿಯಿಂದ ನಿರಂತರ ಚಲನೆಯನ್ನು ಮುಂದುವರಿಸುತ್ತದೆ. ಅಂತಹ ಇರುವೆಯ ರೀತಿಯ ಬದುಕು- ಸಾಧನೆ ಬಿ.ಎಂ. ರೋಹಿಣಿ ಅವರದ್ದು ಎಂದರು.

ಕೌಟುಂಬಿಕ ಮಹಿಳೆ ಸಾಮಾಜಿಕ ಮಹಿಳೆಯಾಗಿ ಮಹಾ ಜಿಗಿತವನ್ನು ಕಂಡುಕೊಂಡ ಬದುಕು ರೋಹಿಣಿಯವರದ್ದು. ಬಾಲ್ಯದಿಂದಲೇ ಹೆತ್ತವರ ಪಾಲಿನ 'ಒಳ್ಳೆಯ ಹುಡುಗಿ' ಗುಡ್‌ಗರ್ಲ್ ಎಂಬ ಹಣೆಪಟ್ಟಿಯಿಂದಾಚೆಗೆ ಸರಿದು, ನಿರ್ಭೀತಿ, ನಿರಂತರ ಚಲನೆಯ ಬದುಕನ್ನು ರೂಪಿಸಿಕೊಂಡು ಸಮಾಜದ ಜತೆ ಗುರುತಿಸಿಕೊಂಡವರು ರೋಹಿಣಿ. ಬದುಕಿನ ಬಿಕ್ಕಟ್ಟಿನ ಸನ್ನಿವೇಶಗಳಲ್ಲಿಯೂ ಎದೆಗುಂದದೆ, ಬೌದ್ಧಿಕ ಸಮಗ್ರತೆಯನ್ನು ಕಳೆದುಕೊಳ್ಳದೆ ಮುನ್ನಡೆದಿರುವ ಅವರ ಬದುಕನ್ನು ಆರೋಹಿಣಿ ಗ್ರಂಥ ತೆರೆದಿಟ್ಟಿದೆ ಎಂದು ಅನುಪಮಾ ಗ್ರಂಥದ ಬಗ್ಗೆ ವಿವರ ನೀಡಿದರು.



ಗ್ರಂಥ ಅನಾವರಣಗೊಳಿಸಿದ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷ ಡಾ. ನಾಗಪ್ಪ ಗೌಡ ಆರ್. ಶುಭ ಹಾರೈಸಿದರು.

ಕೆಥೋಲಿಕ್ ಧರ್ಮ ಪ್ರಾಂತ್ಯದ ಸಂಪರ್ಕಾಧಿಕಾರಿ ರಾಯ್ ಕ್ಯಾಸ್ತಲಿನೋ ಅಭಿನಂದನಾ ನುಡಿಗಳನ್ನಾಡಿದರು. ಅತಿಥಿಗಳಾಗಿ ಪ್ರಜ್ಞಾ ರೋಹನ್ ಕುಮಾರ್ ನೆಲ್ಲಿಂಗೇರಿ, ಮಂಗಳೂರು ಜಿಲ್ಲಾ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕಿ ಪ್ರಣೀತಾ ಮೊಂತೆರೋ ಭಾಗವಹಿಸಿದ್ದರು.

ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಪ್ರಾಂಶುಪಾಲ ಡಾ. ಗಣಪತಿ ಗೌಡ ಶುಭ ಹಾರೈಸಿದರು. ಬಿ.ಎಂ. ರೋಹಿಣಿ ಅಭಿಂದನಾ ಸಮಿತಿ ಅಧ್ಯಕ್ಷೆ ಶಕುಂತಳಾ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಸಮಿತಿಯ ಕಾರ್ಯದರ್ಶಿ ಡಾ. ಜ್ಯೋತಿ ಚೇಳ್ಯಾರು, ಆಶಾ ಸುವರ್ಣ, ರೆನ್ನಿ ಡಿಸೋಜ, ಸಿ. ಸಿಂಥಿಯಾ, ಗೋಕುಲ್‌ದಾಸ್, ಮಂಜುಳಾ ಸುನಿಲ್, ನರೇಶ್, ವಾಣಿ ಪೆರಿಯೋಡಿ ಉಪಸ್ಥಿತರಿದ್ದರು. ಮರ್ಲಿನ್ ಮಾರ್ಟಿಸ್ ಸ್ವಾಗತಿಸಿದರು. ಸುಮಲತಾ ಸುವರ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹರಿಹರ ಪಲ್ಲತ್ತಡ್ಕ : ನೂತನ ಕಾಣಿಕೆ ಹುಂಡಿ ಲೋಕಾರ್ಪಣೆ

ಸುಬ್ರಹ್ಮಣ್ಯ: ಹರಿಹರ ಪಳ್ಳತ್ತಡ್ಕ ಪೇಟೆಯಲ್ಲಿ ಶ್ರೀ ಹರಿಹರೇಶ್ವರ ದೇವಸ್ಥಾನದ ಕಾಣಿಕೆ ಹುಂಡಿಯ ಲೋಕಾರ್ಪಣೆಯು ಶುಕ್ರವಾರ ನೆರವೇರಿತು. ಅರ್ಚಕರು ವೈದಿಕ ವಿಧಿ ವಿಧಾನ ನೆರವೇರಿಸಿದರು. ನಾಲ್ಕು ವರ್ಷಗಳ ಹಿಂದೆ ಸಂಭವಿಸಿದ ಪ್ರವಾಹದ ಸಂದರ್ಭದಲ್ಲಿ ಹಳೆಯ ಕಾಣಿಕೆ ಹುಂಡಿ ಕೊಚ್ಚಿ ಹೋಗಿತ್ತು. ಇದೀಗ ಭಕ್ತಾದಿಗಳ ಸಹಕಾರದಿಂದ ಕಟ್ಟೆಯ ಮಾದರಿಯಲ್ಲಿ ಆಕರ್ಷಕವಾಗಿ ನೂತನ ಕಾಣಿಕೆ ಹುಂಡಿ ನಿರ್ಮಾಣಗೊಂಡಿದೆ.



ಈ ಸಂದರ್ಭ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅರ್ಚಕ ಸುಬ್ರಹ್ಮಣ್ಯ ಭಟ್, ಕೆ. ದಯಾನಂದ ಕಟ್ಟೆಮನೆ, ಗುಣವರ್ಧನ ಕೆದಿಲ, ಕೆ. ಬೆಳ್ಯಪ್ಪ ಗೌಡ ಖಂಡಿಗೆ, ಎಂ.ಜೆ. ವಿನೂಪ್ ಮಲ್ಲಾರ, ಕೇಶವ ಕೆ. ಕೊಪ್ಪತ್ತಡ್ಕ, ಸವಿತಾ ಕೆ. ಕಟ್ಟೆಮನೆ, ಪದ್ಮಿನಿ ಎನ್.ಜಿ. ಮತ್ತಿತರರು ಉಪಸ್ಥಿತರಿದ್ದರು.

ಕರ್ನಪ್ವಾಡಿ ಶ್ರೀ ಬ್ರಹ್ಮ ಬೈದರುಗಳ ವಾರ್ಷಿಕ ನೇಮಕ್ಕೆ ಗೊನೆ ಮುಹೂರ್ತ

• **ನಿಡ್ಡಳ್ಳಿ;** ಶ್ರೀ ಬ್ರಹ್ಮ ಬೈದರ್ಕಳ ಗರಡಿ ಕರ್ನಪ್ವಾಡಿ ಇದರ ವಾರ್ಷಿಕ ನೇಮಕ್ಕೆ ಭಾನುವಾರ ಗೊನೆ ಮುಹೂರ್ತ ನೆರವೇರಿಸಲಾಯಿತು.

ಶೀನಪ್ಪ ಪೂಜಾರಿ ಕರ್ನಪ್ವಾಡಿ, ಕೊಡಮಣಿತ್ತಾಯ ದೈವಸ್ಥಾನ ಪ್ರತಿಷ್ಠಾ ಸಮಿತಿ ಅಧ್ಯಕ್ಷ ಜನಾರ್ದನ ಪೂಜಾರಿ ಪದಡ್ಕ, ಕಾರ್ಯದರ್ಶಿ ರಾಧಾಕೃಷ್ಣ ಆರ್. ಕೋಡಿ, ಕಾರ್ಯಾಧ್ಯಕ್ಷ ಅಶ್ವಥ್ ಪೂಜಾರಿ ಕರ್ನಪ್ವಾಡಿ, ಸ್ಥಳೀಯರಾದ ಲೋಕೇಶ್ ಪೂಜಾರಿ ಕರ್ನಪ್ವಾಡಿ, ತಿಮ್ಮಪ್ಪ ಪೂಜಾರಿ ಕರ್ನಪ್ವಾಡಿ, ಕೊರಗಪ್ಪ ಪೂಜಾರಿ ಕರ್ನಪ್ವಾಡಿ, ಗರಡಿ ಸೇವಾ ಸಮಿತಿ ಕಾರ್ಯದರ್ಶಿ ಆರ್. ಮಾಧವ ಪೂಜಾರಿ ರೆಂಜ, ರಮೇಶ್ ಪೂಜಾರಿ ಕರ್ನಪ್ವಾಡಿ, ದಯಾನಂದ ಪೂಜಾರಿ ಕರ್ನಪ್ವಾಡಿ, ಜಗನ್ನಾಥ ಪೂಜಾರಿ ಕರ್ನಪ್ವಾಡಿ, ಪ್ರಖ್ಯಾತ್ ಸಾಲ್ಯಾನ್ ನುಳಿಯಾಲು, ಹರೀಶ್ ಕುಮಾರ್ ದೇವಸ್ಯ, ಸಂತೋಷ್ ಕರ್ನಪ್ವಾಡಿ, ಸಚಿನ್ ಕರ್ನಪ್ವಾಡಿ, ಸುಚಿತ್ ಕರ್ನಪ್ವಾಡಿ, ಸಚಿನ್ ಉಪ್ಪಳ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಮಾ.2 ರಂದು ಶ್ರೀ ಬ್ರಹ್ಮ ಬೈದರ್ಕಳ ನೇಮೋತ್ಸವ ನಡೆಯಲಿದ್ದು, ಸಂಜೆ ಶುದ್ದ ಹೋಮ, ಗಂಟೆ 5.30 ರಿಂದ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ, 6 ರಿಂದ ಧಾರ್ಮಿಕ ಸಭೆ, ಅನಂತರ ಅನ್ನಸಂತರ್ಪಣೆ. ರಾತ್ರಿ ಗಂಟೆ 10 ಕ್ಕೆ ಬೈದರುಗಳ ಗರಡಿ ಇಳಿಯುವುದು, ರಾತ್ರಿ ಗಂಟೆ 2 ಕ್ಕೆ ಕಿನ್ನಿದಾರು ಗರಡಿ ಇಳಿಯುವುದು, ಅನಂತರ ಪಾತ್ರಿಗಳ ಸೇಟ್, ಬೈದರುಗಳ ಸೇಟ್ ನಂತರ ಪ್ರಸಾದ ವಿತರಣೆ ನಡೆಯಲಿದೆ.

ರಾಜ್ಯ ಮಟ್ಟದ 5ಎ ಸೈಡ್ ರಿಂಕ್ ಹಾಕಿ ಪಂದ್ಯಾಟ

ಗೋಣಿಕೊಪ್ಪ ಕಾವೇರಿ ಕಾಲೇಜು ಚಾಂಪಿಯನ್

• **ವೀರಾಜಪೇಟೆ:** ವೀರಾಜಪೇಟೆ ಕಾವೇರಿ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಲಾಗಿದ್ದ ಎರಡು ದಿನಗಳ ರಾಜ್ಯ ಮಟ್ಟದ 5ಎ ಸೈಡ್ ರಿಂಕ್ ಹಾಕಿ ಪಂದ್ಯಾಟ ಅದ್ದೂರಿಯಾಗಿ ತೆರೆ ಕಂಡಿತು.

ನಾಕೌಟ್ ಮಾದರಿಯ ಪಂದ್ಯಾವಳಿಯಲ್ಲಿ ಒಟ್ಟು 20 ತಂಡಗಳು ಭಾಗವಹಿಸಿದ್ದು, ಅಂತಿಮವಾಗಿ ಸೆಮಿಫೈನಲ್ ಹಂತಕ್ಕೆ ನಾಲ್ಕು ತಂಡಗಳು ಪ್ರವೇಶಿಸಿದ್ದವು.

ಮೊದಲಸೆಮಿಫೈನಲ್ ಪಂದ್ಯಾಟ ಬೆಂಗಳೂರಿನ ಸೆಂಟ್ ಜೋಸೆಫ್ ಕಾಮರ್ಸ್ ಕಾಲೇಜು ಹಾಗೂ ಸೆಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯ ತಂಡಗಳ ನಡುವೆ ನಡೆದು ಸೆಂಟ್ ಜೋಸೆಫ್ಸ್ ಕಾಮರ್ಸ್ ತಂಡವು 6–1 ಗೋಲುಗಳ ಅಂತರದಲ್ಲಿ ಗೆದ್ದು ಫೈನಲ್ ಪ್ರವೇಶಿಸಿತು.

ಎರಡನೇ ಸೆಮಿಫೈನಲ್ ಪಂದ್ಯ ಗೋಣಿಕೊಪ್ಪದ ಕಾವೇರಿ ಕಾಲೇಜು ಹಾಗೂ ಪೊನ್ನಂಪೇಟೆ ಸಿಐಟಿ ತಂಡಗಳ ನಡುವೆ ನಡೆದು ಕಾವೇರಿ ಕಾಲೇಜು ಗೋಣಿಕೊಪ್ಪಲು 5 –2 ಗೋಲುಗಳ ಅಂತರದಲ್ಲಿ ಗೆದ್ದು ಫೈನಲ್ ಪ್ರವೇಶಿಸಿತು.

ಕಾವೇರಿ ಕಾಲೇಜು ಹಾಗೂ ಸೆಂಟ್ ಜೋಸೆಫ್ಸ್ ಕಾಮರ್ಸ್ ಕಾಲೇಜುಗಳ ನಡುವೆ ನಡೆದ ಫೈನಲ್ ಪಂದ್ಯದಲ್ಲಿ ಗೋಣಿಕೊಪ್ಪಲು ಕಾವೇರಿ ಕಾಲೇಜು 4– 2 ಗೋಲುಗಳ ಅಂತರದಲ್ಲಿ ಗೆಲುವು ಸಾಧಿಸಿ 15 ಸಾವಿರ ರೂ. ನಗದು ಹಾಗೂ ಆಕರ್ಷಕ ಟ್ರೋಫಿ ತನ್ನದಾಗಿಸಿಕೊಂಡಿತು.

ಸೆಂಟ್ ಜೋಸೆಫ್ಸ್ ಕಾಮರ್ಸ್ ಕಾಲೇಜು ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡು 10 ಸಾವಿರ ನಗದು ಆಕರ್ಷಕ ಟ್ರೋಫಿ ಪಡೆದುಕೊಂಡಿತು. ಸಿಐಟಿ ಕಾಲೇಜು ಪೊನ್ನಂಪೇಟೆ 4–2 ಗೋಲಿನ ಅಂತರದಲ್ಲಿ ಸೆಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯವನ್ನು ಸೋಲಿಸಿ 3ನೇ ಸ್ಥಾನವನ್ನು ಪಡೆದು 5 ಸಾವಿರ ನಗದು ಆಕರ್ಷಕ ಟ್ರೋಫಿ, ಸೆಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ 2500 ನಗದು ಆಕರ್ಷಕ ಟ್ರೋಫಿ ಪಡೆದುಕೊಂಡಿತು.

ಪಂದ್ಯಾಟದ ಶಿಸ್ತಿನ ತಂಡ ಬಹುಮಾನವನ್ನು ಮೈಸೂರಿನ ಸೆಂಟ್ ಜೋಸೆಫ್ಸ್ ತಂಡ ಪಡೆಯಿತು. ವೈಯಕ್ತಿಕವಾಗಿ ಬೆಸ್ಟ್ ಗೋಲ್ ಕೀಪರ್ ಪ್ರಶಸ್ತಿಯನ್ನು ಸಿಐಟಿ ಪೊನ್ನಂಪೇಟೆ ಕಾಲೇಜಿನ ಬೆವನ್ ಗಣಪತಿ, ಅತಿ ಹೆಚ್ಚು ಗೋಲು ದಾಖಲಿಸಿದ ಪ್ರಶಸ್ತಿಯನ್ನು ಗೋಣಿಕೊಪ್ಪ ಕಾವೇರಿ ಕಾಲೇಜಿನ ರಿವಿನ್, ಉತ್ತಮ ಆಟಗಾರ ಪ್ರಶಸ್ತಿಯನ್ನು ಮೈಸೂರಿನ ಸೇಫಿಯಂಟ್ ಕಾಲೇಜಿನ ಮುತ್ತಣ್ಣ, ಬೆಸ್ಟ್ ಪ್ಲೇಯರ್ ಪ್ರಶಸ್ತಿಯನ್ನು ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜಿನ ಧನುಷ್ ಪಡೆದುಕೊಂಡರು.

ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ವೀರಾಜಪೇಟೆ ಶಾಸಕ ಎ. ಎಸ್. ಪೊನ್ನಣ್ಣ, ಕಾಲೇಜಿನ ಪ್ರಾಂಶುಪಾಲ ಬೆನಡಿಕ್ಟ್ ಆರ್. ಸಲ್ಡಾನ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ತಾಲೂಕು ಪಂಚಾಯತ್ ಮಾಜಿ ಸದಸ್ಯ ಮೂಕಳೆರ ಕುಶಾಲಪ್ಪ, ನಾಪೋಕ್ಲು ಭಗವತಿ ಹಾಕಿ ಕ್ಲಬ್ ಸದಸ್ಯ ಅಚ್ಚಾಂಡಿರ ಮಂದಣ್ಣ, ವಿವಿಧ ಕಾಲೇಜುಗಳ ಕ್ರೀಡಾಪಟುಗಳು, ದೈಹಿಕ ನಿರ್ದೇಶಕರು, ಕಾವೇರಿ ಕಾಲೇಜಿನ ವಿದ್ಯಾರ್ಥಿಗಳು, ಉಪನ್ಯಾಸಕ ವರ್ಗ, ಆಡಳಿತಾತ್ಮಕ ಸಿಬ್ಬಂದಿಗಳು ಹಾಜರಿದ್ದರು.





ಸಮಾಜ ಜಾಗೃತಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮಹತ್ವದ ಪಾತ್ರ: ಎಸ್. ಆರ್. ಹರೀಶ್ ಆಚಾರ್ಯ



• **ಬಂಟ್ವಾಳ:** ಸ್ವಚ್ಛ ಸಮಾಜದ ನಿರ್ಮಾಣವು ಜನರ ಸಾಮೂಹಿಕ ಭಾಗವಿಸುವಿಕೆಯಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಸಮಾಜದ ಜಾಗೃತಿಯನ್ನು ನಿರ್ಮಾಣ ಮಾಡುವಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ವಪೂರ್ಣದ್ದಾಗಿದೆ ಎಂದು ವಿಶ್ವಕರ್ಮ ಬ್ಯಾಂಕಿನ ಅಧ್ಯಕ್ಷರಾದ ಎಸ್. ಆರ್. ಹರೀಶ್ ಆಚಾರ್ಯ ಅವರು ಹೇಳಿದರು.

ಅವರು ವಿಶ್ವಕರ್ಮ ಸಹಕಾರ ಬ್ಯಾಂಕಿನ ಮೆಲ್ಕಾರ್ ಶಾಖೆಯ ವತಿಯಿಂದಹ ಸ್ವಚ್ಛತಾ ಹೀ ಸೇವಾಟಿ ಧ್ಯೇಯದೊಂದಿಗೆ ನಡೆದ 29ನೇ ಸ್ವಚ್ಛ ಭಾರತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ನರಿಕೊಂಬು ಗ್ರಾಮ ಪಂಚಾಯತ್ ಸದಸ್ಯ ಪ್ರಕಾಶ್ ಕೊಡಿಮಜಲು, ಪ್ರೇರಣಾ ಮಹಿಳಾ ಮಂಡಳಿ ಅಧ್ಯಕ್ಷೆ ವನಿತಾ ಹಸಿರು ನಿಶಾನೆ ತೋರಿಸುವ ಮೂಲಕ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮೊಗರ್ನಾಡು ಹಾಗೂ ಮಾರುತಿನಗರ ಸುತ್ತಮುತ್ತಲಿನ ಪರಿಸರದಲ್ಲಿ ಸ್ವಚ್ಛತಾ ಶ್ರಮದಾನವು ನಡೆಯಿತು. ವಿಶ್ವಕರ್ಮ ಬ್ಯಾಂಕಿನ ನಿರ್ದೇಶಕ ಜಯಪ್ರಕಾಶ್ ಭಂಡಾರಿಬೆಟ್ಟು, ಯುವ ಸಂಗಮ ಮೆಲ್ಕಾರ್ ಇದರ ಗೌರವಾಧ್ಯಕ್ಷ ಎಂ.ಏನ್. ಕುಮಾರ್, ವೀರ ಮಾರುತಿ ವ್ಯಾಯಾಮ ಶಾಲೆ ಮಾರುತಿನಗರ ಇದರ ಅಧ್ಯಕ್ಷ ಉಮೇಶ್ ಕೋಡಿಮಜಲು ಹಾಗೂ ಸದಸ್ಯರು, ಪ್ರೇರಣಾ ಮಹಿಳಾ ಮಂಡಳಿ ಇದರ ಸದಸ್ಯರು, ಶಾಖಾ ವ್ಯವಸ್ಥಾಪಕರಾದ ಉಷಾ ಕೆ ಹಾಗೂ ಸಿಬ್ಬಂದಿಗಳು, ಬ್ಯಾಂಕಿನ ಸದಸ್ಯರು, ಗ್ರಾಹಕರು ಸ್ವಯಂ ಸೇವಕರಾಗಿ ಭಾಗವಹಿಸಿ ಕಾರ್ಯಕ್ರಮದಲ್ಲಿ ಸಹಕರಿಸಿದರು

ಸಾಸ್ತಾನದಲ್ಲಿ ಉಚಿತ ನೇತ್ರ ತಪಾಸಣೆ,ವಾಕ್ ಮತ್ತು ಶ್ರವಣ ತಪಾಸಣಾ ಶಿಬಿರ



• **ಕೋಟ:** ಸಾಸ್ತಾನ ಪ್ರಾಥಮಿಕ ಆರೋಗ್ಯ ಕೇಂದ್ರ ಇವರ ಆಶ್ರಯದಲ್ಲಿ ಉಚಿತ ನೇತ್ರ ತಪಾಸಣೆ ಹಾಗೂ ವಾಕ್ ಮತ್ತು ಶ್ರವಣ ತಪಾಸಣಾ ಶಿಬಿರ ಫೆ.17ರಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜರಗಿತು.

ಕಾರ್ಯಕ್ರಮವನ್ನು ಉಡುಪಿ ಮತ್ತು ಚಿಕ್ಕಮಗಳೂರು ಲೋಕಸಭಾ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು. ರೋಟರಿ ಕ್ಲಬ್ ಹಂಗಾರಕಟ್ಟೆ ಸಾಸ್ತಾನ ಅಧ್ಯಕ್ಷೆ ಜ್ಯೋತಿ ಉದಯ ಕುಮಾರ್ ,ಸಾಮಾಜಿಕ ಕಾರ್ಯಕರ್ತ ಐರೋಡಿ ವಿಠ್ಠಲ್ ಪೂಜಾರಿ,ಪಾಂಡೇಶ್ವರ ಗ್ರಾಮಪಂಚಾಯತ್ ಮಾಜಿ ಅಧ್ಯಕ್ಷೆ ಲಿಲಾವತಿ ಗಂಗಾಧರ ಮತ್ತಿತರರು ಉಪಸ್ಥಿತರಿದ್ದರು. ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಽಕಾರಿ ಡಾ. ರಾಘವೇಂದ್ರ ರಾವ್ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆರೋಗ್ಯ ಕೇಂದ್ರದ ರಜನಿ ಕಾರ್ಯಕ್ರಮ ನಿರೂಪಿಸಿದರು.ಫಾರ್ಮಸಿ ಅಽಕಾರಿ ಸೀಮಾ ಮ್ಯಾಥ್ಯೂ ವಂದಿಸಿದರು.

ಆತ್ಮವಿಶ್ವಾಸ ಹೆಚ್ಚಲಿ: ಗಂಟಿಹೊಳೆ

• **ಉಪ್ಪುಂದ:** ಕವಿ ಮೊಗೇರಿ ಗೋಪಾಲಕೃಷ್ಣ ಅಡಿಗರು 9 ರಿಂದ 14 ವರ್ಷದ ವರೆಗೆ ಬೈಂದೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಕನ್ನಡ ಬಾಲ ಕೈಬರಹ ಮಾಸಪತ್ರಿಕೆ ನಡೆಸಿದ ಸಾಹಸಿ. ಸಾಹಿತ್ಯ ಅಧ್ಯಯನದಿಂದ ಯುವ ಕವಿಗಳು ಪ್ರೇರಣೆಗೊಂಡು ಬೈಂದೂರು ಪರಿಸರದಲ್ಲಿ ಮತ್ತಷ್ಟು ಸಾಹಿತ್ಯ ಪ್ರಾಕಾರಗಳು ಬೆಳವಣಿಗೆಯಾಗಲಿ, ಹಿರಿಯರ ಆತ್ಮಕಥನ ಕಿರಿಯರ ಸಾಹಿತ್ಯ ರಚನೆಗೆ ಪ್ರೇರಣೆಯಾಗಲಿ. ಗ್ರಾಮೀಣ ಭಾಗದಲ್ಲಿ ವಿದ್ಯಾಭ್ಯಾಸ ಮಾಡಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ವ್ಯಕ್ತಿಗಳ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಾಗಲಿ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.

ಇಲ್ಲಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಡಾ. ಶಿವರಾಮ ಕಾರಂತ ಟ್ರಸ್ಟ್ ಉಡುಪಿ, ಗೋಪಾಲಕೃಷ್ಣ ಅಡಿಗ ಸ್ಮಾರಕ ಟ್ರಸ್ಟ್ ಇವರ ಸಹಯೋಗದಲ್ಲಿ ಕವಿ ಗೋಪಾಲಕೃಷ್ಣ ಅಡಿಗರ 108ನೇ ಜನ್ಮದಿನೋತ್ಸವದ ಪ್ರಯುಕ್ತ ಅಡಿಗ ಸಂಸ್ಮರಣೆ ಮತ್ತು ಕಾರಂತರ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಡಾ. ಶಿವರಾಮ ಕಾರಂತ ಟ್ರಸ್ಟ್ ಅಧ್ಯಕ್ಷ ಗಣನಾಥ ಶೆಟ್ಟಿ ಎಕ್ಕಾರು ಕಾರ್ಯಕ್ರಮ ಉದ್ಘಾಟಿಸಿದರು. ಶತಮಾನ ಪೂರೈಸಿದ ಅಡಿಗರು ಕಲಿತ ಮಾಧ್ಯಮಿಕ ಶಾಲೆ ವಿಷಯದ ಕುರಿತು ಶಾಲಾ ಮುಖ್ಯಶಿಕ್ಷಕ ಗಣಪತಿ ಹೋಬಳಿದಾರ್ ಮಾತನಾಡಿದರು. ಸಾಹಿತಿ ಕೆ. ಪುಂಡಲೀಕ್ ನಾಯಕ್ ಇವರಿಗೆ ಮೊಗೇರಿ ಸಮಷ್ಟಿ ಪುರಸ್ಕಾರ ಮತ್ತು ಶಾಶ್ವತ ಫಲಕವನ್ನು ನೀಡಲಾಯಿತು.

ಶಾಲಾ ಮಕ್ಕಳಿಗೆ ರಂಗೋಲಿ ಪ್ರಾತ್ಯಕ್ಷಿಕೆ ಮತ್ತು ರಂಗೋಲಿ ಸ್ಪರ್ಧೆಯನ್ನು ನಡೆಸಲಾಯಿತು. ಜಿಪಂ ಮಾಜಿ ಸದಸ್ಯ ಸುರೇಶ ಬಟ್ವಾಡಿ, ಜೆಸಿಐ ಬೈಂದೂರು ಸಿಟಿ ಅಧ್ಯಕ್ಷೆ ಚೈತ್ರಾ ಸತೀಶ್, ಅರಣ್ಯ ಇಲಾಖೆ ಬೈಂದೂರು ಗಸ್ತು ಅರಣ್ಯಪಾಲಕ ವಿಜಯ್, ಎಸ್‌ಡಿಎಂಸಿ ಅಧ್ಯಕ್ಷ ಭಾಸ್ಕರ ದೇವಾಡಿಗ ಇದ್ದರು. ಡಾ. ಶಿವರಾಮ ಕಾರಂತ ಟ್ರಸ್ಟ್ ಉಡುಪಿ ಸಂಚಾಲಕಿ ಭಾರತಿ ಮರವಂತೆ ಸ್ವಾಗತಿಸಿದರು. ಸಹಶಿಕ್ಷಕಿಯರಾದ ಶಶಿರೇಖಾ ವಂದಿಸಿದರು. ವೀಣಾ ಹೆಗಡೆ ನಿರೂಪಿಸಿದರು. ಜಯಾ ಸಹಕರಿಸಿದರು.



ಸುರಭಿ ಸಂಸ್ಥೆಯ ವಾರ್ಷಿಕೋತ್ಸವ: ವಿದ್ಯಾರ್ಥಿಗಳಿಗೆ ಸೂಕ್ತ ವೇದಿಕೆ ಕಲ್ಪಿಸಿ

• **ಉಪ್ಪುಂದ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕಲೆಯ ವಿವಿಧ ಪ್ರಾಕಾರಗಳನ್ನು ಕಲಿಸುತ್ತಾ ಅವರ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಸೂಕ್ತ ವೇದಿಕೆ ಮೂಲಕ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹ ನೀಡಿದರೆ ಧನಾತ್ಮಕ ಹಾಗೂ ಸಧೃಡ ಸಮಾಜ ನಿರ್ಮಾಣ ಸಾಧ್ಯವಾಗುವುದಲ್ಲದೇ ಸಮಾಜದಲ್ಲಿ ಕ್ರಿಯಾಶೀಲ ಬದುಕು ಕಾಣಬಹುದು ಎಂದು ಉಪ್ಪುಂದ ಶ್ರೀ ವರಲಕ್ಷ್ಮೀ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ. ಗೋವಿಂದ ಬಾಬು ಪೂಜಾರಿ ಹೇಳಿದರು.

ಇಲ್ಲಿನ ಶಾರದಾ ವೇದಿಕೆಯಲ್ಲಿ ಗುರುವಾರ ಸುರಭಿ ಸಂಸ್ಥೆಯ 26ನೇ ವಾರ್ಷಿಕೋತ್ಸವ ಹಾಗೂ ಸುರಭಿ ಜೈಸಿರಿ–2026 ಬಿಂದುಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಬಾಲ್ಯದಿಂದಲೇ ಮಕ್ಕಳಿಗೆ ಸಾಂಸ್ಕೃತಿಕ, ಸಾಹಿತ್ಯಿಕ ಗೀಳು ಹೆಚ್ಚಿಸಬೇಕು. ಇದರಿಂದ ಅವರು ಸಾಮಾಜಿಕ ಜಾಲತಾಣ ಸೇರಿದಂತೆ ಇತರೇ ಮಾಧ್ಯಮಗಳಿಂದ ದೂರವಾಗುತ್ತಾರೆ. ಕಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮಗು ಮುಂದೆ ಉತ್ತಮ ಕಾರ್ಯಗಳಲ್ಲಿಯೇ ಮುಂದುವರಿಯುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಕಾರ್ಯವಾದಾಗ ಮುಂದಿನ ಪೀಳಿಗೆಗೆ ಉತ್ತಮವಾದುದನ್ನು ಕೊಡಲು ಸಾಧ್ಯವಿದೆ ಎಂದರು.

ಸುರಭಿ ಅಧ್ಯಕ್ಷ ಆನಂದ ಮದ್ದೋಡಿ ಅಧ್ಯಕ್ಷತೆ ವಹಿಸಿದ್ದರು. ಯಕ್ಷಗುರು ದಾರಿಮಕ್ಕಿ ಪ್ರಶಾಂತ ಮಯ್ಯ ಇವರಿಗೆ ಗುರುವಂದನೆ ಸಲ್ಲಿಸಲಾಯಿತು. ಡಾ. ಶಿವರಾಮ ಕಾರಂತ್ ಬಾಲಪ್ರತಿಭೆ ಪ್ರಶಸ್ತಿ ಪುರಸ್ಕೃತೆ ಕೃತಿಕಾ ಕೃಷ್ಣ ಗಾಣಿಗ ಇವರನ್ನು ಸನ್ಮಾನಿಸಲಾಯಿತು. ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಸತೀಶ ಬಟ್ವಾಡಿ, ಉದ್ಯಮಿ ಶರತ್‌ಕುಮಾರ್ ಶೆಟ್ಟಿ, ಕೊಲ್ಲೂರು ದೇವಳದ ವ್ಯವಸ್ಥಾಪನ ಸಮಿತಿ ಸದಸ್ಯೆ ಧನಾಕ್ಷಿ ವಿಶ್ವನಾಥ್, ಬೈಂದೂರು ಸೇನೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ದೊಟ್ಟಯ್ಯ ಪೂಜಾರಿ, ತಾಲೂಕು ಕಸಾಪ ಅಧ್ಯಕ್ಷ ಅರುಣಕುಮಾರ್ ಉಪಸ್ಥಿತರಿದ್ದರು.

ಸುರಭಿ ಕಾರ್ಯದರ್ಶಿ ರಾಮಕೃಷ್ಣ ದೇವಾಡಿಗೆ ಸ್ವಾಗತಿಸಿದರು. ನಿರ್ದೇಶಕ ಸುಧಾಕರ ಪಿ. ಪ್ರಾಸ್ತಾವಿಸಿದರು. ಶ್ರೀಧರ ವಿಶ್ವಕರ್ಮ ವಂದಿಸಿದರು. ಉಪಾಧ್ಯಕ್ಷ ಭಾಸ್ಕರ ಬಾಡ ಹಾಗೂ ಸದಸ್ಯ ಉದಯ್ ನಿರೂಪಿಸಿದರು.



ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-43) ಡ್ರಾ ಫೆಬ್ರವರಿ 22ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MM 310268 (MOOVATTUPUZHA)
Consolation Prize Rs.5,000/-
MA 310268 MB 310268 MC 310268 MD 310268
ME 310268 MF 310268 MG 310268 MH 310268
MJ 310268 MK 310268 ML 310268
2nd Prize Rs.25,00,000/- [25 Lakhs]
ME 588993 (KOLLAM)
3rd Prize Rs.5,00,000/- [5 Lakhs]
MC 512522 (CHITTUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0112 0379 0824 1266 1436 1548 2416 3417 4151 4454
4935 5458 5957 6284 7410 8175 8334 8851 9148
5th Prize Rs.2,000/-
1345 4370 7375 7762 7833 7838
6th Prize Rs.1,000/-
0798 1283 1723 1740 2272 2399 2597 2671 4019 4099
4303 4308 4363 4559 4702 4963 6257 6705 6706 6787
6918 8825 9039 9531 9970
7th Prize Rs.500/-
0075 0144 0297 0388 0923 1127 1238 1305 1475 1522
1768 1843 2263 2449 2459 2546 2577 2777 2954 3135
3268 3331 3505 3529 3745 3749 3766 3778 3782 3859
3902 3928 4265 4421 4547 4575 4585 4829 5347 5350
5707 5820 5998 6246 6309 6381 6516 6527 6657 7312
7504 7517 7600 7646 7709 7742 7857 8209 8211 8307
8455 8667 9065 9079 9170 9371 9407 9551 9582 9586
9607 9658 9668 9758 9892 9937
8th Prize Rs.200/-
0011 0029 0109 0179 0279 0403 0453 0715 0756 0778
1480 1516 1553 1639 1761 1782 1919 1947 1987 2014
2037 2064 2137 2180 2461 2547 2817 2932 2951 3148
3218 3243 3284 3647 3980 4028 4210 4219 4310 4777
4847 4937 4988 5019 5228 5324 5399 5528 5621 5754
5863 5864 5918 6083 6119 6132 6144 6190 6352 6436
6467 6605 6618 6805 6991 7005 7083 7107 7166 7176
7207 7222 7474 7491 7758 7805 7831 7841 7960 8348
8650 8832 9021 9223 9241 9369 9391 9473 9544 9730
9811 9869
9th Prize Rs.100/-
0033 0173 0265 0267 0272 0277 0309 0377 0382 0693
0725 0731 0796 0836 0862 0866 0948 1014 1065 1066
1298 1367 1378 1479 1585 1625 1721 1839 1927 2061
2195 2361 2392 2407 2474 2529 2559 2565 2647 2694
2723 2815 2900 3086 3110 3124 3204 3253 3473 3486
3511 3517 3518 3560 3716 3867 3894 3917 3939 4001
4005 4119 4169 4307 4673 4691 4717 4758 4776 5032
5039 5195 5202 5433 5444 5483 5484 5555 5559 5591
5644 5659 5778 5803 5841 5870 5979 6116 6226 6344
6347 6524 6608 6630 6637 6717 6943 7028 7088 7230
7251 7301 7392 7400 7402 7494 7505 7514 7637 8012
8055 8078 8136 8169 8192 8271 8302 8305 8340 8350
8411 8429 8457 8484 8592 8698 8793 8866 8901 8915
8966 9001 9010 9031 9193 9205 9211 9247 9252 9307
9328 9465 9559 9588 9726 9770 9824 9864 9925 9998

ಶಿವಮೊಗ್ಗ ಜಿಲ್ಲಾ ಹವ್ಯಕ ಶಿಕ್ಷಕ ಸಮಾವೇಶ 'ಜ್ಞಾನಮ್' ಉದ್ಘಾಟನೆ

ಶಿಕ್ಷಕರಲ್ಲೀಗ ಅಭದ್ರತೆ ಕಾಣುತ್ತಿದೆ

• **ಸಾಗರ :** ಸಂಬಳಕ್ಕಾಗಿ ದುಡಿತ, ಸಮಾಧಾನ ಮತ್ತು ಸಂಭ್ರಮಕ್ಕಾಗಿ ತುಡಿತದ ತಳಹದಿಯ ಮೇಲೆ ಶಿಕ್ಷಕರು ಕಾರ್ಯನಿರ್ವಹಿಸಬೇಕು ಎಂದು ಹಾಸ್ಯ ಸಾಹಿತಿ ಭುವನೇಶ್ವರಿ ಹೆಗಡೆ ತಿಳಿಸಿದರು.

ಇಲ್ಲಿನ ರಾಘವೇಶ್ವರ ಸಭಾಭವನದಲ್ಲಿ ಶ್ರೀ ಅಖಿಲ ಹವ್ಯಕ ಮಹಾಸಭಾ ವತಿಯಿಂದ ಭಾನುವಾರ ಆಯೋಜಿಸಿದ್ದ ಶಿವಮೊಗ್ಗ ಜಿಲ್ಲಾ ಹವ್ಯಕ ಶಿಕ್ಷಕ ಸಮಾವೇಶ 'ಜ್ಞಾನಮ್' ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಮುಗ್ದತೆಯನ್ನು ಸಂಭ್ರಮಿಸುತ್ತಾ, ಅವರಲ್ಲಿ ಜ್ಞಾನದೀವಿಗೆಯನ್ನು ಬೆಳಗಿಸುತ್ತಾ ಸತ್ಪ್ರಜೆಗಳನ್ನಾಗಿ ರೂಪಿಸುವ ಅತ್ಯಂತ ಮಹತ್ವದ ಹೊಣೆಗಾರಿಕೆಯನ್ನು ಶಿಕ್ಷಕ ಸಮೂಹ ಸಮರ್ಥವಾಗಿ ನಿಭಾಯಿಸುತ್ತಿದೆ ಎಂದು ಹೇಳಿದರು.

ಹಿಂದೆ ಶಿಕ್ಷಕರು ಭದ್ರತೆಯ ನೆರಳಿನಲ್ಲಿ ಮಕ್ಕಳಿಗೆ ಬೋಧನೆ ಮಾಡುತ್ತಿದ್ದರು. ಬದಲಾದ ದಿನಮಾನಗಳಲ್ಲಿ ಅಭದ್ರತೆ ಶಿಕ್ಷಕರನ್ನು ಕಾಡುತ್ತಿದೆ. ಮಕ್ಕಳಿಗೆ ಬುದ್ದಿಮಾತು ಹೇಳದಂತೆ ಬೆಳೆಸುವ ಸ್ಥಿತಿ ಶಿಕ್ಷಕ ಸಮೂಹದ್ದಾಗಿದೆ. ಸರ್ಕಾರ ಮತ್ತು ಜನಪ್ರತಿನಿಧಿಗಳ ವಾಸನೆಯಲ್ಲಿ ನಡೆಯುವ ಶಿಕ್ಷಕ ದಿನಾಚರಣೆಗಳು ಶಿಕ್ಷಕ ಸಮೂಹದ ಆಗುಹೋಗುಗಳ ಕುರಿತು ಚಿಂತನ ಮಂಥನ ನಡೆಯುವ ಬದಲು ಯಾರನ್ನೋ ಓಲೈಸುವ, ಮೆರೆಸುವ ಕಾರ್ಯಕ್ರಮವಾಗಿ ಮಾರ್ಪಾಡಾಗುತ್ತಿರುವುದು ವಿಪರ್ಯಾಸ. ನಿಮ್ಮ ಆಸಕ್ತಿದಾಯಕ ಕ್ಷೇತ್ರವನ್ನು ಮಕ್ಕಳಿಗೆ ಬೋಧಿಸುವ ಹಕ್ಕು ಸಹ ಮೊಟಕುಗೊಳಿಸಲಾಗುತ್ತಿದೆ. ಇದೆಲ್ಲದರ ನಡುವೆ ಶಿಕ್ಷಕ ವೃತ್ತಿಯೊಂದು ಜೀವಂತ ಉದ್ಯೋಗವಾಗಿದೆ ಎಂದರು.

ಭವಿಷ್ಯಕ್ಕಾಗಿ ಮಕ್ಕಳನ್ನು ಪ್ರೀತಿಸಬೇಕು. ನಮ್ಮ ಸಂಸ್ಕೃತಿಯನ್ನು ಮಕ್ಕಳ ಮೂಲಕ ಬೆಳೆಸಬೇಕು. ಝುಗಮಗಿಸುವ ಬೆಳಕಿನಲ್ಲಿ ನಡೆಯುವ ರಿಯಾಲಿಟಿ ಷೋಗಳೇ ಸತ್ಯ ಎಂದು ಭ್ರಮಿಸಿರುವ ಮಕ್ಕಳ ಮನಸ್ಸಿನಲ್ಲಿ ಅಕ್ಷರ ಬಿತ್ತಿ ಅವರು ಸನ್ಮಾರ್ಗದತ್ತ ಒಯ್ಯುವ ಕೆಲಸ ಶಿಕ್ಷಕ ಸಮೂಹ ಕಾಯಾವಾಚಾಮನಸಾ ಮಾಡಬೇಕು. ಹವ್ಯಕ ಶಿಕ್ಷಕ ಸಮೂಹ ಅಕ್ಷರ ಕಟ್ಟುವ ಕೆಲಸವನ್ನು ಪ್ರಾಚೀನ ಕಾಲದಿಂದಲೂ ಶ್ರದ್ಧಾಭಕ್ತಿಯಿಂದ ಮಾಡಿಕೊಂಡು ಬರುತ್ತಿದೆ. ಮಾನವೀಯ ಮೌಲ್ಯವನ್ನು ಬಿತ್ತುವ, ಶಿಕ್ಷಣ ಕಲಿತ ನಂತರ ಮಕ್ಕಳು ಅದನ್ನು ಸಮಾಜದಲ್ಲಿ ಪ್ರಸರಿಸುವ ಬೋಧನೆ ನಮ್ಮಿಂದ ಆಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ, ರಾಜ್ಯದಲ್ಲಿ 10 ಸಾವಿರಕ್ಕೂ ಹೆಚ್ಚು ಹವ್ಯಕ ಶಿಕ್ಷಕರು ಜ್ಞಾನದಾಸೋಹ ಕಾರ್ಯವನ್ನು ಸಾರ್ಥಕವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಹವ್ಯಕ ಶಿಕ್ಷಕರಲ್ಲಿ ಶುದ್ದಭಾಷೆ, ಪ್ರಾಚೀನ ವಿದ್ಯೆ, ಬುದ್ದಿವಂತಿಕೆ, ಸಂಸ್ಕಾರ, ಸಂಸ್ಕೃತಿ, ಆಹಾರ ಪದ್ದತಿ, ಆಚರಣೆ, ಪ್ರತಿಭೆ, ವಂಶವಾಹಿತಿ ಎಲ್ಲವೂ ಇರುವುದರಿಂದ ಅವರು ಯಶಸ್ವಿ ಶಿಕ್ಷಕರಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗಿದೆ. ಇವೆಲ್ಲ ಗುಣಗಳ ಜೊತೆಗೆ ಮನೆ ಪರಿಸರ ಸಹ ಹವ್ಯಕ ಶಿಕ್ಷಕರ ಶ್ರೇಷ್ಟತೆಯನ್ನು ಕಾಪಾಡುವಲ್ಲಿ ಸಹಕಾರಿಯಾಗಿದೆ. ಮನೆಗಳಲ್ಲಿ ಶ್ರೀಮಂತಿಕೆ ಇಲ್ಲದೆ ಹೋದರೂ ಜ್ಞಾನದಲ್ಲಿ ಹವ್ಯಕ ಸಮೂಹ ಶ್ರೀಮಂತವಾಗಿದೆ. ಶೈಕ್ಷಣಿಕ ಕ್ಷೇತ್ರವನ್ನು ಶ್ರೀಮಂತಗೊಳಿಸುವಲ್ಲಿ ಹವ್ಯಕ ಶಿಕ್ಷಕ ಸಮೂಹದ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕೇಂದ್ರ ಸಾಂಬಾರು ಮಂಡಳಿ ನಿರ್ದೇಶಕರಾಗಿ ನೇಮಕವಾಗಿರುವ ಪ್ರಸನ್ನ ಕೆರೆಕೈ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಹೊಸದಿಗಂತ ದಿನಪತ್ರಿಕೆ ಪ್ರಧಾನ ಸಂಪಾದಕರಾದ ವಿನಾಯಕ ಭಟ್ ಮೂರೂರು, ಮಹಾಸಭಾದ ಉಪಾಧ್ಯಕ್ಷರಾದ ಆರ್. ಎಂ.ಹೆಗಡೆ ಬಾಳೆಸರ, ಶ್ರೀಧರ್ ಭಟ್ ಕೆಕ್ಕಾರು, ಪ್ರಧಾನ ಕಾರ್ಯದರ್ಶಿ ವೇಣು ವಿಘ್ನೇಶ ಸಂಪಾ ಉಪಸ್ಥಿತರಿದ್ದರು. ಗಜಾನನ ಭಟ್ ಮತ್ತು ಸಂಗಡಿಗರು ವೇದಘೋಷ ಮಾಡಿದರು. ಭುವನೇಶ್ವರಿ ಹೆಗಡೆ ಪ್ರಾರ್ಥಿಸಿದರು. ತಿಮ್ಮಪ್ಪ ಎಂ.ಎಂ. ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ದತ್ತಾತ್ರೇಯ ಭಟ್ ವಂದಿಸಿದರು. ಗಜಾನನ ಎಂ.ಎನ್., ಸುಬ್ರಹ್ಮಣ್ಯ ನಿರೂಪಿಸಿದರು.



ವ್ಯಕ್ತಿ ನಾಪತ್ತೆ

• **ಉಡುಪಿ:** ಮೂಡುತೋನ್ಸೆ ಗ್ರಾಮದ ನೇಜಾರು ರಾಜೀವ ನಗರದ ನಿವಾಸಿ ಸತೀಶ್ (43) ಡಿಸೆಂಬರ್ ತಿಂಗಳಿನಲ್ಲಿ ನಾಪತ್ತೆಯಾಗಿದ್ದು, ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಮಲ್ಪೆ ಪೊಲೀಸ್ ಠಾಣೆ ದೂ.ಸಂಖ್ಯೆ: 0820–2537999, ಮಲ್ಪೆ ಪಿ.ಎಸ್.ಐ ನಂ:9480805447, ಮಲ್ಪೆ ವೃತ್ತ ನಿರೀಕ್ಷಕರು ಮೊ.ನಂ:9480805430 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮಲ್ಪೆ ಪೊಲೀಸ್ ಠಾಣಾ ಕಚೇರಿ ಪ್ರಕಟಣೆ ತಿಳಿಸಿದೆ.

ಹಿಂದೂಸ್ಥಾನಿ ಗಾಯಕಿ ಸರಸ್ವತಿಗೆ ಶಿವಲಿಂಗ ಪ್ರಶಸ್ತಿ ಪ್ರದಾನ

ಅರಿವಿನ ಆಗರ ವಚನ ಚಳವಳಿ

• **ಬೆಂಗಳೂರು:** ಬದುಕಿನಲ್ಲಿ ಅರಿವು ಬಹಳ ಮುಖ್ಯವಾಗಿದೆ. ವಚನ ಚಳವಳಿ ಅರಿವನ್ನು ಕಲಿಸಿದ್ದು ಅರಿವಿನ ಆಗರವಾಗಿದೆ ಎಂದು ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಹೇಳಿದರು.

ವಚನಜ್ಯೋತಿ ಬಳಗ ಇಂದಿರಾಗಾಂಧಿ ಕಲಾ ಕೇಂದ್ರದಲ್ಲಿ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆಯಲ್ಲಿ ಶಿವಲಿಂಗ ಪ್ರಶಸ್ತಿಯನ್ನು ಹಿಂದೂಸ್ಥಾನಿ ಗಾಯಕಿ ಸರಸ್ವತಿ ಹೆಗಡೆ ಅವರಿಗೆ ಪ್ರದಾನ ಮಾಡಿ ಮಾತನಾಡಿದ ಅವರು, ಸಮಾಜವನ್ನು ಛಿದ್ರಗೊಳಿಸಿದ ಚಾತುರ್ವರ್ಣ ವ್ಯವಸ್ಥೆಯನ್ನು ಧಿಕ್ಕರಿಸಿ ಮಾನವೀಯತೆಯ ನೆಲೆಗಟ್ಟಿನಲ್ಲಿ ಸಮಾಜವನ್ನು ನಿರ್ಮಾಣ ಮಾಡುದ ವಚನ ಚಳವಳಿಯ ಆಶಯವನ್ನು ಪ್ರಸ್ತುತ ಕಾಲಮಾನದಲ್ಲಿ ವಿದ್ಯಾರ್ಥಿಗಳಿಗೆ ತಲುಪಿಸುತ್ತಿರುವ ವಚನಜ್ಯೋತಿ ಬಳಗದ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ ಎಂದರು.

ವಚನಜ್ಯೋತಿ ಬಳಗದ ಸಂಸ್ಥಾಪಕರಾದ ಪಂಡಿತ ಕೆ.ಪಿ. ಶಿವಲಿಂಗಯ್ಯನವರು ಬಿತ್ತಿದ ಅರಿವಿನ ಬೀಜದಿಂದಲೇ ಇಂದು ವಚನಜ್ಯೋತಿ ಬಳಗ ಕಳೆದ 28 ವರ್ಷಗಳಿಂದ ಮಕ್ಕಳ ವಚನ ಮೇಳಗಳ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವನ್ನು



ಹರಡುತ್ತಿದ್ದು ಸಾಂಸ್ಕೃತಿಕ ಮಹತ್ವನ್ನು ಹರಡುತ್ತಿದೆ ಎಂದು ಬಣ್ಣಿಸಿದರು.

ವಚನಜ್ಯೋತಿ ಬಳಗ ಅಧ್ಯಕ್ಷ ಪಿನಾಕಪಾಣಿ ಪುಲಿಕೇಶಿ ಕಾವ್ಯನಾಮದಿಂದ ಹೃದಯತರಂಗ ಸೇರಿದಂತೆ ಹಲವು ಉತ್ತಮ ಕವನ ಸಂಕಲನಗಳನ್ನು ನೀಡಿದ್ದ ಖ್ಯಾತ ವ್ಯಾಖ್ಯಾನಕಾರ ಪಂಡಿತ ಕೆ.ಪಿ. ಶಿವಲಿಂಗಯ್ಯನವರ ನೆನಪಿನಲ್ಲಿ ಪ್ರತಿ ವರ್ಷ ನೀಡಲಾಗುವ ಶಿವಲಿಂಗ ಪ್ರಶಸ್ತಿಯನ್ನು ಮೊದಲ ಬಾರಿಗೆ 1997ರಲ್ಲಿ ಹಿರಿಯರಾದ ಡಾ. ಜಿ. ನಾರಾಯಣ ಅವರಿಗೆ ನೀಡಲಾಗಿದ್ದು, 28ನೇ ವರ್ಷದಲ್ಲಿ ಎಲೆ ಮರೆಯ ಕಾಯಾಗಿ ವಚನ ಪ್ರಸರಣಕ್ಕೆ ಅಗಾಧ ಸೇವೆ ಸಲ್ಲಿಸುತ್ತಿರುವ ಮಲೆನಾಡ ಪ್ರತಿಭೆ ಶಿರಸಿಯ ಹಿಂದೂಸ್ಥಾನಿ ಗಾಯಕಿ ಸರಸ್ವತಿ ಹೆಗಡೆ ಅವರಿಗೆ ನೀಡಿ ಗೌರವಿಸಲಾಗುತ್ತಿದೆ ಎಂದು ತಿಳಿಸಿದರು.

ಎಟಿಎಸ್ ಅಟ್ಯಾಕರ್ಸ್ ತಂಡಕ್ಕೆ ಟ್ರೋಫಿ

• **ಬೆಂಗಳೂರು:** ಸರ್ವಾಂಗೀಣ ಆಟ ಪ್ರದರ್ಶಿಸಿದ ಎಟಿಎಸ್ ಅಟ್ಯಾಕರ್ಸ್ ತಂಡ –2026ರ ಚೊಚ್ಚಲ ಸಿಎಂ ಕಪ್ ಬ್ಯಾಡ್ಮಿಂಟನ್ ಟ್ರೋಫಿಯನ್ನು ಮುಡಿಗೇರಿಸಿಕೊಂಡಿದೆ.

9 ಡ್ರೀಮ್ಸ್ ಸಂಸ್ಥೆ ಆಯೋಜಿಸಿದ್ದ ಪ್ರತಿಷ್ಠಿತ ಸಿಎಂ ಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಫ್ರೋವಿನ್ ಪ್ಯಾಂಥರ್ಸ್ ತಂಡವನ್ನು ಮಣಿಸಿ ಎಟಿಎಸ್ ಅಟ್ಯಾಕರ್ಸ್ ತಂಡ ಗೆಲುವಿನ ನಗೆ ಬೀರಿತು. ಬೆಂಗಳೂರು ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಹಾಗೂ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಚಾಂಪಿಯನ್ ಹಾಗೂ ರನ್ನರ್ ಅಪ್ ತಂಡಗಳಿಗೆ ಪ್ರಶಸ್ತಿ ವಿತರಿಸಿದರು. ಸಮಾರೋಪ ಸಮಾರಂಭದಲ್ಲಿ ಬೆಂಗಳೂರು ಪ್ರೆಸ್ ಕ್ಲಬ್ ನ ಪ್ರಧಾನ ಕಾರ್ಯದರ್ಶಿ ಶಿವ ಕುಮಾರ್ ಬೆಳ್ಳಿತಟ್ಟೆ, ಕವಳ



ಚಿತ್ರದ ನಿರ್ಮಾಪಕ ಬಿ. ಲೋಕೇಶ್ ಉಪಸ್ಥಿತರಿದ್ದರು.ಶನಿವಾರ ಮತ್ತು ಭಾನುವಾರ ಕನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಂಗಣದಲ್ಲಿ ನಡೆದ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ 8 ತಂಡಗಳು ಭಾಗಿಯಾಗಿ ದ್ದವು. ಫೈನಲ್ ಹಣಾಹಣಿಯಲ್ಲಿ ಎರಡೂ ತಂಡಗಳ ಆಟಗಾರರು ಸಮಬಲದ ಹೋರಾಟ ಪ್ರದರ್ಶಿಸಿದರು. ಅಂತಿಮವಾಗಿ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಎಟಿಎಸ್ ಅಟ್ಯಾಕರ್ಸ್ ತಂಡ ಮೊದಲ ಆವೃತ್ತಿಯ ಸಿಎಂ ಗೆದ್ದುಕೊಂಡಿತು. 9 ಡ್ರೀಮ್ಸ್ ಸಂಸ್ಥೆ ಆಯೋಜಿಸಿದ್ದ ಸಿಎಂ ಕಪ್ 2026 ಟೂರ್ನಿ ರಾಜ್ಯದ ಕ್ರೀಡಾ ಕ್ಷೇತ್ರದಲ್ಲಿ ವಿಭಿನ್ನ ಮಾದರಿಯಾಗಿತ್ತು. ಐಎಎಸ್, ಐಪಿಎಸ್ ಪೊಲೀಸ್ ಅಧಿಕಾರಿಗಳು, ಸರ್ಕಾರಿ ಅಧಿಕಾರಿಗಳು, ವೈದ್ಯರು, ಚಲನಚಿತ್ರ ರಂಗ,ಮಾಧ್ಯಮ ಕ್ಷೇತ್ರದವರು ಸ್ಪರ್ಧಿಗಳಾಗಿ ಭಾಗವಹಿಸಿದ್ದರು. ಸಚಿವರಾದ ಡಾ. ಎಂ.ಸಿ. ಸುಧಾಕರ್, ಮಾಜಿ ಎಂಎಲ್‌ಸಿ ನಾರಾಯಣಸ್ವಾಮಿ, ಐಎಎಸ್ ಅಧಿಕಾರಿ ಸೆಲ್ವಕುಮಾರ್, ಐಪಿಎಸ್ ಅಧಿಕಾರಿಗಳಾದ ಮಿಥುನ್, ರಮೇಶ್ ಬಾನೋಥ್, ಕೆಪಿಎಸ್ ಅಧಿಕಾರಿ ಸತೀಶ್, ಯೋಗೀಶ್, ಹಿರಿಯ ಪೊಲೀಸ್ ಅಧಿಕಾರಿ ಪರಮೇಶ್ವರ್ ಇದ್ದರು.

ಬಿಡುಗಡೆ



ಓಮಿಲೋಸ್ ಸಂಸ್ಥೆ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ವಕೀಲ್ ಡಾಟ್ ಎಐ ಮತ್ತು ಲೀಗಲ್ ಸ್ನಾಪ್ ಡಾಟ್ ಇನ್ಫೋ, ಅಡ್ವೋಕೇಟ್ ಎಕ್ಸ್ ಎಂಬ ಮೂರು ಮೊಬೈಲ್ ಆಪ್‌ಗಳನ್ನು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಬಿಡುಗಡೆ ಮಾಡಿದರು. ಓಮಿಲೋಸ್ ಸಂಸ್ಥೆಯ ಸುರೇಶ್ ಜಯರಾಮ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಇತರರಿದ್ದರು.

ಕಿರುಸುದ್ದಿ

ದಕ್ಷಿಣ ಕಾಳಿಕಾದೇವಿಗೆ ಕುಂಭಾಭಿಷೇಕ

• **ಯಲಹಂಕ:** ಚೊಕ್ಕನಹಳ್ಳಿಯಲ್ಲಿ ದಕ್ಷಿಣ ಕಾಳಿಕಾದೇವಿ ಅಮ್ಮನವರ ನೂತನ ದೇವಾಲಯ ನಿರ್ಮಾಣ, ಶಿಲಾ ವಿಗ್ರಹ ಪ್ರತಿಷ್ಠಾಪನೆ, ಕಳಸ ಸ್ಥಾಪನೆ ಹಾಗೂ ಮಹಾಕುಂಭಾಭಿಷೇಕ ಮಹೋತ್ಸವ ಧಾರ್ಮಿಕ ಸಂಭ್ರಮದ ನಡುವೆ ನಡೆಯಿತು.



ಕಾರ್ಯಕ್ರಮದಲ್ಲಿ ಧರ್ಮದರ್ಶಿ, ಕಾಳಿಕಾದೇವಿ ಹಾಗೂ ಕಾಳಿಕಾದೇವಿ ಬಸಪ್ಪ ಪೀಠದ ಅಧ್ಯಕ್ಷರಾದ ಡಾ. ಅರುಣ್ ಗುರೂಜಿ, ಕೊರಟಗೆರೆ ಎಲೆರಾಂಪುರ ಕುಂಚಿಟಿಗ ಪೀಠದ ಪೀಠಾಧ್ಯಕ್ಷ ಹನುಮಂತನಾಥ ಸ್ವಾಮಿ, ಕುಣಿಗಲ್ ಅರಕೆರೆ ಮಠದ ಸಿದ್ದರಾಮ ಚೈತನ್ಯ ಸ್ವಾಮಿ, ಚೈತನ್ಯ ಸ್ವಾಮಿ, ವಿಶ್ವಕರ್ಮಕ್ಷೇತ್ರ ಮದ್ದರಲಿಂಗಯ್ಯನ ಹುಂಡಿಯ ಗೌರಿಶಂಕರ ಸ್ವಾಮಿ, ಶ್ರೀರಂಗಪಟ್ಟಣ ಚಂದ್ರವನ ಆಶ್ರಮದ ಮಹಾಂತ ಶಿವಯೋಗಿ ಸ್ವಾಮಿ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸುಧಾಕರ್, ಬಮೂಲ್ ನಿರ್ದೇಶಕ ಸತೀಶ್ ಕಡತನಮಲೆ, ಭಕ್ತಾದಿಗಳು ಗ್ರಾಮಸ್ಥರು ಭಾಗವಹಿಸಿ ದೇವಿಯ ಆಶೀರ್ವಾದ ಪಡೆದುಕೊಂಡರು. ವೇದಮಂತ್ರಗಳ ಘೋಷದ ನಡುವೆ ಶಿಲಾ ವಿಗ್ರಹ ಪ್ರತಿಷ್ಠಾಪನೆ ಹಾಗೂ ಕಳಸ ಸ್ಥಾಪನೆ ವಿಧಿವಿಧಾನಗಳು ನೆರವೇರಿದವು. ಬಳಿಕ ಮಹಾಕುಂಭಾಭಿಷೇಕ ಮಹೋತ್ಸವ ಭಕ್ತಿಭಾವದಿಂದ ನೆರವೇರಿತು.

54 ವಿದ್ಯುತ್ ವಿತರಣಾ ಕಂಪನಿಗಳಲ್ಲಿ 51ನೇ ಸ್ಥಾನಕ್ಕಿಳಿದ ಬೆಸ್ಕಾಂ

• **ಬೆಂಗಳೂರು:** ಕೇಂದ್ರ ವಿದ್ಯುತ್ ಸಚಿವಾಲಯ ಬಿಡುಗಡೆ ಮಾಡಿದ ವಿದ್ಯುತ್ ವಿತರಣಾ ಸಂಸ್ಥೆಗಳ ವಾರ್ಷಿಕ ಸಂಯೋಜಿತ ಶ್ರೇಯಾಂಕ ಮತ್ತು ಶ್ರೇಣಿ ವರದಿಯಲ್ಲಿ ಬೆಸ್ಕಾಂ ಕಳಪೆ ಪ್ರದರ್ಶನ ತೋರಿದ್ದು ಸಿ ಗ್ರೇಡ್ ಹಾಗೂ ರೆಡ್ ಕಾರ್ಡ್ ಪಡೆದಿದೆ. ದೇಶದ 54 ವಿದ್ಯುತ್ ವಿತರಣಾ ಕಂಪನಿಗಳಲ್ಲಿ ಬೆಸ್ಕಾಂ 51ನೇ ಸ್ಥಾನಕ್ಕೆ ಕುಸಿದಿದೆ.ಕಳೆದ ವರದಿಯಲ್ಲಿ 34ನೇ ಸ್ಥಾನದಲ್ಲಿದ್ದ ಬೆಸ್ಕಾಂ, ಈ ಬಾರಿ ಭಾರೀ ಇಳಿಕೆ ಕಂಡು 51ನೇ ಸ್ಥಾನಕ್ಕೆ ಇಳಿದಿದೆ. ಕಂಪನಿಯ ಹಣಕಾಸಿನ ನಷ್ಟ, ಸಾಲದ ಪ್ರಮಾಣ, ಸಾಲ ಮರುಪಾವತಿ ಸಾಮರ್ಥ್ಯ, ಗ್ರಾಹಕರಿಂದ ಬಾಕಿ ವಸೂಲಿ ಪ್ರಮಾಣ, ಆಡಳಿತ ಮಂಡಳಿಯ ನಿರ್ಧಾರಗಳು ಹಾಗೂ ಕಾರ್ಯವೈಖರಿ, ಗ್ರಾಹಕ ಸೇವೆ ಸೇರಿದಂತೆ ಹಲವು ಮಾನದಂಡಗಳ ಆಧಾರದ ಮೇಲೆ ಈ ಶ್ರೇಯಾಂಕ ಸಿದ್ಧಪಡಿಸಲಾಗುತ್ತದೆ. 2024–25ನೇ ಸಾಲಿನಲ್ಲಿ ಬೆಸ್ಕಾಂ ಸುಮಾರು 13,819 ಕೋಟಿ ರೂ.ನಷ್ಟದಾಖಲಿಸಿದೆ. ಜೊತೆಗೆ ಕಂಪನಿಗೆ 22,611 ಕೋಟಿ ರೂ.ಸಾಲ ಇರುವುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉದ್ಯಾನವನ ಅಭಿವೃದ್ಧಿಗೆ ಕ್ರಮ

• **ಕೆಂಗೇರಿ:** ಸಾರ್ವಜನಿಕರ ಅನುಕೂಲಕ್ಕಾಗಿ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು. ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ಕೋಟೆ ವಾರ್ಡ್ ವಿಎನ್‌ಕ್ಲೇವ್ ಬಡಾವಣೆಯಲ್ಲಿ ಹೆಮ್ಮಿಗೆಪುರ ಮುಖ್ಯ ರಸ್ತೆ ಹಾಗೂ ಸುತ್ತಮುತ್ತಲಿನ ಬಡಾವಣೆಗಳಿಗೆ ರಸ್ತೆ ಡಾಂಬರೀಕರಣ ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಕ್ಷೇತ್ರದಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ಮಹಿಳೆಯರಿಗೆ, ಮಕ್ಕಳಿಗೆ ಮತ್ತು ಹಿರಿಯ ನಾಗರಿಕರಿಗೆ ಪಾದಚಾರಿ ಮಾರ್ಗ ನಿರ್ಮಿಸಿ, ಆರೋಗ್ಯರ ವಾತಾವರಣ ನಿರ್ಮಿಸಲಾಗುವುದು. ಜತೆಗೆ ಮೂಲ ಸೌಕರ್ಯದೊಂದಿಗೆ ವಿದ್ಯುತ್, ರಸ್ತೆ, ಕುಡಿಯುವ ನೀರಿನ ಸರಬರಾಜಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

149 ಕೆರೆಗಳಿಂದ ನೀರಿನ ಮಾದರಿ ಸಂಗ್ರಹ | ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ

ಶೇ.40ರಷ್ಟು ನಗರದ ಕೆರೆಗಳು ಕಲುಷಿತ

• **ಬೆಂಗಳೂರು:** ನಗರದ ಶೇ. 40ರಷ್ಟು ಕೆರೆಗಳು ಅತ್ಯಂತ ಕಲುಷಿತವಾಗಿವೆ. ಕನಿಷ್ಠ ಬಳಕೆಗೂ ಯೋಗ್ಯವಲ್ಲದ ಡಿ ಮತ್ತು ಇ ವರ್ಗದಲ್ಲಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿ ಹೇಳಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂಕಿಅಂಶಗಳ ಪ್ರಕಾರ, 2025 ಏಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ ಬೆಂಗಳೂರಿನ ಸುಮಾರು 149 ಕೆರೆಯಿಂದ ಸಂಗ್ರಹಿಸಲಾದ ನೀರಿನ ಮಾದರಿಗಳಲ್ಲಿ, ಪ್ರತಿ ಹತ್ತು ಕೆರೆಗಳ ಪೈಕಿ ನಾಲ್ಕು ಕೆರೆಗಳು ಅತ್ಯಂತ ಕಳಪೆ ಗುಣಮಟ್ಟದ ಇ ದರ್ಜೆಗೆ ಸೇರಿವೆ. ಕುಡಿಯಲು ಅಥವಾ ಸ್ನಾನ ಮಾಡಲು ಯೋಗ್ಯವಾದ ಎ,ಬಿ ಅಥವಾ ಸಿ ದರ್ಜೆಯನ್ನೂ ಪಡೆಯದಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ನಗರ ಹೊರವಲಯದ ಮಡಿವಾಳದ ಮತ್ತು ಸುತ್ತಮುತ್ತಲ ಪ್ರದೇಶದ ಕೆರೆಗಳ ಸ್ಥಿತಿ ಗಂಭೀರವಾಗಿದೆ. ಎಲೆಮಲ್ಲಪ್ಪ ಶೆಟ್ಟಿ, ಮಡಿವಾಳ, ವರ್ತೂರು, ಹೊಸಕೆರೆಹಳ್ಳಿ ಕೆರೆ ಸೇರಿದಂತೆ ಅನೇಕ ಕೆರೆಗಳಲ್ಲಿ ಮಲದ ತ್ಯಾಜ್ಯದ ಪ್ರಮಾಣ ಹೆಚ್ಚಿದೆ. ಅಲ್ಲದೆ ಹಲಸೂರು, ಜಕ್ಕೂರು, ಯಲಹಂಕ ಕೆರೆಗಳು ಸಹ ಉತ್ತಮವಾಗಿಲ್ಲ ಎಂದು ವರದಿ ಹೇಳಿದೆ.

ಹೊಸಹಳ್ಳಿ ಕೆರೆಯಲ್ಲಿ ಮಲದ ತ್ಯಾಜ್ಯದ ಪ್ರಮಾಣ ಪ್ರತಿ 100 ಮಿ.ಲೀ ನೀರಿಗೆ 1.40 ಲಕ್ಷ ಎಂಪಿಎನ್(ಕೋಳಿಫಾರ್ಮ್ ಬ್ಯಾಕ್ಟೀರಿಯಾಗಳ ಸಾಂದ್ರತೆ) ದಾಖಲಾಗಿದೆ. ಇದು ನಿಗದಿತ ಮಿತಿಗಿಂತ 280 ಪಟ್ಟು ಹೆಚ್ಚಾಗಿದೆ. ಸ್ಯಾಂಕಿ ಕೆರೆಯ 100





> **ಮಾಲಿನ್ಯ ನಿಯಂತ್ರಣ ಮಂಡಳಿಯು ಕೆರೆಗಳ ಮಾಲಿನ್ಯವನ್ನು ಗುರುತಿಸುವ ಕೆಲಸ ಮಾಡುತ್ತಿದೆಯೇ ಹೊರತು, ಅದನ್ನು ನಿಯಂತ್ರಿಸುವ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಜಲಮಂಡಳಿ ಅಧಿಕಾರಿಗಳು ಮಾಲಿನ್ಯ ನಿಯಂತ್ರಣ ಮಂಡಲಿಯಲ್ಲೇ ಸದಸ್ಯರಾಗಿರುವುದರಿಂದ, ಮಾಲಿನ್ಯ ನಿಯಂತ್ರಣ ಮಂಡಲಿಯು ಅವರ ವಿರುದ್ಧ ನೋಟಿಸ್ ನೀಡಲು ಅಥವಾ ಕ್ರಮ ಕೈಗೊಳ್ಳಲು ಹಿಂಜರಿಯುತ್ತಿದೆ.**
> ■ **ವಿ.ರಾಮ್‌ಪ್ರಸಾದ್, ಫ್ರೆಂಡ್ಸ್ ಆಫ್ ಲೇಕ್ಸ್ ಸಂಸ್ಥಾಪಕ**

ಮಿ.ಲೀ ನೀರಿಗೆ 225 ಎಂಪಿಎನ್ ದಾಖಲಾಗಿದ್ದು ಉತ್ತಮ ಸ್ಥಿತಿ ಹೊಂದಿದೆ. ಮತ್ತು ಕೆಂಗೇರಿ ಕೆರೆಯ 100 ಮಿ.ಲೀ ನೀರಿಗೆ 43 ಎಂಪಿಎನ್ ದಾಖಲಾಗಿದ್ದು ಅತ್ಯುತ್ತಮ ಸ್ಥಿತಿಯಲ್ಲಿದೆ.

ಬೆಂಗಳೂರಿನ ಬಹುತೇಕ ಕೆರೆಯ ನೀರು ಕಲುಷಿತಗೊಳ್ಳಲು ಅತಿ ಹೆಚ್ಚು ಒಳಚರಂಡಿ ನೀರನ್ನು ಸೇರುತ್ತಿರುವುದೇ ಮುಖ್ಯ ಕಾರಣವಾಗಿದೆ. ಕಳೆದ ಒಂದು ದಶಕದಿಂದ ಸಾವಿರಾರು ಕೋಟಿ ರೂ.ಗಳನ್ನು ಕೊಳಚೆ ನೀರು ಸಂಸ್ಕರಣಾ ಘಟಕಗಳು ಮತ್ತು ರಾಜಕಾಲುವೆಗಳ ಅಭಿವೃದ್ಧಿಗಾಗಿ ವ್ಯಯಿಸಲಾಗಿದೆ. ಆದರೂ ಬೆಂಗಳೂರಿನ ಬಹುತೇಕ ಕೆರೆಗಳ ಗುಣಮಟ್ಟ ಸುಧಾರಿಸದಿರುವುದು ಕೈಗೊಳ್ಳಬಹುದಾದ ವ್ಯವಸ್ಥೆಯ ವೈಫಲ್ಯ ಎಂದು ತಜ್ಞರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒಂಬತ್ತು ಎಸ್‌ಟಿಪಿ ಘಟಕ ನಿರ್ಮಿಸಲು ಪ್ರಸ್ತಾವನೆ

ಇನ್ನೊಂದೆಡೆ ಬೆಂಗಳೂರು ಜಲಮಂಡಳಿ ಪ್ರಸ್ತುತ 1,348 ಮಿಲಿಯನ್ ಲೀಟರ್ ಕೊಳಚೆ ನೀರನ್ನು ಸಂಸ್ಕರಿಸುತ್ತಿದೆ. ಮುಂದಿನ 2 ತಿಂಗಳಲ್ಲಿ ಇದರ ಸಾಮರ್ಥ್ಯ 628 ಎಂಎಲ್‌ಡಿಗೆ ಹೆಚ್ಚುವರಿಯಾಗಿ ಸೇರಲಿದೆ. ಅಲ್ಲದೆ 535 ಎಂಎಲ್‌ಡಿ ಸಾಮರ್ಥ್ಯ ತ್ಯಾಜ್ಯ ನೀರನ್ನು ಸಂಸ್ಕರಿಸುವ 9 ಘಟಕ (ಎಸ್‌ಟಿಪಿ) ನಿರ್ಮಿಸಲು ಪ್ರಸ್ತಾವಿಸಲಾಗಿದೆ ಎಂದು ಜಲಮಂಡಳಿ ತಿಳಿಸಿದೆ.

ತಜ್ಞರ ಆಕ್ರೋಶ

ಬೃಹತ್ ವಸತಿಗಳ ನಿರ್ಮಾಣಕ್ಕಿಂತ ಮನೆಮನೆಗಳಿಂದ ಬರುವ ಒಳಚರಂಡಿ ಪೈಪ್‌ಲೈನ್ ಸಂಪರ್ಕವನ್ನು ಸರಿಪಡಿಸುವುದು ಮುಖ್ಯವಾಗಿದೆ. ಸರ್ಕಾರವು ಕೇವಲ ಎಸ್‌ಟಿಪಿ ಘಟಕಗಳ ಮೇಲೆ ಗಮನ ಹರಿಸುತ್ತಿದೆ, ಆದರೆ ಒಳಚರಂಡಿ ಜಾಲದ ಕೊರತೆಯಿಂದಾಗಿ ಸಂಸ್ಕರಿಸದ ನೀರು ನೇರವಾಗಿ ಕೆರೆಗಳನ್ನು ಸೇರುತ್ತಿದೆ. ನಿಯಂತ್ರಣಾಧಿಕಾರಿಯಾಗಿ ಕೆಲಸ ಮಾಡಬೇಕಾದ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಜಲಮಂಡಳಿಗಳೇ ಕೆರೆ ಮಾಲಿನ್ಯಕ್ಕೆ ಮೂಲ ಕಾರಣವಾಗುತ್ತಿರುವುದು ವಿಷಾದನೀಯ ಎಂದು ತಜ್ಞರು, ಪರಿಸರವಾದಿಗಳು ಆಕ್ರೋಶ ಹೊರಹಾಕಿದ್ದಾರೆ.

ಅನಧಿಕೃತ ಕಟ್ಟಡ ತೆರವಿಗೆ ಸಮಿತಿ ರಚನೆ

• **ಬೆಂಗಳೂರು:** ಸಾರಕ್ಕಿ ಕೆರೆ ಬಫರ್ ವಲಯದ ಒತ್ತುವರಿ ಮತ್ತು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಸಮಿತಿ ರಚನೆ ಮಾಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಜೆ.ಪಿ.ನಗರದ ಪುಟ್ಟೇನಹಳ್ಳಿ ಬಳಿಯ ಸಾರಕ್ಕಿ ಕೆರೆ ಬಫರ್ ವಲಯದಲ್ಲಿನ ಒತ್ತುವರಿ ತೆರವುಗೊಳಿಸಲು ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗೆ ಆದೇಶಿಸುವಂತೆ ಕೋರಿ ಸಾರಕ್ಕಿ ಕೆರೆ ಪ್ರದೇಶ ಅಭಿವೃದ್ಧಿ ಟ್ರಸ್ಟ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರಿದ್ದ ವಿಭಾಗೀಯ ಪೀಠವು, ಸಮಿತಿ ರಚಿಸುವಂತೆ ಸೂಚಿಸಿ ಅರ್ಜಿಯನ್ನು ಇತ್ಯರ್ಥ ಪಡಿಸಿ ಆದೇಶಿಸಿದೆ.

ಸಮಿತಿ ರಚನೆಗೆ ಸೂಚನೆ: ಕೆರೆ ಪ್ರದೇಶ ಒತ್ತುವರಿ ತೆರವಿಗೆ ಅಗತ್ಯ ಕ್ರಮ ಕೈಗೊಳ್ಳಲು ಬೆಂಗಳೂರು ನಗರ ಜಿಲ್ಲಾಧಿಕಾರಿ, ಜಿಬಿಎ ಮತ್ತು ಕೆರೆ ಅಭಿವೃದ್ಧಿ ಪ್ರಾಧಿಕಾರದ ಪ್ರತಿನಿಧಿಗಳು ಸೇರಿದಂತೆ ಸಂಬಂಧಪಟ್ಟ ಅಗತ್ಯವಿರುವ ಉಳಿದ ಪಾಲುದಾರರನ್ನು ಒಳಗೊಂಡ ಸಮಿತಿ ರಚಿಸಬೇಕು ಎಂದು ಪೀಠ ಆದೇಶದಲ್ಲಿ ಹೇಳಿದೆ.

ಮೂರು ತಿಂಗಳಲ್ಲಿ ವರದಿ ಸಲ್ಲಿಸಿ: ಮೂರು ವಾರದೊಳಗೆ ಈ ಸಮಿತಿ ರಚಿಸಿ ಆದೇಶ ಹೊರಡಿಸಬೇಕು. ಸಮಿತಿ ಸದಸ್ಯರು ಕೆರೆ ಪ್ರದೇಶಕ್ಕೆ ಸ್ಥಳಕ್ಕೆ ಭೇಟಿ ನೀಡಿ ಕೆರೆ ಬಫರ್ ವಲಯದಲ್ಲಿ ನಿರ್ಮಾಣ ಮಾಡಿರುವ ಕಟ್ಟಡ ಮತ್ತು ಒತ್ತುವರಿದಾರರನ್ನು ಗುರುತಿಸಿ ನೋಟಿಸ್ ಜಾರಿ ಮಾಡಬೇಕು. ಕೆರೆ ಸಂರಕ್ಷಣೆ ನಿಟ್ಟಿನಲ್ಲಿ ಒತ್ತುವರಿ ತೆರವು ಸೇರಿದಂತೆ ಇನ್ನುಳಿದ ಕ್ರಮ ನಡೆಸಬೇಕು. ಸಮಿತಿಯು ನೋಡಲ್ ಅಧಿಕಾರಿಯ ಮೂಲಕ ಮೂರು ತಿಂಗಳಲ್ಲಿ ಈ ಆದೇಶದ ಅನುಪಾಲನಾ ವರದಿ ಸಲ್ಲಿಸಬೇಕು ಎಂದು ಪೀಠ ತಿಳಿಸಿದೆ.ಕೆರೆ ಬಫರ್ ವಲಯವನ್ನು ಒತ್ತುವರಿ ಮಾಡಿಕೊಂಡಿರುವ ಎಲ್ಲ ವ್ಯಕ್ತಿಗಳ ಹಕ್ಕು ಮತ್ತು ಅವರ ಮನವಿಯನ್ನು ಕಾಯ್ದಿರಿಸಿದ್ದು, ಅವರು ಕಾನೂನಿನಲ್ಲಿ ಲಭ್ಯವಿರುವ ಪರಿಹಾರದ ಹಕ್ಕು ಪಡೆದುಕೊಳ್ಳಬಹುದು. ಆದರೆ, ಸಮಿತಿಯು ಒತ್ತುವರಿಯನ್ನು ತೆರವು ಗೊಳಿಸುವ ಸಂಬಂಧ ಕಾನೂನಿನ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವರಣೆ ನೀಡಬೇಕು ಎಂದು ಪೀಠ ಹೇಳಿದೆ.



ಅಂತಾರಾಷ್ಟ್ರೀಯ ಓಎಂಎಫ್‌ಎಸ್ ದಿನಾಚರಣೆ ಅಂಗವಾಗಿ ರಾಜೀವ್ ಗಾಂಧಿ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆಯಿಂದ ವಾಕಾಥಾನ್ ನಡೆಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯ, ಡಾ.ನಾಗರಾಜಪ್ಪ ದಾಸ್,ಡಾ.ಪ್ರಶಾಂತ್ ರಾಜರಾಮ್ ಸೇರಿದಂತೆ ಇತರರಿದ್ದರು.

ಕೆರೆಯಲ್ಲಿ ಈಜಲು ಹೋದ ಮಕ್ಕಳ ಸಾವು

• **ಯಲಹಂಕ:** ಹೆಸರಘಟ್ಟ ಹೋಬಳಿಯ ಬ್ಯಾತಾ–ಸೀರೇಸಂದ್ರ ಗ್ರಾಮದಲ್ಲಿ ಭಾನುವಾರ ಕೆರೆಯಲ್ಲಿ ಈಜಲು ತೆರಳಿದ್ದ ಇಬ್ಬರು ಮಕ್ಕಳು ಸಾವನ್ನಪ್ಪಿರುವ ಘಟನೆ ನಡೆದಿದೆ. ಭಾನುವಾರ ಬೆಳಗ್ಗೆ





ಈಜುಲು ಹೋದ ಮನೋಜ್ (9) ಮೋಹನ್ (11) ಮೃತಪಟ್ಟ ದುರ್ದೈವಿಗಳು. ಶಾಲೆಗೆ ರಜೆ ಇದ್ದ ಕಾರಣ ಬೆಳಗ್ಗೆ ಸುಮಾರು 9 ಗಂಟೆಯ ಸುಮಾರಿಗೆ ಗ್ರಾಮದ ಪಕ್ಕದಲ್ಲಿರುವ ಕೆರೆಗೆ ಈಜಲು ತೆರಳಿದ್ದರು. ಕೆರೆಯ ಅಂಗಳದಲ್ಲಿ ಸುಮಾರು 10ರಿಂದ 15 ಅಡಿ ಆಳದ ಗುಂಡಿ ನಿರ್ಮಾಣವಾಗಿದ್ದು, ಅದರಲ್ಲಿ ನೀರು ನಿಂತಿತ್ತು. ಈ ವೇಳೆ ಈಜಲು ಇಳಿದ ಇಬ್ಬರು ಬಾಲಕರು ಆಳವಾದ ಗುಂಡಿಯಲ್ಲಿ ಮುಳುಗಿದ್ದಾರೆ. ಎಷ್ಟೊತ್ತಾದರೂ ಹೊರಕ್ಕೆ ಬಾರದಿದ್ದಾಗ ಜತೆಯಲ್ಲಿದ್ದ ಸ್ನೇಹಿತರು ಗಮನಿಸಿ ಗ್ರಾಮಸ್ಥರಿಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಕೆರೆಗೆ ಇಳಿದ ಗ್ರಾಮಸ್ಥರು ಹುಡುಕಾಟ ನಡೆಸಿ ಇಬ್ಬರನ್ನೂ ಹೊರತೆಗೆದಾಗ ಮೃತಪಟ್ಟಿರುವುದು ತಿಳಿದಿದೆ.

ಗ್ರಾಮಸ್ಥರ ಆರೋಪದಂತೆ, ಕೆರೆಯಲ್ಲಿ ನಿಯಮ ವಿರುದ್ಧವಾಗಿ ಮಣ್ಣು ತೆಗೆಯಲಾಗಿದೆ. ಆಳವಾದ ಗುಂಡಿ ನಿರ್ಮಾಣವಾಗಿದೆ. ನಿಯಮಕ್ಕಿಂತ ಹೆಚ್ಚು ಮಣ್ಣು ತೆಗೆದು ಬಾವಿಯಂತಾಗಿರುವುದೇ ದುರಂತಕ್ಕೆ ಕಾರಣವೆಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕಿನ ಬಹುತೇಕ ಕೆರೆಗಳಲ್ಲಿ ಇದೇ ಪರಿಸ್ಥಿತಿ ಇದೆ. ತಾಲೂಕು ಆಡಳಿತ ಹಾಗೂ ಸಂಬಂಧಿತ ಅಧಿಕಾರಿಗಳು ನಿಯಮ ಪಾಲನೆಗೆ ಕ್ರಮ ಕೈಗೊಳ್ಳದಿರುವುದರಿಂದ ಇಂತಹ ಘಟನೆಗಳು ಮರುಕಳಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೆರೆಯಲ್ಲಿ ಹೂಳು ತೆಗೆಯಲು ನಿಯಮ ಪಾಲಿಸಬೇಕು. ಭಾವಿಯಂತಿರುವ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಎಐಎಂಎಸ್ ಸಹಯೋಗದಲ್ಲಿ ಇಕೋಫ್ಲುಯೆನ್ಸ್ 3.0 ಸಮ್ಮೇಳನ

• **ಬೆಂಗಳೂರು:** ಇಂಡಸ್ ಬಿಸಿನೆಸ್ ಅಕಾಡೆಮಿಯು ಇಂಡಿಯನ್ ಎಕನಾಮಿಕ್ ಅಸೋಸಿಯೇಷನ್ (ಐಸಿಐ), ಅಸೋಸಿಯೇಷನ್ ಆಫ್ ಇಂಡಿಯನ್ ಮ್ಯಾನೇಜ್ಮೆಂಟ್ ಸ್ಕೂಲ್ಸ್ (ಎಐಎಂಎಸ್) ಸಹಯೋಗದಲ್ಲಿ ಇಕೋಫ್ಲುಯೆನ್ಸ್ 3.0 ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿತ್ತು.

ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಅಧ್ಯಕ್ಷ ಡಾ. ಎಸ್. ಮಹೇಂದ್ರ ದೇವ್ ಉದ್ಘಾಟನೆ ಮಾಡಿದರು. ಐಐಎಂಬಿ ಮಾಜಿ ಪ್ರಾಧ್ಯಾಪಕ ಡಾ. ಚರಣ್ ಸಿಂಗ್, ಭಾರತೀಯ ಅರ್ಥಶಾಸ್ತ್ರ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ರವೀಂದ್ರ ಬ್ರಹ್ಮೆ, ಇಂಡಸ್ ಬಿಸಿನೆಸ್ ಅಕಾಡೆಮಿಯ ನಿರ್ದೇಶಕ ಡಾ. ಈಶ್ವರ್ ಕೃಷ್ಣ ಅಯ್ಯರ್, ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಸುಭಾಷ್ ಶರ್ಮಾ



ಉಪಸ್ಥಿತರಿದ್ದರು.

ಲೇಖಕರಾದ ಪ್ರೊ. ಪ್ರಶಾಂತ್ ಕುಲಕರ್ಣಿ ಮತ್ತು ಡಾ. ಮಾನ್ಸಿ ಬನ್ಸಾಲ್ ಅವರ ಮೈಕ್ರೋ– ಮೋಟಿವ್ಸ್ ಅಂಡ್ ಮ್ಯಾಕ್ರೋ–ಬಿಹೇವಿಯರ್ ಆಫ್ ಮೋದಿನೋಮಿಕ್ಸ್ ಎಂಬ ಪುಸ್ತಕ ಬಿಡುಗಡೆ ಮಾಡಲಾಯಿತು. ವಿವಿಧ ತಜ್ಞರಿಂದ ಕರ್ನಾಟಕ, ಭಾರತ ಮತ್ತು ಡಿಜಿಟಲ್ ಆರ್ಥಿಕತೆಯ ಕುರಿತು ಪ್ರಮುಖ ಪ್ಯಾನಲ್ ಚರ್ಚೆ ನಡೆಯಿತು.

ಸ್ಮಶಾನ ಜಾಗಕ್ಕೆ ಕಾಂಪೌಂಡ್ ನಿರ್ಮಾಣ

• **ದಾಸರಹಳ್ಳಿ:** ಸ್ಮಶಾನಗಳ ಜಾಗದಲ್ಲಿ ಎಲ್ಲೆಂದರಲ್ಲಿ ಕಸ ಹಾಕುವವರ ಮತ್ತು ತಿಂಗಳುಗಟ್ಟಲೆ ಕಾರು ನಿಲ್ಲಿಸುವವರಿಗೆ ಕಡಿವಾಣ ಹಾಕಲು ಮತ್ತು ಜಾಗದ ಸುರಕ್ಷತೆಗಾಗಿ ಸುತ್ತಲೂ ತಂತಿ ಬೇಲಿ ಮತ್ತು ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಶಾಸಕ ಎಸ್. ಮುನಿರಾಜು ತಿಸಿದರು.ಚೊಕ್ಕಸಂದ್ರ ಗ್ರಾಮದ ಹಳೆಯ ಸ್ಮಶಾನದ ಸುತ್ತಲೂ ತಂತಿಬೇಲಿ ಮತ್ತು ಕಾಂಪೌಂಡ್ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದಿನಿಂದಲೂ ಗ್ರಾಮದ ಜನರು ತಮ್ಮ ಬಂಧು ಬಾಂಧವರನ್ನು ಕಳೆದುಕೊಂಡಾಗ ಅವರನ್ನು ಇಲ್ಲಿ ಸಮಾಧಿ ಮಾಡಿ ಪ್ರತಿ ವರ್ಷವೂ ಅವರ ಸವಿನೆನಪಿನಲ್ಲಿ ಪೂಜಿಸುತ್ತಾರೆ. ಅಂತಹ ಸವಿ ನೆನಪಿನ ಸ್ಮಶಾನದ ಜಾಗವನ್ನು ಗ್ರಾಮದೊಳಗೆ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದರು.




ನೈಸ್ ರಸ್ತೆ ಜಂಕ್ಷನ್ ಸಂಪರ್ಕ ಕಾಮಗಾರಿ ಪೂರ್ಣ: ಉದ್ಘಾಟನೆ ಸನ್ನಿಹಿತ

ಶೀಘ್ರದಲ್ಲೇ ವಾಹನ ದಟ್ಟಣೆಗೆ ಪರಿಹಾರ

• **ಬೆಂಗಳೂರು:** ದೀಪಾಂಜಲಿ ನಗರದಿಂದ ಹೊಸಕೆರೆಹಳ್ಳಿಯ ಪಿಇಎಸ್ ಕಾಲೇಜು ಬಳಿಯ ನೈಸ್ ರಸ್ತೆ ಜಂಕ್ಷನ್‌ಗೆ ಸಂಪರ್ಕ ಕಲ್ಪಿಸುವ ಹೊಸ ರಸ್ತೆ ಬಹುತೇಕ ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಿದ್ಧವಾಗಿದೆ. ಇದರಿಂದ ಮೈಸೂರು ರಸ್ತೆಯ ನಾಯಂಡಹಳ್ಳಿ ಮತ್ತು ಸುತ್ತಮುತ್ತಲಿನ ಸಂಚಾರ ದಟ್ಟಣೆಯಲ್ಲಿ ಸಿಲುಕಿ ಪರದಾಡುವ ವಾಹನ ಸವಾರರು ನಿರಾಳರಾಗುತ್ತಾರೆ.

ಸದ್ಯ ಸವಾರರು ನೈಸ್ ರಸ್ತೆ ಪ್ರವೇಶಿಸಲು ನಾಯಂಡಹಳ್ಳಿ ರಿಂಗ್ ರಸ್ತೆ ಮೂಲಕ ಸಾಗಿ ವೀರಭದ್ರನಗರ ಸಿಗ್ನಲ್ ದಾಟಬೇಕಿದೆ. ಈ ಹೊಸ 1.5 ಕಿ.ಮೀ ಲಿಂಕ್ ರಸ್ತೆಯಿಂದಾಗಿ ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ ಮತ್ತು ಜ್ಞಾನಭಾರತಿ ಜಂಕ್ಷನ್‌ಗಳ ಟ್ರಾಫಿಕ್ ತಪ್ಪಿಸಬಹುದು.ಈ ಮಾರ್ಗದ ಬಳಕೆಯಿಂದ ಸುಮಾರು 15 ರಿಂದ 20 ನಿಮಿಷಗಳ ಪ್ರಯಾಣದ ಸಮಯ ಉಳಿತಾಯವಾಗಲಿದೆ ಎಂದು ಅಂದಾಜಿಸಲಾಗಿದೆ. ದೀಪಾಂಜಲಿ ನಗರದಿಂದ ಕೇವಲ 10 ನಿಮಿಷಗಳಲ್ಲಿ ಪಿಇಎಸ್ ಕಾಲೇಜು ಜಂಕ್ಷನ್ ತಲುಪಬಹುದು.

ಈ ರಸ್ತೆಯು ಮೈಸೂರು ರಸ್ತೆಯಿಂದ ನೇರವಾಗಿ ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ



ಮತ್ತು ತುಮಕೂರು ರಸ್ತೆಯ ಕಡೆಗೆ ಸಾಗುವವರಿಗೆ ದೊಡ್ಡ ವರದಾನವಾಗಲಿದೆ. ಹೊಸ ಲಿಂಕ್ ರಸ್ತೆಯ ಮೊದಲ 1.5 ಕಿ.ಮೀ ವರೆಗೆ ಯಾವುದೇ ಟೋಲ್ ಶುಲ್ಕ ಇರುವುದಿಲ್ಲ. ಪಿಇಎಸ್ ಕಾಲೇಜು ಬಳಿಯ ಮುಖ್ಯ ನೈಸ್ ರಸ್ತೆಯನ್ನು ಪ್ರವೇಶಿಸಿದ ನಂತರವಷ್ಟೇ ಶುಲ್ಕ ಅನ್ವಯವಾಗಲಿದೆ. ಭೂಸ್ವಾಧೀನದ ಸಮಸ್ಯೆಗಳಿಂದಾಗಿ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಈ ಯೋಜನೆ ಈಗ ಪೂರ್ಣಗೊಂಡಿದೆ. ಭಗವಾನ್ ಜೈನ್ ಆಸ್ಪತ್ರೆ ಬಳಿ ಇದ್ದ ಬಂಡೆಗಳನ್ನು ತೆರವುಗೊಳಿಸುವ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲೇ ರಸ್ತೆ ಮುಕ್ತಗೊಳಿಸುವುದಾಗಿ ನೈಸ್ ಸಂಸ್ಥೆ ತಿಳಿಸಿದೆ.

ಪಾದಚಾರಿ ಮಾರ್ಗ ಸ್ವಚ್ಛ, ಸುರಕ್ಷತೆಗೆ ವಾಕಲೂರು ಅಭಿಯಾನ

78 ಕಿ.ಮೀ. ಪಾದಚಾರಿ ಮಾರ್ಗ ಪೂರ್ಣ

• **ಬೆಂಗಳೂರು:** ನಗರದಲ್ಲಿ ಪಾದಚಾರಿ ಮಾರ್ಗವನ್ನು ಸ್ವಚ್ಛ ಹಾಗೂ ಸುರಕ್ಷಿತವಾಗಿರಿಸಲು ಆರಂಭಿಸಿರುವ ಪ್ರಾಜೆಕ್ಟ್ ವಾಕಲೂರು ಅಭಿಯಾನ 78 ಕಿ.ಮೀ ಪಾದಚಾರಿ ಮಾರ್ಗವನ್ನು ಪೂರ್ಣಗೊಳಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮತ್ತು ಮಗರದ ನಾಗರಿಕರ ಸಂಯುಕ್ತ ಆಶ್ರಯದಲ್ಲಿ ನಡೆಯುವ ಪ್ರಯತ್ನವಾಗಿದ್ದು, ಪ್ರಾಜೆಕ್ಟ್ ವಾಕಲೂರು 10ನೇ ಫುಟ್‌ಪಾತ್ ವಾಕ್(ಪಾದಚಾರಿ ನಡಿಗೆ) ಭಾನುವಾರ ಕೋಡಿಗೆಹಳ್ಳಿಯಲ್ಲಿ ಆಯೋಜಿಸಲಾಗಿತ್ತು. 6 ಕಿ.ಮೀ ಪಾದಚಾರಿ ನಡಿಗೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಚಾಲನೆ ನೀಡಿದರು. ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪಿ.ಸುನಿಲ್ ಕುಮಾರ್ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಗೂ ಸ್ಥಳೀಯ ನಿವಾಸಿಗಳು, ವಿವಿಧ ವಯೋ ಮಾನದ ಪಾದಚಾರಿಗಳು ಸೇರಿ 120ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

6 ಕಿ.ಮೀ ನಡಿಗೆಯಲ್ಲಿ ಒಟ್ಟು 6–8 ಸಣ್ಣ ಅಡೆತಡೆಗಳು ಮಾತ್ರ ಕಂಡುಬಂದಿದ್ದು, ಕಸ,



ಮೂತ್ರ ವಿಸರ್ಜನೆ ಅಥವಾ ಮುರಿದ ಪಾದಚಾರಿ ಮಾರ್ಗಗಳಂತಹ ಪ್ರಮುಖ ಸಮಸ್ಯೆಗಳು ಕಂಡುಬರಲಿಲ್ಲ. ಪಾದಚಾರಿ ಮಾರ್ಗಗಳು ಸ್ವಚ್ಛ, ಹಸಿರಿನಿಂದ ಕೂಡಿದ್ದು ಸುಗಮವಾಗಿ ನಡೆಯಲು ಅನುಕೂಲಕರವಾಗಿವೆ ಎಂದು ಭಾಗವಹಿಸಿದವರು ಅಭಿಪ್ರಾಯಪಟ್ಟರು.

2025 ನವೆಂಬರ್ 1 ರಂದು ಆರಂಭವಾದ ಪ್ರಾಜೆಕ್ಟ್ ವಾಕಲೂರು ಅಭಿಯಾನದಲ್ಲಿ ಇಲ್ಲಿಯವರೆಗೆ ಉತ್ತರ ನಗರ ಪಾಲಿಕೆಯಲ್ಲಿಯೇ 40 ಕಿ.ಮೀ, ಕೇಂದ್ರ ನಗರ ಪಾಲಿಕೆಯಲ್ಲಿ 11 ಕಿ.ಮೀ, ದಕ್ಷಿಣ ನಗರ ಪಾಲಿಕೆಯಲ್ಲಿ 10 ಕಿ.ಮೀ, ನಗರದ ವಿವಿದ ಪ್ರದೇಶದಲ್ಲಿ 17 ಕಿ.ಮೀ ಪಾದಚಾರಿ ನಡಿಗೆ ನಡೆಸಲಾಗಿದೆ.

ನಗರ ಪಾಲಿಕೆ ಅಧಿಕಾರಿಗಳು ನಾಗರಿಕರನ್ನು ತಮ್ಮ ಪಾದಚಾರಿ ಮಾರ್ಗವನ್ನು ಪರಿಶೀಲಿಸಲು ಆಹ್ವಾನಿಸುವುದು ಮೂಲಸೌಕರ್ಯದ ಮೇಲೆ ಅವರ ವಿಶ್ವಾಸ ಹಾಗೂ ನಾಗರಿಕರೊಂದಿಗೆ ಸಹಭಾಗಿತ್ವದಲ್ಲಿ ಕೆಲಸ ಮಾಡುವ ಮನೋಭಾವವನ್ನು ತೋರಿಸುತ್ತದೆ. ಈ ಕಾರ್ಯಕ್ರಮ ನಗರ ಪಾಲಿಕೆ ಮತ್ತು ನಾಗರಿಕರನ್ನು ಇನ್ನಷ್ಟು ಹತ್ತಿರ ತರಲು ಸಹಾಯ ಮಾಡಿದೆ ಎಂದು ಪ್ರಾಜೆಕ್ಟ್ ವಾಕಲೂರು ಸಂಯೋಜಕ ಅರುಣ್ ಪೈ ತಿಳಿಸಿದರು.

ಕಿರುಸುದ್ದಿ

ಕೈಗಾರಿಕೋದ್ಯಮಿಗಳಿಗೆ ಬಿಡಿಎಸ್‌ಪಿ ಜಾಗೃತಿ ಕಾರ್ಯಾಗಾರ

ಮಂಗಳೂರು: ಎಂ.ಎಸ್.ಎಂ.ಇ.ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಮತ್ತು ವೇಗಗೊಳಿಸುವುದು ಯೋಜನೆಯಡಿ ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಗಳೂರು ಹಾಗೂ ಟೆಕ್ಸಾಕ್ ಸಹಯೋಗದಲ್ಲಿ ಕೈಗಾರಿಕೋದ್ಯಮಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಬ್ಯುಸಿನೆಸ್ ಡೆವೆಲಪ್‌ಮೆಂಟ್ ಸರ್ವೀಸ್ ಪ್ರೊವೈಡರ್ಸ್ (ಬಿಡಿಎಸ್‌ಪಿ) ಕಾರ್ಯಾಗಾರವನ್ನು ಫೆ. 25 ರಂದು ಬೆಳಗ್ಗೆ 9.30 ಗಂಟೆಗೆ ನಗರದ ಕೊಡಿಯಾಲ್ ಬೈಲ್‌ನಲ್ಲಿರುವ ಎಸ್‌ಡಿಎಂ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಫಾರ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್‌ನ ಎಸಿ ಕಾನ್ಫರೆನ್ಸ್ ಹಾಲ್‌ನಲ್ಲಿ ಆಯೋಜಿಸಲಾಗಿದೆ. ಜಿಲ್ಲೆಯ ನೋಂದಾಯಿತ ಎಂ.ಎಸ್.ಎಂ.ಇ ಗಳು ಭಾಗವಹಿಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ (ದೂರವಾಣಿ ಸಂಖ್ಯೆ: ರ್ಯಾಂಪ್ ಸಂಯೋಜಕ ತನಯ್–8660613368, ಪ್ರೀತಿ–8867150101) ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿಚಕ್ರ ವಾಹನ ಕಳವು

ಬಂಟ್ವಾಳ: ಇಲ್ಲಿನ ರೈಲ್ವೇ ನಿಲ್ದಾಣದಲ್ಲಿ ಇಟ್ಟಿದ್ದ ದ್ವಿಚಕ್ರ ವಾಹನ ಕಳವಾಗಿರುವ ಕುರಿತು ಬಂಟ್ವಾಳ ನಗರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಈ ಕುರಿತು ಅಬ್ದುಲ್ ಜಬ್ಬಾರ್ ನೀಡಿದ ದೂರಿನಂತೆ ಪ್ರಕರಣ ದಾಖಲಾಗಿದೆ. ಮೂಲತಃ ಉಳ್ಳಾಲ ತಾಲೂಕಿನವರಾದ ಅವರು ಬೆಂಗಳೂರಿನಲ್ಲಿ ವ್ಯಾಪಾರ ಮಾಡಿಕೊಂಡಿದ್ದು, ಫೆ.10ರಂದು ಸುಮಾರು 7.30ಕ್ಕೆ ರಾತ್ರಿ ಬಿ.ಮೂಡ ಗ್ರಾಮದ ರೈಲ್ವೆ ನಿಲ್ದಾಣದ ಪಾರ್ಕಿಂಗ್ ಜಾಗದಲ್ಲಿ ದ್ವಿಚಕ್ರ ವಾಹನವನ್ನು ಪಾರ್ಕ್ ಮಾಡಿ ರೈಲಿನಲ್ಲಿ ಬೆಂಗಳೂರಿಗೆ ಹೋಗಿದ್ದರು. 13ರಂದು ಬೆಳಗ್ಗೆ ರೈಲಿನಲ್ಲಿ ಊರಿಗೆ ಮರಳಿದ ವೇಳೆ ದ್ವಿಚಕ್ರ ವಾಹನ ಕಾಣಸದೇ ಇದ್ದು ಕಳವಾಗಿರುವ ಹಿನ್ನೆಲೆಯಲ್ಲಿ ದೂರು ದಾಖಲಿಸಿದ್ದಾರೆ.

ಇಂದು ದ.ಕ.ಜಿಲ್ಲಾ ರೆಡ್‌ಕ್ರಾಸ್ ಚುನಾವಣೆಯ ಮತ ಎಣಿಕೆ

ಮಂಗಳೂರು: ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ 2026–29ನೇ ಸಾಲಿನ ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ 1,388 ಮಂದಿ ಮತ ಚಲಾಯಿಸಿದ್ದಾರೆ. ಫೆ.23ರಂದು ನಗರದ ಹಳೇ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ರೆಡ್ ಕ್ರಾಸ್ ಶತಮಾನೋತ್ಸವ ಕಟ್ಟಡದಲ್ಲಿ ಮತ ಎಣಿಕೆ ನಡೆಯಲಿದೆ. ಆಡಳಿತ ಮಂಡಳಿಯ 10 ಸದಸ್ಯ ಸ್ಥಾನಕ್ಕೆ ಒಟ್ಟು 19 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ಜೂಜಾಟ: ನಾಲ್ವರ ಸೆರೆ

ಕುಂದಾಪುರ: ದೇವಲ್ಕುಂದ ಗ್ರಾಮದ ಬಗ್ವಾಡಿ ಚಿತ್ರ ನದಿಯ ಬದಿ ಹಾಡಿಯಲ್ಲಿ ಹಣವನ್ನು ಪಣವಾಗಿಟ್ಟು ಗುಡುಗುಡಿ (ಗರಗರ ಮಂಡಲ) ಆಟ ಆಡುತ್ತಿದ್ದ ನೂಜಾಡಿ ಗ್ರಾಮದ ಹರೀಶ್ (41) ಮತ್ತು ರಾಘವೇಂದ್ರ (37), ಬಗ್ವಾಡಿಯ ಗಣೇಶ ಎನ್. (31), ದೇವಲ್ಕುಂದ ಗ್ರಾಮದ ಪ್ರವೀಣ್ ಎಂ. (32) ಎಂಬವರನ್ನು ಬಂಧಿಸಿ, ಆಟಕ್ಕೆ ಬಳಸಿದ ಬಳಸಿದ್ದ 7,630 ರೂಪಾಯಿ ನಗದು ಹಣ ಹಾಗೂ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ನಾಸೀರ್ ಹುಸೇನ್ ಅವರು ಸಿಬ್ಬಂದಿಗಳ ಸಹಾಯದಿಂದ ದಾಳಿ ನಡೆಸಿದ್ದರು. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಟ್ ವಿತರಣೆಗೆ ಟೆಂಡರ್ ಆಹ್ವಾನ

ಕಾಸರಗೋಡು: ಕಾಸರಗೋಡು ಐಸಿಡಿಎಸ್ ವ್ಯಾಪ್ತಿಯ 140 ಅಂಗನವಾಡಿಗಳಿಗೆ ಶಾಲಾ ಪೂರ್ವ ಶಿಕ್ಷಣ ಕಿಟ್‌ಗಳ ವಿತರಣೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮಾರ್ಚ್ 5 ರಂದು ಮಧ್ಯಾಹ್ನ 12 ಗಂಟೆ ಆಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮಾರ್ಚ್ 3 ರಂದು ಮಧ್ಯಾಹ್ನ 2 ಗಂಟೆ ಆಗಿದೆ. ಅದೇ ದಿನ ಅಪರಾಹ್ನ 3 ಗಂಟೆಗೆ ಟೆಂಡರ್ ತೆರೆಯಲಾಗುತ್ತದೆ. ಹೆಚ್ಚಿನ ಮಾಹಿತಿಗೆ 9495942798 ಕರೆ ಮಾಡಬಹುದು.

ಸಹಾಯಧನ ಹಸ್ತಾಂತರ

ಮಂಜೇಶ್ವರ: ತಾಲೂಕಿನ ಕೋಳ್ಯೂರು ಸ್ಪಂದನ ಟ್ರಸ್ಟ್‌ನ 114ನೇ ಮಾಸಿಕ ಸೇವಾ ಯೋಜನೆಯಡಿ ಸಹಾಯಧನವನ್ನು ಶ್ರೀನಾಥ್ ಚಿಕ್ಕಕೋಡಿ ಕೋಳ್ಯೂರು ಅವರ ಚಿಕಿತ್ಸೆಗಾಗಿ ಚೆಕ್ ಮುಖಾಂತರ ಹಸ್ತಾಂತರಿಸಲಾಯಿತು. ಈ ಸಂದರ್ಭ ಜಯಪ್ರಕಾಶ್ ಬಲಿಪಗುಳಿ, ಸುಧೀರ್ ರಂಜನ್ ದೈಗೋಳಿ, ಬಾಲಕೃಷ್ಣ ಕೋಳ್ಯೂರುಪದವು, ಅಮಿತಾ ಬಾಲಕೃಷ್ಣ ಕೋಳ್ಯೂರುಪದವು, ವಿಭವ್ ಕೋಳ್ಯೂರುಪದವು, ಲೋಕೇಶ ಬಿ. ಕೋಳ್ಯೂರು ಉಪಸ್ಥಿತರಿದ್ದರು.

ಪುತ್ತೂರಿನ ಹೃದಯ ಭಾಗದಲ್ಲಿ ಒಂದೂವರೆ ಶತಮಾನ ಸವೆಸಿರುವ ನಾನು ಇಲ್ಲಿನ ಎಲ್ಲಾ ಆಗುಹೋಗುಗಳಿಗೆ ಸಾಕ್ಷಿಯಾದವನು. ಮೇರು ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಕೆ. ಶಿವರಾಮ ಕಾರಂತರು ತಮ್ಮ ಸಾಹಿತ್ಯ, ಸಾಂಸ್ಕೃತಿಕ ಕೆಲಸಗಳಿಗೆ ನನ್ನ ನೆಲವನ್ನೇ ಇಷ್ಟಪಟ್ಟವರು ಎನ್ನುವುದು ನನಗೆ ಹೆಮ್ಮೆ. ನನ್ನ ಹೆಸರಿನಲ್ಲಿ ಕೋಟ್ಯಾಂತರ ಮೌಲ್ಯದ ಆಸ್ತಿ ಇದೆ. ಆದರೆ ಮೂಲ ಉದ್ದೇಶಕ್ಕೆ ಬಳಕೆಯಾಗುತ್ತಿಲ್ಲ. ನಾನು ನಿರ್ಲಕ್ಷ್ಯಕ್ಕೆ ಒಳಗಾಗಿ ಅನಾಥನಾಗಿದ್ದೇನೆ ಎಂಬ ಭಾವನೆ ಆವರಿಸಿದೆ...!





ಡಾ. ಶಿವರಾಮ ಕಾರಂತರು ನೆಲ್ಲಿಕಟ್ಟೆ ಶಾಲೆಯನ್ನು ಇಷ್ಟ ಪಟ್ಟಿದ್ದರು | ಉತ್ತರವಿಲ್ಲದ ಪ್ರಶ್ನೆಗಳು

ಪುತ್ತೂರಿನ ಸರಕಾರಿ ಶಾಲೆಯ ವ್ಯಥೆಯ ಕತೆ

ರಾಜೇಶ್ ಪಟ್ಟೆ

ಪುತ್ತೂರು: ನಾನು ಪುತ್ತೂರು ನೆಲ್ಲಿಕಟ್ಟೆ ದ.ಕ.ಜಿ.ಪಂ.ಮಾದರಿ ಹಿರಿಯ ಪ್ರಾಥಮಿಕ ಶಾಲೆ ಎಂಬ ನಾಮಧಾರಿ. ಪುತ್ತೂರಿನ ಪ್ರಧಾನ ಬಸ್ ನಿಲ್ದಾಣದಿಂದ 10 ಮೀ. ದೂರದಲ್ಲಿ ಸುಮಾರು 3.29 ಎಕರೆ ಜಾಗದ ವಾರೀಸುದಾರ. ನನ್ನಲ್ಲಿ ಜ್ಞಾನದ ಬಟ್ಟಲು ತುಂಬಿಕೊಂಡ ಅನೇಕರು ಸಾಧಕರು ಆಗಿ ಹೋಗಿದ್ದಾರೆ. ಉಳಿದೆಲ್ಲರೂ ಬಿಡಿ, ನನ್ನ ಪೋಷಕರಾದ 'ಶಿಕ್ಷಣ ಇಲಾಖೆ', ಸರಕಾರಿ, ಪ್ರಾಯೋಜಿತ ಆಡಳಿತ ವ್ಯವಸ್ಥೆಗೂ ನನ್ನ ಮೇಲೆ ಈಗ ಆಸಕ್ತಿ ಇಲ್ಲ...

ಮೂಲ ಕಟ್ಟಡದ ವ್ಯಥೆ

ಹಾಲಿ ಉಪ ವಿಭಾಗ ಕೇಂದ್ರವಾದ ಪುತ್ತೂರು ಮತ್ತು ಅಕ್ಕಪಕ್ಕದ ತಾಲೂಕುಗಳಲ್ಲಿ ಶಾಲೆಗಳು ಇಲ್ಲದ ಸಂದರ್ಭದಲ್ಲಿ 1965 ರಲ್ಲಿ ಬ್ರಿಟೀಷ್ ಸರಕಾರ ಪುತ್ತೂರಿನ ಕೇಂದ್ರ ಭಾಗದಲ್ಲಿ ಸರಕಾರಿ ಶಾಲೆ ಆರಂಭಿಸಿತ್ತು. ಈ ಕಟ್ಟಡದ ನಿರ್ಮಾಣವೂ ವಿಶೇಷವಾಗಿತ್ತು. ವೇದಿಕೆ ಮಾದರಿಯ ಎತ್ತರದ ಪಂಚಾಂಗ, ಪಡಸಾಲೆಯಲ್ಲಿ ಬೃಹತ್ ಕಂಬಗಳು, ದಪ್ಪನೆಯ ಮರದ ಪಕ್ಕಾಸುಗಳ ಬಳಕೆಯಾಗಿತ್ತು. ಕಟ್ಟಡದಲ್ಲಿ ಗ್ರೀಕ್ ಮಾದರಿಯ ರಂಗಮಂಟಪವಿತ್ತು. ಇಳಿಯಲು 2 ಭಾಗದಿಂದ ಮೆಟ್ಟಿಲುಗಳಿದ್ದವು. ನಾಟಕ ಮತ್ತಿತರ ರಂಗ ಪ್ರದರ್ಶನಕ್ಕೆ ಪೂರಕವಾಗಿದ್ದ ವ್ಯವಸ್ಥೆಯಲ್ಲಿ ಎತ್ತರದ ಗ್ಯಾಲರಿಯಲ್ಲಿ ಕುಳಿತು ನೋಡಬಹುದಾಗಿತ್ತು.

ಡಾ. ಕಾರಂತರೂ ಇಷ್ಟಪಟ್ಟಿದ್ದರು

1930ರ ದಶಕದಲ್ಲಿ ಪುತ್ತೂರಿಗೆ ಬಂದ ಡಾ. ಕೆ. ಶಿವರಾಮ ಕಾರಂತರು ಈ ಶಾಲೆಯಲ್ಲಿ ಅನೇಕ ರಂಗ ಚಟುವಟಿಕೆ, ನಾಟಕ ತರಬೇತಿಯನ್ನು ನಡೆಸುತ್ತಿದ್ದರು. ಪುತ್ತೂರಿನ ಮೊದಲ ನಾಡಹಬ್ಬ ದಸರಾವನ್ನೂ ಇದೇ ಶಾಲೆಯ ವಠಾರದಲ್ಲಿ ಆರಂಭಿಸಿದ್ದರು. ಪುತ್ತೂರಿನ ಮೊದಲ ಗಣೇಶೋತ್ಸವವೂ ಇಲ್ಲೇ ಆರಂಭಗೊಂಡಿತ್ತು. ಕೆಲವು ದಶಕಗಳಿಂದ ಈ ಕಟ್ಟಡದಲ್ಲಿ ತರಗತಿಗಳು ನಡೆಯುವುದು ನಿಂತಿತ್ತು. ಪಕ್ಕದ ಕಟ್ಟಡಗಳಿಗೆ ಸ್ಥಳಾಂತರಗೊಂಡಿತ್ತು. ಅನಂತರ ಪಾಳುಬಿದ್ದು ಅಪಾಯಕಾರಿ ಎಂಬ ಕಾರಣಕ್ಕೆ ನೆಲಸಮ ಮಾಡುವುದಕ್ಕೂ ಹೇತುವಾಯಿತು. ನಿರ್ವಹಣೆಯಿಲ್ಲದೆ ಬೀಳಲು ಸಿದ್ಧವಾಗಿದ್ದ ಕಟ್ಟಡವನ್ನು ಪಾರಂಪರಿಕ ಕಟ್ಟಡವೆಂದು ಘೋಷಿಸಿ ಅಭಿವೃದ್ಧಿಪಡಿಸಿ ಸಂರಕ್ಷಿಸಲು ಪ್ರಸ್ತಾವನೆಯನ್ನೂ ಸಲ್ಲಿಸಲಾಗಿತ್ತು. ಅದು ಅಂಗೀಕಾರವಾಗುವ ಮೊದಲೇ ಏಕಾಏಕಿ ನೆಲಸಮವಾಗಿತ್ತು.

ಉತ್ತರವಿಲ್ಲದ ಪ್ರಶ್ನೆ

ಸಂಜೀವಮಠಂದೂರು ಅವರು ಶಾಸಕರಾಗಿದ್ದ ಅವಧಿಯಲ್ಲಿ ಈ ಸ್ಥಳದಲ್ಲಿ ಬಿಇಓ ಕಚೇರಿ ನಿರ್ಮಾಣದ ಉದ್ದೇಶ ಹೊಂದಲಾಗಿತ್ತು. ಒಂದು ಬದಿಯಲ್ಲಿ ಗುದ್ದಲಿ ಪೂಜೆಯು ನಡೆದಿತ್ತು. ಆದಾದ ಕೆಲ ದಿನಗಳಲ್ಲೇ ಹಳೆ ಕಟ್ಟಡವನ್ನು ನೆಲಸಮ ಮಾಡಲಾಯಿತು. ಆ ಬಳಿಕ ಶಾಸಕರಾಗಿ ಆಯ್ಕೆಯಾದ ಅಶೋಕ್ ಕುಮಾರ್ ರೈ ಅವರು ನೆಲ್ಲಿಕಟ್ಟೆಯಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಬಿಇಓ ಕಚೇರಿಯನ್ನು ಈ ಹಿಂದೆ ಇದ್ದ ಸ್ಥಳದಲ್ಲಿ ನಿರ್ಮಿಸಲು ಶಿಲಾನ್ಯಾಸ ನೆರವೇರಿಸಿದ್ದರು. ಅಲ್ಲಿ ಕಟ್ಟಡ ನಿರ್ಮಾಣಗೊಂಡು ಉದ್ಘಾಟನೆಯೂ ಆಗಿದೆ. ಆದರೆ, ನೆಲ್ಲಿಕಟ್ಟೆಯಲ್ಲಿ ಕೆಡವಿದ ಕಟ್ಟಡದ ಕಥೆ ಮುಂದೇನು ಎನ್ನುವ ಬಗ್ಗೆ ಯಾರಲ್ಲೂ ಉತ್ತರ ಇಲ್ಲ, ಕೆಡವಿದ್ದು ಏಕೆ ಎಂದರೂ ಸ್ಪಷ್ಟ ಉತ್ತರ ಸಿಕ್ಕಿಲ್ಲ, ಈಗ ಮಧ್ಯ ಭಾಗದಲ್ಲಿ ಮಣ್ಣು ತುಂಬಿ ಪೊದೆಗಳು ಬೆಳೆದರೂ ಯಾಕೆ ಹಾಗೆಯೇ ಬಿಡಲಾಗಿದೆ ಎಂಬುದಕ್ಕೂ ಉತ್ತರವಿಲ್ಲ..!

ಕಾಲೇಜುಗಳಿಗೂ ಆಶ್ರಯ

ದಶಕದ ಹಿಂದೆ ಪುತ್ತೂರಿಗೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರಾದಾಗ ಕೆಲ ಸಮಯ ಇದೇ ಪ್ರಾಚೀನ ಕಟ್ಟಡದಲ್ಲಿ ಕಾಲೇಜು ತರಗತಿಗಳು ನಡೆದಿದ್ದವು. ಬಳಿಕ ಅದು ಜಿಡೆಕಲ್ಲಿನ ಸ್ವಂತ ಕಟ್ಟಡಕ್ಕೆ ಸ್ಥಳಾಂತರವಾಯಿತು. 2014 ರಲ್ಲಿ ಪುತ್ತೂರಿಗೆ ಮಹಿಳಾ ಸರಕಾರಿ ಕಾಲೇಜು ಮಂಜೂರಾದಾಗ ಅದರ ತರಗತಿಗಳೂ ನಡೆದವು. ಬಳಿಕ ಚಟುವಟಿಕೆ ರಹಿತವಾಗಿ ಉಳಿಯಿತು.



ಈಗ ಹೀಗಿದೆ..

ಮಧ್ಯದಲ್ಲಿ ಅವಸಾನ ಕಂಡ ಪಾರಂಪರಿಕ ಕಟ್ಟಡದ ಮಣ್ಣು ಸಹಿತ ಅವಶೇಷ ರಾಶಿ, ಎರಡು ಸುತ್ತಲಿನಲ್ಲಿ ಒಂದಕ್ಕೊಂದು ಜೋಡಣೆಯಿಲ್ಲದ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಬಿರುಕು ಬಿದ್ದ ಕೊಠಡಿಗಳು, 1-7 ತರಗತಿ ತನಕದ 60 ಮಕ್ಕಳಿಗೆ ಒಂದೆರಡು ಇಕ್ಕಟ್ಟಿನ ಕೊಠಡಿಗಳು, ಸ್ಥಳಾಂತರಕ್ಕೆ ಸಿದ್ಧವಾಗಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಕಚೇರಿ, ಪ್ರವೇಶದಲ್ಲಿ ಸರಿಪಡಿಸದೆ ಪಾಳು ಬಿಡಲಾಗಿರುವ 4 ತರಗತಿ ಕೊಠಡಿಗಳು, ಎಲ್ಲೆಂದರಲ್ಲಿ ನಿರ್ಮಾಣಗೊಂಡಿರುವ ಹಲವು ಶೌಚಾಲಯಗಳು.
ಕೆಲವು ವರ್ಷಗಳಿಂದ ಪಕ್ಕದ ಆಶ್ರಮದ ಮಕ್ಕಳು, ಸ್ಥಳೀಯ ಕಾಲನಿಯ ಮಕ್ಕಳೇ ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಹಾಲಿ 1-7 ತರಗತಿ ತನಕ 60 ಮಕ್ಕಳು ಜ್ಞಾನಾರ್ಜನೆ ಮಾಡುತ್ತಿದ್ದಾರೆ. ಆದರೆ ಅವರ ಶಿಕ್ಷಣಕ್ಕೆ ಇಲ್ಲಿನ ವ್ಯವಸ್ಥೆ ಪೂರಕವಾಗಿಲ್ಲ. ಮಧ್ಯದಲ್ಲಿ ಮಣ್ಣು ರಾಶಿಯಲ್ಲಿ ಪೊದೆ ಬೆಳೆದಿದೆ. ವಾಹನಗಳು ಓಡಾಡುತ್ತವೆ. ಕೊಠಡಿಗಳು ಸರಿಯಿಲ್ಲ. ಸಂಜೆಯಾಗುತ್ತಲೇ ಪುಂಡು ಪೋಕರಿಗಳಿಗೆ ಆಶ್ರಯ ತಾಣ...ಹೀಗೆ ಒಟ್ಟಿನಲ್ಲಿ ಎಲ್ಲವೂ ಸರಿಯಿಲ್ಲ..!

ರಾಜಕೀಯದಾಟ..!

ಇಲ್ಲಿ ಬಹಳಷ್ಟು ರಾಜಕೀಯವಿದೆ. ಹೀಗೆಯೇ ನಿರ್ಲಕ್ಷಿಸಿ ಶಾಲೆಯನ್ನು ಬಂದ್ ಮಾಡಿಸಿ ಬೇರೆ ಉದ್ದೇಶಗಳಿಗೆ ಬಳಸುವ ಹುನ್ನಾರವಿದೆ. ರೋಟರಿ ಸೇರಿದಂತೆ ಸಂಘ ಸಂಸ್ಥೆಗಳು ಮುಂದೆ ಬಂದು ಅಭಿವೃದ್ಧಿ ಮಾಡುತ್ತೇವೆ ಎಂದರೂ ನಿರಾಕರಿಸಲಾಗುತ್ತಿದೆ. ಒಟ್ಟಿನಲ್ಲಿ ಐತಿಹಾಸಿಕ ಹಿನ್ನೆಲೆಯ ಶಾಲೆ, ಆದರ ಆಸ್ತಿ ರಕ್ಷಣೆ ಸಾಧ್ಯವಾಗುತ್ತಿಲ್ಲ ಎನ್ನುವುದು ಶಿಕ್ಷಣಾಭಿಮಾನಿಗಳ ಬೇಸರ. ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿರುವ ಉಲ್ಲಾಸ್ ಪೈ, ಹರಿಪ್ರಸಾದ್ ನೆಲ್ಲಿಕಟ್ಟೆ ಮೊದಲಾದವರು ತಾವು ಪ್ರಯತ್ನಿಸಿ ಕೈ ಚೆಲ್ಲಿರುವ ಯಶೋಗಾಥೆಗಳನ್ನು ಹೇಳುತ್ತಾರೆ.

ಪ್ರೌಢ ಶಾಲೆ ಇಲ್ಲಿಗೆ ಬರಲಿ

ಪಕ್ಕದಲ್ಲೇ 50 ಮೀ. ದೂರದಲ್ಲಿ ವಾಣಿಜ್ಯ ಕಟ್ಟಡಗಳ ಎಡೆಯಲ್ಲಿ ಡಾ. ಶಿವರಾಮ ಕಾರಂತ ಪ್ರೌಢ ಶಾಲೆ ಕಾರ್ಯನಿರ್ವಹಿಸುತ್ತಿದೆ. ಅದನ್ನು ಈ ಜಾಗಕ್ಕೆ ಕಟ್ಟಡ ನಿರ್ಮಿಸಿ ಸ್ಥಳಾಂತರಿಸಿ ಅಭಿವೃದ್ಧಿಪಡಿಸಿದರೆ ಒಂದಷ್ಟು ಅರ್ಥವಿದೆ ಎನ್ನುವ ಆಗ್ರಹ ವಿದ್ಯಾಭಿಮಾನಿಗಳದ್ದು.

ಯಾವುದೇ ಪ್ರಸ್ತಾವನೆ ಇಲ್ಲ!

ಕೆಡಹಿದ ಕಟ್ಟಡ ಸ್ಥಳದಲ್ಲಿ ಬೇರೆ ಯಾವುದೇ ಯೋಜನೆಗಳ ಅನುಷ್ಠಾನದ ಪ್ರಸ್ತಾವನೆ ಇಲ್ಲ.
■ ವಿಷ್ಣುಪ್ರಸಾದ್, ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಪುತ್ತೂರು

ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ನೀಡಿದ ಚಿಕಿತ್ಸಾ ನೆರವು ಹಸ್ತಾಂತರ

ಬದಿಯಡ್ಕ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಾಸರಗೋಡು ತಾಲೂಕಿನ ಬದಿಯಡ್ಕ ವಲಯದ ಕಾರ್ಯಕ್ಷೇತ್ರದಲ್ಲಿರುವ ವಿಘ್ನೇಶ್ವರ ತಂಡದ ಸದಸ್ಯ ಗಿರೀಶ್ ಅವರು ಪಾರ್ಶ್ವವಾಯು ಕಾಯಿಲೆಯಿಂದ ಬಳಲುತ್ತಿದ್ದು, ಅವರಿಗೆ ಚಿಕಿತ್ಸಾ ವೆಚ್ಚ ಭರಿಸಲು ಕಷ್ಟಸಾಧ್ಯವಾದ್ದರಿಂದ ಶ್ರೀ ಕ್ಷೇತ್ರದ ಕ್ರಿಟಿಕಲ್ ಇಲ್‌ನೆಸ್ ಫಂಡ್‌ಗೆ ಮನವಿ ನೀಡಲಾಗಿತ್ತು. ಅದರಂತೆ ಶ್ರೀ ಕ್ಷೇತ್ರದಿಂದ 20 ಸಾವಿರ ರೂಪಾಯಿ ಮೊತ್ತವನ್ನು ಮಂಜೂರು ಮಾಡಲಾಗಿದ್ದು, ಆದರ ಮಂಜೂರಾತಿ ಪತ್ರವನ್ನು ತಾಲೂಕಿನ ಯೋಜನಾಧಿಕಾರಿ ದಿನೇಶ್ ಅವರು ಗಿರೀಶ್ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಬದಿಯಡ್ಕ ಜನಜಾಗೃತಿ ಸದಸ್ಯ ಸುಧಾಕರ, ವಲಯದ ಮೇಲ್ವಿಚಾರಕಿ ಸುಗುಣ ಎನ್. ಹವಲ್ದಾರ್, ತಾಲೂಕು ಜ್ಞಾನವಿಕಾಸ ಸಮನ್ವಯಾಧಿಕಾರಿ ಸೌಮ್ಯಾ, ಸೇವಾ ಪ್ರತಿನಿಧಿ ಪ್ರಫುಲ್ಲ ಮುಂತಾದವರು ಪಾಲ್ಗೊಂಡಿದ್ದರು.



ಬೋವಿಕ್ಕಾನ ಆಡಿಟೋರಿಯಂ ಮೆನೇಜರ್‌ನ ಮೃತದೇಹ ಆವರಣವಿಲ್ಲದ ಬಾವಿಯಲ್ಲಿ ಪತ್ತೆ

ಮುಳ್ಳೇರಿಯ: ಆವರಣವಿಲ್ಲದ ಬಾವಿಗೆ ಬಿದ್ದ ರೀತಿಯಲ್ಲಿ ವ್ಯಕ್ತಿಯೋರ್ವರ ಮೃತದೇಹ ಪತ್ತೆಯಾಗಿದೆ. ಮುಳಿಯಾರು ಮುಂಡಕ್ಕೈ ಕೆ.ಕೆ.ವಳಪ್ ನಿವಾಸಿ ಎನ್.ಚಂದ್ರನ್ (50) ಎಂಬವರ ಮೃತದೇಹ ಎಂದು ಗುರುತಿಸಲಾಯಿತು. ಬೋವಿಕ್ಕಾನದ ಕೈಲಾಸಂ ಆಡಿಟೋರಿಯಂನಲ್ಲಿ ಮೆನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಚಂದ್ರನ್ ಶನಿವಾರ ರಾತ್ರಿ ಮನೆಗೆ ಬರುತ್ತಿದ್ದ ವೇಳೆ ತನ್ನ ಸಂಬಂಧಿಕರ ಅಡಿಕೆ ತೋಟದಲ್ಲಿ ಆವರಣವಿಲ್ಲದ ಬಾವಿಗೆ ಜಾರಿ ಬಿದ್ದಿರಬಹುದು ಎಂದು ಸಂಬಂಧಿಕರು ತಿಳಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದಿ.ನಾರಾಯಣ ಮತ್ತು ಕಾತ್ಯಾಯಿನಿ ದಂಪತಿಯ ಪುತ್ರನಾದ ಮೃತರು ಪತ್ನಿ ರೇಷ್ಮಾ, ಮಕ್ಕಳಾದ ಶಿವನ್ಯ, ಶಿವಧ್ಯಾನ್ ಅವರನ್ನು ಅಗಲಿದ್ದಾರೆ.

ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಶ್ರೀ ಮದ್ಭಾಗವತ ಸಪ್ತಾಹ: ಸಮಿತಿ ರಚನಾ ಸಭೆ

ಮುಳ್ಳೇರಿಯ: ಸಂಘಟಿತರಾಗಿ ತೊಡಗಿಸಿಕೊಂಡಾಗ ಎಲ್ಲಾ ಕಾರ್ಯಗಳು ಯಶಸ್ವಿಯಾಗುತ್ತವೆ. ಕಲಿಯುಗದಲ್ಲಿ ಭಜನೆಯೇ ತಪಸ್ಸು ಆಗಿದೆ. ಅದೇ ರೀತಿಯಲ್ಲಿ ಮನುಷ್ಯ ಜೀವನದಲ್ಲಿ ಸರಿಯಾದ ವಿಧಾನದಲ್ಲಿ ನಡೆದುಕೊಂಡು ಹೋಗುವುದಕ್ಕೆ ಸೂಕ್ತ ಮಾರ್ಗವೂ ಭಾಗವತವಾಗಿದೆ. ಮನುಷ್ಯನು ಆತ್ಮದಿಂದ ಪರಮಾತ್ಮನ ಕಡೆಗೆ ಸಾಗಲು ಜೀವನದಲ್ಲಿ ಅಳವಡಿಸಿಕೊಳ್ಳುವುದು ಹೇಗೆ ಎಂಬುದು ಭಾಗವತ ಹೇಳಿಕೊಡುತ್ತದೆ ಎಂದು ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಹೇಳಿದ್ದಾರೆ.

ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಏಪ್ರಿಲ್ 10ರಿಂದ 16ರ ತನಕ ನಡೆಯಲಿರುವ ಶ್ರೀ ಮದ್ಭಾಗವತ ಸಪ್ತಾಹ ಅಂಗವಾಗಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಸಮಿತಿ ರಚನಾ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಅವರು ಮಾತನಾಡಿದರು.

ಸಭೆಯನ್ನು ಶ್ರೀ ಮಂದಿರದ ಅರ್ಚಕ, ಅಧ್ಯಾಪಕ ರವಿರಾಜ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಮಂದಿರದ ಸೇವಾ ಸಮಿತಿ ಅಧ್ಯಕ್ಷ ಕೆ.ವಿ.ರಮೇಶ್ ಶರ್ಮಾ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮದ ಬಗ್ಗೆ ಸೂಕ್ತ ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ಧಾರ್ಮಿಕ ಮುಂದಾಳು, ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಎಂ.ಸಂಜೀವ ಶೆಟ್ಟಿ ಮೊಟ್ಟೆಕುಂಜೆ, ನಾರಂಪಾಡಿ ಶ್ರೀ ಉಮಾಮಹೇಶ್ವರ ಕ್ಷೇತ್ರ ಸೇವಾ ಸಮಿತಿ ಪ್ರಧಾನ ಕಾರ್ಯದರ್ಶಿ, ಅಧ್ಯಾಪಕ ಹರಿನಾರಾಯಣ ಶಿರಂತಡ್ಕ, ಕುಂಬ್ಡಾಜೆ ಗ್ರಾಪಂ ಉಪಾಧ್ಯಕ್ಷ ರವೀಂದ್ರ ರೈ ಗೋಸಾಡ, ರಾಮಚಂದ್ರ ಮಾರ್ಪನಡ್ಕ, ಕೃಷ್ಣಮೂರ್ತಿ ಎಡಪ್ಪಾಡಿ, ಅಚ್ಚುತ ಮಾಸ್ತರ್ ಅಗಲ್ಪಾಡಿ, ರವೀಂದ್ರನಾಥ್ ಭಂಡಾರಿ ನಾರಂಪಾಡಿ, ವಾಣಿ ಪ್ರಸಾದ ಅಮ್ಮಣ್ಣಾಯ, ಗುರುಸ್ವಾಮಿ ನಾರಾಯಣ ಮುಖಾರಿ ಮುಂತಾದವರು ಮಾತನಾಡಿದರು.

ಅಲ್ಲದೆ ವಿವಿಧ ವಲಯದ ಗಣ್ಯರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಉಪಸಮಿತಿಗಳನ್ನು ರಚಿಸಲಾಯಿತು. ಬಾಲಕೃಷ್ಣ ಕುರುಮುಜ್ಜಿ ಪ್ರಾರ್ಥನೆ ಹಾಡಿದರು. ಶ್ರೀ ಧರ್ಮಶಾಸ್ತ ಭಜನಾ ಮಂದಿರ ಅಧ್ಯಕ್ಷ ರಾಧಾಕೃಷ್ಣ ನಾಯರ್ ಸ್ವಾಗತಿಸಿ, ಮಹಾಲಿಂಗ ಮಾಸ್ಟರ್ ವಂದಿಸಿದರು. ನಾರಾಯಣ ಕೆ.ಎಂ. ಕಾರ್ಯಕ್ರಮ ನಿರೂಪಿಸಿದರು.



ಮಾ. 4 ರಿಂದ 8 ರವರೆಗೆ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಬ್ರಹ್ಮಕಲಶೋತ್ಸವ | ಮಾ. 4ರಂದು ಕಾಲ್ನಡಿಗೆಯಲ್ಲಿ ಹೊರೆಕಾಣಿಕೆ ಮೆರವಣಿಗೆ

ವಿಶ್ವಕ್ಕೇ ಮಾದರಿ ಕಾರ್ಯಕ್ರಮವಾಗುವಂತೆ ಎಲ್ಲರೂ ಶ್ರಮಿಸೋಣ

ಮುಲ್ಕಿ: ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಮಾರ್ಚ್ 4 ರಿಂದ 8 ರವರೆಗೆ ನಡೆಯಲಿದ್ದು ಬ್ರಹ್ಮಕಲಶೋತ್ಸವವನ್ನು ಯಶಸ್ವಿಯಾಗಿ ನೆರವೇರಿಸುವ ಉದ್ದೇಶದಿಂದ, ಸೇವೆಯಲ್ಲಿ ತೊಡಗಿರುವ ಎಲ್ಲಾ ಉಪಸಮಿತಿ ಪದಾಧಿಕಾರಿಗಳ ಮತ್ತು ಸದಸ್ಯರುಗಳ ಕೊನೆಯ ಮಹತ್ವದ ಸಭೆಯು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್‌ರವರ ನೇತೃತ್ವದಲ್ಲಿ ಸಸಿಹಿತ್ಲು ಭಗವತಿ ದೇವಸ್ಥಾನದ ದಿವ್ಯಾಮೃತ ಭೋಜನ ಮಂದಿರದಲ್ಲಿ ಭಾನುವಾರ ನಡೆಯಿತು.

ಕ್ಷೇತ್ರದ ಆಡಳಿತ ಮೊಕ್ತೇಸರ ಚಂದ್ರಶೇಖರ ಬೆಲ್ಚಡ ಮಾತನಾಡಿ, ಮಾ.4 ರಿಂದ 8ರವರೆಗೆ ನಡೆಯಲಿರುವ ಸಸಿಹಿತ್ಲು ಶ್ರೀ ಭಗವತಿ ದೇವಿಯ ಬ್ರಹ್ಮಕಲಶೋತ್ಸವ ಯಶಸ್ವಿಯಾಗಲು ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ವಿವಿಧ ಸಂಘ–ಸಂಸ್ಥೆಗಳು ಹೆಗಲಿಗೆ ಹೆಗಲು ಕೊಟ್ಟು ಸ್ವಯಂಸೇವಕರ ಜೊತೆ ಅಹರ್ನಿಶಿ ದುಡಿಯುತ್ತಿದ್ದು ಬ್ರಹ್ಮಕಲಶೋತ್ಸವ ವಿಶ್ವಕ್ಕೆ ಮಾದರಿಯಾಗಲಿ, ಎಂದು ಹೇಳಿದರು.

ಅವರು ಮಾತನಾಡಿ ಕ್ಷೇತ್ರದಲ್ಲಿ ಈಗಾಗಲೇ ಸುಮಾರು 20 ಲಕ್ಷ ವೆಚ್ಚದಲ್ಲಿ ವಿಧಾನಪರಿಷತ್ ಸದಸ್ಯರುಗಳ ಅನುದಾನದಿಂದ ದೇವಸ್ಥಾನದ ಎದುರು ಭಾಗದ ರಸ್ತೆ ಸುಸಜ್ಜಿತವಾಗಿ ಕಾಂಕ್ರೀಟೀಕರಣ ನಡೆಯುತ್ತಿದೆ, ಹಳೆಯಂಗಡಿ ಪಂಚಾಯತ್ ವತಿಯಿಂದ 4.5 ಲಕ್ಷ ವೆಚ್ಚದಲ್ಲಿ ದೇವಸ್ಥಾನದ ಎದುರು ಭಾಗ ಚರಂಡಿ ಕಾಮಗಾರಿ ಹಾಗೂ ಹೈ ಮಾಸ್ಟ್ ದೀಪ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ,

ಶಾಸಕ ಉಮಾನಾಥ ಕೋಟ್ಯಾನ್ ಸುಮಾರು 10 ಲಕ್ಷ ವೆಚ್ಚದ ಅನುದಾನದಲ್ಲಿ ಹಳೆಯಂಗಡಿ–ಸಸಿಹಿತ್ಲು ರಸ್ತೆ ಫೇವರ್ ಫಿನಿಷ್ ಕಾಮಗಾರಿ ನಡೆಯಲಿದೆ ಎಂದರು.

ಮಾ. 4ರಂದು ಕ್ಷೇತ್ರದ ಬ್ರಹ್ಮಕಲಶೋತ್ಸವದ ಅಂಗವಾಗಿ ಭವ್ಯ ಹೊರೆ ಕಾಣಿಕೆ ಮುಕ್ಕದಿಂದ ಕ್ಷೇತ್ರದ ವರೆಗೆ ಕಾಲ್ನಡಿಗೆ ಮೂಲಕ ನಡೆಯಲಿದೆ. ಕ್ಷೇತ್ರಕ್ಕೆ ಲಕ್ಷಾಂತರ ಮಂದಿ ಬ್ರಹ್ಮಕಲಶೋತ್ಸವದ ಸಂದರ್ಭ ಭೇಟಿ ನೀಡುವ ನಿರೀಕ್ಷೆಯಿದ್ದು ಯಶಸ್ವಿಗೊಳಿಸಿ ಎಂದರು

ಸ್ವಯಂ ಸೇವಕ ಸಮಿತಿಯ ವಿನೋದ್ ಸಾಲ್ಯಾನ್ ಬೆಳ್ಳಾಯರು ಮಾತನಾಡಿ ಬ್ರಹ್ಮಕಲಶೋತ್ಸವ ಸಂದರ್ಭ ಕ್ಷೇತ್ರಕ್ಕೆ ಬಸ್ಸಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಹೇಳಿದಾಗ ನಳಿನ್ ಕುಮಾರ್ ಕಟೀಲು ಉತ್ತರಿಸಿ ಈ ಬಗ್ಗೆ ಬಸ್ ಮಾಲಕರ ಜೊತೆ ಮಾತನಾಡಿ ಕ್ಷೇತ್ರಕ್ಕೆ ಉಚಿತ ಬಸ್ ವ್ಯವಸ್ಥೆ ಮಾಡಲಾಗುವುದು ಹಾಗೂ ಕ್ಷೇತ್ರದ ಪಾರ್ಕಿಂಗ್ ವ್ಯವಸ್ಥೆ ಬಳಿಯಿಂದ ವಯೋವೃದ್ಧರಿಗೆ ಕ್ಷೇತ್ರಕ್ಕೆ ಬರಲು ಉಚಿತ ಇಲೆಕ್ಟ್ರಿಕ್ ಆಟೋ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.



ಕ್ಷೇತ್ರದ ಆಡಳಿತ ಸಮಿತಿಯ ಅಧ್ಯಕ್ಷ ವಾಮನ್ ಇಡ್ಯಾ ಮಾತನಾಡಿ, ಬ್ರಹ್ಮಕಲಶೋತ್ಸವದ ಸಂದರ್ಭ ಕ್ಷೇತ್ರಕ್ಕೆ ಲಕ್ಷಾಂತರ ಮಂದಿ ಆಗಮಿಸುವ ನಿರೀಕ್ಷೆಯಿದ್ದು ಆತಿಥಿಸತ್ಕಾರ ಮನೋಭಾವ ಬೆಳೆಸಿಕೊಂಡರೆ ಕ್ಷೇತ್ರದ ಬ್ರಹ್ಮ ಕಲಶ ಯಶಸ್ವಿಯಾಗಲಿದೆ ಎಂದರು

ಬಳಿಕ 36 ವಿವಿಧ ಸಮಿತಿಗಳಾದ ಭಜನಾ ಸಮಿತಿ, ಸ್ವಾಗತ ಸಮಿತಿ ಆತಿಥಿ ಸತ್ಕಾರ ಸಮಿತಿ ಸ್ವಯಂಸೇವಕ ಸಮಿತಿ, ಅನ್ನ ಸಂತರ್ಪಣೆ ಸಮಿತಿ, ಹಣಕಾಸು ನಿರ್ವಹಣಾ ಸಮಿತಿ, ಮಾತೃಮಂಡಳಿ ಹೊರೆ ಕಾಣಿಕೆ ಸಮಿತಿ, ಉಗ್ರಾಣ ಸಮಿತಿ, ಪಾಕಶಾಲಾ ನಿರ್ವಹಣಾ ಸಮಿತಿ, ತೀರ್ಥ ಪ್ರಸಾದ ಸಮಿತಿ, ಧಾರ್ಮಿಕ ಸಭಾ ನಿರ್ವಹಣೆ ಸಮಿತಿ, ಸಾಂಸ್ಕೃತಿಕ ಸಮಿತಿ, ಕಾರ್ಯಕಾರಿ ಸಮಿತಿ, ಮಾಧ್ಯಮ ಸಮಿತಿ ಆಮಂತ್ರಣ ಸಮಿತಿ, ಪಾರ್ಕಿಂಗ್ ವ್ಯವಸ್ಥೆ, ಮತ್ತಿತರ ಸಮಿತಿಯ ಸದಸ್ಯರುಗಳು ಮಾತನಾಡಿದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಭಗವತಿಯ ಸೇವೆಯ ಮುಖಾಂತರ ಬ್ರಹ್ಮಕಲಶೋತ್ಸವ ಯಶಸ್ವಿಯಾಗಲಿ ಎಂದರು

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಕ್ಷೇತ್ರದ ಅರ್ಚಕ ಅಪ್ಪು ಯಾನೆ ಶ್ರೀನಿವಾಸ ಪೂಜಾರಿ, ಸಮಿತಿಯ ಪದಾಧಿಕಾರಿಗಳಾದ ವಿಶ್ವನಾಥ ಬೆಳ್ಚಡ, ಪಂದಬೆಟ್ಟು, ಕೆ.ಸುದರ್ಶನ್ ಮೂಡಬಿದ್ರೆ, ಕಸ್ತೂರಿ ಪಂಜ, ಈಶ್ವರ ಕಟೀಲ್, ದಿವಾಕರ ಸಾಮಾನಿ, ಗೀತಾ ಪಿ ಕುಮಾರ್, ಸುನಿಲ್ ಆಳ್ವ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ, ಕೋಶಾಧಿಕಾರಿ ಸುರೇಶ್ ಬಂಗೇರ ಮತ್ತಿತರರು ಉಪಸ್ಥಿತರಿದ್ದರು.

ಸಭೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಯಾಗಿದ್ದು ಕಿನ್ನಿಗೋಳಿ ಪಟ್ಟಣ ಪಂಚಾಯತ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಗುರುರಾಜ್ ಮಲ್ಲಿಗೆಯಂಗಡಿ ಅವರನ್ನು ಗೌರವಿಸಲಾಯಿತು. ಸಮಿತಿಯ ರಾಜೇಂದ್ರ ಪ್ರಸಾದ್ ನಿರೂಪಿಸಿದರು.

ವಿಜೃಂಭಣೆಯ ಪ್ರತಿಷ್ಠಾ ವರ್ಧಂತಿ

ಮುಲ್ಕಿ: ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಫೆ.22 ರಂದು ಪ್ರತಿಷ್ಠಾ ವರ್ಧಂತಿ ಹಾಗೂ ಚಂಡಿಕಾಯಾಗವು ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ವೇದಮೂರ್ತಿ ಕೃಷ್ಣಮೂರ್ತಿ ಭಟ್ ಹೊಯಿಗೆಗುಡ್ಡೆ ಹಾಗೂ ಎಡಪದವು ವಿದ್ವಾನ್ ವೆಂಕಟೇಶ ತಂತ್ರಿ, ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಚಂಡಿಕಾ ಜಾಗ ಹಾಗೂ ಪ್ರತಿಷ್ಠಾ ವರ್ಧಂತಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು

ಮಧ್ಯಾಹ್ನ ಚಂಡಿಕಾಯಿಯಾಗದ ಪೂರ್ಣಾಹುತಿ, ಮಹಾಪೂಜೆ, ಪ್ರಸಾದ ವಿತರಣೆ, ಮಹಾ ಅನ್ನಸಂಪರ್ಪಣೆ ನಡೆಯಿತು

ಈ ಸಂದರ್ಭ ಕ್ಷೇತ್ರದ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಆಡಳಿತ ಮಂಡಳಿಯ ಅಧ್ಯಕ್ಷ ವಾಮನ್ ಇಡ್ಯಾ, ಸಮಿತಿಯ ಸುರೇಶ್ ಬಂಗೇರ, ಬ್ರಹ್ಮಕಲಶೋತ್ಸವ ಹಾಗೂ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಗ್ರಾಮಸ್ಥರು ಉಪಸ್ಥಿತರಿದ್ದರು



ಇಂದಿನ ಪಂದ್ಯಗಳು
ಜಿಂಬಾಬ್ವೆ VS ವೆಸ್ಟ್ ಇಂಡೀಸ್
ಸಂಜೆ 7 (ವಾಂಖೇಡೆ, ಮುಂಬೈ)

ಸೂಪರ್–8 ಕದನ: ದಕ್ಷಿಣ ಆಫ್ರಿಕಾಗೆ 76 ರನ್ ಭರ್ಜರಿ ಜಯ | ಭಾರತಕ್ಕೆ ಮೊದಲ ಸೋಲು

ಕಿಲ್ಲರ್ ಮಿಲ್ಲರ್ ಆಫ್ರಿಕಾ ವಿನ್ನರ್!

ಅಹಮದಾಬಾದ್: ಟಿ20 ವಿಶ್ವಕಪ್ ಸೂಪರ್–8 ಪಂದ್ಯದಲ್ಲಿ ಭಾನುವಾರ ಡೇವಿಡ್ ಮಿಲ್ಲರ್ ಸ್ಫೋಟಕ ಅರ್ಧಶತಕ, ಬ್ರೇವಿಸ್ ಮತ್ತು ಸ್ಟಬ್ಸ್ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ರನ್‌ಗಳ ಭರ್ಜರಿ 76 ರನ್‌ಗಳಿಂದ ಜಯ ಸಾಧಿಸಿದೆ.

ಆರಂಭಿಕ ಆಘಾತದ ಹೊರತಾಗಿಯೂ ಚೇತರಿಸಿಕೊಂಡ ದಕ್ಷಿಣ ಆಫ್ರಿಕಾ ತಂಡ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 187 ರನ್ ಪೇರಿಸಿತ್ತು. 188 ರನ್ ಸವಾಲನ್ನು ಬೆನ್ನತ್ತಿದ ಭಾರತ ತಂಡ 18.5 ಓವರ್‌ಗಳಲ್ಲಿ 111 ರನ್‌ಗಳಿಗೆ ಆಲೌಟಾಯಿತು. ಅಜೇಯವಾಗಿ ಸೂಪರ್–8 ಮುನ್ನುಗ್ಗಿದ್ದ ಭಾರತ ಮೊದಲ ಸೋಲುಂಡಿದೆ.

ಮಿಲ್ಲರ್ ಆಧಾರ: ಪವರ್‌ಪ್ಲೇ ಓವರ್‌ಗಳಲ್ಲಿ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡ ದಕ್ಷಿಣ ಆಫ್ರಿಕಾ ತಂಡ ಭಾರತೀಯ ವೇಗಿಗಳ ದಾಳಿಗೆ ಪರದಾಡಿತು. ಆರಂಭಿಕ ಡಿ ಕಾಕ್(6) ಅವರನ್ನು ಕ್ಲೀನ್‌ಬೌಲ್ಡ್ ಮಾಡುವುದರ ಮೂಲಕ ವೇಗಿ ಜಸ್‌ಪ್ರೀತ್ ಬೂಮ್ರಾ ಮೊದಲ ಬ್ರೇಕ್ ನೀಡಿದರು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ನಾಯಕ ಏಡೆನ್ ಮಾರ್ಕ್ರಂ ಕೇವಲ 4 ರನ್ ಮಾಡಿ ಅರ್ಷದೀಪ್ ಅವರಿಗೆ ವಿಕೆಟ್ ಒಪ್ಪಿಸಿದರು. ಆರಂಭಿಕರಿಬ್ಬರೂ 2 ರನ್ ಅಂತರದಲ್ಲಿ ಪೆವಿಲಿಯನ್ ಸೇರಿದ್ದು, 12 ರನ್ ಗಳಿಸುವುಷ್ಟರಲ್ಲಿ ಇಬ್ಬರೂ ಔಟಾಗಿದ್ದರು. ಎಸೆತಕ್ಕೊಂದರಂತೆ 7 ರನ್ ಗಳಿಸಿದ ರಿಕೆಲ್ಟನ್ 4ನೇ ಓವರ್‌ನಲ್ಲಿ ಬೂಮ್ರಾಗೆ ವಿಕೆಟ್ ಒಪ್ಪಿಸಿದರು. ಕ್ರೀಸ್‌ಗಿಳಿದ ಡೇವಿಡ್ ಮಿಲ್ಲರ್ ಆಕರ್ಷಕ ಹೊಡೆತಗಳೊಂದಿಗೆ ಆತ್ಮವಿಶ್ವಾಸ ಹೆಚ್ಚಿಸಿದ್ದು, ಆಫ್ರಿಕಾ 6 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 41 ರನ್ ಪೇರಿಸಿತ್ತು. ಇಲ್ಲಿಂದ ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಮೂಲಕ ಆಟವನ್ನು ಬದಲಿಸಿದರು. ಭರ್ಜರಿ ಅರ್ಧಶತಕ ದಾಖಲಿಸಿದ ಮಿಲ್ಲರ್ ಕುಸಿದ ಆಫ್ರಿಕಾಗೆ ಆಧಾರಸ್ತಂಭವಾದರು. 35 ಎಸೆತಗಳಿಂದ 7 ಬೌಂಡರಿ ಮತ್ತು 3 ಸಿಕ್ಸರ್ ಒಳಗೊಂಡಿದ್ದ 63 ರನ್ ಚಚ್ಚಿದ್ದರು. ಬ್ರೇವಿಸ್ (45) ಮತ್ತು ಟ್ರಿಸ್ಟನ್ ಸ್ಟಬ್ಸ್ (44) ಸಹ ಸ್ಫೋಟಕ ರನ್ ಕೊಡುಗೆ ನೀಡಿದ್ದರು.





ಸ್ಕೋರ್ ಬೋರ್ಡ್

ದಕ್ಷಿಣ ಆಫ್ರಿಕಾ 187/7(20)

ಮಾರ್ಕ್ರಂ ಸಿ ಪಾಂಡ್ಯ ಬಿ ಅರ್ಷದೀಪ್	4
ಡಿ ಕಾಕ್ ಬಿ ಬೂಮ್ರಾ	6
ರಿಕಲ್ಟನ್ ಸಿ ದುಬೆ ಬಿ ಬೂಮ್ರಾ	7
ಬ್ರೇವಿಸ್ ಸಿ ಅಭಿಷೇಕ್ ಬಿ ದುಬೆ	45
ಮಿಲ್ಲರ್ ಸಿ ತಿಲಕ್ ಬಿ ವರುಣ್	63
ಸ್ಟಬ್ಸ್ ಔಟಾಗದೆ	44
ಜೆನ್ಸನ್ ಸಿ ಸಿಂಗ್ ಬಿ ಅರ್ಷದೀಪ್	2
ಬಾಶ್ ಸಿ ಆ್ಯಂಡ್ ಬಿ ಬೂಮ್ರಾ	5
ರಬಾಡ ಔಟಾಗದೆ	0
ಇತರೆ	11

ಬೌಲಿಂಗ್ ವಿವರ

ಅರ್ಷದೀಪ್ ಸಿಂಗ್	4–0–28–2
ಜಸ್‌ಪ್ರೀತ್ ಬೂಮ್ರಾ	4–0–15–3
ವರುಣ್ ಚಕ್ರವರ್ತಿ	4–0–47–1
ವಾಷಿಂಗ್ಟನ್ ಸುಂದರ್	2–0–17–0
ಹಾರ್ದಿಕ್ ಪಾಂಡ್ಯ	4–0–45–0
ಶಿವಂ ದುಬೆ	2–0–32–1

ಭಾರತ ಪರದಾಟ!

ನಿರಂತರ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಲೇ ಇದ್ದ ಭಾರತ, ಜತೆಯಾಟದ ಕೊರತೆಯೊಂದಿಗೆ ರನ್ ಕಲೆಹಾಕುವಲ್ಲಿ ಪರದಾಡಿ ಆಘಾತ ಅನುಭವಿಸಿದೆ. ಆರಂಭಿಕ ಇಶಾನ್ ಕಿಶನ್ ಶೂನ್ಯ ಸಂಪಾದನೆಯ ಮೂಲಕ ಆರಂಭಿಸಿದ ಪೆವಿಲಿಯನ್ ಪಯಣ ಮುಂದುವರಿಯಿತು. ಮಾರ್ಕ್ರಂ ಎಸೆತದಲ್ಲಿ ಕಿಶನ್ ಕ್ಲೀನ್‌ಬೌಲ್ಡ್ ಆಗಿದ್ದರು. ಶಿವಂ ದುಬೆ (42) ಏಕಾಂಗಿ ಹೋರಾಟ ಬಿಟ್ಟರೆ, ಅಗ್ರ ಮತ್ತು ಮಧ್ಯಮ ಕ್ರಮಾಂಕ ಸಂಪೂರ್ಣ ವೈಫಲ್ಯ ಕಂಡಿದ್ದರಿಂದ ಭಾರತ ಹೀನಾಯ ಸೋಲುಂಡಿದೆ. ವೇಗಿ ಜೆನ್ಸನ್, ಬಾಶ್ ಮಾರಕ ಬೌಲಿಂಗ್ ನಡೆಸುವ ಮೂಲಕ ಭಾರತ ತಂಡದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬೆನ್ನುಮೂಳೆ ಮುರಿದರೆ, ಭಾರತೀಯ ಮೂಲದ ಸ್ಪಿನ್ನರ್ ಕೇಶವ್ ಮಹಾರಾಜ್ 3 ವಿಕೆಟ್ ಕಬಳಿಸಿದರು.

ಅಶ್ವಿನ್ ಹಿಂದಿಕ್ಕಿದ ಜಸ್‌ಪ್ರೀತ್ ಬೂಮ್ರಾ



ಟಿ20 ವಿಶ್ವಕಪ್ ಇತಿಹಾಸದಲ್ಲಿ ಭಾರತದ ಪರ ಅತ್ಯಧಿಕ ವಿಕೆಟ್ ಕಬಳಿಸಿದ ರವಿಚಂದ್ರನ್ ಅಶ್ವಿನ್ (32) ದಾಖಲೆಯನ್ನು ವೇಗಿ ಜಸ್‌ಪ್ರೀತ್ ಬೂಮ್ರಾ ಹಿಂದಿಕ್ಕಿದ್ದಾರೆ. ಭಾನುವಾರ ಡಿ ಕಾಕ್, ರಿಕೆಲ್ಟನ್ ಮತ್ತು ಕೊರ್ಬಿನ್ ಬಾಶ್ ಅವರ ವಿಕೆಟ್‌ಗಳನ್ನು ಕಬಳಿಸಿದ ಬೂಮ್ರಾ, ಅಶ್ವಿನ್‌ರನ್ನು ಹಿಂದಿಕ್ಕಿದರು. ಇನ್ನೋರ್ವ ವೇಗಿ ಅರ್ಷದೀಪ್ ಇದೇ ಪಂದ್ಯದಲ್ಲಿ ಅಶ್ವಿನ್ ದಾಖಲೆ ಸರಿಗಟ್ಟಿದ್ದಾರೆ. ಭಾರತ ಪರ ಬೂಮ್ರಾ (33), ಅರ್ಷದೀಪ್ (32), ಅಶ್ವಿನ್ (32), ಹಾರ್ದಿಕ್ (29) ಮತ್ತು ಜಡೇಜಾ (22) ಅತ್ಯಧಿಕ ವಿಕೆಟ್ ಕಬಳಿಸಿದ್ದಾರೆ.

ಕಿರುಸುದ್ದಿ

ನಾಳೆ 15ನೇ ಬಾರಿ ಫೈನಲ್ ಆಡಲಿದೆ ಕರ್ನಾಟಕ ತಂಡ

ಹೊಸದಿಲ್ಲಿ: ಋತುವಿನುದ್ದಕ್ಕೂ ಅದ್ಭುತ ಪ್ರದರ್ಶನ ನೀಡಿರುವ ದೇವದತ್ತ್ ಪಡಿಕ್ಕಲ್ ನೇತೃತ್ವದ ಕರ್ನಾಟಕ ಫೆ.24ರಂದು ಮಂಗಳವಾರ 15ನೇ ಬಾರಿ ರಣಜಿ ಟ್ರೋಫಿ ಫೈನಲ್ ಆಡಲಿದ್ದು, 9ನೇ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸುವ ಗುರಿ ಹೊಂದಿದೆ. 2014–15ರ ಆವೃತ್ತಿಯ ಬಳಿಕ ಇದೇ ವರ್ಷ ಫೈನಲ್ ಪ್ರವೇಶಿಸಿದ ಕರ್ನಾಟಕ ತಂಡ, ಜಮ್ಮು ಕಾಶ್ಮೀರವನ್ನು ಎದುರಿಸಲಿದೆ. ಸೆಮಿಫೈನಲ್ ಪಂದ್ಯದಲ್ಲಿ ಉತ್ತರಾಖಂಡ್ ವಿರುದ್ಧ ಕರ್ನಾಟಕ ಡ್ರಾ ಫಲಿತಾಂಶ ಕಂಡಿದ್ದು, ಮೊದಲ ಇನ್ನಿಂಗ್ಸ್‌ನ ಭಾರೀ ಮುನ್ನಡೆಯ ಪರಿಣಾಮ ಕರ್ನಾಟಕ ಫೈನಲ್ ಪ್ರವೇಶಿಸಿತ್ತು.

ಕತಾರ್ ಓಪನ್ 2026 ಪ್ರಶಸ್ತಿ ಗೆದ್ದ ಅಲ್ಕರಾಜ್



ದೋಹಾ: ಏಳು ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಫ್ರಾನ್ಸ್ ಎದುರಾಳಿಯನ್ನು ಸೋಲಿಸಿ ಕತಾರ್ ಓಪನ್ 2026ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಈ ಪ್ರಶಸ್ತಿ ಗೆಲುವಿನೊಂದಿಗೆ ಅಲ್ಕರಾಜ್ ಟೆನಿಸ್ ವೃತ್ತಿಜೀವನದ 26ನೇ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಫ್ರಾನ್ಸ್ ಎದುರಾಳಿ ಆರ್ಥರ್ ಫಿಲ್ಸ್ ಅವರನ್ನು ಅಲ್ಕರಾಜ್ ಕೇವಲ 50 ನಿಮಿಷಗಳಲ್ಲಿ ಮಣಿಸಿದ್ದಾರೆ. ಸ್ಪೇನ್ ಟೆನಿಸಿಗ ಅಲ್ಕರಾಜ್ 6–2, 6–1 ನೇರ ಸೆಟ್‌ಗಳಿಂದ ಗೆಲುವು ಸಾಧಿಸಿದ್ದಾರೆ. ಇತ್ತೀಚೆಗೆ ಆಸ್ಟ್ರೇಲಿಯಾ ಓಪನ್ ಯಶಸ್ಸು ಸಾಧಿಸಿದ ಅಲ್ಕರಾಜ್ ತಮ್ಮ 22ನೇ ವಯಸ್ಸಿನಲ್ಲಿಯೇ ಟೆನಿಸ್ ವೃತ್ತಿಜೀವನದ ಎಲ್ಲಾ ಗ್ರ್ಯಾಂಡ್ ಸ್ಲಾಮ್‌ಗಳನ್ನೂ ಒಂದೊಂದು ಬಾರಿ ಗೆದ್ದಿರುವ ದಾಖಲೆ ಬರೆದುಕೊಂಡಿದ್ದಾರೆ.

ಕತಾರ್‌ನಲ್ಲಿ ಶೇ.447ರಷ್ಟು ಕ್ರಿಕೆಟ್ ಚಟುವಟಿಕೆ ಏರಿಕೆ!

ದುಬೈ: ಕತಾರ್‌ನಲ್ಲಿ ಕ್ರಿಕೆಟ್ ಉತ್ತೇಜಿಸುವ ಉದ್ದೇಶದೊಂದಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಸಂಸ್ಥೆ ಐಸಿಸಿ ತನ್ನ ಮುಂದಿನ ಸುತ್ತಿನ ಸಭೆಯನ್ನು ಮಾ.25ರಿಂದ 27ರವರೆಗೆ ದೋಹಾದಲ್ಲಿ ನಡೆಸಲಿದೆ. 2020ರಿಂದ ಈವರೆಗೆ ಕತಾರ್‌ನಲ್ಲಿ ಕ್ರಿಕೆಟ್ ಚಟುವಟಿಕೆಗಳು ಶೇ.447ರಷ್ಟು ಪ್ರಗತಿ ಕಂಡಿದೆ ಎಂದು ಐಸಿಸಿ ಹೇಳಿಕೊಂಡಿದೆ. ಇದೇ ಕಾರಣ 2036ರ ಕತಾರ್ ಒಲಿಂಪಿಕ್ಸ್ ಸಮಿತಿಯ ಶಾಲಾ ಒಲಿಂಪಿಕ್ಸ್ ಕಾರ್ಯಕ್ರಮದಲ್ಲಿ ಕ್ರಿಕೆಟ್ ಸೇರ್ಪಡೆಯಾಗಿದೆ. ಐಸಿಸಿ ಮಂಡಳಿ ನಿರ್ದೇಶಕರು, ಪ್ರಧಾನ ಕಾರ್ಯದರ್ಶಿಗಳು, ಸಮಿತಿ ಸದಸ್ಯರು ಮತ್ತು ಹಿರಿಯ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸೂರ್ಯವಂಶಿಗೆ ₹50 ಲಕ್ಷ ನೀಡಿ ಸನ್ಮಾನಿಸಿದ ನಿತೀಶ್

ಪಾಟ್ನಾ: 19 ವರ್ಷದೊಳಗಿನವರ (ಅ–19) ಏಕದಿನ ವಿಶ್ವಕಪ್ ಹೀರೋ ಪ್ರತಿಭಾನ್ವಿತ ಯುವ ಕ್ರಿಕೆಟಿಗ ವೈಭವ್ ಸೂರ್ಯವಂಶಿ ಅವರಿಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ 50 ಲಕ್ಷ ರೂ. ಚೆಕ್ ನೀಡಿ ಸನ್ಮಾನಿಸಿದ್ದಾರೆ. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮತ್ತು ಬಿಹಾರ ಕ್ರೀಡಾ ಸಚಿವೆ ಶ್ರೇಯಸಿ ಸಿಂಗ್ ಜತೆಗಿದ್ದರು.



ಇತ್ತೀಚೆಗೆ ಜಿಂಬಾಬ್ವೆಯಲ್ಲಿ ನಡೆದ ವಿಶ್ವಕಪ್ ಫೈನಲ್‌ನಲ್ಲಿ ಸೂರ್ಯವಂಶಿ ಕೇವಲ 80 ಎಸೆತಗಳಿಂದ 15 ಬೌಂಡರಿ ಮತ್ತು 15 ಸಿಕ್ಸರ್‌ಗಳನ್ನು ಒಳಗೊಂಡ 175 ರನ್ ಚಚ್ಚಿದ್ದರು. ಅ–19 ವಿಶ್ವಕಪ್‌ನ 7 ಪಂದ್ಯಗಳಲ್ಲಿ 169.5 ಸ್ಟ್ರೈಕ್ ರೇಟ್ ಮತ್ತು 62.71ರ ಸರಾಸರಿಯಲ್ಲಿ 439 ರನ್‌ಗಳನ್ನು ಕಲೆಹಾಕಿದ್ದರು. ಬಿಹಾರದ ಸ್ಫೋಟಕ ಬ್ಯಾಟರ್, ಐಪಿಎಲ್‌ನಲ್ಲಿ ಇವರು ರಾಜಸ್ಥಾನ ರಾಯಲ್ಸ್ ಪ್ರತಿನಿಧಿಸುತ್ತಿದ್ದಾರೆ.

ಎರಡೂ ಆವೃತ್ತಿಗಳಲ್ಲಿ ಭಾರತಕ್ಕೆ ಕಪ್ | ಬಾಂಗ್ಲಾಗೆ ಮುಖಭಂಗ

ವನಿತೆಯರಿಗೆ ಸತತ 2ನೇ ಏಷ್ಯಾ ಕಿರೀಟ



ಬ್ಯಾಂಕಾಕ್: ಟಿ20 ವಿಶ್ವಕಪ್ ಬಹಿಷ್ಕರಿಸಿದ ಬಾಂಗ್ಲಾದೇಶ, ಮಹಿಳಾ ಏಷ್ಯಾ ಕಪ್‌ನಲ್ಲಿ ಸತತ ಎರಡನೇ ಬಾರಿ ಭಾರತದ ಮುಂದೆ ಶರಣಾಗಿ ಮುಖಭಂಗ ಅನುಭವಿಸಿದೆ. ಭಾರತ ಸತತ 2ನೇ ಬಾರಿ ಪ್ರಶಸ್ತಿ ಗೆದ್ದಿದ್ದು, ಬಾಂಗ್ಲಾ ಸತತ 2ನೇ ಬಾರಿ ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟಿದೆ.

ರಾಧಾ ಯಾದವ್ ನೇತೃತ್ವದ ಭಾರತ ಎ ತಂಡ ಮಹಿಳಾ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ ಟ್ರೋಫಿಯನ್ನು ತನ್ನಲ್ಲೇ ಉಳಿಸಿಕೊಳ್ಳಲು ಯಶಸ್ವಿಯಾಗಿದೆ. ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ನಡೆದಿದ್ದ ಫೈನಲ್‌ನಲ್ಲಿ ನೆರೆಯ ಬಾಂಗ್ಲಾದೇಶವನ್ನು 46 ರನ್‌ಗಳಿಂದ ಮಣಿಸಿದ ಭಾರತ ಎ ಏಷ್ಯಾ ಕಪ್ ಪ್ರಶಸ್ತಿ ಉಳಿಸಿಕೊಂಡಿದೆ.

ಲೋ ಸ್ಕೋರಿಂಗ್ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಭಾರತ ಎ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 134 ರನ್ ಕಲೆಹಾಕಿತ್ತು. 135 ರನ್ ಸವಾಲು ಬೆನ್ನತ್ತಿದ ಬಾಂಗ್ಲಾದೇಶ ತಂಡವು 19.1 ಓವರ್‌ಗಳಲ್ಲಿ ಕೇವಲ 88 ರನ್‌ಗಳಿಗೆ ಆಲೌಟಾಯಿತು. ಪಂದ್ಯಾವಳಿಯ ದ್ವಿತೀಯ ಆವೃತ್ತಿಯಲ್ಲೂ ಭಾರತವೇ ಕಪ್ ಗೆದ್ದುಕೊಂಡಿದೆ. ಟಾಸ್ ಗೆದ್ದ ನಾಯಕಿ ರಾಧಾ ಬ್ಯಾಟಿಂಗ್ ಆಯ್ದುಕೊಂಡಿದ್ದರು. ಬ್ಯಾಟಿಂಗ್ ಆರಂಭಿಸಿದ ಭಾರತ ವನಿತೆಯರು ಆರಂಭಿಕ ಆಘಾತ ಅನುಭವಿಸಿದರು. ಪವರ್‌ಪ್ಲೇ ಓವರ್‌ಗಳ ಮುಕ್ತಾಯದ ವೇಳೆಗೆ ಭಾರತ ಎ 33 ರನ್‌ಗಳಿಗೆ 3 ಅಗ್ರ ಕ್ರಮಾಂಕದ ವಿಕೆಟ್‌ಗಳನ್ನು ಕಳೆದುಕೊಂಡಿತ್ತು.

ತೇಜಲ್–ರಾಧಾ 69 ರನ್ ಜತೆಯಾಟ: ತೇಜಲ್ ಹಸಬ್ನಿಸ್ ಅವರ ಅಜೇಯ ಅರ್ಧಶತಕ (51) ಮತ್ತು ನಾಯಕಿ ರಾಧಾ ಅವರ ಜವಾಬ್ದಾರಿಯುತ ಇನ್ನಿಂಗ್ಸ್ ಕಾರಣದಿಂದ ಚೇತರಿಸಿಕೊಂಡ ಭಾರತ ಎ ವನಿತೆಯರು ಸ್ಪಿನ್ ಪಿಚ್‌ನಲ್ಲಿ ಉತ್ತಮ ಮೊತ್ತ ಪೇರಿಸುವಲ್ಲಿ ಯಶಸ್ವಿಯಾಗಿದೆ. ತೇಜಲ್ ಮತ್ತು ರಾಧಾ 5ನೇ ವಿಕೆಟ್‌ಗೆ 69 ರನ್‌ಗಳ ಮಹತ್ವದ ಜತೆಯಾಟವಾಡಿದರು. 34 ಎಸೆತಗಳನ್ನು ಎದುರಿಸಿದ್ದ ತೇಜಲ್ 3 ಬೌಂಡರಿ ಮತ್ತು 2 ಸಿಕ್ಸರ್ ಒಳಗೊಂಡ 51 ರನ್ ಗಳಿಸಿ ಅಜೇಯರಾಗಿ ಉಳಿದಿದ್ದರು. ರಾಧಾ 30 ಎಸೆತಗಳಿಂದ 3 ಬೌಂಡರಿ ಮತ್ತು 1 ಸಿಕ್ಸರ್ ಇದ್ದ 36 ರನ್ ಗಳಿಸಿದ್ದರು. ಬಾಂಗ್ಲಾ ಪರ ಕರಾರುವಾಕ್ ಲೆಗ್ ಸ್ಪಿನ್ ಬೌಲಿಂಗ್ ದಾಳಿ ನಡೆಸಿದ ಫಹೀಮಾ ಖಾತುನ್ 25 ರನ್‌ಗಳಿಗೆ 4 ವಿಕೆಟ್ ಕಿತ್ತರು.

ಇನ್ನೊಮ್ಮೆ ಬಾಂಗ್ಲಾ ಸೋಲಿಸಿದ ಭಾರತ

ಇತ್ತೀಚೆಗೆ ಭಾರತದ ಆತಿಥ್ಯದಲ್ಲಿ ಟಿ20 ವಿಶ್ವಕಪ್ ಆಡುವುದಿಲ್ಲವೆಂದು ಬಾಂಗ್ಲಾದೇಶ ಪುರುಷರ ಕ್ರಿಕೆಟ್ ತಂಡ ಹೊರಗುಳಿದಿತ್ತು. ಬಾಂಗ್ಲಾ ಬೆಂಬಲಿಸಿ ಲೀಗ್ ಪಂದ್ಯ ಬಹಿಷ್ಕರಿಸುವ ಬೆದರಿಕೆ ಹಾಕಿದ್ದ ಪಾಕಿಸ್ತಾನ ಯೂಟರ್ನ್ ಹೊಡೆದಿದ್ದಲ್ಲದೆ ಹೀನಾಯ ಸೋಲುಂಡು ಮುಖಭಂಗ ಎದುರಿಸಿತ್ತು. ಇದೀಗ ಬಾಂಗ್ಲಾ ಎ ಮಹಿಳಾ ತಂಡ ಏಷ್ಯಾ ಕಪ್ ಫೈನಲ್‌ನಲ್ಲಿ ಇನ್ನೊಮ್ಮೆ ಭಾರತಕ್ಕೆ ಶರಣಾಗಿದೆ. 2023ರಲ್ಲಿ ನಡೆದಿದ್ದ ಮೊದಲ ಆವೃತ್ತಿಯ ಫೈನಲ್‌ನಲ್ಲಿ ಭಾರತ ವಿರುದ್ಧ ಬಾಂಗ್ಲಾ 31 ರನ್‌ಗಳಿಂದ ಸೋಲುಂಡಿತ್ತು. 2026ರಲ್ಲಿ 46 ರನ್ ಅಂತರದಿಂದ ಶರಣಾಗಿದೆ

ಸ್ಕೋರ್ ಬೋರ್ಡ್

ಭಾರತ ಎ ವನಿತೆಯರು134/7(20)

ನಂದಿನಿ ರನೌಟ್	8
ವೃಂದಾ ಬಿ ಫಾತಿಮಾ	19
ಅನುಷ್ಕಾ ಬಿ ಫಹೀಮಾ	8
ಮಿನ್ನು ಸಿ ಸಂಜಿದಾ ಬಿ ಫರ್ಜಾನಾ	0
ತೇಜಲ್ ಔಟಾಗದೆ	51
ರಾಧಾ ಸಿ ಫರ್ಜಾನಾ ಬಿ ಫಹೀಮಾ	36
ತನುಜಾ ಸಿ ಲತಾ ಬಿ ಫಹೀಮಾ	1
ಪ್ರೇಮಾ ಸಿ ಫರ್ಜಾನಾ ಬಿ ಫಹೀಮಾ	4
ಮಮತಾ ಔಟಾಗದೆ	2
ಇತರೆ	5

ಬೌಲಿಂಗ್ ವಿವರ

ಫರಿಹಾ ತ್ರಿಸ್ನಾ	3–0–23–0
ಸಂಜಿದಾ ಅಖ್ತರ್	4–0–21–0
ಫರ್ಜಾನಾ ಈಸ್ಮಿನ್	4–0–30–1
ಫಾತಿಮಾ ಜಹಾನ್	4–0–19–1
ಫಹೀಮಾ ಖಾತುನ್	4–0–25–4
ಲತಾ ಮೊಂಡೆಲ್	1–0–14–0

ಬಾಂಗ್ಲಾ ಎ ವನಿತೆಯರು 88/10(19.1)

ಇಶ್ಮಾ ಸಿ ಶರ್ಮಾ ಬಿ ಠಾಕೂರ್	3
ಶಮೀಮಾ ಸಿ ಮಮತಾ ಬಿ ರಾವತ್	20
ಶರ್ಮಿನ್‌ಸಿ ರಾವತ್ ಬಿ ಯಾದವ್	18
ಸಾದಿಯಾ ಸಿ ಕಶ್ಯಪ್ ಬಿ ರಾವತ್	10
ಲತಾ ಸ್ಟಂಪ್ ಮಮತಾ ಬಿ ರಾವತ್	1
ಫಹೀಮಾ ಸಿ ಠಾಕೂರ್ ಬಿ ಮಿನ್ನು	14
ಫರ್ಜಾನಾ ಸಿ ಕಶ್ಯಪ್ ಬಿ ಸೋನಿಯಾ	6
ಶೋರಿಫಾ ಸಿ ರಾವತ್ ಬಿ ಕನ್ವಾರ್	9
ಸಂಜಿದಾ ಸಿ ರಾವತ್ ಬಿ ಕನ್ವಾರ್	5
ಫಾತಿಮಾ ಸಿ ಕನ್ವಾರ್ ಬಿ ಸೋನಿಯಾ	1
ಫರೀಹಾ ಔಟಾಗದೆ	0
ಇತರೆ	1

ಬೌಲಿಂಗ್ ವಿವರ

ಸೈಮಾ ಠಾಕೂರ್	2–0–11–1
ಸೋನಿಯಾ ಮೇಂಧಿಯಾ	4–0–21–2
ತನುಜಾ ಕನ್ವಾರ್	3.1–0–11–2
ಮಿನ್ನು ಮಣಿ	2–0–17–1
ಪ್ರೇಮಾ ರಾವತ್	4–0–12–3
ರಾಧಾ ಯಾದವ್	4–0–16–1

ನಾಳೆಯಿಂದ ಹುಬ್ಬಳ್ಳಿಯಲ್ಲಿ ರಣಜಿ ಫೈನಲ್

ಕಠಿಣ ಅಭ್ಯಾಸ ನಡೆಸಿದ ರಾಜ್ಯ

ಹುಬ್ಬಳ್ಳಿ: ಪ್ರಸ್ತುತ ಋತುವಿನಲ್ಲಿ ಅಮೋಘ ಆಟದ ಪ್ರದರ್ಶನ ನೀಡುವ ಮೂಲಕ ಫೈನಲ್ ತಲುಪಿದ ಕರ್ನಾಟಕ ತಂಡದ ಆಟಗಾರರು ಭಾನುವಾರ ಕಠಿಣ ಅಭ್ಯಾಸ ನಡೆಸಿದರು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ಕರ್ನಾಟಕ ಹಾಗೂ ಜಮ್ಮು ಕಾಶ್ಮೀರ ತಂಡಗಳು ಇದೇ ಮೊದಲ ಬಾರಿಗೆ ಮುಖಾಮುಖಿಯಾಗಲಿದ್ದು, ಫೆ.24ರಿಂದ 28ರವರೆಗೆ ಫೈನಲ್ ನಡೆಯಲಿದೆ.ಭಾನುವಾರ ಬೆಳಗ್ಗೆ ಕರ್ನಾಟಕ ತಂಡದ ಆಟಗಾರರು ನಗರಕ್ಕೆ ಆಗಮಿಸಿದರು. ನಾಯಕ ಪಡಿಕ್ಕಲ್ ಮಧ್ಯಾಹ್ನ 2 ಗಂಟೆಗೆ ಮೈದಾನಕ್ಕೆ ಆಗಮಿಸಿದ ಆಟಗಾರರು ಕೆಲ ಸಮಯ ಫುಟ್ಬಾಲ್ ಆಡಿ ನೆಟ್ಸ್‌ನಲ್ಲಿ ಬೆವರು ಸುರಿಸಿದರು. ನಾಯಕ ದೇವದತ್ತ ಪಡಿಕ್ಕಲ್, ಮಯಾಂಕ್ ಅಗರವಾಲ್, ಕರುಣ್ ನಾಯರ್, ಆರ್.ಸ್ಮರಣ್ ಹಾಗೂ ಹಲವು ಆಟಗಾರರು ನೆಟ್ಸ್‌ನಲ್ಲಿ ಧಾರವಾಡ ವಯಲದ ಕ್ಲಬ್‌ನ ಬೌಲರ್‌ಅನ್ನು ಎದುರಿಸಿದರು. ಇದರ ಜೊತೆಗೆ ಶ್ರೇಯಸ್ ಗೋಪಾಲ್, ವಿದ್ವತ್ ಕಾವೇರಪ್ಪ ಬಿಲ್ಡಿಂಗ್ ಹಾಗೂ ಬೌಲಿಂಗ್ ಅಭ್ಯಾಸ ನಡೆಸಿದರು. ನಂತರ ಥ್ರೋಡೌನ್ ಎಸೆತಗಳನ್ನು ಆಡಿದರು.

ರಾಹುಲ್, ಪ್ರಸಿದ್ಧ ಗೈರು: ಕರ್ನಾಟಕ ತಂಡದ ಆಕರ್ಷಣೀಯ ಆಟಗಾರರಾದ ಕೆ.ಎಲ್.ರಾಹುಲ್ ಹಾಗೂ ಪ್ರಸಿದ್ಧ ಕೃಷ್ಣ ಮೈದಾನದಲ್ಲಿ ಕಾಣಿಸಲಿಲ್ಲ. ನಾಯಕ ಪಡಿಕ್ಕಲ್ ತಂಡ ಮುಖ್ಯ ಕೋಚ್ ಜತೆ ಸಮಾಲೋಚನೆ ನಡೆಸಿದರು.

ಎರಡನೇ ದಿನವೂ ಜಮ್ಮು ಅಭ್ಯಾಸ: ಜಮ್ಮು ಮತ್ತು ಕಾಶ್ಮೀರ ತಂಡದ ಆಟಗಾರರು ಅಭ್ಯಾಸ ಎರಡನೇ ದಿನವೂ ಮುಂದುವರಿಯಿತು. ಶುಕ್ರವಾರವೇ ನಗರಕ್ಕೆ ಬಂದಿರುವ ತಂಡವು, ನಗರದ ನವೀನ್ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿದೆ. ಭಾನುವಾರ ಕ್ರೀಡಾಂಗಣಕ್ಕೆ ಬಂದ ಆಟಗಾರರು, ಎರಡು ಗಂಟೆ ತಾಲೀಮು ನಡೆಸಿದರು. ನಂತರ ಪಿಚ್ ವೀಕ್ಷಣೆ ಮಾಡಿದರು. ಕೋಚ್ ಅಜಯ್ ಶರ್ಮಾ ಮಾರ್ಗದರ್ಶನದಲ್ಲಿ ಆಟಗಾರರು ಸ್ಥಳೀಯ ಕ್ರಿಕೆಟ್ ಅಕಾಡೆಮಿ ತಂಡದ ಆಟಗಾರರ ಎಸೆತಗಳನ್ನು ಎದುರಿಸಿದರು. ಕೆಲ ಹೊತ್ತು ಥ್ರೋಡೌನ್ ಎಸೆತಗಳನ್ನು ಆಡಿದರು. ಭಾನುವಾರ ಅಭ್ಯಾಸಕ್ಕೆ ಬಾರದಿದ್ದ ಜಮ್ಮು ಕಾಶ್ಮೀರ ತಂಡದ ನಾಯಕ ಪರಾಸ್ ಡೋಗ್ರಾ, ಅಬ್ದುಲ್ ಸಮದ್, ಅಖಿಬ್ ನಬಿ ಮೈದಾನದಲ್ಲಿ ತಾಲೀಮು ನಡೆಸಿದರು.



ಫೈನಲ್‌ಗಾಗಿ ಸಕಲ ಸಿದ್ಧತೆ: ಫೈನಲ್ ಪಂದ್ಯಕ್ಕಾಗಿ ಕೆಎಸ್‌ಸಿಎ ಧಾರವಾಡದ ವಲಯದಿಂದ ಸಕಲ ಸಿದ್ಧತೆ ಭರದಿಂದ ಸಾಗಿದೆ. ಪಂದ್ಯ ವೀಕ್ಷಿಸಲು ಬರುವ ಕ್ರಿಕೆಟ್ ಅಭಿಮಾನಿಗಳಿಗೆ ಬಿಸಿಲು ತಾಕದಂತೆ ಪೆಂಡಾಲ್ ಹಾಕಲಾಗಿದೆ. ನಗರಕ್ಕೆ ಬಂದ ತಂಡವನ್ನು ಕೆಎಸ್‌ಸಿಎ ಧಾರವಾಡ ವಲಯ ಸ್ವಾಗತಿಸಿತು.

ಭಾರತಕ್ಕೆ ಸತತ 6ನೇ ಸೋಲು



ಲಖನೌ: ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಭಾರತೀಯ ಹಾಕಿ ತಂಡ ಸತತ 6ನೇ ಸೋಲುಂಡಿದೆ. ಭಾನುವಾರ ಹೋಬರ್ಟ್‌ನಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಲೀಗ್ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 4–5 ಗೋಲ್‌ಗಳ ಅಂತರದಿಂದ ಭಾರತ ವೀರೋಚಿತ ಸೋಲುಂಡಿದೆ. ಭಾರತ ಪರ 15ನೇ ನಿಮಿಷದಲ್ಲಿ ಅಮಿತ್ ರೋಹಿದಾಸ್ ಮತ್ತು 43ನೇ ನಿಮಿಷದಲ್ಲಿ ಜುಗ್ರಾಜ್ ಸಿಂಗ್ ಗೋಲ್ ಸ್ಕೋರ್ ಮಾಡಿದರು. ಆಸ್ಟ್ರೇಲಿಯಾ ಪರ 47ನೇ ಮತ್ತು 56ನೇ ನಿಮಿಷದಲ್ಲಿ ಜೋಯೆಲ್ ರಿಂಟಾಲಾ ಅವಳಿ ಗೋಲ್ ದಾಖಲಿಸಿದ್ದರು. ಜೋಯೆಲ್ ಗೋಲ್ ದಾಖಲಿಸಿ ಡ್ರಾ ಸಾಧಿಸಿದರು. ಇದಾದ ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತದ ಪರ ರಾಜಕುಮಾರ್, ಶೈಲಾನಂದ್, ಮಣೀಂದರ್ ಮತ್ತು ಜುಗ್ರಾಜ್ ಅವರು ಗೋಲ್ ದಾಖಲಿಸಿದರು. ಆದರೆ ಆದಿತ್ಯ ಲಾಲಗೆ ಅವರು ಗೋಲ್ ದಾಖಲಿಸುವಲ್ಲಿ ವಿಫಲ ಆಗಿದ್ದರಿಂದ ಭಾರತ 4–5ರಿಂದ ಸೋಲುಂಡಿತು. ಫೆ.24ರಂದು ಸ್ಪೇನ್ ತಂಡವನ್ನು ಭಾರತ ಎದುರಿಸಲಿದೆ. ಜುಗ್ರಾಜ್ ಅವರಿಗೆ ಪಂದ್ಯಶ್ರೇಷ್ಠ ಪ್ರಶಸ್ತಿ ಸಂದಿದೆ.

ವಿಲ್ ಪವರ್, ಲಂಕಾ ಪತನ



ಸಂಕ್ಷಿಪ್ತ ಸ್ಕೋರ್

ಇಂಗ್ಲೆಂಡ್ 146/7(20)
ಸಾಲ್ಟ್ 62, ಜ್ಯಾಕ್ಸ್ 21
(ದುನಿತ್ 26ಕ್ಕೆ 3)
ಶ್ರೀಲಂಕಾ 95/10(16.4)
ದಸೂನ್ 30 (ಜ್ಯಾಕ್ಸ್ 22ಕ್ಕೆ 3)

ಇಂಗ್ಲೆಂಡ್‌ಗೆ 51 ರನ್ ಭರ್ಜರಿ ಜಯ

ಪಲ್ಲಿಕೆಲೆ: ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಪರಾಕ್ರಮದಿಂದಾಗಿ ಆತಿಥೇಯ ಶ್ರೀಲಂಕಾ ವಿರುದ್ಧ ಇಂಗ್ಲೆಂಡ್ 51 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಭಾನುವಾರ ಪಲ್ಲಿಕೆಲೆಯಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ 147 ರನ್‌ಗಳ ಸವಾಲು ಬೆನ್ನತ್ತಿದ ಶ್ರೀಲಂಕಾ 16.4 ಓವರ್‌ಗಳಲ್ಲೇ 95 ರನ್‌ಗಳಿಗೆ ಆಲೌಟಾಗುವ ಮೂಲಕ ಹೀನಾಯ ಸೋಲುಂಡಿತು. ಶ್ರೀಲಂಕಾದ 3 ವಿಕೆಟ್ ಕಬಳಿಸಿದ ಜ್ಯಾಕ್ಸ್ ಗೆಲುವಿನ ರೂವಾರಿಯಾಗಿ ಹೊರಹೊಮ್ಮಿದರು. ಮೊದಲು ಬ್ಯಾಟ್ ಮಾಡಿದ್ದ ಇಂಗ್ಲೆಂಡ್ ತಂಡ ಆರಂಭಿಕ ಫಿಲ್ ಸಾಲ್ಟ್ ಭರ್ಜರಿ ಅರ್ಧಶತಕ (62) ಮತ್ತು ಜ್ಯಾಕ್ಸ್ (21) ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 146 ರನ್ ಸ್ಪರ್ಧಾತ್ಮಕ ಮೊತ್ತವನ್ನು ಪೇರಿಸಿತ್ತು. ಶ್ರೀಲಂಕಾ ಪರ ನಾಯಕ ದಸೂನ್ ಶನಕ 30 ರನ್ ಮಾಡಿದ್ದು ಬಿಟ್ಟರೆ ಬೇರ್‍ಯಾವ ಬ್ಯಾಟ್ಸ್‌ಮನ್‌ಗಳೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಆರ್ಚರ್, ಡಾವ್ಸನ್ ಮತ್ತು ರಶೀದ್ ತಲಾ 2 ವಿಕೆಟ್ ಕಿತ್ತರು.

ವೈಷ್ಣವಿ ರನ್ನರ್‌ಅಪ್


ಬೆಂಗಳೂರು: ಟೂರ್ನಿಯುದ್ದಕ್ಕೂ ಗೆಲುವಿನ ನಾಗಾಲೋಟ ಕಂಡಿದ್ದ ಭಾರತದ ಉದಯೋನ್ಮುಖ ಟೆನಿಸ್ ಆಟಗಾರ್ತಿ ವೈಷ್ಣವಿ ಅಡ್ಕರ್ ಐಟಿಎಫ್ ಮಹಿಳೆಯರ ಓಪನ್‌ನಲ್ಲಿ ರನ್ನರ್ ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡರು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಬೆಲ್ಜಿಯಂನ ಹನ್ನೆ ವಾಂಡೆವಿಂಕೆಲ್ ಎದುರು 6–0, 6–1 ನೇರ ಸೆಟ್‌ಗಳ ಸೋಲುಂಡರು. ಸಾನಿಯಾ ಮಿರ್ಜಾ ಬಳಿಕ ಐಟಿಎಫ್ ಮಹಿಳಾ ಓಪನ್ ಫೈನಲ್ ಪ್ರವೇಶಿಸಿದ ಮೊದಲ ಭಾರತೀಯ ಆಟಗಾರ್ತಿ ಎಂಬ ದಾಖಲೆಯನ್ನು 21ರ ಹರೆಯದ ಪುಣೆ ಮೂಲದ ಆಟಗಾರ್ತಿ ಬರೆದಿದ್ದರು. 690ನೇ ಶ್ರೇಯಾಂಕದ ವೈಷ್ಣವಿ ಅವರು 124ನೇ ಶ್ರೇಯಾಂಕದ ಹನ್ನೆ ವಿರುದ್ಧ ಸೋಲುಂಡರು. ಪ್ರಶಸ್ತಿ ಮುಡಿಗೇರಿಸಿಕೊಂಡ ಹನ್ನೆ 100 ರ‍್ಯಾಂಕಿಂಗ್ ಅಂಕಗಳನ್ನು ಸಂಪಾದಿಸಿದ್ದು, ವೈಷ್ಣವಿ 65 ರ‍್ಯಾಂಕಿಂಗ್ ಅಂಕಗಳನ್ನು ಪಡೆದರು.



ಬಹುಮಾನ: ಹನ್ನೆ (ಚಾಂಪಿಯನ್) – 15,239 ಡಾಲರ್, ವೈಷ್ಣವಿ (ರನ್ನರ್‌ಅಪ್) – 8,147 ಡಾಲರ್

ಪದಬಂಧ

ರಾಜಾ ಸಂಗಮೇಶ ಹಿರೇಮಠ



5904

ಎಡದಿಂದ ಬಲಕ್ಕೆ
3.ದೇವರ್ಷಿ–ಕಲಹಪ್ರಿಯ–ನಾರದ (5)
6.ಗರನ ಗತಿಕಾಣಿಸಿದ ಪತಿವ್ರತೆ (3)
7.ಜರದ ನಡುವೆ ಶಿವನಡಗಿದ್ದಾನೆ (4)
8. ಕದ ತೆರದಾಗ ಕಂಡ ಕೂಸು (2)
9. ತುಸು ದೂರದಲ್ಲಿ ಕುಳಿತಿರುವ ಮಗ (2)
12.ನಾನು ಕಡೆಯಲ್ಲಿ ನೋಡಿದ ಸ್ವರ್ಗ (2)
14.ಯಜಮಾನನಿಗಿರುವ ಮರ‍್ಯಾದೆ (2)
15.ಪ್ರಜೆಗಳು ಚುನಾವಣೆಯಲ್ಲಿ ನೀಡುವ ಅಭಿಪ್ರಾಯ (4)
17.ಹಾಡುಗಾರ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
18.ಅತಿ ಎಚ್ಚರಿಕೆಯಿಂದ ಕಾಯುತ್ತಿದೆ ಹಾವು (5)

ಮೇಲಿನಿಂದ ಕೆಳಕ್ಕೆ
1.ಹೊಳೆ–ಪ್ರಕಾಶಿಸು ಎಂಬರ್ಥದ ಶಬ್ದ (5)
2.ಭೂಮಿ ಮುಟ್ಟಿದಂತೆ ಕಾಣುವ ಆಕಾಶಭಾಗ (3)
4.ಕಂಡ ಸವಿಯಾದ ಕನಸು (5)
5.ನಿಧಾನವಾಗಿ ಕೇಳಿದ ಇಂಪಾದ ಸ್ವರ (3)
8.ನಡುಕವು ಕಡೆಯಲ್ಲಿ ದೀರ್ಘವಾಗಿದೆ (3)
10. ಬಿಸಿ–ಕಾವಿನಿಂದ ಕೂಡಿದ್ದು (3)
11. ಕಮಲದಲ್ಲಿ ಹುಟ್ಟಿದವನು ತಲೆಕೆಳಗಾಗಿದ್ದಾನೆ (5)
13. ಕಿಮ್ಮತ್ತಿಲ್ಲದ್ದು–ಅತ್ಯಲ್ಪ ಹಣ (5)
14. ಕೈಲಾಸ ಪರ್ವತದಲ್ಲಿರುವ ಸರೋವರ (3)
16. ವ್ಯಾಜ್ಯದ ಕೈಯಲ್ಲಿ ನಾಣ್ಣುಡಿಯಿದೆ (3)

5903 ಉತ್ತರ

ಎಡದಿಂದ ಬಲಕ್ಕೆ:
1.ಅರಮರಿಕೆ 5.ಪಲ್ಲಂಗ
6.ಅಂಕುರ 7.ನನಸಾಗು
9.ರಾಹುಕಾಲ
10.ಮನೋಹರ
11.ತಮೋಗುಣ
13.ಗಾರುಡಿ 15.ಹರಕೆ
16.ತಲೆತಪ್ಪಿಸು
ಮೇಲಿನಿಂದ ಕೆಳಕ್ಕೆ :
1.ಆಪದ್ಧನ 2.ಅಗ
3.ಅಂಕೆ 4.ಬರಗಾಲ
8.ಗುಡಾರ 9.ರಾವಣ
10.ಮತ್ಸ್ಯಾಗಾರ
12.ತಲೆಕೆಡು 14.ತಡಿ
15.ಹಸು

ಕಾಸರಗೋಡು ಜಿಲ್ಲೆಯ ಮುದ್ರಣ ಇಲಾಖೆಯಡಿ ನೂತನ ಫಾರಂ ಕಚೇರಿ ಉದ್ಘಾಟಿಸಿ ಸಿಎಂ ಪಿಣರಾಯಿ

ಮುದ್ರಣಾಲಯಗಳ ಆಧುನೀಕರಣ

ಕಾಸರಗೋಡು: ನೂತನ ಮಾದರಿಯ ತಂತ್ರಜ್ಞಾನದ ಆಗಮನವು ಮುದ್ರಣ ಕ್ಷೇತ್ರದಲ್ಲಿ ನವೀನ ಬದಲಾವಣೆಗಳನ್ನು ತಂದಿದೆ ಮತ್ತು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಸರಕಾರಿ ಮುದ್ರಣಾಲಯಗಳನ್ನು ಆಧುನೀಕರಿಸಲು 100 ಕೋಟಿ ರೂಪಾಯಿ ಮೊತ್ತ ಖರ್ಚು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಕಾಸರಗೋಡು ಜಿಲ್ಲೆಯ ಮುದ್ರಣ ಇಲಾಖೆಯಡಿ ನೂತನ ಫಾರಂ ಕಚೇರಿಯನ್ನು ಆನ್‌ಲೈನ್ ಮೂಲಕ ಭಾನುವಾರ ಮುಖ್ಯಮಂತ್ರಿ ಉದ್ಘಾಟಿಸಿ ಮಾತನಾಡಿದರು.

ಸರಕಾರಿ ಮುದ್ರಣಾಲಯಗಳನ್ನು ಆಧುನೀಕರಿಸುವ ಕ್ರಮಗಳು ಈ ವರ್ಷದೊಳಗೆ ಪೂರ್ಣಗೊಳ್ಳಲಿವೆ. ಸಾರ್ವಜನಿಕರು ಮತ್ತು ಅಧಿಕಾರಿಗಳು ಇನ್ನು ಮುಂದೆ ಅನೇಕ ಅಗತ್ಯಗಳಿಗಾಗಿ ಇತರ ಜಿಲ್ಲೆಗಳನ್ನು ಅವಲಂಬಿಸಬೇಕಾಗಿಲ್ಲ ಮತ್ತು ಸರಕಾರಿ ಮುದ್ರಣಾಲಯಗಳನ್ನು ಮುಚ್ಚಬಾರದು ಎಂಬುದು ಸರಕಾರದ ಮುಖ್ಯ ನಿಲುವು ಎಂದು ಅವರು ತಿಳಿಸಿದರು.

ಕೇಂದ್ರ ಸರಕಾರದ ಅನೇಕ ಸಾರ್ವಜನಿಕ ವಲಯದ ಉದ್ಯಮಗಳನ್ನು ರಾಜ್ಯ ಸರಕಾರವು ಒಪ್ಪಂದದಂತೆ ತನ್ನ ಸುಪರ್ದಿಗೆ ಪಡೆದು ಉತ್ತಮವಾಗಿ ನಡೆಸಲು ಸಾಧ್ಯವಾಗಿದೆ ಎಂದು ಅವರು ನುಡಿದರು. ತಿರುವನಂತಪುರದ ಸರಕಾರಿ ಕೇಂದ್ರ ಮುದ್ರಣಾಲಯ ಮತ್ತು ಮಣ್ಣಂತಲ ಸರಕಾರಿ ಮುದ್ರಣಾಲಯದ ಸಿಟಿಪಿ ಯಂತ್ರವನ್ನು ಮುಖ್ಯಮಂತ್ರಿ ಇದೇ ಸಮಾರಂಭದಲ್ಲಿ ಉದ್ಘಾಟಿಸಿದರು.



ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆನ್‌ಲೈನ್ ಕಾರ್ಯಕ್ರಮ

ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಉಸ್ತುವಾರಿ, ಅರಣ್ಯ ಮತ್ತು ವನ್ಯಜೀವಿ ಇಲಾಖೆ ಸಚಿವ ಎ.ಕೆ.ಶಶೀಂದ್ರನ್ ವಹಿಸಿದ್ದರು. ಹೊಸ ಫಾರಂ ಕಚೇರಿಯ ಉದ್ಘಾಟನೆಯು ಕಾಸರಗೋಡು ಜಿಲ್ಲೆಯು ಅಭಿವೃದ್ಧಿ ಹೊಂದುತ್ತಿರುವುದಕ್ಕೆ ನಿದರ್ಶನವಾಗಿದೆ ಎಂದು ಸಚಿವರು ಹೇಳಿದರು. ಇಂದು ಆಧುನಿಕ ತಂತ್ರಜ್ಞಾನದ ಸಹಾಯದಿಂದ ಮುದ್ರಣವು 30 ನಿಮಿಷಗಳಲ್ಲಿ ಸಾಧ್ಯವಾಗಿದೆ. ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಮುದ್ರಣ ವಲಯವನ್ನು ಸುಧಾರಿಸಲು ಕೇರಳ ಸರಕಾರವು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದೆ ಎಂದು ಅವರು ತಿಳಿಸಿದರು.

ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ವಿಶೇಷ ಅತಿಥಿಯಾಗಿದ್ದರು. ಸಮಾರಂಭದಲ್ಲಿ ಕೇರಳ ಸೇವಾ ನಿಯಮಗಳ ಪುಸ್ತಕವನ್ನು ಸಚಿವ ಎ.ಕೆ.ಶಶೀಂದ್ರನ್ ಅವರಿಂದ ಕಲೆಕ್ಟರೇಟ್ ಉದ್ಯೋಗಿ ಕೆ.ಪಿ.ರೂಪಕಲಾ ಮತ್ತು ಸೇವಾ ಪುಸ್ತಕವನ್ನು ಕಲೆಕ್ಟರೇಟ್ ಉದ್ಯೋಗಿ ಅರುಣ್ ಥೋಮಸ್ ಸ್ವೀಕರಿಸಿದರು. ಗಜೆಟ್ ಅಧಿಸೂಚನೆಗಾಗಿ ಅರ್ಜಿಯನ್ನು ಅಬ್ದುಲ್ ಅಶ್ರಫ್ ಅವರಿಂದ ಫಾರಂಗಳ ಮುದ್ರಣ ಇಲಾಖೆಯ ನಿಯಂತ್ರಕ ವಿ.ಆರ್.ಪ್ರಶಾಂತ್ ಕುಮಾರ್ ಸ್ವೀಕರಿಸಿದರು.

ಎಡಿಎಂ ಪಿ.ಅಖಿಲ್, ಫಾರಂಗಳ ನಿಯಂತ್ರಕ ವಿ.ಆರ್.ಪ್ರಶಾಂತ್ ಕುಮಾರ್, ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತ ಅಜಕ್ಕೋಡು, ಗ್ರಾಮ ಪಂಚಾಯತ್ ಸದಸ್ಯ ವಿ.ಎ.ಮುಹಮ್ಮದ್ ಹನೀಫ್, ವಿವಿಧಸೇವಾಸಂಸ್ಥೆಗಳಪ್ರತಿನಿಧಿಗಳಾದಪಿ.ವಿ.ಸತೀಶ್ ಕುಮಾರ್, ವೈ.ಸಂತೋಷ್ ಕುಮಾರ್, ವಿ.ಶೋಭಾ, ಸುರೇಶ್ ಪೆರಿಯಂಗಾನಂ, ಇ.ವಿ.ರಾಜೇಶ್, ಮಧು ಕರಿಂಬಿಲ್, ಕೊಳತ್ತೂರ್ ನಾರಾಯಣನ್, ಕೆ.ಎಸ್ .ದಿನೇಶ್ ಮಾತನಾಡಿದರು.

ವಿವಿಧ ಕಾರ್ಮಿಕ ಸಂಘಗಳು, ಸೇವಾ ಸಂಸ್ಥೆಗಳು ಮತ್ತು ಕಲೆಕ್ಟರೇಟ್ ನೌಕರರ ಪ್ರತಿನಿಧಿಗಳು ಭಾಗವಹಿಸಿದ್ದರು. ಸರಕಾರಿ ಮುದ್ರಣಾಲಯದ ಅಧಿಕಾರಿ ಟಿ.ವೀರನ್ ಸ್ವಾಗತಿಸಿ, ಜಿಲ್ಲಾ ಫಾರಂ ವಿಭಾಗದ ಅಧಿಕಾರಿ ಕೆ.ವಿ.ಶಿನೋದ್ ವಂದಿಸಿದರು.

ಕೇರಳ ರಾಜ್ಯದ ಹದಿಮೂರನೇ ಫಾರಂ ಕಚೇರಿ

ಕೇರಳ ರಾಜ್ಯದ ಹದಿಮೂರನೇ ಫಾರಂ ಕಚೇರಿಯನ್ನು ಕಾಸರಗೋಡಿನಲ್ಲಿ ಉದ್ಘಾಟಿಸಲಾಯಿತು. ಹೆಸರು, ಸಹಿ, ಧರ್ಮ ಬದಲಾವಣೆ, ಗಜೆಟ್‌ನಲ್ಲಿ ಜಾತಿ ತಿದ್ದುಪಡಿ ಮುಂತಾದ ಅಗತ್ಯಗಳನ್ನು ಪ್ರಕಟಿಸುವ ಹಂತಗಳನ್ನು ಫಾರಂ ಕಚೇರಿ ಮೂಲಕ ವ್ಯವಸ್ಥೆಗೊಳಿಸಲಾಗುತ್ತದೆ. ವಿವಿಧ ಸರಕಾರಿ ಕಚೇರಿಗಳಿಗೆ ಮತ್ತು ಇಲಾಖಾ ಪರೀಕ್ಷೆಗಳಿಗೆ ಅಗತ್ಯವಿರುವ ಪುಸ್ತಕಗಳಿಗೆ ನಮೂನೆಗಳು ಮತ್ತು ನೋಂದಣಿಗಳನ್ನು ಈ ಮಳಿಗೆಯಿಂದ ವಿತರಿಸಲಾಗುತ್ತದೆ. ಕಣ್ಣೂರಿನ ಫಾರಂ ಕಚೇರಿಯಲ್ಲಿ ಈ ಹಿಂದೆ ಲಭ್ಯವಿದ್ದ ಸೇವೆಗಳು ಇನ್ನು ಮುಂದೆ ಕಾಸರಗೋಡು ಜಿಲ್ಲೆಯ ಹೊಸ ಫಾರಂ ಕಚೇರಿಯಲ್ಲಿ ದೊರಕಲಿವೆ. ಹೊಸ ಫಾರಂ ಕಚೇರಿ ತೆರೆಯುವುದರೊಂದಿಗೆ ಫಲಾನುಭವಿಗಳ ದೂರದ ಪ್ರಯಾಣಕ್ಕೆ ಕೂಡಾ ಪರಿಹಾರ ಲಭಿಸಿದಂತಾಗಿದೆ. ಜಿಲ್ಲಾ ಮಟ್ಟದ ನೂತನ ಫಾರಂ ಕಚೇರಿಯು ವಿದ್ಯಾನಗರ ಸಿವಿಲ್ ಸ್ಟೇಷನ್‌ನ ಕಾಸರಗೋಡು ಕಲೆಕ್ಟರೇಟ್ ಸಿ ಮತ್ತು ಡಿ ಬ್ಲಾಕ್‌ನ ಎರಡನೇ ಮಹಡಿಯಲ್ಲಿದೆ.

ಕಿರುಸುದ್ದಿ

ಆನ್‌ಲೈನ್ ಟ್ರೇಡಿಂಗ್ ಹೆಸರಿನಲ್ಲಿ 27.14 ಲಕ್ಷ ರೂ. ವಂಚನೆ ಬಗ್ಗೆ ದೂರು

ಕಾಸರಗೋಡು: ಆನ್‌ಲೈನ್ ಟ್ರೇಡಿಂಗ್ ಹೆಸರಿನಲ್ಲಿ ಲಾಭ ನೀಡುವುದಾಗಿ ತಿಳಿಸಿ 27,14,000 ರೂ. ಪಡೆದು ವಂಚನೆಗೈದ ದೂರಿನಂತೆ ಕಾಸರಗೋಡು ಸೈಬರ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕುಂಬಳೆ ನಾಯ್ಕಾಪು ಅನಂತಪುರ ದೇವಸ್ಥಾನ ರಸ್ತೆ ಬಳಿಯ ನಿವಾಸಿಯೋರ್ವರು ಈ ಬಗ್ಗೆ ದೂರು ನೀಡಿದ್ದು, ಆದರಂತೆ ಸೈಬರ್ ಪೊಲೀಸರು ಓರ್ವನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಟ್ರೇಡ್ ಗ್ರಿಪ್ ಎಂಬ ಟ್ರೇಡಿಂಗ್ ಕಂಪೆನಿಯ ಹೆಸರಿನಲ್ಲಿ ಎಐಯ ವಿವಿಧ ಕಂಪೆನಿಗಳಲ್ಲಿ ಠೇವಣಿ ಹೂಡಿದಲ್ಲಿ ಭಾರೀ ಲಾಭ ನೀಡಲಾಗವುದೆಂದು ನಂಬಿಸಿ ಆರೋಪಿಗಳು 2025 ಜೂನ್ ತಿಂಗಳಿನಿಂದ 2026 ಜನವರಿ 20ರ ಅವಧಿಯಲ್ಲಿ ತನ್ನ ಬ್ಯಾಂಕ್ ಖಾತೆಯಿಂದ ಈ ಹಣ ಪಡೆದು ಬಳಿಕ ಲಾಭಾಂಶವನ್ನಾಗಲೀ, ಪಾವತಿಸಿದ ಮೊತ್ತವನ್ನಾಗಲೀ ಹಿಂತಿರುಗಿಸದೆ ವಂಚಿಸಿರುವುದಾಗಿ ಪೊಲೀಸರಿಗೆ ನೀಡಿದ ದೂರಿನಲ್ಲಿ ನಾಯ್ಕಾಪು ನಿವಾಸಿ ತಿಳಿಸಿದ್ದಾರೆ. ಪೊಲೀಸರು ಸಮಗ್ರ ತನಿಖೆ ಆರಂಭಿಸಿದ್ದಾರೆ.

ಪರಿಯಾರಂ ವೈದ್ಯಕೀಯ ಕಾಲೇಜ್‌ನಲ್ಲಿ ಹೆರಿಗೆ ಕೊಠಡಿ ಧ್ವಂಸ: ಓರ್ವನ ಸೆರೆ

ಕಾಸರಗೋಡು: ವೈದ್ಯರ ಅನುಮತಿಯಿಲ್ಲದೆ ಗರ್ಭಿಣಿ ಪತ್ನಿಯನ್ನು ಡಿಸ್ಚಾರ್ಜ್ ಮಾಡಲು ಸಾಧ್ಯವಿಲ್ಲ ಎಂದು ಸಿಬ್ಬಂದಿ ಹೇಳಿದ್ದನ್ನು ವಿರೋಧಿಸಿ ಪರಿಯಾರಂ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಹೆರಿಗೆ ಕೊಠಡಿಯನ್ನು ಧ್ವಂಸ ಮಾಡಲಾಗಿದೆ. ಘಟನೆಯಲ್ಲಿ ಕಾಞಂಗಾಡ್‌ನ ರಶೀದ್ (24) ಎಂಬಾತನನ್ನು ಪರಿಯಾರಂ ಪೊಲೀಸರು ಬಂಧಿಸಿದ್ದಾರೆ. ಶುಕ್ರವಾರ ರಾತ್ರಿ ಈ ಘಟನೆ ನಡೆದಿದೆ. ರಶೀದ್ ಅವರ ಪತ್ನಿಯನ್ನು ಹೆರಿಗೆಗಾಗಿ ಹೆರಿಗೆ ಕೋಣೆಗೆ ಕರೆದೊಯ್ಯಲಾಗಿತ್ತು. ಅಷ್ಟರಲ್ಲಿ ರಶೀದ್ ನರ್ಸ್‌ಗಳ ಬಳಿ ಬಂದು ತನ್ನ ಪತ್ನಿಯನ್ನು ತಕ್ಷಣ ಡಿಸ್ಚಾರ್ಜ್ ಮಾಡಬೇಕೆಂದು ಒತ್ತಾಯಿಸಿದರು. ಆದರೆ ವೈದ್ಯರ ಅನುಮತಿಯಿಲ್ಲದೆ ಡಿಸ್ಚಾರ್ಜ್ ಮಾಡಲು ಸಾಧ್ಯವಿಲ್ಲ ಎಂದು ನರ್ಸ್‌ಗಳು ತಿಳಿಸಿದರು. ಇದರಿಂದ ಕೋಪಗೊಂಡ ರಶೀದ್ ಗಲಾಟೆ ಮಾಡಿ, ನರ್ಸಿಂಗ್ ಅಧಿಕಾರಿ ಸನಿಲಾ ಅವರನ್ನು ಕೆಟ್ಟ ಶಬ್ದಗಳಿಂದ ನಿಂದಿಸಿ, ಹೆರಿಗೆ ಕೋಣೆಯ ಬಾಗಿಲುಗಳು ಮತ್ತು ಪೀಠೋಪಕರಣಗಳನ್ನು ಒಡೆದು, ಆತಂಕ ಸೃಷ್ಟಿಸಿದ್ದಾನೆ ಎಂದು ಆಸ್ಪತ್ರೆ ಅಧಿಕಾರಿಗಳು ತಿಳಿಸಿದ್ದಾರೆ. ಮಾಹಿತಿ ತಿಳಿದು ಆಗಮಿಸಿದ ಭದ್ರತಾ ಸಿಬ್ಬಂದಿ ಮತ್ತು ಪರಿಯಾರಂ ಪೊಲೀಸರು ಯುವಕನನ್ನು ಬಂಧಿಸಿದ್ದಾರೆ.

ಹಿಂದೂ ಸಂಗಮದ ಬಂಟಿಂಗ್-ಫ್ಲೆಕ್ ಅಪಹರಣ: ಇಬ್ಬರ ವಿರುದ್ಧ ಪ್ರಕರಣ

ಮಡಿಕೇರಿ: ದಕ್ಷಿಣ ಕೊಡಗಿನ ಬಿರುನಾಣಿಯಲ್ಲಿ ಸೋಮವಾರ ನಡೆಯಲಿರುವ ಹಿಂದೂ ಸಂಗಮಕ್ಕೆ ಅಳವಡಿಸಲಾಗಿದ್ದ ಫ್ಲೆಕ್ಸ್ ಮತ್ತು ಬಂಟಿಂಗ್ಸ್‌ಗಳನ್ನು ಅಪಹರಿಸಿದ ಆರೋಪದಡಿ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ. ಬಿರುನಾಣಿಯಲ್ಲಿ ಸೋಮವಾರ ನಡೆಯಲಿರುವ ಹಿಂದೂ ಸಂಗಮಕ್ಕೆ ಸಂಬಂಧಿಸಿದಂತೆ ಬಿರುನಾಣಿ ಪಟ್ಟಣದಿಂದ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿನ ಕೊಡವ ಸಮಾಜದ ತನಕ ಬಂಟಿಂಗ್ಸ್ ಹಾಗೂ ಫ್ಲೆಕ್ಸ್‌ಗಳನ್ನು ಆಯೋಜಕ ಸಮಿತಿ ಪ್ರಮುಖರು ಅಳವಡಿಸಿದ್ದರು. ಆದರೆ ಶುಕ್ರವಾರ ತಡರಾತ್ರಿ 12 ಗಂಟೆ ಸುಮಾರಿಗೆ ವಾಹನದಲ್ಲಿ ಆಗಮಿಸಿದ್ದ ಇಬ್ಬರು ಇದನ್ನು ತೆರವು ಮಾಡಿ ಅಪಹರಿಸಿದ ಘಟನೆ ನಡೆದಿದೆ. ಶನಿವಾರ ಬೆಳಗ್ಗೆ ಈ ವಿಚಾರ ಬೆಳಕಿಗೆ ಬಂದಿದ್ದು, ಹಿಂದೂ ಕಾರ್ಯಕರ್ತರು ಜಮಾಯಿಸಿ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸುವುದರೊಂದಿಗೆ, ಕೃತ್ಯ ನಡೆಸಿದವರ ವಿರುದ್ಧ ಸೂಕ್ತ ಕ್ರಮಕ್ಕೆ ಒತ್ತಾಯಿಸಿದ್ದರು. ಬಿರುನಾಣಿ ಪಟ್ಟಣದಲ್ಲಿನ ಸಿಸಿಟಿವಿ ದೃಶ್ಯದಂತೆ ಇಬ್ಬರು ಈ ಕೃತ್ಯ ನಡೆಸಿರುವುದು ಬಯಲಾಗಿದ್ದು, ಹಿಂದೂ ಸಂಗಮ ಸಂಚಾಲಕ ಅಣ್ಣಳಮಾಡ ರಾಯ್ ಚಿಣ್ಣಪ್ಪ ಅವರು ನೀಡಿರುವ ದೂರಿನ ಅನ್ವಯ ಶ್ರೀಮಂಗಲ ಪೊಲೀಸರು ಪ್ರೀತಂ ಹಾಗೂ ಕುಪ್ಪಣಮಾಡ ರಾಬಿನ್ ಎಂಬವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಜಿಲ್ಲೆಯಾದ್ಯಂತ ಸಾಮರಸ್ಯದಿಂದ ಹಿಂದೂ ಸಂಗಮ ಕಾರ್ಯಕ್ರಮಗಳು ನಡೆಯುತ್ತಿರುವ ಸಂದರ್ಭದಲ್ಲಿ ಶಾಂತಿ ಕದಡುವ ಹಿನ್ನೆಲೆಯಲ್ಲಿ ಈ ದುಷ್ಕೃತ್ಯ ಎಸಗಿದ್ದು, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

ಗುಂಡಡ್ಕ ಸೇತುವೆಗೆ ಮರದ ದಿಮ್ಮಿಗಳು ಬಡಿದು ಹಾನಿ

ಶೀಘ್ರ ದುರಸ್ತಿಗೆ ಸ್ಥಳೀಯರ ಆಗ್ರಹ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ-ಹರಿಹರ ಪಳ್ಳತ್ತಡ್ಕ ಮೂಲಕ ಪಂಚ ಗ್ರಾಮಗಳ ಸಂಪರ್ಕ ಸೇತುವೆಯಾಗಿರುವ ಗುಂಡಡ್ಕ ಸೇತುವೆಗೆ ಮರದ ದಿಮ್ಮಿಗಳು ಬಡಿದು ಶಿಥಿಲಗೊಂಡಿರುವ ಶಂಕೆ ವ್ಯಕ್ತವಾಗಿದ್ದು, ಆದಷ್ಟು ಶೀಘ್ರ ಸೇತುವೆಯ ದುರಸ್ತಿ ಕಾರ್ಯ ಆಗಬೇಕಿದೆ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಕುಕ್ಕೆ ಸುಬ್ರಹ್ಮಣ್ಯದಿಂದ ಹರಿಹರ ಪಳ್ಳತ್ತಡ್ಕ ಸಂಪರ್ಕಿಸುವ ಮುಖ್ಯ ರಸ್ತೆಯ ಹರಿಹರ ಸಮೀಪ ಹರಿಯುತ್ತಿರುವ ಹೊಳೆಗೆ ಸೇತುವೆ ನಿರ್ಮಾಣಗೊಂಡಿದೆ. ಮಳೆಗಾಲದಲ್ಲಿ ಇದು ಮುಳುಗಡೆ ಆಗುವುದರಿಂದ ಮುಳುಗು ಸೇತುವೆಯಾಗಿಯೂ ಹೆಸರು ಪಡೆದಿದೆ. ಸುಮಾರು 50 ವರ್ಷಗಳ ಹಿಂದೆಯೇ ನಿರ್ಮಾಣಗೊಂಡಿದೆ ಎನ್ನಲಾಗಿರುವ ಈ ಸೇತುವೆ ಸುಬ್ರಹ್ಮಣ್ಯ ಭಾಗದಿಂದ ಐನೆಕಿದು, ಹರಿಹರ ಪಳ್ಳತ್ತಡ್ಕ, ಬಾಳುಗೋಡು, ಕೊಲ್ಲಮೊಗ್ರು, ಕಲ್ಮಕಾರು ಗ್ರಾಮಗಳನ್ನು ಸಂಪರ್ಕಿಸಲು ಆಧಾರವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಎರಡು ಬಾರಿ ಪ್ರಾಕೃತಿಕ ವಿಕೋಪ ಸಂಭವಿಸಿದ ಕೊಲ್ಲಮೊಗ್ರು, ಕಲ್ಮಕಾರು, ಹರಿಹರ ಭಾಗದಿಂದ ಹರಿದು ಬರುವ ಹೊಳೆ ಇದಾಗಿದ್ದು, ಪ್ರಾಕೃತಿಕ ವಿಕೋಪ ಸಂದರ್ಭದಲ್ಲೇ ಬಾರೀ ಪ್ರಮಾಣದಲ್ಲಿ ಮರ, ಮರದ ದಿಮ್ಮಿಗಳು ಕೊಚ್ಚಿಕೊಂಡು ಬಂದು ಈ ಸೇತುವೆಗೆ, ಸೇತುವೆ ಕಂಬಗಳಿಗೆ ಬಡಿದಿದೆ. ಈ ವೇಳೆ ಕಂಬಗಳಿಗೆ ಹಾನಿ ಸಂಭವಿಸಿದೆ ಎನ್ನುತ್ತಾರೆ ಸ್ಥಳೀಯರು. ಜೊತೆಗೆ ಪ್ರತೀ ಮಳೆಗಾಲದಲ್ಲಿ ಹೊಳೆಯಲ್ಲಿ ಕೊಚ್ಚಿ ಕೊಂಡು ಬರುವ ಮರದ ದಿಮ್ಮಿಗಳು ಸೇತುವೆಗೆ ಅಪ್ಪಳಿಸುತ್ತಲೇ ಇರುತ್ತದೆ.

ಮಳೆಗಾಲದಲ್ಲಿ ಕೊಚ್ಚಿಕೊಂಡು ಬರುವ ಮರದ ದಿಮ್ಮಿಗಳು ಸೇತುವೆಯಡಿ ಸಿಲುಕಿಕೊಂಡಿದ್ದು, ಪರಿಣಾಮ ನೀರಿನ ಸರಾಗ ಹರಿವಿಗೂ ಅಡ್ಡಿಯಾಗುತ್ತಿದೆ. ಸೇತುವೆಯಡಿಯಲ್ಲಿ ಸಿಲುಕಿದ ಮರದ ದಿಮ್ಮಿಗಳ ತೆರವು ನಡೆದಿಲ್ಲ. ಐದು ದಶಕಗಳ ಹಿಂದೆಯೇ ನಿರ್ಮಾಣಗೊಂಡಿರುವ ಈ ಸೇತುವೆ ಮೇಲ್ನೋಟಕ್ಕೆ ಸುಭದ್ರವಾಗಿರುವಂತೆ ಕಂಡರೂ, ಕೆಳಭಾಗದಲ್ಲಿ ನೀರಿನ ಸೆಳೆತ, ಮರದ ದಿಮ್ಮಿಗಳು ಪಿಲ್ಲರ್‌ಗೆ ಬಡಿದು ಹಾನಿಯುಂಟಾಗಿರುವ ಸಾಧ್ಯತೆಯೇ ಹೆಚ್ಚು ಎನ್ನುವುದು ಗ್ರಾಮಸ್ಥರ ಮಾತು.

ಗುಣಮಟ್ಟ ಪರೀಕ್ಷೆ ನಡೆಯಲಿ

ಸೇತುವೆ ಉತ್ತಮವಾಗಿರುವಂತೆ ಕಂಡರೂ, ಸೇತುವೆ ಹಳೆಯದಾಗಿರುವುದರಿಂದ ಸೇತುವೆ ಶಿಥಿಲಗೊಂಡಿರುವ ಸಾಧ್ಯತೆ ಇದೆ. ಈ ಹಿನ್ನಲೆಯಲ್ಲಿ ಇಂಜಿನಿಯರಿಂಗ್ ವಿಭಾಗ ಸೇತುವೆಯ ಗುಣಮಟ್ಟ ಮತ್ತು ಸುರಕ್ಷತೆ ಬಗ್ಗೆ ಪರೀಕ್ಷಿಸಿ ಅಧಿಕೃತ ಮಾಹಿತಿ ನೀಡಬೇಕು. ಸೇತುವೆಗೆ ಹಾನಿ ಸಂಭವಿಸಿದಲ್ಲಿ ಸೇತುವೆಯ ದುರಸ್ತಿಗೂ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಈಗಲೇ ಕ್ರಮ ವಹಿಸದೇ ಇದ್ದಲ್ಲಿ ಮುಂದೊಂದು ದಿನ ಸೇತುವೆಯ ಸಂಪರ್ಕ ನಿರ್ಬಂಧಿಸುವ ಪರಿಸ್ಥಿತಿ ಬಂದಲ್ಲಿ ಗ್ರಾಮಸ್ಥರು ಸುತ್ತುಬಳಸಿ ಸಂಚರಿಸಬೇಕಾಗುತ್ತದೆ. ಆದ್ದರಿಂದ ಪೂರಕ ಕ್ರಮ ಕೈಗೊಳ್ಳಬೇಕು. ಸೇತುವೆಯ ಅಡಿ ಭಾಗದ ಮರದ ದಿಮ್ಮಿಗಳ ತೆರವಿಗೂ ಕ್ರಮ ವಹಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

> **ಪ್ರಸ್ತಾವನೆ ಸಲ್ಲಿಸಲಾಗುವುದು**
>
> ಹರಿಹರದ ಗುಂಡಡ್ಕ ಸೇತುವೆಯ ಬಗ್ಗೆ ಪರಿಶೀಲಿಸಿ ದುರಸ್ತಿಗೆ ಪ್ರಸ್ತಾವನೆ ಸಲ್ಲಿಸುತ್ತೇವೆ. ಸೇತುವೆಯ ಗುಣಮಟ್ಟ ಪರಿಶೀಲನೆಗೂ ಈಗಾಗಲೇ ಪತ್ರ ವ್ಯವಹಾರ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಗುಣಮಟ್ಟ ಪರಿಶೀಲನೆ ನಡೆಸಲಾಗುವುದು. ಸೇತುವೆಯ ಅಡಿ ಭಾಗದಲ್ಲಿ ಸಿಲುಕಿರುವ ದಿಮ್ಮಿಗಳ ತೆರವು ಮಾಡಲು ಅರಣ್ಯ ಇಲಾಖೆಗೆ ನಿರ್ದೇಶನ ನೀಡಲಾಗುವುದು.
>
> ■ ಗೋಪಾಲ, ಎಇಇ, ಲೋಕೋಪಯೋಗಿ ಇಲಾಖೆ ಸುಳ್ಯ





ಅರಣ್ಯ ಇಲಾಖೆಯವರು ಸ್ಥಳೀಯರ ಕಾರ್ಯಾಚರಣೆ

ಅರಣ್ಯ ಇಲಾಖೆ ಬೋನಿಗೆ ಬಿದ್ದ ಚಿರತೆ

ಉಡುಪಿ: ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಕುಂತಲನಗರದ ದೇವಳಗುಜ್ಜಿ ಎಂಬಲ್ಲಿ ಚಿರತೆ ಸೆರೆಯಾಗಿದೆ.

ದೇವಳಗುಜ್ಜಿ ಪರಿಸರದಲ್ಲಿ ಕಳೆದ ಎರಡು ವಾರಗಳ ಹಿಂದೆ ಚಿರತೆಯೊಂದು ಓಡಾಟ ನಡೆಸುತ್ತಿದೆ ಎಂಬ ಸ್ಥಳೀಯರ ದೂರಿನ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯವರು ಕಳೆದ ವಾರ ಚಿರತೆ ಸೆರೆಗಾಗಿ ಬೋನನ್ನು ಇರಿಸಿದ್ದರು. ಭಾನುವಾರ ಬೆಳಗ್ಗಿನ ಜಾವ

ಬೆಳಗ್ಗೆ ಆಹಾರ ಅರಸಿ ಬಂದ ಚಿರತೆ ಈ ಬೋನಿನಲ್ಲಿ ಸೆರೆಯಾಗಿದೆ. ಜಿಲ್ಲೆಯ ಏಳು ಕಡೆಗಳಲ್ಲಿ ಚಿರತೆ ಸೆರೆಗೆ ಬೋನು ಇರಿಸಲಾಗಿತ್ತು. ಪಡುಬೆಳ್ಳೆ, ಕುರ್ಕಾಲು, ಅತ್ರಾಡಿ, ಕಾರ್ಕಳ ಸೇರಿದಂತೆ ಏಕಕಾಲದಲ್ಲಿ ಹಲವು ಕಡೆಗಳಲ್ಲಿ ಚಿರತೆ ಕಾಣಸಿಗುತ್ತಿದೆ.

ಇದನ್ನು ಗಮನಿಸಿದ ಸ್ಥಳೀಯರು ಕೂಡಲೇ ಉಡುಪಿ ವಲಯ ಅರಣ್ಯ ಇಲಾಖೆಯವರಿಗೆ ಈ ಕುರಿತು ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯವರು ಸ್ಥಳೀಯರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಿ ಚಿರತೆಯನ್ನು ರಕ್ಷಿಸಿದ್ದಾರೆ. 2-3 ವರ್ಷ ಈ ಹೆಣ್ಣು ಚಿರತೆಯನ್ನು ಬಳಿಕ ವೈದ್ಯಾಧಿಕಾರಿಗಳು ತಪಾಸಣೆ ನಡೆಸಿದ್ದು, ನಂತರ ಅದನ್ನು ಅಭಯಾರಣ್ಯದಲ್ಲಿ ಬಿಡಲಾಗಿದೆ ಎಂದು ಅರಣ್ಯ ಇಲಾಖಾಧಿಕಾರಿಗಳು ತಿಳಿಸಿದ್ದಾರೆ.

ಉಡುಪಿ ವಲಯ ಅರಣ್ಯಾಧಿಕಾರಿ ವಾರಿಜಾಕ್ಷಿ ಮಾರ್ಗದರ್ಶನದಲ್ಲಿ ನಡೆದ ಈಕಾರ್ಯಾಚರಣೆಯಲ್ಲಿಉಪವಲಯ ಅರಣ್ಯಾಧಿಕಾರಿಗಳಾದ ಮುಹಮ್ಮದ್ ಜುನೈದ್ ಅಖರ್, ಶಿವಾನಂದ, ಗಸ್ತು ಅರಣ್ಯ ಪಾಲಕ ಶ್ರೀನಿವಾಸ ಜೋಗಿ, ಉಚ್ಚು ಟ್ರಸ್ಟ್ ನ ಸಂಯೋಜಕ ಅಕ್ಷಯ ಶೇಟ್ ಪಾಲ್ಗೊಂಡಿದ್ದರು.



ದಾಮಸ್ ಕಟ್ಟೆ: ಬೋನಿಗೆ ಬಿದ್ದ ಚಿರತೆ

ಕಿನ್ನಿಗೋಳಿ: ಸಮೀಪದ ದಾಮಸ್ ಕಟ್ಟೆಯ ಕೋಲ್ಪೆಟ್ಟು ವನ್ಯ ಶಿಖರ ಲೇಔಟ್‌ನಲ್ಲಿ ಅಲೆದಾಡುತ್ತಿದ್ದ ಚಿರತೆ ಅರಣ್ಯ ಇಲಾಖೆಯವರು ಇಟ್ಟಿದ್ದ ಬೋನಿಗೆ ಸಿಕ್ಕಿಬಿದ್ದ ಘಟನೆ ಶನಿವಾರ ರಾತ್ರಿ ನಡೆದಿದೆ. ಕಳೆದ ಕೆಲವು ದಿನಗಳಿಂದ ಈ ಪ್ರದೇಶದಲ್ಲಿ ಚಿರತೆ ಸಂಚರಿಸುತ್ತಿರುವ ಬಗ್ಗೆ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದರು.

ಮಾಹಿತಿ ಪಡೆದ ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಮುನ್ನೆಚ್ಚರಿಕಾ ಕ್ರಮವಾಗಿ ಬೋನು ಅಳವಡಿಸಿದ್ದರು. ಶನಿವಾರ ರಾತ್ರಿ ಚಿರತೆ ಬೋನಿಗೆ ಬೀಳುತ್ತಿದ್ದಂತೆ ಅಧಿಕಾರಿಗಳು ಸುರಕ್ಷಿತವಾಗಿ ಅದನ್ನು ವಶಕ್ಕೆ ಪಡೆದರು.

ಚಿರತೆಯನ್ನು ವೈದ್ಯಕೀಯ ಪರಿಶೀಲನೆಗೆ ಒಳಪಡಿಸಿ ನಂತರ ಸೂಕ್ತ ಅರಣ್ಯ ಪ್ರದೇಶಕ್ಕೆ ಬಿಡಲಾಗುತ್ತದೆ



ಎಂದು ಅರಣ್ಯ ಇಲಾಖೆ ತಿಳಿಸಿದೆ.

ಬೋನು ಅಳವಡಿಸುವಲ್ಲಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯ ಪ್ರಣೀಕ್ ಕಿನ್ನಿಗೋಳಿ ಹಾಗೂ ಸ್ಥಳೀಯರಾದ ರಾಕೇಶ್ ಅಮೀನ್, ಸತೀಶ್ ಸಹಕರಿಸಿದ್ದರು.

ಮೂಡಬಿದ್ರಿ ವಲಯದ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು .

ಗಾಂಜಾ ಮಾರಾಟ: ಮಾಲು ಸಹಿತ ಇಬ್ಬರ ಬಂಧನ

ಮಡಿಕೇರಿ: ವೀರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಿಷೇಧಿತ ಮಾದಕ ವಸ್ತುಗಳ ಮಾರಾಟ /ಸರಬರಾಜು ಮಾಡುತ್ತಿದ್ದ ಇಬ್ಬರನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ಕೊಡಗು ಪೊಲೀಸರು ಯಶಸ್ವಿಯಾಗಿದ್ದಾರೆ.





ವೀರಾಜಪೇಟೆ ಸುಣ್ಣದ ಬೀದಿಯ ಹಸೈನಾರ್ (43), ಬಾಳುಗೋಡು ಗ್ರಾಮದ ಎ.ಜಿ.ಮೋಹನ (42) ಬಂಧಿತ ಆರೋಪಿಗಳಾಗಿದ್ದು, ಅವರಿಂದ 1 ಕೆಜಿ 60 ಗ್ರಾಂ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ.

ವೀರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಅಮ್ಮತ್ತಿ ಗ್ರಾಮದ ಒಂಟಿಯಂಗಡಿ ರಸ್ತೆಯ ಪ್ರೌಢಶಾಲೆ ಮೈದಾನದ ಬಳಿಯ ಬಸ್ ತಂಗುದಾಣದಲ್ಲಿ ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ/ಸೇವನೆ ಕುರಿತು ದೊರೆತ ಖಚಿತ ಮಾಹಿತಿ ದಾಳಿ ನಡೆಸಿದ ವೀರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಗಳನ್ನು ಮಾಲು ಸಹಿತ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವೀರಾಜಪೇಟೆ ಉಪ ವಿಭಾಗದ ಡಿವೈಎಸ್ಪಿ ಮಹೇಶ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಗ್ರಾಮಾಂತರ ಠಾಣೆ ಪಿಎಸ್‌ಐಗಳಾದ ಲತಾ ಎನ್.ಜೆ, ವಾಣಿಶ್ರೀ ಬಿ.ಎಸ್, ನಗರ ಠಾಣೆ ಪಿಎಸ್‌ಐ ಪ್ರಮೋದ್, ಗ್ರಾಮಾಂತರ ಠಾಣೆ ಎಎಸ್‌ಐ ಸೋಮಣ್ಣ ಕೆ.ಬಿ, ಸಿಬ್ಬಂದಿಗಳಾದ ನವೀನ್ ಕುಮಾರ್ ಎಸ್.ಎಲ್, ಬಸವರಾಜು ಎಂ, ಅಬ್ದುಲ್ ಮಜೀದ್, ಹನೀಫ್ , ಬೋಪಣ್ಣ, ರಾಧಾ, ಮಹೇಶ್ ಎಸ್, ಶಿವಪ್ರಸಾದ್, ರಾಜೇಶ್ ಎಸ್, ರಾಘವೇಂದ್ರ ಅವರುಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕೇರಳ ಲೋಕ ಸೇವಾ ಆಯೋಗದ ಕಾಸರಗೋಡು ಜಿಲ್ಲಾ ಕಚೇರಿ ಕಟ್ಟಡ ಮತ್ತು ಆನ್‌ಲೈನ್ ಪರೀಕ್ಷಾ ಕೇಂದ್ರಕ್ಕೆ ಶಿಲಾನ್ಯಾಸ

ಪಾರದರ್ಶಕ ಪಿಎಸ್‌ಸಿ ನೇಮಕಾತಿಗಳಲ್ಲಿ ಕೇರಳ ಮಾದರಿಯಾಗಿದೆ: ಎ.ಕೆ.ಶಶೀಂದ್ರನ್

ಕಾಸರಗೋಡು: ನೇಮಕಾತಿಗಳನ್ನು ಪಾರದರ್ಶಕವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಕೇರಳವು ದೇಶಕ್ಕೇ ಮಾದರಿಯಾಗಿದೆ. ಮಾತ್ರವಲ್ಲದೆ ಉತ್ತಮ ವ್ಯವಸ್ಥೆ ಹೊಂದಿದೆ ಎಂದು ಕಾಸರಗೋಡು ಜಿಲ್ಲಾ ಉಸ್ತುವಾರಿ, ಅರಣ್ಯ ಮತ್ತು ವನ್ಯಜೀವಿ ಇಲಾಖೆ ಸಚಿವ ಎ.ಕೆ.ಶಶೀಂದ್ರನ್ ಹೇಳಿದ್ದಾರೆ.

ಭಾರತದಲ್ಲಿ ಲೋಕ ಸೇವಾ ಆಯೋಗವು ಇಷ್ಟು ಪಾರದರ್ಶಕವಾಗಿ ಕಾರ್ಯನಿರ್ವಹಿಸುವ ಬೇರೆ ಯಾವುದೇ ರಾಜ್ಯವಿಲ್ಲ ಎಂದು ಸಚಿವರು ಉಲ್ಲೇಖಿಸಿದರು. ಅಣಂಗೂರಿನಲ್ಲಿ ನಿರ್ಮಾಣಗೊಳ್ಳಲಿರುವ ಕೇರಳ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ)ದ ಕಾಸರಗೋಡು ಜಿಲ್ಲಾ ಕಚೇರಿ ಕಟ್ಟಡ ಮತ್ತು ಆನ್‌ಲೈನ್ ಪರೀಕ್ಷಾ ಕೇಂದ್ರಕ್ಕೆ ಭಾನುವಾರ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ದಿನ ಕಳೆದಂತೆ ಮುಂದುವರಿಯುತ್ತಿರುವ ಕಾಸರಗೋಡು ಜಿಲ್ಲೆಯು ಅಭಿವೃದ್ಧಿ ಪಥದಲ್ಲಿದೆ. ಪಿಎಸ್‌ಸಿ ಜಿಲ್ಲಾ ಕಚೇರಿಯ ಶಿಲಾನ್ಯಾಸವು ಕಾಸರಗೋಡಿಗೆ ಹೊಸ ಮೈಲಿಗಲ್ಲು ಆಗಲಿದ್ದು, ಈ ನಿಟ್ಟಿನಲ್ಲಿ ಉದ್ಯೋಗಾರ್ಥಿಗಳಿಗೆ ಇನ್ನಷ್ಟು ಅತ್ಯಾಧುನಿಕ ಮಾದರಿಯ ಸೇವೆಗಳು ದೊರಕಲಿವೆ ಎಂದು ಸಚಿವರು ನುಡಿದರು.

ಕಾಸರಗೋಡು ಜಿಲ್ಲೆಯ ಮಹತ್ವವನ್ನು ಕಾಪಾಡುವ ಮತ್ತು ಅದರ ವಿಶಿಷ್ಟತೆಯನ್ನು ಸಂರಕ್ಷಿಸಲು ಸರಕಾರವು ಎಲ್ಲಾ ಕ್ರಮಗಳನ್ನು ಹಾಗೂ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಿದೆ. ಕೇರಳ ಲೋಕಸೇವಾ ಆಯೋಗವು ಯುಪಿಎಸ್‌ಸಿಗಿಂತ ಹೆಚ್ಚಿನ ನೇಮಕಾತಿಗಳು ಮತ್ತು ಅನುಕರಣೀಯ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ ಎಂದು ಅವರು ಉಲ್ಲೇಖಿಸಿದರು.

ಸಮಾರಂಭದಲ್ಲಿ ಕೇರಳ ಲೋಕ ಸೇವಾ ಆಯೋಗದ ಅಧ್ಯಕ್ಷ ಡಾ.ಎಂ.ಆರ್.ಬೈಜು ಅಧ್ಯಕ್ಷತೆ ವಹಿಸಿದ್ದರು. ಲೋಕೋಪಯೋಗಿ ಇಲಾಖೆಯ ಕಟ್ಟಡ ವಿಭಾಗದ



ಕಾರ್ಯನಿರ್ವಾಹಕ ಇಂಜಿನಿಯರ್ ಎಂ.ಜಗದೀಶ್ ವರದಿ ಮಂಡಿಸಿದರು. ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಮತ್ತು ಶಾಸಕ ಎನ್.ಎ.ನೆಲ್ಲಿಕುನ್ನು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ, ಕಾಸರಗೋಡು ನಗರಸಭೆಯ ಅಧ್ಯಕ್ಷೆ ಶಾಹಿನಾ ಸಲೀಂ, ನಗರಸಭಾ ಸದಸ್ಯೆ ಸುಧಾರಾಣಿ, ಲೋಕ ಸೇವಾ ಆಯೋಗದ ಸದಸ್ಯರಾದ ಸಿ.ಕೆ.ಶಾಜಿಬ್, ವಿ.ಆರ್.ರಮ್ಯಾ, ಕೆ.ಪ್ರಕಾಶನ್ ಮತ್ತಿತರರು ಈ ಸಂದರ್ಭದಲ್ಲಿ ಮಾತನಾಡಿದರು. ಆಯೋಗದ ಕಾರ್ಯದರ್ಶಿ ಸಾಜು ಜಾರ್ಜ್ ಸ್ವಾಗತಿಸಿ, ಜಿಲ್ಲಾ ಅಧಿಕಾರಿ ಜಿ.ಬಾಲಕೃಷ್ಣನಾಯಕ್ ವಂದಿಸಿದರು.

ಉದ್ಯೋಗಾರ್ಥಿಗಳಿಗೆ ಉತ್ತಮ ಸೌಲಭ್ಯಗಳ ಭರವಸೆ

ಹೊಸದಾಗಿ ನಿರ್ಮಾಣಗೊಳ್ಳಲಿರುವ ಕೇರಳ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ)ದ ಕಾಸರಗೋಡು ಜಿಲ್ಲಾ ಕಚೇರಿ ಕಟ್ಟಡದಲ್ಲಿ ಉದ್ಯೋಗಾರ್ಥಿಗಳಿಗೆ ಸಂಬಂಧಿಸಿ ಉತ್ತಮ ಸೌಲಭ್ಯಗಳನ್ನು ಒದಗಿಸಲು ನಿರ್ಧರಿಸಲಾಗಿದೆ. ಆನ್‌ಲೈನ್ ಪರೀಕ್ಷಾ ಕೇಂದ್ರವನ್ನೂ ಈ ಕಟ್ಟಡದಲ್ಲಿ ಸ್ಥಾಪಿಸಲು ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ. ಸಮರ್ಪಕ ಸರಕಾರಿ ಉದ್ಯೋಗ ದೊರಕಿಸುವುದು ಮತ್ತು ಸರಕಾರಿ ಸೇವೆಯನ್ನು ಸಮರ್ಥಗೊಳಿಸುವುದು ಸರಕಾರದ ಮುಖ್ಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ನೂತನ ಕಟ್ಟಡ ನಿರ್ಮಿಸಲು ಯೋಜನೆ ರೂಪಿಸಲಾಗಿದೆ.

ಇದರೊಂದಿಗೆ ಜಿಲ್ಲೆಯ ಪ್ರಗತಿಗೆ ಪೂರಕವಾಗುವ ರೀತಿಯಲ್ಲಿ ಪಿಎಸ್‌ಸಿ ಕಚೇರಿಯು ಕಾರ್ಯ ನಿರ್ವಹಿಸಲಿದೆ. ಇದೀಗ ಪಿಎಸ್‌ಸಿ ಜಿಲ್ಲಾ ಕಚೇರಿಯು ತಾಲೂಕು ಆಫೀಸ್ ಬಳಿಯ ಹಳೆಯ ಕಟ್ಟಡದಲ್ಲಿ ಸೇವೆ ಒದಗಿಸುತ್ತಿದೆ. ಅತೀ ಶೀಘ್ರದಲ್ಲಿ ನೂತನ ಕಚೇರಿ ಕಟ್ಟಡ ನಿರ್ಮಾಣಗೊಂಡು ಜನರಿಗೆ ಅಗತ್ಯದ ಸೇವೆಗಳನ್ನು ನೀಡಲು ಪಿಎಸ್‌ಸಿಯನ್ನು ಸಜ್ಜುಗೊಳಿಸಲಾಗುವುದು ಎಂದು ಪಿಎಸ್‌ಸಿ ಅಧಿಕಾರಿಗಳು ತಿಳಿಸಿದ್ದಾರೆ. ಮಾತ್ರವಲ್ಲದೆ ಪಿಎಸ್‌ಸಿ ನೇಮಕಾತಿಗಳನ್ನು ಇನ್ನಷ್ಟು ಪಾರದರ್ಶಕವಾಗಿ ಮುನ್ನಡೆಸಲು ಕಾರ್ಯಯೋಜನೆ ಕೈಗೊಳ್ಳಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 32° 23° | ಉಡುಪಿ 31° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 23, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಪ್ರವಾಸೋದ್ಯಮ, ವಸತಿ ಯೋಜನೆಗಳಿಗೆ ಕರಾವಳಿಯಲ್ಲಿ ವಿಪುಲ ಅವಕಾಶ


ಪುಟ 5
ಪೆರ್ಲದಲ್ಲಿ ಬೃಹತ್ ಹಿಂದು ಸಂಗಮ ಕಾರ್ಯಕ್ರಮ: ಶೋಭಾಯಾತ್ರೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮಂಗಳೂರಿನಲ್ಲಿ ಚದುರಂಗದಾಟ ಪ್ರವೀಣರಿಂದ ಬುದ್ಧಿಮತ್ತೆ ಪ್ರದರ್ಶನ





ಮಂಗಳೂರಿನ ಅಶೋಕನಗರ ಯುವಕ ಸಂಘದ ವತಿಯಿಂದ ಭಾನುವಾರ ನಡೆದ ಅಂತರ್ ಜಿಲ್ಲಾ ಮಟ್ಟದ ಚೆಸ್ ಪಂದ್ಯಾಟದಲ್ಲಿ ನೂರಾರು ಮಂದಿ ಚದುರಂಗದಾಟ ಪ್ರವೀಣರು ತಮ್ಮ ಬುದ್ಧಿಮತ್ತೆ ಪ್ರದರ್ಶಿಸಿದರು. ನಗರದ ಕೆನರಾ ಹೈಸ್ಕೂಲ್ ಸಭಾಂಗಣದಲ್ಲಿ ಈ ಸ್ಪರ್ಧೆ ಆಯೋಜಿಸಲಾಗಿತ್ತು. ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡಿದ್ದರು.

ಸುತ್ತ ಮುತ್ತ

ಕಂಬಳ ಪದವಿನಲ್ಲಿ ಮಣ್ಣು ಸಾಗಾಟದ ಲಾರಿ ಅಟ್ಟಹಾಸಕ್ಕೆ ಬ್ರೇಕ್!

ಮಂಗಳೂರು: ಕೋಣಾಜೆ ಠಾಣಾ ವ್ಯಾಪ್ತಿಯ ಕಂಬಳ ಪದವಿನಲ್ಲಿ ವಿರುದ್ಧ ದಿಕ್ಕಿನಲ್ಲಿ ಮಣ್ಣು ಸಾಗಾಟದ ಲಾರಿಗಳು ಸಾಗುತ್ತಿದ್ದು, ಇದರಿಂದ ಜನತೆ ಸಮಸ್ಯೆ ಗೆ ಒಳಗಾಗಿದ್ದರು. ಭಾನುವಾರ ಲಾರಿಗಳನ್ನು ತಡೆಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಣ್ಣುತುಂಬಿದ ಲಾರಿಗಳ ಅಟ್ಟಹಾಸದಿಂದ ಜನತ ಕಂಗೆಟ್ಟು ಹೋಗಿದ್ದರು. ವಿರುದ್ಧದಿಕ್ಕಿನಿಂದ ಸಂಚರಿಸುತ್ತಿದ್ದ ಲಾರಿಗಳಿಗೆ ಕಡಿವಾಣ ಇರಲಿಲ್ಲ, ಇದರಿಂದ ಬೇಸತ್ತ ಜನತೆ ಒಗ್ಗಟ್ಟಾಗಿ ಪ್ರತಿರೋದ ವ್ಯಕ್ತಪಡಿಸಿದ್ದಾರೆ.

ಸಾವಯುವ , ಅಜೈವಿಕ ತ್ಯಾಜ್ಯಕ್ಕೆ ಬೆಂಕಿ: ಜಿಲ್ಲಾ ಜಾರಿ ದಳದಿಂದ ದಂಡದ ಬಿಸಿ

ಕಾಸರಗೋಡು: ಕುತ್ತಿಕೋಲ್ ಗ್ರಾ.ಪಂ.ನ ಬಂದಡ್ಕ ಪೇಟೆಯ ಕೆಲವು ಅಂಗಡಿಗಳಿಂದ ಸಂಗ್ರಹಿಸಿದ ಸಾವಯವ- ಅಜೈವಿಕ ತ್ಯಾಜ್ಯವನ್ನು ಖಾಲಿ ಜಾಗದಲ್ಲಿ ಸುಟ್ಟಿದ್ದಕ್ಕಾಗಿ ಜಿಲ್ಲಾ ಜಾರಿ ದಳ (ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಸ್ಕ್ವಾಡ್)ವು ದಂಡ ವಿಧಿಸಿದೆ. ಸಂಜೆ ವೇಳೆ ಸಾವಯವ ಮತ್ತು ಅಜೈವಿಕ ತ್ಯಾಜ್ಯವನ್ನು ಸುಟ್ಟು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ ಎಂಬ ದೂರಿನ ತನಿಖೆಯ ನಂತರ ತಪ್ಪಿತಸ್ಥರಿಗೆ 7,500 ರೂ. ದಂಡ ವಿಧಿಸಲಾಗಿದೆ. ತ್ಯಾಜ್ಯವನ್ನು ಸುರಿಯಲು , ಸುಡಲು ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಇಬ್ಬರು ಭೂ ಮಾಲಕರಿಗೆ ತಲಾ 3,000 ರೂ. ದಂಡ ಹೇರಲಾಗಿದೆ. ಬಂದಡ್ಕದಲ್ಲಿರುವ ಹೊಟೇಲ್, ಅಂಗಡಿ ಮಾಲಕರಿಗೆ ತಮ್ಮ ಅಂಗಡಿಗಳ ಬಳಿ ತ್ಯಾಜ್ಯ ಸುಟ್ಟಿದ್ದಕ್ಕಾಗಿ 7,000 ರೂ. ದಂಡ ವಿಧಿಸಲಾಗಿದೆ. ಅತಿಥಿ ಕಾರ್ಮಿಕರು ವಾಸಿಸುವ ಕಟ್ಟಡದಿಂದ ತ್ಯಾಜ್ಯ ಹಸಿರು ಕರ್ಮ ಸೇನೆಗೆ ಹಸ್ತಾಂತರಿಸದೆ ಅಜಾಗರೂಕತೆಯಿಂದ ತ್ಯಾಜ್ಯವನ್ನು ರಸ್ತೆಬದಿಯಲ್ಲಿ ಸುರಿದಿದ್ದಕ್ಕಾಗಿ ಕ್ವಾರ್ಟರ್ಸ್ ಮಾಲಕರಿಗೆ 5,000 ರೂ. ದಂಡ ವಿಧಿಸಲಾಗಿದೆ.

ಉಪ್ಪಳ ಪ್ರದೇಶದಲ್ಲಿ ಹೆಚ್ಚಿದ ಬೀದಿನಾಯಿಗಳ ಉಪಟಳ: ಸಾರ್ವಜನಿಕರಲ್ಲಿ ಆತಂಕ

ಉಪ್ಪಳ: ಬೀದಿನಾಯಿಗಳ ಆಕ್ರಮಣ ವ್ಯಾಪಕಗೊಂಡು ಜನರಲ್ಲಿ ಭೀತಿ ಉಂಟಾಗಿರುವ ಬೆನ್ನಲ್ಲೇ ಪ್ರತಾಪನಗರ, ಪುಳಿಕುತ್ತಿ, ಅಗರ್ತಿಮೂಲೆ, ಉಪ್ಪಳ, ಉಪ್ಪಳ ಗೇಟ್, ಭಗವತೀ ಗೇಟ್, ವಾಮಂಜೂರು ಚೆಕ್‌ಪೋಸ್ಟ್, ಹೊಸಂಗಡಿ ಮೊದಲಾದ ರಾಷ್ಟ್ರೀಯ ಹೆದ್ದಾರಿ , ಒಳ ಪ್ರದೇಶಗಳಲ್ಲಿ ಬೀದಿನಾಯಿ ಗುಂಪು ಗುಂಪಾಗಿ ಓಡಾಡುತ್ತಿದ್ದು, ದಾರಿಯಲ್ಲಿ ಶಾಲಾ ಮಕ್ಕಳಿಗೆ , ಸಾರ್ವಜನಿಕರಿಗೆ ಸಂಚಾರ ಕಷ್ಟವಾಗಿದೆ. ತ್ಯಾಜ್ಯರಾಶಿಯಿರುವ ಪ್ರದೇಶಗಳಲ್ಲಿ ಪರಸ್ಪರ ಕಚ್ಚಾಡಿಕೊಳ್ಳುವುದು, ವಾಹನಗಳ ಎದುರಿಗೆ ಅಡ್ಡಾದಿಡ್ಡಿಯಾಗಿ ಓಡುವುದು ಅಪಘಾತಕ್ಕೆ ಕಾರಣವಾಗುತ್ತಿದೆ.

ಕಾಸರಗೋಡಿನಲ್ಲಿ ಭೂಮಿ ಡಿಜಿಟಲೀಕರಣ
ಇಂಚಿಂಚು ಸರ್ವೆ!
50,644.977 ಹೆಕ್ಟೇರ್ ಪ್ರದೇಶ ಪೂರ್ಣ

ಕಾಸರಗೋಡು: ಕಾಸರಗೋಡಿನಲ್ಲೀಗ ಭೂ ಡಿಜಿಟಲೀಕರಣಕ್ಕೆ ವೇಗ ದೊರೆತಿದೆ. ಜಿಲ್ಲೆಯ ಇಂಚಿಂಚೂ ಭೂಮಿಯೂ ದಾಖಲೀಕರಣವಾಗುತ್ತಿದೆ.

ಕೇರಳ ರಾಜ್ಯ ಸರ್ವೇ ಇಲಾಖೆಯ ನೇತೃತ್ವದಲ್ಲಿ ಈಗಾಗಲೇ ಮೂರು ಹಂತದ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, 4ನೇ ಹಂತದ ಸರ್ವೆಗೆ ಚಾಲನೆ ದೊರೆತಿದೆ.

ಇದುವರೆಗೆ ಜಿಲ್ಲೆಯಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಹಂತಗಳ ಡಿಜಿಟಲೀಕರಣ ಭೂ ಸರ್ವೇ ಯೋಜನೆ ಯಶಸ್ವಿಯಾಗಿ ಮುಕ್ತಾಯವಾಗಿದೆ.

ಗಡಿರೇಖೆ ದಾಖಲು

ಈ ಮಧ್ಯೆ ಜಿಲ್ಲೆಯಲ್ಲಿ ಇಲ್ಲಿಯ ತನಕ ಒಟ್ಟಾರೆ 50,644.977 ಹೆಕ್ಟೇರ್ ಭೂ ಪ್ರದೇಶಗಳ ಸರ್ವೇ ಕಾರ್ಯ ಪೂರ್ತಿಗೊಳಿಸಲಾಗಿದೆ. ಈ ಮೂಲಕ ಭೂಮಿಯ ಸರಿಯಾದ ಗಡಿರೇಖೆಗಳನ್ನು ನಿರ್ಣಯಿಸಿದ ಆದೇಶ ಅನುಷ್ಠಾನಕ್ಕೆ ಬಂದಿದೆ.

ಒಟ್ಟು ಎಷ್ಟು ಹಂತ

ಒಟ್ಟು 8 ಹಂತಗಳಲ್ಲಾಗಿ ಭೂಮಿಯ ಸರ್ವೇ ಕಾರ್ಯ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆ 2022ರಲ್ಲಿ ಪ್ರಸ್ತುತ ಯೋಜನೆ ಅಂಗವಾಗಿ ಮೊದಲ ಹಂತದ ಡಿಜಿಟಲ್ ಸರ್ವೇ ಆರಂಭಗೊಂಡಿತ್ತು. ಮೊದಲ ಹಂತದಲ್ಲಿ ಜಿಲ್ಲೆಯ 18 ಗ್ರಾಮಗಳಲ್ಲಿನ 91,115 ಪ್ರದೇಶಗಳ ಒಟ್ಟು 10,188.0173 ಹೆಕ್ಟೇರ್ ಭೂಮಿಯನ್ನು ಡಿಜಿಟಲ್ ಸರ್ವೇಗೊಳಪಡಿಸಿ ಸಮರ್ಪಕವಾದ ರೀತಿಯಲ್ಲಿ ಗಡಿಗಳ ಉಲ್ಲೇಖಿಸಲಾಗಿದೆ.

ಯಶಸ್ವಿ ಪ್ರಕ್ರಿಯೆ

ಎರಡನೇ ಹಂತದಲ್ಲಿ 19 ಗ್ರಾಮಗಳ 1,76,467 ಸ್ಥಳಗಳಲ್ಲಾಗಿ 35,271.1882 ಹೆಕ್ಟೇರ್ ಭೂಮಿಯ ಸರ್ವೇ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. 3ನೇ ಹಂತದಲ್ಲಿ 12 ಗ್ರಾಮಗಳಲ್ಲಾಗಿ 25,493 ಸ್ಥಳಗಳ 5,185.772 ಹೆಕ್ಟೇರ್ ಭೂ ಪ್ರದೇಶಗಳ ಡಿಜಿಟಲ್ ಸರ್ವೇಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಲಾಗಿದೆ.



ದಾಖಲೆಪತ್ರ ಭದ್ರ

ಕಾಸರಗೋಡು ಜಿಲ್ಲೆಯಲ್ಲಿ ಪ್ರತಿಯೊಬ್ಬರ ಭೂಮಿಯನ್ನು ಡಿಜಿಟಲ್ ಸರ್ವೆಗೊಳಪಡಿಸಿ ಆಧುನಿಕ ವ್ಯವಸ್ಥೆಯಡಿ ದಾಖಲೆಪತ್ರಗಳು ಸಹಿತ ಇನ್ನಿತರ ಸೇವೆಗಳು ಲಭಿಸುವಂತೆ ಮಾಡುವ ಗುರಿಯನ್ನು ಇಲಾಖೆ ಹೊಂದಿದೆ.

ಡಿಜಿಟಲ್ ಸರ್ವೇಗೆ ಸ್ಯಾಟಲೈಟ್ ಸಿಗ್ನಲ್!

3 ಹಂತಗಳಲ್ಲಾಗಿ ಕಾಸರಗೋಡು ಜಿಲ್ಲೆಯ 49 ಗ್ರಾಮಗಳ ಡಿಜಿಟಲ್ ಸರ್ವೇ ಪೂರ್ತಿಗೊಳಿಸಲಾಗಿದ್ದು, ಆ ಪೈಕಿ 12 ಗ್ರಾಮಗಳ ಡಿಜಿಟಲ್ ಸರ್ವೇ ವರದಿ ಈಗಾಗಲೇ ಕಂದಾಯ ಇಲಾಖೆಗೆ ಹಸ್ತಾಂತರಿಸಲಾಗಿದೆ. ಸಾಟಲೈಟ್ ಸಿಗ್ನಲ್ ಲೈಟ್ ಉಪಯೋಗಿಸಿ ಈ ಡಿಜಿಟಲ್ ಸರ್ವೇ ನಡೆಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅತ್ಯಾಧುನಿಕ ಮಾದರಿಯ ತಂತ್ರಜ್ಞಾನ ಬಳಸಲಾಗುತ್ತಿದೆ. ಇದೀಗ ನಾಲ್ಕನೇ ಹಂತದ ಸರ್ವೇಕಾರ್ಯಕ್ಕೆ ವಿದ್ಯುಕ್ತ ಚಾಲನೆ ನೀಡಲಾಗಿದೆ.

ಸಂಪೂರ್ಣ ಭೂಮಿ ಡಿಜಿಟಲೀಕರಣ

ಮಂಜೇಶ್ವರ, ಕಾಸರಗೋಡು, ಹೊಸದುರ್ಗ, ವೆಳ್ಳರಿಕುಂಡು ಕಂದಾಯ ತಾಲೂಕುಗಳನ್ನು ಆಧಾರವನ್ನಾಗಿಟ್ಟುಕೊಂಡು ಖಾಸಗಿ, ಸರಕಾರಿ, ಅರೆ ಸರಕಾರಿ, ಟ್ರಸ್ಟ್, ಸಂಘ ಸಂಸ್ಥೆಗಳಿಗೆ ಸೇರಿದ ಜಮೀನುಗಳನ್ನು ಡಿಜಿಟಲೀಕರಣಗೊಳಿಸಿ ಯಾವುದೇ ಕ್ಷಣದಲ್ಲಿ ಭೂಮಿಯ ಸಂಪೂರ್ಣ ಮಾಹಿತಿ ದೊರಕುವಂತೆ ಯೋಜನೆ ರೂಪಿಸಲಾಗುತ್ತಿದೆ.

ತೇಜಿಯಾಗುತ್ತಿದೆ ಕೃಷಿ ಉತ್ಪನ್ನಗಳ ಬೆಲೆ
ಕೃಷಿಕರನ್ನು ಕಾಡುತ್ತಿದೆ ಈಗ ಅಕಾಲಿಕ ಮಳೆ!
500ರ ಗಡಿಯಲ್ಲಿದೆ ಅಡಿಕೆ ಧಾರಣೆ!

ಪುತ್ತೂರು: ಕಳೆದ ಕೆಲವು ದಿನಗಳಿಂದ ಮಾರುಕಟ್ಟೆಯಲ್ಲಿ ಕರಾವಳಿ ಭಾಗದ ಕೃಷಿ ಉತ್ಪನ್ನಗಳ ಧಾರಣೆ ತೇಜಿಯಾಗಿದೆ. ಆದರೆ ವಾರದಿಂದ ಭೀತಿ ಹುಟ್ಟಿಸುತ್ತಿರುವ ಮಳೆ ಬೆಳೆ ಗುಣಮಟ್ಟ ರಕ್ಷಣೆಗೆ ಅಡ್ಡಿಯಾಗುತ್ತಿದೆ.

ಕಟಾವುಗೊಂಡು ಒಣಗುವ ಹಂತದಲ್ಲಿರುವ ಅಡಿಕೆ, ಕರಿಮೆಣಸಿಗೆ ಕೆಲವು ದಿನಗಳಿಂದ ಸಂಜೆ ಹೊತ್ತಿನಲ್ಲಿ ಗುಡುಗುತ್ತಿರುವ ಮಳೆ ಅಡ್ಡಿಯಾಗುತ್ತಿದೆ. ಅಂಗಳದಲ್ಲಿ ಒಣಗುತ್ತಿರುವ ಅಡಿಕೆ, ಕರಿಮೆಣಸಿಗೆ ಮಳೆ ನೀರು ಬಿದ್ದರೆ ಗುಣಮಟ್ಟ ಕಾಯ್ದುಕೊಳ್ಳಲು ಕಷ್ಟಸಾಧ್ಯ ಹಾಗೂ ದರವೂ ಕಡಿಮೆ ಲಭಿಸುತ್ತದೆ.

ಬೆಲೆ ಹೆಚ್ಚುತ್ತಿದ್ದಂತೆ ಹೊಡೆತ

ಕ್ಯಾಂಪ್ಕೋ ಮಾರುಕಟ್ಟೆಯಲ್ಲಿ ಹೊಸ ಅಡಿಕೆ ಧಾರಣೆ ರೂ. 485 ತಲುಪಿ ಖರೀದಿ ಯಾಗುತ್ತಿದ್ದರೆ ಹೊರ ಮಾರುಕಟ್ಟೆಯಲ್ಲಿ ರೂ. 490 ತನಕವೂ ಖರೀದಿಯಾಗುತ್ತಿದೆ. ಎರಡು ವಾರದ ಹಿಂದೆ 460 ಇದ್ದ ಧಾರಣೆ ಹಂತ ಹಂತ ರೂ. 25 ರಷ್ಟು ಹೆಚ್ಚಳಗೊಂಡು ಖರೀದಿಯಾಗುತ್ತಿದೆ. ಫಸಲು ಕಡಿಮೆ ಇರುವು ದರಿಂದ ಮತ್ತು ಸದ್ಯ ಮಾರುಕಟ್ಟೆ ಆವಕ ಕಡಿಮೆಯಾಗಿರುವುದರಿಂದ ಮಾರುಕಟ್ಟೆ ಮೂಲಗಳ ಪ್ರಕಾರ ಸದ್ಯ ಹೊಸ ಅಡಿಕೆ ಧಾರಣೆ 500 ದಾಟುವ ಸಾಧ್ಯತೆಯಿದೆ.



ಬೆಳೆಗಾರರಲ್ಲಿ ಮೂಡಿದೆ ಆಶಾ ಭಾವನೆ

ಏರುಮುಖದತ್ತ ಸಾಗಿರುವ ಹೊಸ ಅಡಿಕೆ ಧಾರಣೆ ಸದ್ಯದಲ್ಲೇ 500 ರೂ. ಗಡಿ ತಲುಪುವ ನಿರೀಕ್ಷೆ ಮೂಡಿಸಿದೆ. ಕೆ.ಜಿ.ಗೆ ರೂ. 700 ರತ್ತ ಸಾಗಿದ್ದ ಕರಿಮೆಣಸು ಧಾರಣೆ ಮಾರುಕಟ್ಟೆಗೆ ಆವಕ ಹೆಚ್ಚಾಗುತ್ತಿದ್ದಂತೆ 3-40 ರೂ. ಇಳಿಕೆ ಕಂಡಿದೆ. ರಬ್ಬರ್ ಧಾರಣೆ ಕೆಲ ದಿನಗಳಿಂದ ರೂ. 200 ದಾಟುವ ಮೂಲಕ ಬೆಳೆಗಾರರಲ್ಲಿ ಆಶಾ ಭಾವನೆ ಮೂಡಿಸಿದೆ.

ರಬ್ಬರ್, ಕಾಳುಮೆಣಸು ಏರಿಕೆ ರಬ್ಬರ್ ಧಾರಣೆಯಲ್ಲಿ ಏರಿಕೆಯಾಗಿದ್ದು, ಗ್ರೇಡ್ ರಬ್ಬರ್ ಧಾರಣೆ ರೂ. 211 ಕ್ಕೆ ತಲುಪಿದೆ. »ಪುಟ 6

ಕಲುಷಿತ ಗಾಳಿಯಿಂದ ತತ್ತರಿಸಿದ ಜನತೆ
ಉಡುಪಿ ಜಿಲ್ಲೆಯಲ್ಲಿ ಹೆಚ್ಚಿದ ತಾಪಮಾನ

ಉಡುಪಿ: ಹಗಲಿನಲ್ಲಿ ತೀವ್ರ ಬಿಸಿಲು ಹಾಗೂ ರಾತ್ರಿಯಲ್ಲಿ ಕಲುಷಿತ ಗಾಳಿಯ ಹೊಡೆತಕ್ಕೆ ಕರಾವಳಿ ಜನತೆ ಹೈರಾಣಾಗಿದ್ದಾರೆ.

ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಏರಿಕೆಯ ಬೆನ್ನಲ್ಲೇ ಇದೀಗ ವಾಯು ಮಾಲಿನ್ಯದ ಸಮಸ್ಯೆಯೂ ಕಾಣಿಸಿಕೊಂಡಿದೆ. ಮುಂದಿನ ಎರಡು ದಿನಗಳ ಕಾಲ ಜಿಲ್ಲೆಯ ಗರಿಷ್ಠ ತಾಪಮಾನ 36 ಆಸುಪಾಸಿನಲ್ಲಿರಲಿದ್ದು, ಸೆಖೆಯ ಪ್ರಮಾಣ ಹೆಚ್ಚಾಗಿದೆ.

ಉಡುಪಿ ಭಾಗದ ವಾಯು ಗುಣಮಟ್ಟ ಸೂಚ್ಯಂಕ ಕೂಡ ರಾತ್ರಿ ವೇಳೆ 140 ರ ಗಡಿ ದಾಟುತ್ತಿದೆ. 101 ರಿಂದ 150 ರವರೆಗಿನ ಈ ಮಟ್ಟವು ಅನಾರೋಗ್ಯ, ಉಸಿರಾಟದ ಸಮಸ್ಯೆಗೆ ಕಾರಣವಾಗುತ್ತಿದೆ. ತಾಪಮಾನದ ನಿರಂತರ ಏರಿಕೆಯ ಪರಿಣಾಮ ಮಾಲಿನ್ಯಕಾರಕ ಕಣಗಳು ವಾತಾವರಣದಲ್ಲಿ ಕೂಡಿದ್ದು, ರಾತ್ರಿ ಹೊತ್ತು ಉಸಿರಾಟದ ತೊಂದರೆ ಇರುವವರು ಮತ್ತು ಮಕ್ಕಳು ಹೊರ ಹೋಗದ ಸ್ಥಿತಿ ನಿರ್ಮಾಣವಾಗಿದೆ.



ಏಪ್ರಿಲ್ - ಮೇ ಯಲ್ಲಿ ಚಿಂತಾಜನಕ ಸ್ಥಿತಿ

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಬಿಸಿಲಿನ ತೀವ್ರತೆ ಉತ್ತುಂಗಕ್ಕೇರಲಿದೆ. ಈ ಅವಧಿಯಲ್ಲಿ ತಾಪಮಾನವು 38ನಿಂದ 40ಲಿಅ ವರೆಗೆ ತಲುಪುವ ಸಾಧ್ಯತೆಯಿದೆ. ಸಮುದ್ರದ ಸಾಮೀಪ್ಯದಿಂದ ಗಾಳಿಯಲ್ಲಿ ತೇವಾಂಶ ಹೆಚ್ಚಿರುವುದರಿಂದ, ನಿರೀಕ್ಷಿತ ತಾಪಮಾನಕ್ಕಿಂತ 4-5 ಡಿಗ್ರಿ ಸೆಲ್ಸಿಯಸ್ ಅಧಿಕ ಸೆಖೆಯ ಅನುಭವವಾಗುತ್ತಿದೆ.

ಎಕ್ಯುಐ ಕುಸಿಯಲು ಕಾರಣಗಳೇನು?

ರಾತ್ರಿ ಹೊತ್ತು ಭೂಮಿ ತಣ್ಣಗಾದಾಗ ಗಾಳಿ ಸಾಂದ್ರತೆ ಹೆಚ್ಚಿ, ಧೂಳು - ವಾಹನಗಳ ಹೊಗೆ ವಾತಾವರಣದ ಮೇಲ್ಪದರಕ್ಕೆ ಹೋಗಲಾಗದೆ ನೆಲಮಟ್ಟದಲ್ಲೇ ಸ್ಥಗಿತಗೊಳ್ಳುವ ಕಾರಣ ಎಕ್ಯುಐ ಕೆಡುತ್ತಿದೆ. ರಾಷ್ಟ್ರೀಯ ಹೆದ್ದಾರಿ, ನಗರ ಪ್ರದೇಶಗಳಲ್ಲಿ ನಿರಂತರ ನಡೆಯುತ್ತಿರುವ ರಸ್ತೆ ಕಾಮಗಾರಿಗಳಿಂದ ಏಳುವ ಸೂಕ್ಷ್ಮ ಧೂಳಿನ ಕಣಗಳು ಗಾಳಿಯಲ್ಲಿ ನೆಲೆಸಿರುತ್ತವೆ. ವಾಹನಗಳ ದಟ್ಟಣೆ, ರಾತ್ರಿ ವೇಳೆ ಅಲ್ಲಲ್ಲಿ ನಡೆಯುವ ಕಸ ವಿಲೇವಾರಿ ದಹನ ಪ್ರಕ್ರಿಯೆ ಗಾಳಿಯನ್ನು ಮತ್ತಷ್ಟು ವಿಷಕಾರಿಯಾಗಿಸುತ್ತಿದೆ.

ಹಸಿ ಮಾವಿನಕಾಯಿ, ಗಾಂಧಾರಿ ಮೆಣಸಿನ 'ಮ್ಯಾಂಗೋ ಚಿಲ್ಲಿ' ವೈನ್ ಮದ್ಯದಂಗಡಿಗೆ

ಕಾಸರಗೋಡು: ಹಸಿ ಮಾವಿನಕಾಯಿಯ ಹುಳಿ ಹಾಗೂ ಗಾಂಧಾರಿ ಮೆಣಸಿನ ಖಾರ ಒಳಗೊಂಡ ಹೊಸ ರುಚಿಯ ವೈನ್‌ನ್ನು ಕೇರಳ ಬಿವರೇಜ್ ಕಾರ್ಪೋರೇಶನ್ ತಯಾರಿಸುತ್ತಿದ್ದು, ಇದನ್ನು ಏಪ್ರಿಲ್ 1ರಿಂದ ಬಿವರೇಜ್ ಕಾರ್ಪೊರೇಷನ್‌ನ ಎಲ್ಲಾ ಮದ್ಯದಂಗಡಿಗಳ ಮೂಲಕ ಮಾರಾಟ ಮಾಡಲು ತೀರ್ಮಾನಿಸಲಾಗಿದೆ.

ಶೇ.15.5ರಷ್ಟು ಮಾತ್ರ ಮದ್ಯ ಸಾರ

ಈ ನೂತನ ವೈನ್‌ಗೆ 'ಮ್ಯಾಂಗೋ ಚಿಲ್ಲಿ' ಎಂದು ಹೆಸರಿಡಲಾಗಿದೆ. ಈ ವೈನ್‌ನಲ್ಲಿ ಶೇಕಡಾ 15.5ರಷ್ಟು ಪ್ರಮಾಣದಲ್ಲಿ ಮಾತ್ರ ಮದ್ಯ ಸಾರ (ಆಲೋಹಾಲ್) ಒಳಗೊಂಡಿದೆ. ಇದರ ಹೊರತಾಗಿ ಮಾವಿನ ಹಣ್ಣಿನಿಂದ ತಯಾರಿಸಿದ ವೈನ್‌ನ್ನು ತಯಾರಿಸಲಾಗಿದೆ. ಈ ಎರಡು ಮಾದರಿ ವೈನ್‌ಗಳು ಏಪ್ರಿಲ್ 1ರಿಂದ ಬಿವರೇಜ್ ಕಾರ್ಪೋರೇಷನ್ ಮದ್ಯದಂಗಡಿಗಳ ಮೂಲಕ ಮಾತ್ರವಲ್ಲ ಬಾರ್‌ಗಳಲ್ಲೂ ಲಭ್ಯವಾಗಲಿದೆ.

ರಾಜ್ಯ ಅಬಕಾರಿ ಇಲಾಖೆಯಿಂದ ಸಿರ ಎಂಬ ಬ್ರಾಂಡ್ ನೇಮ್‌ನಲ್ಲಿ ಆಲೋಹಾಲಿಕ್‌ವೈನ್ ನಿರ್ಮಾಣ ಲೈಸನ್ಸ್ ಲಭಿಸಿರುವ ಕೊಟ್ಟಾರಕರೆಯ ಪಿ.ಒ.ಥೋಮಸ್ ಎಂಬವರ ಮಾಲಕತ್ವದಲ್ಲಿರುವ ಎಸ್‌ಎಸ್. ವೈನರಿಯಲ್ಲಿ ಈ ವೈನ್ ತಯಾರಿಸಿ ಅದನ್ನು ಬಿವರೇಜ್ ಕಾರ್ಪೋರೇಷನ್‌ಗೆ ನೀಡಲಾಗುತ್ತಿದೆ. »ಪುಟ 6



ಏ.1ರಿಂದ ಮಾರಾಟ

'ಮ್ಯಾಂಗೋ ಚಿಲ್ಲಿ ವೈನ್' ಏಪ್ರಿಲ್ 1ರಿಂದ ಬಿವರೇಜ್ ಕಾರ್ಪೋರೇಷನ್‌ನ ಎಲ್ಲಾ ಮದ್ಯದಂಗಡಿಗಳ ಮೂಲಕ ಮಾರಾಟ ಮಾಡಲು ತೀರ್ಮಾನಿಸಲಾಗಿದೆ.

ಸುಬ್ರಹ್ಮಣ ಗ್ರಾಮದ ಪರ್ವತಮುಖಿ ದೋಣಿಮಕ್ಕಿ ಪರಿಸರದಲ್ಲಿ ಭಾರೀ ಗಾಳಿ ಮಳೆ
ಮನೆ ಮೇಲೆಯೇ ಬಿದ್ದ ಮರ, ಅಪಾರ ನಾಶ ನಷ್ಟ

ಸುಬ್ರಹ್ಮಣ್ಯ: ಕಡಬ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಪರ್ವತಮುಖಿ ಮತ್ತು ದೋಣಿಮಕ್ಕಿ ಪ್ರದೇಶದಲ್ಲಿ ಶನಿವಾರ ಸಂಜೆ ಸುರಿದ ಭಾರೀ ಗಾಳಿ ಮಳೆಗೆ ಮನೆಯ ಮೇಲೆ ಮರಬಿದ್ದು ಅಪಾರ ಹಾನಿ ಸಂಭವಿಸಿದೆ. ಆದರೆ ಘಟನೆ ನಡೆಯುವ ವೇಳೆ ಮನೆಯಲ್ಲಿ ಯಾರೂ ಇಲ್ಲದೆ ಇದ್ದುದರಿಂದ ಸಂಭಾವ್ಯ ಅಪಾಯ ತಪ್ಪಿದೆ.

ಭಾರೀ ಗಾಳಿ ಮಳೆಗೆ ಪರ್ವತ ಮುಖಿಯಲ್ಲಿನ ಶಂಕರ ಮೇಸ್ತ್ರಿ ಎಂಬವರ ಮನೆಯ ಮೇಲೆ ಮಾವಿನ ಮರದ ಭಾರೀ ಗಾತ್ರದ ಗೆಲ್ಲು ಬಿದ್ದಿದೆ.ಇದರಿಂದ ಛಾವಣಿ ಸಂಪೂರ್ಣ ಧ್ವಂಸವಾಯಿತು.



ಛಾವಣಿಯ ಸಿಮೆಂಟ್ ಶೀಟುಗಳು ಸಂಪೂರ್ಣ ಹುಡಿಯಾಗಿತ್ತು. ಅಲ್ಲದೆ ಗೋಡೆಗಳು ಬಿರುಕು ಬಿಟ್ಟಿದೆ. ಘಟನೆ ನಡೆದ ಬಳಿಕ ಡಾ.ರವಿಕಕ್ಕೆಪದವು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ರವಿ ಕಕ್ಕೆಪದವು ಮತ್ತು ಟ್ರಸ್ಟ್‌ನ ಸದಸ್ಯರು, ಕುಕ್ಕೆಶ್ರೀ ಆಟೋಚಾಲಕ ಮಾಲಕರ ಸಂಘದ ಸದಸ್ಯರು ಮತ್ತು ಸ್ಥಳೀಯರು ಸ್ಥಳಕ್ಕೆ ತೆರಳಿ ಮನೆಯ ಮೇಲಿದ್ದ ಮರದ ಗೆಲ್ಲನ್ನು ತೆರವು ಮಾಡಿ ಸಹಾಯಹಸ್ತಚಾಚಿದರು. »ಪುಟ 6

ಹಲವೆಡೆ ಹಾನಿ

ಶನಿವಾರದ ಮಳೆಗೆ ಕೈಕಂಬ, ಕಿದು, ಬಳ್ಪ ಮೊದಲಾದ ಕಡೆ ರಸ್ತೆಗೆ ಮರ ಉರುಳಿ ಬಿದ್ದಿತ್ತು. ಕೈಕಂಬ ಸಮೀಪ ಮರ ವಿದ್ಯುತ್ ತಂತಿ ಮೇಲೆ ಬಿದ್ದ ಕಾರಣ ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ.

ಬಲ್ಯದಲ್ಲಿ ಗಾಳಿ ಮಳೆಗೆ ರಸ್ತೆಗೆ ಮುರಿದು ಬಿದ್ದ ಮರ, ತೋಟಗಳಿಗೆ ಹಾನಿ

ಕಡಬ: ಶನಿವಾರ ಸಂಜೆ ಬಲ್ಯ ಪರಿಸರದಲ್ಲಿ ಸುರಿದ ಭಾರೀ ಗಾಳಿ ಮಳೆಯಿಂದ ಹಲವೆಡೆ ಹಾನಿ ಸಂಭವಿಸಿದೆ. ಮರಗಳು ಮುರಿದು ಪರಿಣಾಮ ಬಲ್ಯ-ನೆಲ್ಯಾಡಿ ರಸ್ತೆ ಸಂಪರ್ಕ ಕೆಲ ಗಂಟೆಗಳ ಕಾಲ ಕಡಿತಗೊಂಡ ಘಟನೆ ನಡೆದಿದೆ. ಹಲವಾರೆಡೆ ದೊಡ್ಡ ಮರಗಳು ರಸ್ತೆಗೆ ಅಡ್ಡವಾಗಿ ಬಿದ್ದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಬಲ್ಯ-ನೆಲ್ಯಾಡಿ ಮಾರ್ಗ ಸಂಚಾರ ಸ್ಥಗಿತಗೊಂಡಿತ್ತು. ಗಾಳಿ ಮಳೆಯಿಂದ ಹಲವರ ತೋಟಗಳಲ್ಲಿ ನೂರಾರು ಅಡಿಕೆ, ಬಾಳೆ ಗಿಡಗಳು ಮುರಿದು ಬಿದ್ದು ರೈತರಿಗೆ ನಷ್ಟ ಉಂಟಾಗಿದೆ. »ಪುಟ 6



ಪೆರ್ನಾಜೆಯಲ್ಲಿ ಕೃಷಿ ತೋಟಗಳಿಗೆ ಮತ್ತೆ ಲಗ್ಗೆಯಿಟ್ಟ ಗಜರಾಜ: ಬಾಳೆ, ಅಡಿಕೆ ನಾಶ
ವಾರ ಕಳೆದು ಮತ್ತೆ ಪ್ರತ್ಯಕ್ಷ | ರೈತರಲ್ಲಿ ಹೆಚ್ಚಿದ ಆತಂಕ

ಪುತ್ತೂರು: ಸುಳ್ಯ ತಾಲೂಕು ಭಾಗದ ಅರಣ್ಯದಿಂದ ಪುತ್ತೂರು ತಾಲೂಕಿನ ಪೆರ್ನಾಜೆ ಪರಿಸರದ ಮೂಲಕ ಆಗಮಿಸಿ ಕೃಷಿ ಹಾನಿ ಮಾಡುತ್ತಿರುವ ಗಜರಾಜ ತನ್ನ ಕಾರ್ಯವನ್ನು ಮುಂದುವರೆಸುತ್ತಲೇ ಇದೆ. ಫೆ.12 ರಂದು ಪೆರ್ನಾಜೆಯ ಕುಮಾರ್ ಹಾಗೂ ಪರಿಸರದವರ ಕೃಷಿ ತೋಟಕ್ಕೆ ಲಗ್ಗೆ ಇಟ್ಟಿದ್ದ ಆನೆ ಮತ್ತೆ ಕಾಡು ಸೇರಿದ್ದರೂ ವಾರ ಬಿಟ್ಟು ಮತ್ತೆ ಆಗಮಿಸಿದೆ. ಕುಮಾರ್ ಪೆರ್ನಾಜೆಯವರ ಕೆರೆಯಲ್ಲಿ ಈಜಾಡಿ ಗಜರಾಜ ಅಡಿಕೆ ಗಿಡ, ಈಚಲ ತಿಂದು ಅನಂತರ ಸಮೀಪದ ರಾಘವೇಂದ್ರ ಭಟ್ರ ತೋಟಕ್ಕೆ ನುಗ್ಗಿಹತ್ತಕ್ಕೂ ಹೆಚ್ಚು ಬಾಳೆಯನ್ನು ಧ್ವಂಸ ಮಾಡಿ ಬಂದ ದಾರಿಯಲ್ಲೇ ಹಿಂತಿರುಗಿ ಮುಗೇರು, ಗುಡ್ಡಡ್ಕ, ಆನೆಗುಂಡಿ ಕಡೆ ತೆರಳಿದೆ.



ಊಟಕ್ಕಿಲ್ಲದ ಉಪ್ಪಿನ ಕಾಯಂತಾಗಿದೆ!!

ಅರಣ್ಯ ಇಲಾಖೆಯವರು ಸೈರನ್ ಮೊಳಗಿಸಿದರೂ ಆನೆಗೆ ಗಂಭೀರ ಪರಿಣಾಮವಾಗುತ್ತಿಲ್ಲ. ಲಕ್ಷಾಂತರ ರೂ. ಸರಕಾರ ಖರ್ಚು ಮಾಡಿ ಸೋಲಾರ್ ಬೇಲಿ ಅಳವಡಿಸಿದರು ನಿರ್ವಹಣೆ ಸರಿಯಿಲ್ಲದೆ ಊಟಕ್ಕಿಲ್ಲದ ಉಪ್ಪಿನ ಕಾಯಂತಾಗಿದೆ ಎಂದು ಕೃಷಿಕರು ಅಳಲು ತೋಡಿಕೊಂಡಿದ್ದಾರೆ.

ಸುತ್ತಮುತ್ತ

ಇಂದು ಸೈರನ್ ಉದ್ಘಾಟನೆ



ಪುತ್ತೂರು: ನಗರದಲ್ಲಿ 1971ರಲ್ಲಿ ಸ್ಥಾಪನೆಯಾಗಿ 20 ವರ್ಷಗಳ ಹಿಂದೆ ನಿಂತು ಹೋಗಿದ್ದ ಸೈರನ್‌ಗೆ ಫೆ.22 ರಿಂದ ಮತ್ತೆ ಚಾಲನೆ ದೊರೆಯುತ್ತಿದೆ. ಕೆಲವು ದಿನಗಳ ಹಿಂದೆ ಪ್ರಾಯೋಗಿಕ ಪರೀಕ್ಷೆ ನಡೆಸಲಾಗಿತ್ತು. ಇದೀಗ ಸೈರನ್ ಕೊಠಡಿಗೆ ಸುಣ್ಣ-ಬಣ್ಣ ಬಳಿಯಲಾಗಿದ್ದು ಫೆ.22 ರಂದು 11 ಗಂಟೆಗೆ ಶಾಸಕ ಅಶೋಕ್ ಕುಮಾರ್ ರೈ ಚಾಲನೆ ನೀಡಲಿದ್ದಾರೆ. ಮುಂದೆ ಪ್ರತಿದಿನ ನಿಗದಿತ ಸಮಯಗಳಲ್ಲಿ ಸೈರನ್ ಮೊಳಗಲಿದೆ. ಸದ್ಯ ಪುತ್ತೂರು ನ್ಯಾಯಾಲಯ ಚಟುವಟಿಕೆಯೂ ಸ್ಥಳಾಂತರಗೊಂಡಿರುವುದರಿಂದ ಸೈರನ್ ಮೊಳಗಿಸಲು ನಿರಾಂತಕವಾಗಿದೆ.

ಮಕ್ಕಳ ಕಲಾ ಲೋಕ: ಅಧ್ಯಕ್ಷರಾಗಿ ರಮೇಶ ಎಂ. ಬಾಯಾರು



ಬಂಟ್ವಾಳ: ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಂಟ್ವಾಳ ತಾಲೂಕು ಘಟಕ ಮಕ್ಕಳ ಕಲಾ ಲೋಕ ಇದರ 2026–27 ನೇ ಸಾಲಿನ ಅಧ್ಯಕ್ಷರಾಗಿ ರಾಜ್ಯ ಪ್ರಶಸ್ತಿ ಪುರಸ್ಕೃತ ನಿವೃತ್ತ ಅಧ್ಯಾಪಕ ರಮೇಶ ಎಂ. ಬಾಯಾರು ಪುನರಾಯ್ಕೆಯಾಗಿದ್ದಾರೆ ವಿಟ್ಲ ಮಾದರಿ ಶಾಲೆಯಲ್ಲಿ ನಡೆದ ಮಕ್ಕಳ ಕಲಾ ಲೋಕದ ಮಹಾಸಭೆಯಲ್ಲಿ ಈ ಆಯ್ಕೆ ನಡೆಸಲಾಯಿತು. ಬಾಯಾರು ಅವರು ಲೇಖಕರು, ಭಾಷಣಕಾರರು, ಸಂಪನ್ಮೂಲ ವ್ಯಕ್ತಿಯೂ ಆಗಿದ್ದಾರಲ್ಲದೆ ಅಡ್ಯನಡ್ಕ ಜನತಾ ವಿದ್ಯಾ ಸಂಸ್ಥೆಗಳ ಗೌರವ ಆಡಳಿತಾಧಿಕಾರಿಯಾಗಿರುತ್ತಾರೆ. ಉಪಾಧ್ಯಕ್ಷರಾಗಿ ಎಂ.ಕೆ ನಾಯ್ಕ್ ಅಡ್ಯನಡ್ಕ ಕಾರ್ಯದರ್ಶಿ ಪುಷ್ಪಾ ಎಚ್. ಖಜಾಂಚಿಯಾಗಿ ಶ್ರೀಪತಿ ನಾಯಕ್ ನಾಟೆ ಕಲ್ಲು, ಜೊತೆ ಕಾರ್ಯದರ್ಶಿಯಾಗಿ ವಿಲ್ಮಾ ಸಿಕ್ವೇರಾ, ಸಂಘಟನಾ ಕಾರ್ಯದರ್ಶಿಯಾಗಿ ಭವಾನಿ ಮಾಣ, ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಶಿವರಾಮ ಭಟ್ ನೆಡ್ಲೆ, ವಿಶ್ವನಾಥ ಗೌಡ ಕುಳಾಲು, ಸಂಜೀವ ಮಿತ್ತಳಿಕೆ, ಇಸ್ಮಾಯಿಲ್ ಅಳಿಕೆಮಜಲು, ವಿಟ್ಲ ರಾಜೇಶ ವಿಟ್ಲ, ಗೌರವ ಸಲಹೆಗಾರರಾಗಿ ಮಕ್ಕಳ ಕಲಾ ಲೋಕದ ಮಾಜಿ ಅಧ್ಯಕ್ಷರುಗಳಾದ ಅನಂತ ಕೃಷ್ಣ ಹೆಬ್ಬಾರ್, ಭಾಸ್ಕರ ಅಡ್ವಳ ಮತ್ತು ಮಹಾಬಲ ಭಟ್ ನೆಗಳಗುಳಿ, ಮಾಧ್ಯಮ ಪ್ರತಿನಿಧಿಯಾಗಿ ಚಿನ್ನಾ ಕಲ್ಲಡ್ಕ ಆಯ್ಕೆಯಾಗಿದ್ದಾರೆ.

ಕೊಯ್ಯೂರು ದೈವಗಳ ನೇಮ

ಮುಲ್ಕಿ: ಕೊಯ್ಯಾರು ಶ್ರೀ ಬಬ್ಬುಸ್ವಾಮಿ ದೈವಗಳ ಸಿರಿ ಸಿಂಗಾರದ ವಾರ್ಷಿಕ ನೇಮ ಫೆ.21ಕ್ಕೆ ರಾತ್ರಿ ವಿಜೃಂಭಣೆಯಿಂದ ನಡೆಯಿತು. ಶನಿವಾರ ಚಪ್ಪರ ಮುಹೂರ್ತ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ ಶ್ರೀ ಬಬ್ಬುಸ್ವಾಮಿ ಹಾಗೂ ತನ್ನಿಮಾನಿಗ ದೈವಗಳ ನೇಮ ನಡೆಯಿತು. ಈ ಸಂದರ್ಭ ಅಶೋಕ್ ಶೆಟ್ಟಿ ಕರುಣಾಕರ, ನರಸಿಂಹ ಪೂಜಾರಿ, ಮಧ್ಯಸ್ಥ ಗೋಪಿನಾಥ ಪಡಂಗ ಮತ್ತಿತರರು ಉಪಸ್ಥಿತರಿದ್ದರು. ಫೆ.22ರಂದು ಭಾನುವಾರ ಶ್ರೀ ಜುಮಾದಿ ಬಂಟ ದೈವಗಳ ನೇಮ ನಡೆಯಿತು

ನಾಗಬ್ರಹ್ಮ ಮಹಿಳಾ ಸಮಿತಿ ಅಧ್ಯಕ್ಷರಾಗಿ ಪ್ರಮೀಳಾ ಆಯ್ಕೆ



ಕೊಣಾಜೆ: ಶ್ರೀ ನಾಗಬ್ರಹ್ಮ ಮಹಿಳಾ ಸಮಿತಿ ಪಟ್ಟೋರಿ ಕೊಣಾಜೆ ಇದರ 2026 –27 ರ ಪದಾಧಿಕಾರಿಗಳ ಆಯ್ಕೆ ಇತ್ತೀಚೆಗೆ ನಡೆಯಿತು. ಸಂಘದ ಅಧ್ಯಕ್ಷರಾಗಿ ಪ್ರಮೀಳಾ ಪಟ್ಟೋರಿ, ಪ್ರದಾನ ಕಾರ್ಯದರ್ಶಿಯಾಗಿ ಲೋಲಾಕ್ಷಿ ವಸಂತ್ ಅವರು ಆಯ್ಕೆಯಾದರು. ಗೌರವ ಅಧ್ಯಕ್ಷರಾಗಿ ಮೀನಾಕ್ಷಿರಾಮಕೃಷ್ಣ ನಿಶಾರವಿ ಕಾನ, ಗೌರವ ಸಲಹೆಗಾರರಾಗಿ ಜಯ ವಿಶ್ವನಾಥ,ಹೇಮಲಕ್ಷ್ಮಿ ಅಶ್ವಿನಿ ಹೇಮನಾಥ, ಉಪಾಧ್ಯಕ್ಷರಾಗಿ ಬೇಬಿ ರೇಖಾ, ಪವಿತ್ರ ಗಂಗಾಧರ್, ಜೊತೆ ಕಾರ್ಯದರ್ಶಿಯಾಗಿ ರಮ್ಯಾ ಗಣೇಶ್, ಅಕ್ಷತ ರವಿ ಪಟ್ಟೋರಿ ಭಜನಾ ಸಂಚಾಲಕರಾಗಿ ಜಯಂತಿ ರಾಜೇಶ್ ಕಾನ, ಸಹನಾ ಸತೀಶ್ , ಕ್ರೀಡಾ ಸಂಚಾಲಕರಾಗಿ ಲಾವಣ್ಯ ಹರೀಶ್, ನಯನ ಗಟ್ಟಿ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಶ್ವೇತಾ ಪ್ರವೀಣ್ ಪಟ್ಟೋರಿ, ಬಬಿತ ದಿನೇಶ್ ಕಲಾಯಿ ಆಯ್ಕೆಯಾದರು.

ಖಾಸಗಿ ಸಭಾಂಗಣದ ಮೊರೆ ಹೋಗುತ್ತಿದ್ದಾರೆ ಕಲಾ ಸಂಘಟಕರು | ಪಂಜೆ ಭವನವೂ ಅಪೂರ್ಣ

ಸಾಹಿತಿ, ರಂಗಕರ್ಮಿಗಳ ತವರಿನಲ್ಲಿಲ್ಲ 'ರಂಗಮಂದಿರ'!

ಬಂಟ್ವಾಳ: ಪಂಜೆ ಮಂಗೇಶರಾಯರು, ಬಿ.ವಿ. ಕಾರಂತರಂತಹ ಮೇರು ಸಾಹಿತಿ, ರಂಗಕರ್ಮಿಗಳ ತವರು ನೆಲವಾದ ಬಂಟ್ವಾಳ ತಾಲೂಕಿನ ಕೇಂದ್ರ ಸ್ಥಾನ ಅಥವಾ ಆಸುಪಾಸಿನಲ್ಲಿ ಸುಸಜ್ಜಿತ ರಂಗಮಂದಿರ ಇಲ್ಲದಿರುವುದು ನಾಚಿಕೆಗೇಡಿನ ಸಂಗತಿ. ತಾಲೂಕು ಕೇಂದ್ರಸ್ಥಾನದಲ್ಲಿ ಕಾರ್ಯಕ್ರಮ ಏರ್ಪಡಿಸಲು ಯಾವುದಾದರೂ ಖಾಸಗಿ ಹಾಲ್ ಫ್ರೀ ಇದೆಯೇ ಎಂದು ಕಲಾ ಸಂಘಟಕರು ಹುಡುಕಾಡಬೇಕು!

ದೇಶ, ವಿದೇಶಗಳಲ್ಲಿ ಹೆಸರು ಮಾಡಿರುವ ಖ್ಯಾತ ರಂಗಕರ್ಮಿ ಬಿ.ವಿ. ಕಾರಂತರು ಹುಟ್ಟಿರುವ ತಾಲೂಕು ಬಂಟ್ವಾಳದಲ್ಲಿ ಇದುವರೆಗೂ ಸುಸಜ್ಜಿತ ರಂಗಮಂದಿರ ನಿರ್ಮಾಣವಾಗಿಲ್ಲ. ಕನ್ನಡ, ತುಳು ರಂಗಭೂಮಿಗೆ ಸಾಕಷ್ಟು ನಟ, ನಿರ್ದೇಶಕರನ್ನು ಒದಗಿಸಿರುವ ಹೆಮ್ಮೆ ತಾಲೂಕು ಬಂಟ್ವಾಳಕ್ಕಿದ್ದರೂ ದಶಕಗಳ ಹಿಂದೆ ಪಂಜೆ ಮಂಗೇಶರಾಯರ ಹೆಸರಿನಲ್ಲಿ ಸಮಿತಿಯೊಂದು ಅಸ್ತಿತ್ವಕ್ಕೆ ಬಂದು ಬಿ.ಸಿ.ರೋಡಿನ ಸರಕಾರಿ ಜಾಗವೊಂದನ್ನು ಬಯಲು ರಂಗಮಂದಿರ ನಿರ್ಮಾಣಕ್ಕೆಂದು ಕೋರಿತ್ತು. ಆದರೆ ಅದರ ಬದಲು ಪಂಜೆ ಭವನ ನಿರ್ಮಾಣ ಮಾಡುತ್ತೇವೆ ಎಂದು ಹೊರಟ ಆಡಳಿತಕ್ಕೆ ಇನ್ನೂ ಕಟ್ಟಡ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಸದ್ಯ ಈ ಕಟ್ಟಡದ ಕಾಮಗಾರಿ ನನೆಗುದಿಗೆ ಬಿದ್ದಿದ್ದು ದುಬಾರಿ ಬಾಡಿಗೆ ತೆತ್ತು, ನಾಟಕ ಆಯೋಜಿಸುವ ಪರಿಸ್ಥಿತಿ



ಸಂಘಟಕರದ್ದಾಗಿದೆ.

ಮೂರನೇ ಸಮ್ಮೇಳನ

ದ.ಕ. ಜಿಲ್ಲಾ ಕಸಾಪ ಬಂಟ್ವಾಳವನ್ನು ಕೇಂದ್ರವಾಗಿಟ್ಟು ಈಗಾಗಲೇ ಎರಡು ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಿದ್ದು ಇದೀಗ ಬಂಟ್ವಾಳದಲ್ಲಿ ಮೂರನೇ ಬಾರಿಗೆ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವುದಕ್ಕೆ ಅಣಿಯಾಗುತ್ತಿದೆ. ಈ ಸಮ್ಮೇಳನವನ್ನು ಬಿ.ಸಿ.ರೋಡಿನ ಖಾಸಗಿ ಕಲಾ ಮಂದಿರವೊಂದರಲ್ಲಿ ಸಂಘಟಕರು ಆಯೋಜಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಹೀಗೆ ಸಾಹಿತ್ಯ ಮಾತ್ರವಲ್ಲ ಸಾಂಸ್ಕೃತಿಕ ಕಲಾರಂಗಕ್ಕೆ ಸಾಕಷ್ಟು ಕಲಾವಿದರು, ಸಾಹಿತಿಗಳನ್ನು ಕೊಡುಗೆಯಾಗಿ ನೀಡಿದ್ದರೂ, ಇಲ್ಲೊಂದು ಸುಸಜ್ಜಿತ ರಂಗಮಂದಿರವಿಲ್ಲ ಎಂಬುದೇ ಕಲಾಕಾರರ ಅಳಲು.

> ಇಡೀ ತಾಲೂಕು ಪ್ರತಿನಿಧಿಸುವ ರಂಗಮಂದಿರ ನಿರ್ಮಾಣಕ್ಕೆ ಆಡಳಿತ ನಿರಾಸಕ್ತಿ ವಹಿಸಿರುವುದು ಬೇಸರನೀಯ. ಬಿ.ವಿ. ಕಾರಂತ ಹುಟ್ಟಿದ ಬಂಟ್ವಾಳ ತಾಲೂಕು ಕೇಂದ್ರದಲ್ಲಿ ರಂಗಭೂಮಿ ಚಟುವಟಿಕೆಗಳಿಗೆ ಸ್ಥಾನವಿಲ್ಲ ಎಂಬುದೇ ಬೇಸರ. ಬೇಡಿಕೆ ಮಂಡಿಸಿದ್ದರೂ ಇದಕ್ಕೆ ಸಕಾರಾತ್ಮಕ ಸ್ಪಂದನೆ ದೊರಕುತ್ತಿಲ್ಲ.
>
> ● ಮಹಾಬಲೇಶ್ವರ ಟಿ. ಹೆಬ್ಬಾರ, ರಂಗಕರ್ಮಿ

ಬೇರೆಲ್ಲಿದೆ ಜಾಗ?

ಹುಟ್ಟೂರು ಮಂಚಿಯಲ್ಲಿ ಸ್ಥಾಪನೆಯಾದ ಬಿ.ವಿ. ಕಾರಂತ ರಂಗಭೂಮಿ ಟ್ರಸ್ಟ್ ಬೇಡಿಕೆಗೆ ಮನ್ನಿಸಿ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಮಂಚಿಯಲ್ಲಿ 1 ಎಕರೆ ಜಾಗವನ್ನು ಟ್ರಸ್ಟ್‌ನ ರಂಗ ಚಟುವಟಿಕೆಗೆಂದು ಮಂಜೂರು ಮಾಡಿತ್ತು. ಇಲ್ಲಿ ರಂಗಮಂದಿರ ಸಹಿತ ರಂಗಚಟುವಟಿಕೆಗಳು, ಪ್ರದರ್ಶನಕ್ಕೆ ಪೂರಕವಾದ ಕಾರ್ಯಕ್ರಮಕ್ಕೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ ಎಂದು ಟ್ರಸ್ಟ್ ಅಧ್ಯಕ್ಷ ಕೆಶ ರಾಮಚಂದ್ರ ಭಟ್ ತಿಳಿಸಿದ್ದಾರೆ.

ಬಿ.ಸಿ.ರೋಡಿನ ಕೈಕುಂಜೆಯಲ್ಲಿರುವ ಕನ್ನಡ ಭವನದಲ್ಲಿ ಬಯಲು ರಂಗಭೂಮಿ ಚಟುವಟಿಕೆಗೆಂದು ವೇದಿಕೆ ನಿರ್ಮಿಸಲಾಗಿತ್ತು, ಅದರ ಮುಂಭಾಗ ಇರುವ ಸರಕಾರಿ ಜಾಗವನ್ನು ಸಾಂಸ್ಕೃತಿಕ ಚಟುವಟಿಕೆಗೆ ಬಳಕೆಗೆ ತಾಲೂಕು ಆಡಳಿತ ಹಾಗೂ ಉಪವಿಭಾಗಾಧಿಕಾರಿಗಳ ಕಚೇರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದಕ್ಕೆ ಪೂರಕವಾದ ಸ್ಪಂದನೆ ಇದುವರೆಗೂ ಸಿಗಲಿಲ್ಲ. ಇದನ್ನು ಸಾರ್ವಜನಿಕರಿಗೆ ರಂಗಾಸಕ್ತರಿಗೆ ಬಳಕೆಯಾಗುವಂತೆ ಒದಗಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಶ್ವನಾಥ ಬಂಟ್ವಾಳ ಅವರ ಆಗ್ರಹವಾಗಿದೆ. ಒಟ್ಟಾರೆಯಾಗಿ ತಾಲೂಕಿನಲ್ಲಿ ರಂಗಮಂದಿರ ರವೊಂದರ ಅಗತ್ಯವಿದೆ ಎಂಬುದು ಈ ಭಾಗದ ಕಲಾಸಕ್ತರ ಬೇಡಿಕೆಯಾಗಿದೆ.

> ಬಂಟ್ವಾಳ ತಾಲೂಕಿನ ಪ್ರಮುಖ ಕಲಾವಿದರು ಬೆಳೆದು ಬರಲು ಕಾರಣವಾದದ್ದು ಬಿ.ಸಿ.ರೋಡಿನ ಕೇಂದ್ರಸ್ಥಾನದಲ್ಲಿದ್ದ ರಂಗಮಂದಿರ. ಸಾಕಷ್ಟು ಹವ್ಯಾಸಿಗಳಿಗೂ ಇದು ವೇದಿಕೆ ಒದಗಿಸಿತ್ತು. ತಾಲೂಕಿಗೊಂದು ಸುಸಜ್ಜಿತ ವೇದಿಕೆ ಅಗತ್ಯವಿದೆ. ಈ ನಿಟ್ಟಿನಲ್ಲಿ ಸ್ಥಳೀಯಾಡಳಿತ,ಜನಪ್ರತಿನಿಧಿಗಳು ಮನಸ್ಸು ಮಾಡಬೇಕು.
>
> ● ಎಚ್ಕೆ ನಯನಾಡು, ರಂಗಭೂಮಿ ಕಲಾವಿದ

ಬಿ.ಸಿ. ರೋಡಿನಲ್ಲಿ ಹಳೆಯ ರಂಗಮಂದಿರ ಹೀಗಿತ್ತು!

ದಶಕಗಳ ಕಾಲ ಬಂಟ್ವಾಳದ ಜನರ ಸಾಂಸ್ಕೃತಿಕ, ಚಟುವಟಿಕೆಗಳಿಗೆ ಸಾಕ್ಷಿಯಾಗಿದ್ದ ಬಿ.ಸಿ.ರೋಡಿನ ಹೃದಯಭಾಗದಲ್ಲಿ 1983ರಲ್ಲಿ ಈ ಸಾರ್ವಜನಿಕ ರಂಗಮಂದಿರ ನಿರ್ಮಿಸಲಾಗಿತ್ತು. ಅದನ್ನು ರಸ್ತೆ ಅಗಲೀಕರಣ ದ ನೆಪದಲ್ಲಿ 2021ರಲ್ಲಿ ಕೆಡವ ಲಾಗಿತ್ತು. 1983ರಿಂದ 2017ರವರೆಗೆ ನಿರಂತರವಾಗಿ ವಿವಿಧ ಚಟುವಟಿಕೆಗಳು ನಡೆಯುತ್ತಿದ್ದವು. ನಾಟಕ ಪ್ರದರ್ಶನಕ್ಕಷ್ಟೇ ಅಲ್ಲ, ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಕರಾವಳಿ ಉತ್ಸವ, ರಸಮಂಜರಿ ಕಾರ್ಯಕ್ರಮಗಳು, ಸಭೆ ಸಮಾರಂಭಗಳಿಗೆ ಈ ರಂಗಮಂದಿರ ವೇದಿಕೆಯಾಗಿತ್ತು. ಮಿನಿ ವಿಧಾನಸೌಧ ನಿರ್ಮಾಣಗೊಂಡ ನಂತರವೂ ಶಿಥಿಲವಾಗಿ, ನಿರ್ವಹಣೆ ಇಲ್ಲದ ಈ ಕಟ್ಟಡದಲ್ಲಿ ಜನಸ್ನೇಹಿ ಕೇಂದ್ರದ ಕಚೇರಿ ಕಾರ್ಯನಿರ್ವಹಿಸುತ್ತಿತ್ತು. ಅದು ಮಿನಿ ವಿಧಾನಸೌಧಕ್ಕೆ ಶಿಫ್ಟ್ ಆದ ಮೇಲೆ ಇಲ್ಲಿ ಚಟುವಟಿಕೆ ಸ್ಥಗಿತಗೊಂಡಿತು.

ನಳೀಲು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸಂಭ್ರಮ | ಇಂದು ಷಷ್ಠಿ ಪೂಜೆ

35ನೇ ವರ್ಷದ ಶ್ರೀ ಸತ್ಯನಾರಾಯಣ ಪೂಜೆ



ಸವಣೂರು: ಪುತ್ತೂರು ತಾಲೂಕಿನಲ್ಲಿ ಹುತ್ತಕ್ಕೆ ಪೂಜೆ ಸಲ್ಲಿಸುವ ಕಾರಣಿಕ ಕ್ಷೇತ್ರ ಕೊಳ್ತಿಗೆ ಗ್ರಾಮದ ನಳೀಲು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಫೆ.22ಕ್ಕೆ 35ನೇ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ಮಾರ್ಗದರ್ಶನದಲ್ಲಿ ಬ್ರಹ್ಮಶ್ರೀ ಕೆಮ್ಮಿಂಜೆ ಕಾರ್ತಿಕ ತಂತ್ರಿಗಳ ನೇತೃತ್ವದಲ್ಲಿ ನಡೆಯಿತು.



ತಂಬಿಲ ಸೇವೆ

ಫೆ.22ಕ್ಕೆ ಬೆಳಿಗ್ಗೆ ದೇವತಾ ಪ್ರಾರ್ಥನೆ, ಮಹಾಗಣಪತಿ ಹೋಮ, ಕಲಶ ಪೂಜೆ, ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ದೈವಗಳಿಗೆ ತಂಬಿಲ ಸೇವೆ, ಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆ ನಡೆಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಅನುವಂಶೀಯ ಆಡಳಿತ ಮೊಕ್ತೇಸರ ಸಂತೋಷ್ ಕುಮಾರ್ ರೈ ನಳೀಲು, ಅರ್ಚಕ ಪ್ರವೀಣ್ ಶಂಕರ್, ಮೊಕ್ತೇಸರರಾದ ಎನ್. ಗಿರಿಜಾ ರೈ, ನಾರಾಯಣ ರೈ ಮೊದೆಲ್ಕಾಡಿ, ಚಂದ್ರಶೇಖರ ರೈ ನಳೀಲು, ಮೋಹನದಾಸ ರೈ ನಳೀಲು, ಡಾ. ಸುಚೇತಾ ಜೆ. ಶೆಟ್ಟಿ ಕಿಶೋರ್ ರೈ ನಳೀಲು, ಸತೀಶ್ ರೈ ನಳೀಲು, ಪ್ರವೀಣ್ ರೈ ನಳೀಲು, ವಿಲಾಸ್ ರೈ ಪಾಲ್ತಾಡು, ಸುನೀಲ್ ರೈ ಪಾಲ್ತಾಡು, ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಅರುಣ್ ಕುಮಾರ್ ರೈ ನಳೀಲು, ಕಾರ್ಯದರ್ಶಿ ಸುರೇಶ್ಚಂದ್ರ ರೈ ಪಾಲ್ತಾಡಿ, ಕೋಶಾಧಿಕಾರಿ ಡಾ.ಶುಭ್ ದೀಪ್ ರೈ ಕೋಲ್ಪೆಗುತ್ತು,ಜಾತ್ರೋತ್ಸವ ಸಮಿತಿ ಅಧ್ಯಕ್ಷ ಪ್ರವೀಣ್ ರೈ ನಡುಕೂಟೇಲು, ಉಪಾಧ್ಯಕ್ಷರಾದ ಸುಬ್ರಾಯ ಗೌಡ ಪಾಲ್ತಾಡಿ, ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್, ಕೋಶಾಧಿಕಾರಿ ಸುಧಾಕರ ರೈ ಪಾಲ್ತಾಡಿ ಹೊಸಮನೆ ಮೊದಲಾದವರಿದ್ದರು.

ಇಂದು ಅನ್ನಸಂತರ್ಪಣೆ

ಫೆ.23ರಂದು ದೇವಸ್ಥಾನದಲ್ಲಿ ಮಧ್ಯಾಹ್ನ ಷಷ್ಠಿ ಪೂಜೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ದೇವಸ್ಥಾನದ ಆಡಳಿತ ಮೊಕ್ತೇಸರ ಸಂತೋಷ್ ಕುಮಾರ್ ರೈ ಅವರು ತಿಳಿಸಿದ್ದಾರೆ.

ಕ್ಕೊಲ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಂಜುನಾಥ ಅಭಿಪ್ರಾಯ

ಎಂಡೋ ಮಕ್ಕಳ ಆರೈಕೆ ತಾಳ್ಮೆ, ಶ್ರಮದ ಕೆಲಸ



ಕಡಬ: ಕ್ಕೊಲ ಎಂಡೋ ಪಾಲನಾ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಪೋಷಕರ ಸಭೆ ಹಾಗೂ ವಾರ್ಷಿಕೋತ್ಸವ ಸಮಾರಂಭದಲ್ಲಿಎಂಡೋಸಂತ್ರಸ್ತಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮಲ್ಲಿನ ಪ್ರತಿಭೆಗಳನ್ನು ಅನಾವರಣಗೊಳಿಸಿದರು.

ಕ್ಕೊಲ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಂಜುನಾಥ ಸಮಾರಂಭ ಉದ್ಘಾಟಿಸಿ, ಎಂಡೋ ಸಂತ್ರಸ್ತ ಮಕ್ಕಳನ್ನು ಪಾಲನೆ ಮಾಡುವುದು ಸಣ್ಣ ಕೆಲಸವಲ್ಲ, ಅದಕ್ಕೆ ಬಹಳ ಶ್ರಮ ಮತ್ತು ತಾಳ್ಮೆ ಮುಖ್ಯ, ಅವರ ಆರೈಕೆ ಮಾಡುವಂತದ್ದು ವೈದ್ಯಕೀಯ ಕ್ಷೇತ್ರದ ಸವಾಲು ಆಗಿದ್ದು, ಇಲ್ಲಿನ ಸಿಬ್ಬಂದಿಗಳು ಪ್ರಶಂಸನೀಯರು ಎಂದರು.

ದ.ಕ. ಜಿಲ್ಲಾ ಎಂಡೋ ಸೆಲ್ ಸಂಯೋಜಕ ಶಜೀವುದ್ದೀನ್ ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ಮತ್ತು ಅವರ ಚಟುವಟಿಕೆಗಳಲ್ಲಿ ದಿನೇ ದಿನೇ ಅಭಿವೃದ್ಧಿ ಕಾಣುತ್ತಿದ್ದೇವೆ. ಇಲ್ಲಿಗೆ ಬರುವ ಮಕ್ಕಳ ಪೋಷಕರು ದಿನಕ್ಕೆ ಒಬ್ಬರಂತೆ ಬಂದು ಅವರ ಚಟುವಟಿಕೆಗಳನ್ನು ಗಮನಿಸಿದರೆ ಅವರಿಗೂ ಸ್ಫೂರ್ತಿ ಬರುತ್ತದೆ. ಅವರಲ್ಲಿ ಬದಲಾವಣೆ ನೋಡಲು ಸಾಧ್ಯವಾಗಬಹುದು ಎಂದರು.

ಉದ್ಭವ್ ಎಜ್ಯುಕೇಶನ್ ಎಂಡ್ ಗ್ರಾಮೀಣಾಭಿವೃದ್ಧಿ ಸೊಸೈಟಿ ಕಾರ್ಯದರ್ಶಿ ಚಂದ್ರಕಲಾ ಬ್ಯಾ ಅಧ್ಯಕ್ಷತೆ ವಹಿಸಿದ್ದರು. ಕ್ಕೊಲ ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷೆ ಪುಷ್ಪಾ ಸುಭಾಷ್ ರೈ, ಉದ್ಭವ್ ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿ ಶಿವಾನಂದ, ಪೋಷಕ ಬಾಲಕೃಷ್ಣ ಮಾತನಾಡಿದರು.

ಪಾಲನಾ ಕೇಂದ್ರಗಳಿಗೆ ಹಲವು ಸೌಲಭ್ಯ ಒದಗಿಸಿದ ಪುಷ್ಪಾ ಸುಭಾಷ್ ರೈ ಅವರನ್ನು ಸನ್ಮಾನಿಸಲಾಯಿತು. ಕ್ಕೊಲ ಆರೋಗ್ಯ ಕೇಂದ್ರದ ರವಿಶಂಕರ್, ಮರಿ ಯಮ್ಮ, ಕ್ಕೊಲ ಶಾಲಾ ಮುಖ್ಯ ಶಿಕ್ಷಕಿ ಅನುಪಮ, ವಿಕಲ ಚೇತನ ಪುನರ್ವಸತಿ ಕಾರ್ಯಕರ್ತೆ ಆತಿಕಮ್ಮ, ಪಂ. ಕಾರ್ಯದರ್ಶಿ ಪಮ್ಮು, ಕಾರ್ಯಕರ್ತೆ ಯಮುನ ಇದ್ದರು. ಎಂಡೋ ಪಾಲನಾ ಕೇಂದ್ರದ ವ್ಯವಸ್ಥಾಪಕಿ ಶೈನಿ ಸ್ವಾಗತಿಸಿ, ನಮಿತ ವಂದಿಸಿದರು. ಹವ್ವ ಹಾಗೂ ಇಂತಿಯಾರುಫ್ ನಿರೂಪಿಸಿದರು.

ಮಕ್ಕಳಿಂದ ಹಾಡು, ಕುಣಿತ

ಬೆಳಿಗ್ಗಿನಿಂದ ಆರಂಭಗೊಂಡ ಕಾರ್ಯಕ್ರಮದಲ್ಲಿ ಸಂತ್ರಸ್ತ ಮಕ್ಕಳ ಮೂಲಕ ತುಳು ಜಾನಪದ ಹಾಡು, ಕನ್ನಡ ಭಕ್ತಿಗೀತೆ, ದೇಶಭಕ್ತಿ ಗೀತೆ, ಕನ್ನಡ ಸಿನಿಮಾ ಹಾಡಿಗೆ ಡ್ಯಾನ್ಸ್, ಯೋಗಾಸನ ಹೀಗೆ ನಾನಾ ರೀತಿಯಲ್ಲಿ ಮಕ್ಕಳಲ್ಲಿ ಇರುವ ಕಲೆಯನ್ನು ಗುರುತಿಸಲಾಯಿತು. ಹಾಗೂ ಮಕ್ಕಳು ತಯಾರಿಸಿದ ಕ್ರಾಫ್ಟ್ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ನಡೆಯಿತು.

ಹರಿಹರ ಶ್ರೀ ದೇವಳದಲ್ಲಿ ಜಾತ್ರಾ ಸಂಭ್ರಮ, ಶ್ರೀ ದೇವರ ಉತ್ಸವಕ್ಕೆ ತೆರೆ



ಸುಬ್ರಹ್ಮಣ್ಯ: ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಬ್ರಹ್ಮಶ್ರೀ ನೀಲೇಶ್ವರ ಪದ್ಮನಾಭ ತಂತ್ರಿ ಉಚ್ಚಿಲ ಇವರ ನೇತೃತ್ವದಲ್ಲಿ ನಡೆದ ಶ್ರೀ ಹರಿಹರೇಶ್ವರ ದೇವರ ಪ್ರತಿಷ್ಠಾ ವಾರ್ಷಿಕೋತ್ಸವ ಮತ್ತು ಜಾತ್ರಾ ಮಹೋತ್ಸವವು ವೈಭವದಿಂದ ಶನಿವಾರ ಸುಸಂಪನ್ನವಾಯಿತು.

ಶನಿವಾರ ಬೆಳಿಗ್ಗೆ ಗಣಪತಿ ಹವನ ನಡೆಯಿತು. ಬಳಿಕ ಕಲಶಪೂಜೆ, ಕಲಶಾಭಿಷೇಕ, ಮದ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ ನೆರವೇರಿತು. ಸಂಜೆ ದೀಪಾರಾಧನೆ, ಚೆಂಡೆವಾದನ, ರಾತ್ರಿ ಮಹಾಪೂಜೆ, ದೇವರಬಲಿ ಉತ್ಸವ ಹೊರಟು ಉತ್ಸವ ಆರಂಭವಾಯಿತು.ಬಳಿಕ ವಿವಿಧ ಸುತ್ತುಗಳು ಹಾಗೂ ನೃತ್ಯ ಬಲಿ ನೆರವೇರಿತು.ನಂತರ ವಸಂತಕಟ್ಟೆ ಪೂಜೆ, ಬಟ್ಟಲುಕಾಣಿಕೆಮತ್ತುರಾಜಾಂಗಣ ಪ್ರಸಾದ ನೆರವೇರಿತು. ಈ ಸಂದರ್ಭ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅರ್ಚಕ ಸುಬ್ರಹ್ಮಣ್ಯ ಭಟ್, ಕೆ.ದಯಾನಂದ ಕಟ್ಟೆಮನೆ, ಗುಣವರ್ಧನ ಕೆದಿಲ, ಕೆ.ಬೆಳ್ಯಪ್ಪ ಗೌಡ ಖಂಡಿಗೆ, ಯಂ.ಜೆ.ವಿನೂಪ್ ಮಲ್ಲಾರ, ಕೇಶವ.ಕೆ.ಕೊಪ್ಪತ್ತಡ್ಕ, ಸವಿತಾ. ಕೆ.ಕಟ್ಟೆಮನೆ, ಪದ್ಮಿನಿ ಎನ್.ಜಿ ಸೇರಿದಂತೆ ಭಕ್ತರು ಉಪಸ್ಥಿತರಿದ್ದರು.

ಅರ್ಧ ಏಕಹ: ಭಜನೆ

ಶನಿವಾರ ಬೆಳಿಗ್ಗೆ ಸೂರ್ಯೋದಯದಿಂದ ಸಂಜೆ ಸೂರ್ಯಾಸ್ತದ ತನಕ ಅರ್ಧ ಏಕಾಹ ಭಜನೆ ನೆರವೇರಿತು. ಭಜನೋತ್ಸವವನ್ನು ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು ಉದ್ಘಾಟಿಸಿದರು. ಬಳಿಕ ವಿವಿಧ ಭಜನಾ ತಂಡಗಳು ಭಜನೆ ನೆರವೇರಿಸಿದವು. ಭಜನಾ ಸಮಿತಿ ಸಂಚಾಲಕ ಚಂದ್ರಶೇಖರ ಕೊಂಡಾಲ ಭಜನೋತ್ಸವ ನಿರ್ವಹಿಸಿದರು.ಬಳಿಕ ಸಂಜೆ ಬಳಿಕ ಬಾಲಚಂದ್ರ ಪೆರಾಜೆ ಇವರಿಂದ ಸ್ಯಾಕ್ಸೋಫೋನ್ ವಾದನ, ನಂತರ ಹರಿಹರ ಪಳ್ಳತ್ತಡ್ಕದ ಹರಿಹರೇಶ್ವರ ಯಕ್ಷಗಾನ ಕಲಾ ಸಂಘದಿಂದ ಯಕ್ಷಗಾನ ನಡೆಯಿತು.

ಪುತ್ತೂರು ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘದಿಂದ ಕಾರ್ಯಾಗಾರ



ಉಪ್ಪಿನಂಗಡಿ: ಪುತ್ತೂರು ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ ಇದರ ಸುವರ್ಣ ಮಹೋತ್ಸವದ ಪ್ರಯುಕ್ತ ಉತ್ತಮ ಆರೋಗ್ಯ, ಮಹಿಳಾ ಸಬಲೀಕರಣ, ಸರಕಾರದ ಯೋಜನೆಗಳು ಎಂಬ ವಿಚಾರದಲ್ಲಿ ಮಾಹಿತಿ ಕಾರ್ಯಾಗಾರವನ್ನು ಭಾನುವಾರ ಉಪ್ಪಿನಂಗಡಿಯಲ್ಲಿ ನಡೆಸಲಾಯಿತು.

ಉಪ್ಪಿನಂಗಡಿಯ ಸಂಗಮ ಕೃಪಾ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಹಿರಿಯ ಸಮಾಜ ಹಿತ ಚಿಂತಕಿ ಕಾಮಾಕ್ಷಿ ಜಿ. ಹೆಗ್ಡೆ ಉದ್ಘಾಟಿಸಿ, ಮಹಿಳೆಯರ ಬದುಕಿನಲ್ಲಿ ಬೆಳಕು ಮೂಡಿಸುವ ನಿಟ್ಟಿನಲ್ಲಿ ಉತ್ತಮ ಆರೋಗ್ಯ, ಮಹಿಳಾ ಸಬಲೀಕರಣ, ಸರಕಾರದ ಯೋಜನೆಗಳ ಬಗ್ಗೆ ಮಾಹಿತಿ ಕಾರ್ಯಾಗಾರ ಆಯೋಜಿಸಿರುವುದು ಶ್ಲಾಘನೀಯ ಕಾರ್ಯವೆಂದರು.

ಕಾರ್ಯಾಗಾರದಲ್ಲಿಸಂಪನ್ಮೂಲ ವ್ಯಕ್ತಿಗಳಾಗಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಗಾಯತ್ರಿ , ಮುಖ್ಯೋಪಾಧ್ಯಾಯಿನಿ ಆಶಾ ಬೆಳ್ಳಾರೆ, ಕುಂಬ್ರ ಮೂರ್ತೆದಾರರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಆರ್ ಸಿ ನಾರಾಯಣ ಭಾಗವಹಿಸಿದ್ದರು.

ಪುತ್ತೂರು ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ ಇದರ ಅಧ್ಯಕ್ಷೆ ಗೌರಿ ಎಚ್, ನಿರ್ದೇಶಕಿ ಹಾಗೂ ಸಲಹಾ ಸಮಿತಿಯ ಅಧ್ಯಕ್ಷೆ ಜ್ಯೋತಿ ಹೇರಂಭ ಶಾಸ್ತ್ರಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿದ್ಯಾ ಉಪಸ್ಥಿತರಿದ್ದರು. ಪ್ರಮುಖರಾದ ಇಂದಿರಾ ಬಿ ಕೆ, ಮೋಹಿನಿ ಪಿ ನಾಯ್ಕ ಜಯಶ್ರೀ ಎಸ್. ಶೆಟ್ಟಿ ವಿಜಯ ಲಕ್ಷ್ಮಿ, ಅರ್ಪಣಾ ಎಸ್, ಚಂದ್ರಾವತಿ ಕೆ, ಪುಷ್ಪಾವತಿ , ರಜನಿ ಆಚಾರ್ಯ, ದೀಕ್ಷಾ ಪೈ ಸುಚೇತ ಜೆ. ನಾಯಕ್ ಮೊದಲಾದವರು ಉಪಸ್ಥಿತರಿದ್ದರು. ಸಂಘದ ನಿರ್ದೇಶಕಿ ಉಷಾ ಮುಳಿಯ ನಿರೂಪಿಸಿದರು.



ಎಡಪದವು ಗ್ರಾಮ ಪಂಚಾಯತ್ ವ್ಯಾಪ್ತಿಯ ಬ್ರಿಂಡೆಲ್‌ಪದವು ಎಂಬಲ್ಲಿ ಒಡ್ಡೂರಿನ ಮೋರಿಸ್ ಪಿಂಟೋ ನೇತೃತ್ವದಲ್ಲಿ ನಿರ್ಮಾಣವಾಗಲಿರುವ ಸಾರ್ವಜನಿಕರ ಪ್ರಯಾಣಿಕರ ತಂಗುದಾಣ ನಿರ್ಮಾಣಕ್ಕೆ ಭಾನುವಾರ ಶಿಲಾನ್ಯಾಸ ನೆರವೇರಿಸಲಾಯಿತು. ವರಾಹ ಫೌಂಡೇಶನ್ ಸ್ಥಾಪಕ ಗಿರೀಶ್ ಆಳ್ವ, ಉದ್ಯಮಿಗಳಾದ ಗಣೇಶ್ ನಾಯಕ್ ಎಡಪದವು, ಧನಂಜಯ್ ಮೇಸ್ತ್ರಿ ಅಬ್ದುಲ್ ಹಮೀದ್, ಸುದರ್ಶನ್ ನಾಯಕ್ ಕೊರ್ದೇಲ್, ರೋಷನ್ ಪಿಂಟೋ, ಬಾಲಕೃಷ್ಣ ನಾಯಕ್ ಸಂತೋಷ್ ಪಿಂಟೋ ಹಾಗೂ ಸ್ಥಳೀಯರು ಇದ್ದರು.

ಮುಲ್ಕಿ: ಜಾತ್ರಾ ಮಹೋತ್ಸವಕ್ಕೆ ಚಾಲನೆ

ಮುಲ್ಕಿ: ಕೆಎಸ್ ರಾವ್ನಗರ ಲಿಂಗಪ್ಪಯ್ಯ ಕಾಡು ಶ್ರೀ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿಯವರ 40ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಶ್ರೀ ಅಭಿನವ ಸಿದ್ದಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ಯುವ ಜನಾಂಗ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಿ ಎಂದರು.

ಧಾರವಾಡ ಶ್ರೀ ಚಂದ್ರಶೇಖರ ಮಹಾಸ್ವಾಮೀಜಿ ಆಶೀರ್ವಚನ ನೀಡಿದರು. ನ.ಪಂ. ಮಾಜೀ ಸದಸ್ಯ ಶೈಲೇಶ್ ಕುಮಾರ್, ಮಂಜುನಾಥ್ ಕಂಬಾರ, ಮಹೇಶ್ ಮುನ್ನ ಗೊಲ್ಲಳಪ್ಪ ತಮಗೊಂಡ ಲಕ್ಷ್ಮಿ ಹಾಗೂ ಉದ್ಯಮಿ ಸತೀಶ್ ಮನಕರ್ ಕಲ್ಬುರ್ಗಿ , ಸಂತೋಷ ದೇಸುಣಗಿ, ಪುನೀತ್ ಹಿರೇಮಠ್, ಬಸವರಾಜ್ ಹರವಾಳ, ಸೋಮು ಪೂಜಾರಿ, ದೇವೇಂದ್ರಪ್ಪ ಕುಕುನೂರು, ವೀರಯ್ಯ ಸ್ವಾಮೀ ಹಿರೇಮಠ್, ಶಿವಶರಣ ಗೌಡ, ಗುರುಪಾದಯ್ಯ ಹಿರೇಮಠ್ ಇದ್ದರು. ಜಾತ್ರಾ ಮಹೋತ್ಸವದ ಅಧ್ಯಕ್ಷ ವಿಠ್ಠಲ್ ಎನ್.ಎಂ. ಹಾಗೂ ವೀರಣ್ಣ ಅರಳಗುಂಡಾಗಿ ನಿರೂಪಿಸಿದರು. ಶಿವಾನಂದ ಆರ್.ಕೆ. ವಂದಿಸಿದರು.

'ಶಕುಂತಳಾ' ಸುಸಜ್ಜಿತ ವಸತಿ ಸಮುಚ್ಚಯ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಎಂಆರ್‌ಜಿ ಗ್ರೂಪ್‌ನ ಸಿಎಂಡಿ ಡಾ. ಕೆ. ಪ್ರಕಾಶ್ ಶೆಟ್ಟಿ ಅಭಿಪ್ರಾಯ

ಕರಾವಳಿಯಲ್ಲಿ ಪ್ರವಾಸೋದ್ಯಮ, ವಸತಿ ಯೋಜನೆಗಳಿಗೆ ವಿಪುಲವಾದ ಅವಕಾಶ

ಮಂಗಳೂರು: ಒಂದೆಡೆ ಸಮುದ್ರತೀರ, ಇನ್ನೊಂದೆಡೆ ಪಶ್ಚಿಮಘಟ್ಟ ಮತ್ತು ನದಿಗಳನ್ನೊಳಗೊಂಡ ಕರಾವಳಿ ಅದ್ಭುತ ಪ್ರದೇಶವಾಗಿದೆ. ಇಲ್ಲಿ ಪ್ರವಾಸೋದ್ಯಮ, ವಸತಿ ಯೋಜನೆಗಳ ನಿರ್ಮಾಣ ಸಹಿತ ಸಮಗ್ರ ಅಭಿವೃದ್ಧಿಗೆ ಅಪಾರ ಅವಕಾಶವಿದೆ ಎಂದು ಎಂಆರ್‌ಜಿ ಗ್ರೂಪ್‌ನ ಸಿಎಂಡಿ ಡಾ. ಕೆ. ಪ್ರಕಾಶ್ ಶೆಟ್ಟಿ ಹೇಳಿದ್ದಾರೆ.

ಅವರು ಸುರತ್ಕಲ್ ಕಾಟಿಪಳ್ಳದ ಗಣೇಶಪುರದಲ್ಲಿ ಭೀಮ ಲಕ್ಷ್ಮೀ ಪ್ರಾಪರ್ಟೀಸ್ ಪ್ರೈ. ಲಿ. ವತಿಯಿಂದ ನಿರ್ಮಾಣಗೊಳ್ಳಲಿರುವ 'ಶಕುಂತಳಾ' ಸುಸಜ್ಜಿತ ವಸತಿ ಸಮುಚ್ಚಯ ನಿರ್ಮಾಣಕ್ಕೆ ಶನಿವಾರ ಭೂಮಿ ಪೂಜೆ ನೆರವೇರಿಸಿ ಅವರು, ಮಾತನಾಡಿದರು.

ಉತ್ತಮ ಪರಿಸರದಲ್ಲಿ ನಿರ್ಮಾಣ

ವಸತಿ ಸಮುಚ್ಚಯದಂತಹ ಯೋಜನೆ ಗಳು ಕೂಡ ಉದ್ಯೋಗ ಸೃಷ್ಟಿ ಅಭಿವೃದ್ಧಿಗೆ ಕೊಡುಗೆ ನೀಡುತ್ತಿವೆ.



ಶಕುಂತಳಾ ವಸತಿ ಸಮುಚ್ಚಯವು ಉತ್ತಮ ಪರಿಸರದಲ್ಲಿ ನಿರ್ಮಾಣವಾಗುತ್ತಿದ್ದು, ನಿಗದಿತ ಸಮಯದಲ್ಲಿ ಯೋಜನೆ ಪೂರ್ಣಗೊಂಡಾಗ ಗ್ರಾಹಕರಲ್ಲಿ ವಿಶ್ವಾಸ ಮೂಡುತ್ತದೆ ಎಂದು ಹೇಳಿದರು.

ಶಾಸಕ ಡಾ. ಭರತ್ ಶೆಟ್ಟಿ ಅಧ್ಯಕ್ಷತೆ ವಹಿಸಿ, 'ಶಕುಂತಳಾ' ವಸತಿ ಸಮುಚ್ಚಯ ಉತ್ತಮ ಗುಣ ಮಟ್ಟ ವಿನ್ಯಾಸದೊಂದಿಗೆ ನಿರ್ಮಾಣವಾಗಿ ಈ ಭಾಗದ ಮತ್ತೊಂದು ಉತ್ತಮ ಯೋಜನೆಯಾಗಲಿದೆ ಎಂದು ಅವರು ಹೇಳಿದರು.

ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಶಾಸಕ ಉಮಾನಾಥ ಕೋಟ್ಯಾನ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಪ್ರಾಂತ ಸಹ ಕಾರ್ಯವಾಹ ಪಿ.ಎಸ್. ಪ್ರಕಾಶ್, ದ.ಕ. ಜಿಲ್ಲಾ ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ ಕಸ್ತೂರಿ ಪಂಜ, ಮಾಜಿ ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಎಂಆರ್‌ಪಿಎಲ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷ ಶರತ್ ರಾಜ್ ಜೋಗಿ, ಗಣೇಶಪುರ ಮಹಾಗಣಪತಿ ಕ್ಷೇತ್ರದ ಆಡಳಿತ ಸಮಿತಿಯ ಮಾಜಿ ಅಧ್ಯಕ್ಷ ಧರ್ಮೇಂದ್ರ ಗಣೇಶಪುರ, ಭಗವತಿ ಎಜುಕೇಶನ್ ಟ್ರಸ್ಟ್ ಉಚ್ಚಿಲ ಅಧ್ಯಕ್ಷ ಚಂದ್ರಹಾಸ ಉಳ್ಳಾಲ್, ಲೋಕೇಶ್ ಬೊಳ್ಳಾಜೆ, ಭೀಮ ಲಕ್ಷ್ಮೀ ಪ್ರಾಪರ್ಟೀಸ್‌ನ ನಿರ್ದೇಶಕಿ ಪ್ರೀತಿ ಜಿತೇಂದ್ರ ಶೆಟ್ಟಿ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಭೀಮ ಲಕ್ಷ್ಮೀ ಪ್ರಾಪರ್ಟೀಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಜಿತೇಂದ್ರ ಶೆಟ್ಟಿ ಸ್ವಾಗತಿಸಿದರು. ಸುನಿಲ್ ಭಟ್. ಧಾರ್ಮಿಕ ವಿಧಿ ವಿಧಾನ ನೆರವೇರಿಸಿದರು. ನಿತೇಶ್ ಶೆಟ್ಟಿ ಎಕ್ಕಾರು ನಿರ್ವಹಿಸಿದರು.

ವಸತಿ ಸಮುಚ್ಚಯದ ವಿಶೇಷತೆಗಳು

- ಸುರತ್ಕಲ್-ಬಜಪೆ ರಸ್ತೆ ಕಾರಿಡಾರ್ ಸಮೀಪ, ಏರ್ ಪೋರ್ಟ್‌ಗೆ ಸುಲಭ ಸಂಪರ್ಕ
- ಶಿಕ್ಷಣ ಸಂಸ್ಥೆ, ಉದ್ಯಮ, ಆಸ್ಪತ್ರೆ, ಶಾಪಿಂಗ್ ಸೆಂಟರ್, ರೈಲು ನಿಲ್ದಾಣ ಇತ್ಯಾದಿಗಳಿಗೆ ಸನಿಹ
- ವಸ್ತು ಪ್ರಕಾರ ಉತ್ತಮ ವಿನ್ಯಾಸ, ಗುಣಮಟ್ಟದ ನಿರ್ಮಾಣ, ಸುರಕ್ಷೆ ಆಧುನಿಕ ಸೌಲಭ್ಯ

ಸುತ್ತಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಬಂಟ್ವಾಳ: ತುರ್ತು ನಿರ್ವಹಣೆ ಕಾಮಗಾರಿಯ ಹಿನ್ನೆಲೆಯಲ್ಲಿ ಫೆ.24ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ ಬಂಟ್ವಾಳ ವಿದ್ಯುತ್ ಉಪಕೇಂದ್ರ ವ್ಯಾಪ್ತಿಯ ತುಂಬೆ,ಸಜೀಪಮುನ್ನೂರು ನೀರು ಸರಬರಾಜು, ಬಿ.ಸಿ. ರೋಡ್ ನಗರ, ಫರಂಗಿಪೇಟೆ, ಪೊಳಲಿ ಫೀಡರ್‌ಗಳಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯವಾಗಲಿದೆ ಎಂದು ಬಂಟ್ವಾಳ ಮೆಸ್ಕಾಂ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆ ತಿಳಿಸಿದೆ.

ನಾಳೆ ಮೆಸ್ಕಾಂ ಜನಸಂಪರ್ಕ ಸಭೆ

ಹೆಬ್ರಿ: ಮೆಸ್ಕಾಂ ಹೆಬ್ರಿ ಉಪವಿಭಾಗ ಕಚೇರಿಯಲ್ಲಿ ಫೆ.24ರಂದು ಸಮಯ ಬೆಳಿಗ್ಗೆ 10.30ರಿಂದ 12 ಗಂಟೆಯವರೆಗೆ ಜನಸಂಪರ್ಕ ಸಭೆ ನಡೆಯಲಿದ್ದು ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರು ದೂರವಾಣಿ ಸಂಖ್ಯೆ 08253-251079 ಮುಖಾಂತರವೂ ಅಹವಾಲು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಉಡುಪಿ: ಮಣಿಪಾಲ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಮಣಿಪಾಲ ಟೌನ್, ಪ್ರಗತಿ ನಗರ, ಕೆ.ಎಂ.ಎಫ್, ಮೂಡುಬೆಳ್ಳೆ ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮಣಿಪಾಲ ಟೌನ್, ವೇಣುಗೋಪಾಲ ಟೆಂಪಲ್, ಮೀಡಿಯಾ ನೆಟ್ ವರ್ಕ್, ಪ್ರಗತಿನಗರ, ಶಾಂತಿನಗರ, ರಾಜೀವನಗರ, 80ಬಡಗುಬೆಟ್ಟು ಈಶ್ವರನಗರ, ಸರಳೇಬೆಟ್ಟು ಗಣೇಶ್ ಭಾಗ್, ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ಮೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ. 24ರಂದು ಬೆಳಿಗ್ಗೆ 9ರಿಂದ ಸಂಜೆ 5ರ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮಕ್ಕಳ ಶಾಲಾ ಶಿಬಿರ

ಸುಬ್ರಹ್ಮಣ್ಯ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸುಳ್ಯ ತಾಲೂಕು ಇದರ ವತಿಯಿಂದ ಗುತ್ತಿಗಾರು ಪಿ.ಎಂ.ಶ್ರೀ. ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದು ದಿನದ ಶಾಲಾ ಶಿಬಿರ ನಡೆಯಿತು. ಕಾರ್ಯಕ್ರಮವನ್ನು ಸಹಕಾರಿ ಬ್ಯಾಂಕ್ ಅಧ್ಯಕ್ಷ ಜಯಪ್ರಕಾಶ್ ಮೊಗ್ರ ಬಣ್ಣದ ಪೇಪರ್‌ನಲ್ಲಿ ಹೂ ಗುಚ್ಛ ತಯಾರು ಮಾಡುವುದರ ಮೂಲಕ ಉದ್ಘಾಟಿಸಿದರು. ವಲಯದ ಮೇಲ್ವಿಚಾರಕ ರಾಜೇಶ್ ಪಿ., ಶಾಲಾ ಮುಖ್ಯ ಗುರು ಉಮಾವತಿ, ಸೇವಾಪ್ರತಿನಿಧಿ ಲೋಕೇಶ್ವರ ಡಿ.ಆರ್., ಹಿರಿಯ ಶಿಕ್ಷಕಿ ಪೂರ್ಣಿಮಾ ವೇದಿಕೆಯಲ್ಲಿದ್ದರು. ಶಿಕ್ಷಕಿ ಚೂಡಾಮಣಿ ಶಿಬಿರ ನಡೆಸಿಕೊಟ್ಟರು.

ಸಲಹಾ ಸಮಿತಿಗೆ ನೇಮಕ

ಬಂಟ್ವಾಳ: ಮೆಸ್ಕಾಂ ಮಾಣಿ ಶಾಖೆಯ ಗ್ರಾಹಕರ ಸಲಹಾ ಸಮಿತಿ ಸದಸ್ಯರಾಗಿ ನೆಟ್ಲಮುಡ್ನೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸಚ್ಚಿದಾನಂದ (ಸತೀಶ್) ಪೂಜಾರಿ ಅವರನ್ನು ನೇಮಕಗೊಳಿಸಿ ಕರ್ನಾಟಕ ಸರ್ಕಾರ ಆದೇಶಿಸಿದೆ. ಮಾಜಿ ಸಚಿವ ಬಿ. ರಮಾನಾಥ ರೈ ಅವರ ಶಿಫಾರಸ್ಸಿನ ಮೇರೆಗೆ ಈ ನೇಮಕಾತಿ ನಡೆದಿದೆ ಎಂದು ಪ್ರಕಟಣೆ ತಿಳಿಸಿದೆ.

ಬೈಂದೂರು ಪತ್ರಕರ್ತರ ಸಂಘಕ್ಕೆ ಅವಿರೋಧ ಆಯ್ಕೆ

ಉಪ್ಪುಂದ: ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಬೈಂದೂರು ತಾಲೂಕು ಘಟಕದ 2025-28ನೇ ಸಾಲಿನ ನೂತನ ಅಧ್ಯಕ್ಷರಾಗಿ ದೂರದರ್ಶನ ಚಂದನ ವಾಹಿನಿ ವರದಿಗಾರ ಉದಯ ಶಂಕರ್ ಪಡಿಯಾರ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ವಿಜಯ ಕರ್ನಾಟಕದ ವರದಿಗಾರ ರಾಮ ಬಿಜೂರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿರುವ



ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಅಸ್ಟೊ ಮೋಹನ್ ಅಧ್ಯಕ್ಷತೆಯಲ್ಲಿ ಶನಿವಾರ ಬೈಂದೂರು ಪ್ರವಾಸಿ ಬಂಗಲೆಯಲ್ಲಿ ನಡೆದ ಚುನಾವಣೆಯಲ್ಲಿ ಈ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ವಿಜಯವಾಣಿಯ ನರಸಿಂಹ ನಾಯಕ್, ಕೋಶಾಧಿಕಾರಿಯಾಗಿ ಉದಯವಾಣಿಯ ಕೃಷ್ಣ ಬಿಜೂರು ಮತ್ತು ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ವಿಫೋರ್ ನ್ಯೂಸ್‌ನ ಜಯಪ್ರಕಾಶ್ ವಿ. ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಪ್ರಕ್ರಿಯೆಯಲ್ಲಿ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನಝೀರ್ ಪೊಲ್ಯ ಸಹಕರಿಸಿದರು. ಸಂಘದ ರಾಷ್ಟ್ರೀಯ ಸಮಿತಿ ಸದಸ್ಯ ಅರುಣ್ ಕುಮಾರ್ ಶಿರೂರು ಇದ್ದರು.

ವಿದ್ಯುತ್ ಗುತ್ತಿಗೆದಾರರ ಸಂಘಕ್ಕೆ ಆಯ್ಕೆ

ಕುಂದಾಪುರ: ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಬೆಂಗಳೂರು ಇದರ ತಾಲೂಕು ಸಮಿತಿ ಕುಂದಾಪುರ ಘಟಕದ 2026-31ನೇ ಸಾಲಿನ ನೂತನ ಆಡಳಿತ



ಮಂಡಳಿಯ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಂಘದ ಮುಂದಿನ ಐದು ವರ್ಷಗಳ ಅವಧಿಗೆ ನೂತನ ಅಧ್ಯಕ್ಷ ಹರೀಶ್ ಕುಮಾರ್ ಕೆರಾಡಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಿ. ವಿಠ್ಠಲ ಪೂಜಾರಿ (ಉಪಾಧ್ಯಕ್ಷರು), ಮಹಮ್ಮದ್ ಅಶ್ರಫ್ (ಕಾರ್ಯದರ್ಶಿ), ಅಶೋಕ್ ಪೂಜಾರಿ (ಜಂಟಿ ಕಾರ್ಯದರ್ಶಿ), ಸುರೇಶ ಪೂಜಾರಿ (ಖಜಾಂಚಿ), ಗಣೇಶ್ ಆಚಾರ್ (ಸಹ ಖಜಾಂಚಿ), ಅರುಣ್ ಚಂದ್ರ ಕೋಟ್ಯಾನ್ (ಲೆಕ್ಕ ಪರಿಶೋಧಕರು), ಎಚ್. ರವೀಂದ್ರ ಎಸ್. ಪೈ ಮತ್ತು ಜಗದೀಶ ಪೂಜಾರಿ (ಸಂಘಟನಾ ಕಾರ್ಯದರ್ಶಿ).

ದ.ಕ. ಜಿಲ್ಲೆಯ ಸಹಕಾರಿ ಸಂಘಗಳ ಅಧ್ಯಕ್ಷರು, ಸದಸ್ಯರು, ಸಿಬ್ಬಂದಿ, ಸಿಇಒಗಳಿಗೆ ಜಿಲ್ಲಾ ಮಟ್ಟದ ತರಬೇತಿ

ಸಹಕಾರಿ ಸಂಘಗಳಿಂದ ಜನರಿಗೆ ಉತ್ತಮ ಸೇವೆ ಲಭ್ಯ: ಬಾಲ್ಯೊಟ್ಟು

ಬಂಟ್ವಾಳ: ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ಮಂಗಳೂರು, ದ.ಕ. ಜಿಲ್ಲಾ ಮೂರ್ತೆದಾರರ ಸಹಕಾರ ಮಹಾಮಂಡಳ ಬಿ.ಸಿ.ರೋಡು, ಸಹಕಾರ ಇಲಾಖೆ ದ.ಕ. ಜಿಲ್ಲೆ ಆಶ್ರಯದಲ್ಲಿ ದ.ಕ. ಜಿಲ್ಲೆಯ ಪತ್ತಿನ, ಮೂರ್ತೆದಾರರ ಮತ್ತು ಇತರ ಸಹಕಾರ ಸಂಘಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿಗೆ ಜಿಲ್ಲಾಮಟ್ಟದ ತರಬೇತಿ ಕಾರ್ಯಕ್ರಮ ಬಿ.ಸಿ.ರೋಡಿನ ಡಾ. ಬಿ.ಆರ್. ಅಂಬೇಡ್ಕರ್ ಸಭಾಭವನದಲ್ಲಿ ಶನಿವಾರ ನಡೆಯಿತು.



ಸಾಲ ಮರು ಪಾವತಿಗೆ ಮನವೊಲಿಸಿ

ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶಶಿಕುಮಾರ್ ರೈ ಬಾಲ್ಯೊಟ್ಟು ಅಧ್ಯಕ್ಷತೆ ವಹಿಸಿ ಮಾತನಾಡಿ,ಸಹಕಾರಿ ಕ್ಷೇತ್ರ ಪವಿತ್ರವಾದ ಕ್ಷೇತ್ರ. ಜನಸಾಮಾನ್ಯರಿಗೆ ಉತ್ತಮವಾದ ಸೇವೆ ನೀಡುವ ಕಾರ್ಯವನ್ನು ಇಲ್ಲಿನ ಸಹಕಾರಿ ಸಂಘಗಳು ಮಾಡುತ್ತಿವೆ.ಗ್ರಾಹಕರು ಬ್ಯಾಂಕ್ ಗೆ ಬಂದಾಗ ಭದ್ರತೆಯ ಆಧಾರದಲ್ಲಿ ಸಾಲ ನೀಡ ಬೇಕಾಗುತ್ತದೆ. ಮನವೊಲಿಸಿಯಾದರೂ ಮರುಪಾವತಿ ಮಾಡಬೇಕಾಗಿರುವುದು ಸಿಬ್ಬಂದಿ ಕರ್ತವ್ಯ. ಆ ನಿಟ್ಟಿನಲ್ಲಿ ತರಬೇತಿಯಲ್ಲಿ ಪಡೆದ ಮಾಹಿತಿಯನ್ನು ಇತರ ಸಿಬ್ಬಂದಿಗಳಿಗೂ ಹಂಚಿಕೊಂಡು ತಮ್ಮ ಸಂಸ್ಥೆಯ ಬೆಳೆಯಲು ಸಹಕರಿಸಬೇಕೆಂದು ತಿಳಿಸಿದರು.

ಸಹಕಾರ ಸಂಘಗಳ ಸಹಾಯಕ ನಿಬಂಧಕಿ ತ್ರಿವೇಣಿ ರಾವ್ ಮಾತನಾಡಿ, ಜಿಲ್ಲಾಮಟ್ಟದ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಮೂಲಕ ಸಿಬ್ಬಂದಿಗಳಿಗೆ ಇತರ ಸಂಘದ ಸಿಬ್ಬಂದಿಗಳೊಂದಿಗೆ ಸಂಪರ್ಕ ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಅರಿವು ಮೂಡಲು ಇದು ಸಹಾಯಕವಾಗಿದೆ ಎಂದರು.

ಸ್ಕ್ಯಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ ಮಾತನಾಡಿ, ಒಬ್ಬರನ್ನೊಬ್ಬರು ಅರಿತು ಮುನ್ನಡೆದಾಗ ಸಹಕಾರಿ ಸಂಘಗಳು ಅಭಿವೃದ್ಧಿಯಾಗಲು ಸಾಧ್ಯವಿದೆ ಎಂದರು.

ದ.ಕ. ಜಿಲ್ಲಾ ಮೂರ್ತೆದಾರರ ಸಹಕಾರ ಮಹಾಮಂಡಳ ಅಧ್ಯಕ್ಷ ಕೆ. ಸಂಜೀವ ಪೂಜಾರಿ ಕಾರ್ಯಕ್ರಮ ಉದ್ಘಾಟಿಸಿದರು.

> **ತರಬೇತಿ ಸಹಕಾರಿ**
>
> ಕಾನೂನುಗಳು ಬದಲಾಗುತ್ತಿದ್ದಂತೆ ಸಹಕಾರಿ ಕ್ಷೇತ್ರದಲ್ಲಿ ಅನೇಕ ಸವಾಲುಗಳು ಸಿಬ್ಬಂದಿಗೆ ಎದುರಾಗುತ್ತಿರುತ್ತವೆ. ಈ ನಿಟ್ಟಿನಲ್ಲಿ ಕಾನೂನು ಅರಿವು ಮೂಡಿಸುವುದರ ಜೊತೆಗೆ ಗ್ರಾಹಕರೊಂದಿಗೆ ಉತ್ತಮ ವ್ಯವಹಾರ ಮಾಡಲು ಇಂತಹ ತರಬೇತಿ ಸಹಕಾರಿಯಾಗಲಿದೆ. ಸಹಕಾರಿ ಯೂನಿಯನ್ ನಿರ್ದೇಶಕನಾದ ಬಳಿಕ ಸಹಕಾರಿ ಸಂಘದ ಸಿಬ್ಬಂದಿಗೆ ಜಿಲ್ಲಾ ಮಟ್ಟದ ತರಬೇತಿ ಹಮ್ಮಿಕೊಳ್ಳಬೇಕೆಂಬ ಬೇಡಿಕೆಗೆ ಸಹಕಾರಿ ಯೂನಿಯನ್ ಅವಕಾಶ ಮಾಡಿಕೊಟ್ಟಿದೆ.
>
> ● ಕೆ. ಸಂಜೀವ ಪೂಜಾರಿ, ಅಧ್ಯಕ್ಷ, ಜಿಲ್ಲಾ ಮೂರ್ತೆದಾರರ ಸಹಕಾರ ಮಹಾಮಂಡಳ

ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕಿ ಸವಿತಾ ಎನ್. ಶೆಟ್ಟಿ ದ.ಕ. ಜಿಲ್ಲಾ ಮೂರ್ತೆದಾರರ ಸಹಕಾರ ಮಹಾ ಮಂಡಳದ ಉಪಾಧ್ಯಕ್ಷ ರಾಜೇಶ್ ಸುವರ್ಣ, ನಿರ್ದೇಶಕರಾದ ಆರ್. ಸಿ. ನಾರಾಯಣ್, ಬಿ.ವಿಶ್ವನಾಥ, ಅಣ್ಣಿಯಾನೆ ನೋಣಯ್ಯ ಪೂಜಾರಿ , ಗಣೇಶ್ ಪೂಜಾರಿ , ಶಿವಪ್ಪ ಸುವರ್ಣ ವಿಶ್ವನಾಥ ಪೂಜಾರಿ ಪಂಜ, ಪುರುಷ ಎನ್. ಸಾಲಿಯಾನ್ ಉಪಸ್ಥಿತರಿದ್ದರು.

ವಿಶ್ವಕರ್ಮ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ವಸಂತ ಅಡ್ಯಂತ್ತಾಯ, ಆಟೋಮೇಷನ್ ಕ್ಲೌಡ್ ಸೊಲ್ಯುಷನ್ ನ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ರಾಮ್ ಸಹಕಾರಿ ಸಂಘಗಳ ಉಪನಿಬಂಧಕರ ಕಚೇರಿ ಅಧೀಕ್ಷಕ ಎನ್. ಜೆ. ಗೋಪಾಲ್ ತರಬೇತಿ ನೀಡಿದರು. ದ.ಕ.ಜಿಲ್ಲಾ ಸಹಕಾರಿ ಯೂನಿಯನ್‌ನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಎಸ್.ವಿ. ಹಿರೇಮಠ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ದ.ಕ. ಜಿಲ್ಲಾ ಮೂರ್ತೆದಾರರ ಮಹಾಮಂಡಲದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕಿಶೋರ್ ಕುಮಾರ್ ವಂದಿಸಿದರು.

ಮಜೂರು ಮಂಡಲ ಬೃಹತ್ ಹಿಂದೂ ಸಂಗಮದಲ್ಲಿ ಗಿರೀಶ ಶಿರಿಯಾರ ಆಶಯ

ಜಾಗೃತ ಸಮಾಜ ನಿರ್ಮಾಣವೇ ಇಂದಿನ ಅಗತ್ಯ

ಶಿರ್ವ: ಹಿಂದು ಸಂಘಟನೆಯ ಮೂಲಕ ವ್ಯಕ್ತಿ ನಿರ್ಮಾಣದ ಕಾರ್ಯ ಮಾಡಲು ಹುಟ್ಟಿಕೊಂಡ ಸಂಘಟನೆಯೇ ರಾಷ್ಟ್ರೀಯ ಸ್ವಯಂಸೇವಕ ಸಂಘ. ಶಕ್ತಿಯುತ ಸಮಾಜ ಎದ್ದು ನಿಂತಾಗ ಇಡೀ ಜಗತ್ತೇ ನಮ್ಮನ್ನು ನೋಡುತ್ತದೆ. ಈ ದೇಶದ ತತ್ವವನ್ನು ಜಗತ್ತು ಅರಿಯುವಂತೆ ಮಾಡುವ ಕಾರ್ಯ ನಡೆಯುತ್ತಿದೆ. ಜಾಗೃತ ಸಮಾಜದ ನಿರ್ಮಾಣವೇ ಇಂದಿನ ಅಗತ್ಯ ಎಂದು ಮಂಗಳೂರು ವಿಭಾಗದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಪರ್ಕ ಪ್ರಮುಖ್ ಯೋಗೀಶ ಶಿರಿಯಾರ ನುಡಿದರು.



ಅವರು ಭಾನುವಾರ ಹಿಂದೂ ಸಂಗಮ ಆಯೋಜನಾ ಸಮಿತಿ ಕಾಪು ತಾಲೂಕು, ಮಜೂರು, ಪಾದೂರು, ಹೇರೂರು ಗ್ರಾಮಗಳನ್ನು ಒಳಗೊಂಡ 'ಮಜೂರು ಮಂಡಲ'ದ ವತಿಯಿಂದ ಹೇರೂರು ಶ್ರೀರಾಘವೇಂದ್ರ ಭಜನಾ ಮಂದಿರದ ಮುಂಭಾಗದ ವೇದಿಕೆಯಲ್ಲಿ ಏರ್ಪಡಿಸಿದ ಬೃಹತ್ ಹಿಂದೂ ಸಂಗಮದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

ಸಮಾಜ ಕಟ್ಟುವ ಕೆಲಸ

ತಾಯಂದಿರ ಮೂಲಕ ಅದ್ಭುತ ಕಾರ್ಯಗಳು ನಡೆಯುತ್ತಿವೆ ಸಮಾಜವನ್ನು ಕಟ್ಟುವ ಕೆಲಸ ಹಿಂದೂ ಸಮಾಜ ಮಾಡುತ್ತಿದೆ. ಲವ್ ಜಿಹಾದ್, ಲ್ಯಾಂಡ್ ಜಿಹಾದ್, ಮಾದಕ ವಸ್ತುಗಳು ಮನೆಯಂಗಳಕ್ಕೆ ತಲುಪುತ್ತಿದೆ. ಈ ಬಗ್ಗೆ ಎಚ್ಚರಿಸುವ ಕಾರ್ಯ ನಿರಂತರವಾಗಿ ನಡೆಯಬೇಕಾಗಿದೆ. ಪಂಚ ಪರಿವರ್ತನೆಯ ಮೂಲಕ ದೇಶವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಈ ನಿಟ್ಟಿನಲ್ಲಿ ಇಡೀ ಸಮಾಜ ಕೆಲಸ ಮಾಡಬೇಕು ಎಂದು ಕರೆಯಿತ್ತರು.

> **ಬೃಹತ್ ಶೋಭಾಯಾತ್ರೆ**
>
> ಆರಂಭದಲ್ಲಿ ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದ ಸನ್ನಿಧಿಯಿಂದ ಹೊರಟ ಬೃಹತ್ ಶೋಭಾಯಾತ್ರೆಗೆ ಕ್ಷೇತ್ರದ ಆಡಳಿತ ಮೊಕ್ತೇಸರ ಜಯರಾಮ ಪ್ರಭು ಗಂಪದಬೈಲು, ಅಧ್ಯಕ್ಷ ಉಮೇಶ ಪ್ರಭು ಪಾಲಮೆ ಚಾಲನೆ ನೀಡಿದರು.

ಅಧ್ಯಕ್ಷತೆಯನ್ನು ಕಲ್ಲುಗುಡ್ಡೆ ಶ್ರೀಬ್ರಹ್ಮಬೈದರ್ಕಳ ಸಂಘದ ಅಧ್ಯಕ್ಷ ಹಾಗೂ ಗರಡಿ ಪಾತ್ರಿ ಚಂದ್ರಕಾಂತ ಪೂಜಾರಿ ವಹಿಸಿದ್ದರು. ಗ್ರಾ.ಪಂ. ಮಾಜಿ ಸದಸ್ಯೆ ಮುತ್ತಕ್ಕ ಆಯೋಜನಾ ಸಮಿತಿ ಉಪಾಧ್ಯಕ್ಷ ಶಶಿಧರ ಪುರೋಹಿತ್ ಉಪಸ್ಥಿತರಿದ್ದರು. ಹಿಂದೂ ಸಂಗಮ ಮಜೂರು ಮಂಡಲ ಸಂಚಾಲಕ ವರುಣ್ ಆಚಾರ್ಯ ಹೇರೂರು ಸ್ವಾಗತಿಸಿದರು. ಅಭಿಜ್ಞಾ ದೇವಾಡಿಗ ವೈಯಕ್ತಿಕ ಗೀತೆ ಹಾಡಿದರು. ಋಷಿ ತಂತ್ರಿ ಪಾದೂರು ಸ್ಯಾಕ್ಸೋಫೋನ್ ವಾದನದ ಮೂಲಕ ದೇಶಭಕ್ತಿಗೀತೆ ನುಡಿಸಿದರು. ರಮಾಕಾಂತ ಐತಾಳ್ ಪಾದೂರು ಪ್ರಾರ್ಥಿಸಿದರು. ಪ್ರಸಾದ್ ಶೆಟ್ಟಿ ವಲದೂರು ವಂದಿಸಿದರು.ಆಶಾ ಆಚಾರ್ಯ ನಿರೂಪಿಸಿದರು. ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಶಿಲ್ಪಾ ಸುವರ್ಣ ಉಪಸ್ಥಿತರಿದ್ದರು.

ಮದನಾಡಿನಲ್ಲಿ ಬೃಹತ್ ಹಿಂದೂ ಸಂಗಮ, ಶೋಭಾಯಾತ್ರೆ | ಮಿರನ್ ಕುಟ್ಟಪ್ಪ ಆಶಯ

ಹಿಂದು ಸಂಘಟನೆಯ ಮೂಲಕ ರಾಷ್ಟ್ರ ಕಟ್ಟುವ ಕೆಲಸ

ನಾಪೋಕ್ಲು: ಆರೆಸ್ಸೆಸ್ ಹಿಂದುಗಳ ಸಂಘಟನೆಯ ಮೂಲಕ ರಾಷ್ಟ್ರವನ್ನು ಕಟ್ಟುವ ಕೆಲಸವನ್ನು ಮಾಡುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜಿಲ್ಲಾ ಸಹ ಕಾರ್ಯವಾಹ ಮಿರನ್ ಕುಟ್ಟಪ್ಪ ಹೇಳಿದರು. ಸಮೀಪದ ಮದನಾಡಿನಲ್ಲಿ ಭಾನುವಾರ ಆಯೋಜಿಸಲಾಗಿದ್ದ ಹಿಂದೂ ಸಂಗಮದಲ್ಲಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ಅವರು ಮಾತನಾಡಿದರು.



ಭಾರತ ಬಲಾಢ್ಯ ರಾಷ್ಟ್ರ

ರಾಷ್ಟ್ರದ ಅನೇಕ ಸವಾಲು ಮತ್ತು ಸಮಸ್ಯೆಗಳಿಗೆ ಉತ್ತರವನ್ನು ನೀಡುತ್ತಾ ನೂರು ವರ್ಷಗಳು ತುಂಬುವ ಸಂದರ್ಭದಲ್ಲಿ ವಿಶ್ವವೇ ಭಾರತವನ್ನು ತಿರುಗಿ ನೋಡುವಂತೆ ಬಲಾಢ್ಯ ಭಾರತವನ್ನು ಕಟ್ಟಿದೆ ಎಂದರು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಭಾರತವನ್ನು ಪ್ರೀತಿಸಬೇಕು. ಆ ಮೂಲಕ ರಾಷ್ಟ್ರಕಟ್ಟುವ ಕಾರ್ಯದಲ್ಲಿ ತಮ್ಮಿಂದಾಗುವ ಕೆಲಸವನ್ನು ಕೈಗೊಳ್ಳಬೇಕು. ಕುಟುಂಬ ಪ್ರಬೋಧನ, ಸಾಮಾಜಿಕ ಪರಿವರ್ತನೆ, ಸ್ವದೇಶಿ ಭಾವನೆ, ಪರಿಸರ ಕಾಳಜಿ, ನಾಗರಿಕ ಶಿಷ್ಟಾಚಾರದೇಶದ ಪ್ರತಿಯೊಂದು ಮನೆಯೂ ಕುಟುಂಬ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕು. ಮನೆಯ ಮಕ್ಕಳು ದೇಶದ ಸಂಸ್ಕೃತಿ ಸನಾತನ ಪರಂಪರೆಯ ಬಗ್ಗೆ ಗೌರವ ಭಾವನೆಯನ್ನು ಬೆಳೆಸಿಕೊಳ್ಳಬೇಕು. ನಮ್ಮೆಲ್ಲ ಜಾತಿ ಮತ ಪಕ್ಷ ಪಂಥಗಳನ್ನು ಮರೆತು ನಾವೆಲ್ಲ ಒಂದು, ನಾವೆಲ್ಲ ಹಿಂದೂ ಎನ್ನುವ ಭಾವನೆಯನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ನಾಗರಿಕರಾಗಿ ಸಮಾಜದಲ್ಲಿ ಶಿಷ್ಟಾಚಾರದಲ್ಲಿ ಪಾಲಿಸಬೇಕು. ಪ್ರಕೃತಿ ಇದ್ದರೆ ಮಾತ್ರ ನಾವು. ನಮ್ಮಿಂದ ಪ್ರಕೃತಿಯಲ್ಲ. ಪರಿಸರವನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ. ಅದೇ ರೀತಿಯಲ್ಲಿ ಸ್ವದೇಶಿ ಭಾವನೆ, ಸ್ವದೇಶಿ ಉಡುಪು, ಸ್ವದೇಶಿ ಭಾಷೆ ಬಳಸುವುದರ ಮೂಲಕ ದೇಶದನುನ್ನು ಕಟ್ಟುವ ಪಂಚ ಪರಿವರ್ತನೆಯಲ್ಲಿ ಪ್ರತಿಯೊಬ್ಬ ಹಿಂದೂ ಪಾಲ್ಗೊಳ್ಳಬೇಕೆಂಬ ಕರೆಯನ್ನು ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನಿವೃತ್ತ ಮುಖ್ಯ ಶಿಕ್ಷಕ ಶಿವ ರಾವ್ ಮಾತನಾಡಿ, ಮದನಾಡಿನಲ್ಲಿ ಹಲವಾರು ವರ್ಷಗಳಿಂದ ಹಿಂದೂ ಸಂಘಟನೆಯ ಕೆಲಸಗಳು ಸಕ್ರಿಯವಾಗಿ ನಡೆಯುತ್ತಿದೆ. ಒಳ್ಳೆಯ ರೀತಿಯ ಬೆಂಬಲವನ್ನು ಹಿಂದುಗಳು ನೀಡಿದ್ದಾರೆ. ರಾಷ್ಟ್ರದ ಉಳಿವಿಗಾಗಿ ಸಂಘಟಿತ ಹಿಂದು ಶಕ್ತಿ ಅನಿವಾರ್ಯ ಎಂದರು.

ಅತಿಥಿಗಳಾಗಿದ್ದ ನಿವೃತ್ತ ಸೇನಾಧಿಕಾರಿ ಕ್ಯಾಪ್ಟನ್ ಬಟ್ಟನ ಉತ್ತಪ್ಪ ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ಯುವ ಜನತೆ ಪಾಲ್ಗೊಳ್ಳಬೇಕು. ಮದನಾಡಿನಂತ ಸಣ್ಣ ಗ್ರಾಮದಲ್ಲೂ ಎಲ್ಲರೂ ಪಾಲ್ಗೊಂಡಿರುವುದು ಸಂತೋಷ ಎಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಗಿರೀಶ್ ತಾಳ್ತಮನೆ ಮಾತನಾಡಿ, ಮನೆಯಲ್ಲಿರುವ ಮಕ್ಕಳು ದೇಶದ ಹಿರಿಯರ ಬಗ್ಗೆ ಸನಾತನ ಸಂಸ್ಕೃತಿಯ ಬಗ್ಗೆ ಹಿಂದುತ್ವದ ಬಗ್ಗೆ ತಿಳಿದುಕೊಳ್ಳಬೇಕು. ಹಿರಿಯರು ಇವರಿಗೆ ತಿಳಿಸಿ ಹೇಳಬೇಕು. ಪ್ರತಿ ಮನೆಯಲ್ಲೂ ಈ ಕಾರ್ಯ ನಡೆಯಲೇಬೇಕು. ಹಾಗಿದ್ದರೆ ಮಾತ್ರ ಭವಿಷ್ಯದ ಭಾರತ ಸುಭದ್ರವಾಗಿರಲು ಸಾಧ್ಯ ಎಂದರು.

ಸುರೇಶ್ ಸ್ವಾಗತಿಸಿದರು. ಧನಂಜಯ ಆಗೋಳಿಕಜೆ ವಂದಿಸಿದರು. ಯೋಗೇಶ್ ಬಿಂದು ಹುಲಿ ಮನೆ, ವಿಠ್ಠಲ್ ಒಂದೇ ಮಾತರಂ ಮತ್ತು ದೇಶಭಕ್ತಿ ಗೀತೆ ಹಾಡಿದರು. ಭವ್ಯವಾಗಿ ನಡೆದ ಶೋಭಾಯಾತ್ರೆಯಲ್ಲಿ ಭಾರೀ ಜನಸ್ತೋಮ ನೆರೆದಿತ್ತು.

ಸಂಗೀತ ಭಾರತಿ ಫೌಂಡೇಶನ್‌ನಿಂದ ಸ್ತ್ರೀ ವಿಶಿಷ್ಟ ಪರಿಕಲ್ಪನೆಯ ಸಂಗೀತ



ಮಂಗಳೂರು: ನಗರದ ಸಂಗೀತ ಭಾರತಿ ಫೌಂಡೇಶನ್ ಆಶ್ರಯದಲ್ಲಿ ಉರ್ವ ಅಂಬೇಡ್ಕರ್ ಸಭಾಂಗಣದಲ್ಲಿ ನಡೆದ ಸ್ತ್ರೀ ವಿಶಿಷ್ಟ ಪರಿಕಲ್ಪನೆಯ ಸಂಗೀತ ಕಾರ್ಯಕ್ರಮವನ್ನು ಗುರುಗಳಾದ ಬಸ್ತಿ ಕವಿತಾ ಶೆಣೈ, ವಿಭಾ ನಾಯಕ್, ಶ್ರೀಲತಾ ಪ್ರಭು ಉದ್ಘಾಟಿಸಿದರು.

ವೇದಿಕೆಯಲ್ಲಿ ಸಂಗೀತ ಭಾರತಿ ಫೌಂಡೇಶನ್ ದ ಅಧ್ಯಕ್ಷ ಉಸ್ತಾದ್ ರಫೀಕ್ ಖಾನ್, ಉಪಾಧ್ಯಕ್ಷ ನರೇಂದ್ರ ಎಲ್ ನಾಯಕ್ , ಕಾರ್ಯದರ್ಶಿ ಡಾ ಉಷಾಪ್ರಭಾ ಎನ್ ನಾಯಕ್ , ಟ್ರಸ್ಟಿ ರಮೇಶ್ ಕೆಜಿ, ಖಜಾಂಚಿ ಕರುಣಾಕರ ಬಳ್ಕೂರು, ಸದಸ್ಯೆ ಸೌಮ್ಯ ಕಾಮತ್ ಇದ್ದರು. ಈ ಕಾರ್ಯಕ್ರಮಕ್ಕೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಪ್ರವಾಸೋದ್ಯಮ ಇಲಾಖೆ, ಕೆನರಾ ಬ್ಯಾಂಕ್, ಡಾ. ದಯಾನಂದ ಪೈ, ಕರ್ಣಾಟಕ ಬ್ಯಾಂಕ್, ಎಲ್ಸ್ ಪರ್ಟ್ ಸಮೂಹ ಶಿಕ್ಷಣ ಸಂಸ್ಥೆ ಮುದ್ರಾ ಪ್ರಿಂಟರ್ಸ್ ಸಹ ಪ್ರಾಯೋಜಕತ್ವವನ್ನು ನೀಡಿದ್ದಾರೆ.

> **ಶಾಸ್ತ್ರೀಯ ಜುಗಲ್ ಬಂಧಿ**
>
> ವಿಭಾ ಹೆಗ್ಡೆ ಮತ್ತು ಶಿವಾನಿ ಮಿರಾಜ್ ಕರ್ ಇವರಿಂದ ಶಾಸ್ತ್ರೀಯ ಜುಗಲ್ ಬಂಧಿ ಕಾರ್ಯಕ್ರಮ ನಡೆಯಿತು. ಇವರಿಗೆ ಹಾರ್ಮೋನಿಯಂನಲ್ಲಿ ಮೇಧಾ ಭಟ್, ತಬ್ಲದಲ್ಲಿ ವಿಜೇತಾ ಹೆಗ್ಡೆ, ತಂಬೂರದಲ್ಲಿ ಪ್ರತೀಕ್ಷ ಪ್ರಭು, ಶ್ರಾವರಿ ಎಸ್. ಸಾಥ್ ನೀಡಿದರು. ಉತ್ತರಾರ್ಧದಲ್ಲಿ ವಯೋಲಿನ್ ಟ್ರಯೋ ಕಾರ್ಯಕ್ರಮವನ್ನು ಸಂಗೀತಾ ಶಂಕರ್, ನಂದಿನಿ ಶಂಕರ್, ರಾಗಿಣಿ ಶಂಕರ್ ನಡೆಸಿಕೊಟ್ಟರು. ಇವರಿಗೆ ತಬ್ಲದಲ್ಲಿ ಅನುರಾಧ ಪಾಲ್ ಸಾಥ್ ನೀಡಿದರು.

ಧರ್ಮಸ್ಥಳ ಯೋಜನೆ ಒಕ್ಕೂಟಗಳ ವಾರ್ಷಿಕೋತ್ಸವ, ಸತ್ಯನಾರಾಯಣ ಪೂಜೆ



ಪುತ್ತೂರು: ಸಾವಿರಾರು ಜನರನ್ನು ದುಶ್ಚಟ ಮುಕ್ತರನ್ನಾಗಿ ಹೊಸ ಬದುಕು ನೀಡಿದ ಕೀರ್ತಿ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ, ಜನಜಾಗೃತಿ ವೇದಿಕೆಗೆ ಸಲ್ಲುತ್ತದೆ. ಸಂಘಟನೆಯ ಮೂಲಕ ಸ್ವಾವಲಂಬಿ, ಆರೋಗ್ಯಪೂರ್ಣ ಸಮಾಜ ನಿರ್ಮಾಣ ಕಾರ್ಯವು ನಡೆಯುತ್ತಿರುವುದು ಶ್ಲಾಘನೀಯವಾದದು ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ಪುತ್ತೂರು ವಲಯ, ಪ್ರಗತಿಬಂದು ಸ್ವಸಹಾಯ ಸಂಘಗಳ ಒಕ್ಕೂಟ, ಕಸಬಾ, ಬಪ್ಪಳಿಗೆ, ಪರ್ಲಡ್ಕ ಪಡೀಲು, ಸಾಲ್ಮರ, ಬೊಳ್ವಾರು, ಜಿಡೆಕಲ್ಲು, ಸಾಮೆತ್ತಡ್ಕ ಆಶ್ರಯದಲ್ಲಿ ಪುತ್ತೂರುಶ್ರೀ ಮಹಾಲಿಂಗೇಶ್ವರ ದೇವಾಲಯದ ನಟರಾಜ ವೇದಿಕೆಯಲ್ಲಿ ಭಾನುವಾರ ನಡೆದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಮತ್ತು ಒಕ್ಕೂಟಗಳ ವಾರ್ಷಿಕೋತ್ಸವ ಸಭೆಯಲ್ಲಿ ಅವರು ಮಾತನಾಡಿದರು.

ದ.ಕ.ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪದ್ಮನಾಭ ಶೆಟ್ಟಿ ಮಾತನಾಡಿದರು. ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ಅಧ್ಯಕ್ಷ ಬಾಲಕೃಷ್ಣ ಸಭಾಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ವ್ಯವಸ್ಥಾಪನ ಸಮಿತಿ ಸದಸ್ಯ ಸುಭಾಷ್ ರೈ, ನ್ಯಾಯವಾದಿ ಹರಿಣಾಕ್ಷಿ ಜೆ ಶೆಟ್ಟಿ ಜನಜಾಗೃತಿ ವೇದಿಕೆಯ ಪುತ್ತೂರು ತಾಲೂಕು ಸಮಿತಿ ಅಧ್ಯಕ್ಷ ಲೋಕೇಶ್ ಹೆಗ್ಡೆ ಜನಜಾಗೃತಿ ವೇದಿಕೆಯ ವಲಯ ಅಧ್ಯಕ್ಷ ಸತೀಶ್ ನೈಕ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಪುತ್ತೂರು ಯೋಜನಾಧಿಕಾರಿ ಶಶಿಧರ್ ಇದ್ದರು. ಒಕ್ಕೂಟದ ಸದಸ್ಯರಿಗೆ ಆಯೋಜಿಸಿದ ವಿವಿಧ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಗಿರೀಶ್ ಸ್ವಾಗತಿಸಿದರು. ರಾಜೇಶ್ ವರದಿ ಮಂಡಿಸಿದರು. ಚೇತನಾ ವಂದಿಸಿದರು. ನಳಿನಾಕ್ಷಿ ನಿರೂಪಿಸಿದರು.

ಆನೆಗುಡ್ಡೆ ಶ್ರೀ ವಿನಾಯಕ ದೇಗುಲ ಬ್ರಹ್ಮಕಲಶ ವರ್ಧಂತಿ ಉತ್ಸವ ಸಂಪನ್ನ



ಕೋಟ: ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನದಲ್ಲಿ ಬ್ರಹ್ಮ ಕಲಶ ವರ್ಧಂತಿ ಉತ್ಸವ ಸಂಪನ್ನಗೊಂಡಿತು.

ಧಾರ್ಮಿಕ ವಿಧಿವಿಧಾನಗಳನ್ನು ವೇದಮೂರ್ತಿ ಶಿಬರೂರು ವೇದವ್ಯಾಸ ತಂತ್ರಿ, ಶಿಬರೂರು ಕೃಷ್ಣರಾಜ ತಂತ್ರಿ ವರ್ಗ ನೆರವೇರಿಸಿದರು.

ಈ ಸಂದರ್ಭದಲ್ಲಿ ಆಡಳಿತ ಧರ್ಮದರ್ಶಿ ಕೆ. ಣ ಉಪಾಧ್ಯಾಯರು ಊರಿನ ವಿವಿಧ ಗಣ್ಯರಿಗೆ ಹಾಗೂ ಸಮಾಜ ಸೇವಕರಿಗೆ ಶ್ರೀ ದೇವರ ವಿಶೇಷ ಪ್ರಸಾದ ನೀಡುವ ಮುಖೇನ ಸನ್ಮಾನಿಸಲಾಯಿತು. ಧರ್ಮದರ್ಶಿಗಳಾದ ನಿರಂಜನ ಉಪಾಧ್ಯಾಯ ಪದ್ಮನಾಭ ಉಪಾಧ್ಯಾಯ, ಪರ್ಯಾಯ ಅರ್ಚಕರಾದ ಕೆ. ವ್ಯಾಸ ಉಪಾಧ್ಯಾಯ ಮತ್ತು ಸಹೋದರರು ದೇಗುಲದ ಪ್ರಬಂಧಕ ನಟೇಶ್ ಕಾರಂತ್ ಇದ್ದರು.

> **ವಿವಿಧ ಧಾರ್ಮಿಕ ವಿಧಿವಿಧಾನ**
>
> ಶುಕ್ರವಾರ ಬೆಳಿಗ್ಗೆ ಶ್ರೀ ದೇವತಾ ಪ್ರಾರ್ಥನೆ ಸ್ವಸ್ತಿವಾಚನ, ಪುಣ್ಯಾಹ, ಗಣ ಹೋಮ, ಶಾಂತಿ ಪ್ರಾಯಶ್ಚಿತ್ತ ಹೋಮ, ತತ್ವ ಹೋಮ, ಕಲಾ ಹೋಮ, ಬೆಳಿಗ್ಗೆ 108 ರಜತ ಕಲಶಾಭಿಷೇಕದೊಂದಿಗೆ ಪ್ರಧಾನ ಸುವರ್ಣ ಕಲಶಾಭಿಷೇಕ, ಮಂಗಳಾರತಿ ಮುಂತಾದ ಧಾರ್ಮಿಕ ಕಾರ್ಯಕ್ರಮ ನಡೆಯಿತು.

ಕಡಂದಲೆ ಪಾಲಡ್ಕದಲ್ಲಿ ಮೂಡುಬಿದಿರೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿ ಅಬ್ದುಲ್ ಹಮೀದ್ ಪಕ್ಕಲಡ್ಕ

ರಾಜ್ಯ ಸರ್ಕಾರ ಕನ್ನಡ ಶಾಲೆಗಳ ಬಲವರ್ಧನೆಗೆ ತುರ್ತು ಕ್ರಮಕ್ಕೆ ಮುಂದಾಗಲಿ

ಮೂಡುಬಿದಿರೆ: ಕನ್ನಡ ಭಾಷೆಯ ಉಳಿವು, ಭಾಷೆಯ ಬಳಕೆಯ ವಿಚಾರದಲ್ಲಿ ಸಾಹಿತಿ, ಅಬ್ದುಲ್ ಹಮೀದ್ ಪಕ್ಕಲಡ್ಕ ಆಳುವ ವರ್ಗಕ್ಕೆ ಮಾತಿನ ಛಾಟಿಯೇಟು ಬೀಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ಮೂಡುಬಿದಿರೆ ತಾಲೂಕು ಘಟಕದ ವತಿಯಿಂದ ಕಡಂದಲೆ ಪಾಲಡ್ಕ ಪೂಪಾಡಿಕಲ್ಲು ಶ್ರೀ ನಾರಾಯಣ ಗುರು ಸಭಾಭವನದಲ್ಲಿ ಭಾನುವಾರ ಜರಗಿದ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಇದಕ್ಕೆ ಭಾಷೆಯ ಉಳಿವಿಗಾಗಿ ಕೇರಳ ಸರಕಾರದ ಮಾದರಿಯಲ್ಲಿ ನಮ್ಮ ಸರಕಾರವೂ ಕನ್ನಡ ಮತ್ತು ಕನ್ನಡ ಮಾಧ್ಯಮ ಶಾಲೆಗಳ ಬಲವರ್ಧನೆಗೆ ತುರ್ತುಕ್ರಮಕ್ಕೆ ಮುಂದಾಗಬೇಕಿದೆ ಎಂದು ಆಗ್ರಹಿಸಿದ್ದಾರೆ.



ಕನ್ನಡ ಭಾಷೆಯ ಅಭಿವೃದ್ಧಿಗೆ ತೊಡಕಾಗಿರುವುದು ಸರಕಾರದಿಂದಲೇ ಎಂಬ ಮಾತನ್ನು ಹೇಳಿದ ಅವರು ಉದ್ಯಮಿಗಳು, ರಾಜಕಾರಣಿಗಳು ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆದಿರುವುದು ಮತ್ತು ಸರಕಾರವೂ ಇದಕ್ಕೆ ಬೇಕಾಬಿಟ್ಟಿ ಅನುಮತಿ ನೀಡು ತ್ತಿರುವ ಕಾರಣದಿಂದಾಗಿ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಮತ್ತು ಕನ್ನಡದ ಪರಿಸ್ಥಿತಿ ಹದಗೆಟ್ಟು ಹೋಗಿದೆ ಎಂದಿದ್ದಾರೆ.

ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಲ್ಲಿ ಸುಮಾರು 947ಕ್ಕೂ ಅಧಿಕ ಕನ್ನಡ ಮಾಧ್ಯಮ ಶಾಲೆಗಳು ಮಕ್ಕಳ ಕೊರತೆಯಿಂದ ವಿಲೀನ ಹಾಗೂ ಮುಚ್ಚಲ್ಪಟ್ಟಿವೆ ಎಂದು ನೋವಿನಲ್ಲಿ ಹೇಳಿದ್ದಾರೆ. ಆಂಗ್ಲ ಮಾಧ್ಯಮ ಶಾಲೆಗಳಿಗೆ ಸರಿಸಾಟಿಯಾಗಿ ಸರಕಾರಿ ಶಾಲೆಗಳ ಸಿದ್ಧತೆ, ಕಟ್ಟಡ, ಪೀಠೋಪಕರಣ ಸಹಿತ ಮೂಲ ಸೌಲಭ್ಯಗಳ ಅಭಿವೃದ್ಧಿ, ಕಲಿಕಾ ಸಾಮಗ್ರಿಗಳ ಲಭ್ಯತೆ, ಶಿಕ್ಷಕರ ಕೊರತೆ ನಿವಾರಣೆಯಿಂದ ಸಮಸ್ಯೆ ನಿವಾರಣೆಗೆ ಮುಂದಾಗಬೇಕು ಎಂದ ಹಮೀದ್ ಅವರು ಪೋಷಕರಲ್ಲಿ ಅರಿವಿನ ಕೊರತೆ, ನಗರ ವಲಸೆ, ಮೂಲಸೌಕರ್ಯಗಳ ಕೊರತೆ, ಶಿಕ್ಷಕರ ಭರ್ತಿಯಲ್ಲಿ ವಿಳಂಬ ತಪ್ಪಿಸಲೇಬೇಕಾಗಿದೆ ಎಂದರು.

ಸಮ್ಮೇಳನವನ್ನು ಉದ್ಘಾಟಿಸಿದ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀ ಕಮಲಾದೇವಿ ಪ್ರಸಾದ ಆಸ್ರಣ್ಣ ಸಮಾಜಕ್ಕೆ ಹಿತವಾಗಿರುವುದು ಮಾತ್ರ ಸಾಹಿತ್ಯವಾಗಿದೆ ಅಹಿಂಸಾ ಭಾವನೆ ಪ್ರೋತ್ಸಾಹಿಸಿ ಬೆಳೆಸಿ ಎಂದರು.

ದ.ಕ. ಜಿಲ್ಲಾ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಂ. ಪಿ. ಶ್ರೀನಾಥ್ ಆಶಯ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಚೌಟರ ಅರಮನೆಯ ಕುಲದೀಪ್ ಎಂ. ಕೆ. ಗುಣಪಾಲ ಕಡಂಬ, ಹಂಡೇಲುಗುತ್ತು ಧನಕೀರ್ತಿ ಬಲಿಪ, ವಿಶೇಷ ಕಾರ್ಯನಿರ್ವಹಣಾಧಿಕಾರಿ ಚಂದ್ರಶೇಖರ್ ಎಂ, ನಿರ್ದೇಶಕ ಉದ್ಯಮಿ ಸಿ.ಎಚ್. ಅಬ್ದುಲ್ ಗಫೂರ್, ಎಸ್. ಡಿ. ಸಂಪತ್ ಸಾಮ್ರಾಜ್ಯ, ಬಿಲ್ಲವ ಸಂಘದ ಅಧ್ಯಕ್ಷ ಲೀಲಾಧರ ಪೂಜಾರಿ ಕಡಂದಲೆ, ತಾಲೂಕು ಕಸಾಪ ಘಟಕದ ಮಾರ್ಗದರ್ಶಕ ಡಾ. ಪುಂಡಿಕಾಯ್ ಗಣಪಯ್ಯ ಭಟ್, ಮೂಲ್ಕಿ ಕಸಾಪ ಅಧ್ಯಕ್ಷ ಮಿಥುನ್ ಉಡುಪ ಮತ್ತಿತರರು ಉಪಸ್ಥಿತರಿದ್ದರು. ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಕೆ. ಪಿ.ಸುಚರಿತ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಮೂಡುಬಿದಿರೆ ತಾಲೂಕು ಘಟಕದ ಅಧ್ಯಕ್ಷ ವೇಣುಗೋಪಾಲ ಶೆಟ್ಟಿ ಕೆ., ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಎಲ್.ಜೆ. ಫೆರ್ನಾಂಡೀಸ್ ವಂದಿಸಿದರು.

ನಿಮ್ಮೂರಿನ ಸುದ್ದಿ

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಸೋಮವಾರ 23, ಫೆಬ್ರವರಿ 2026

ಸುತ್ತಮುತ್ತ

ಭಕ್ತರಿಂದ ಹಸಿರು ಕಾಣಿಕೆ ಸಮರ್ಪಣೆ

ಸುಬ್ರಹ್ಮಣ್ಯ: ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಪ್ರತಿಷ್ಠಾ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ದೇವರಿಗೆ ಭಕ್ತರು ಶುಕ್ರವಾರ ಹಸಿರು ಕಾಣಿಕೆ ಸಮರ್ಪಿಸಿದರು. ಬಾಳುಗೋಡು, ಐನೆಕಿದು ಹಾಗೂ ಹರಿಹರ ಪಲ್ಲತ್ತಡ್ಕ ಭಾಗಗಳಿಂದ ಹರಿಹರ ಪೇಟೆಗೆ ಹಸಿರು ಕಾಣಿಕೆ ತರಲಾಯಿತು. ಬಳಿಕ ಅಲ್ಲಿಂದ ಶ್ರೀ ದೇವರಿಗೆ ವಾಹನಗಳ ಮೂಲಕ ಮೆರವಣಿಗೆಯಲ್ಲಿ ಫಲವಸ್ತುಗಳನ್ನು ಶ್ರೀ ದೇವಳಕ್ಕೆ ತಂದು ಸಮರ್ಪಿಸಿದ ಭಕ್ತರು ಪ್ರಸಾದ ಸ್ವೀಕರಿಸಿದರು. ಶ್ರೀ ದೇವಳದ ಪ್ರತಿಷ್ಠಾ ವಾರ್ಷಿಕೋತ್ಸವ ಮತ್ತು ಜಾತ್ರಾ ಉತ್ಸವವು ಬ್ರಹ್ಮಶ್ರೀ ನೀಲೇಶ್ವರ ಪದ್ಮನಾಭ ತಂತ್ರಿ ಉಚ್ಚಿಲ ಅವರ ನೇತೃತ್ವದಲ್ಲಿ ಶುಕ್ರವಾರ ಆರಂಭವಾಗಿದೆ. ಸಂಜೆ ತಂತ್ರಿಗಳನ್ನು ಭವ್ಯವಾಗಿ ಪೂರ್ಣಕುಂಭದ ಮೂಲಕ ಸ್ವಾಗತಿಸಲಾಯಿತು. ರಾತ್ರಿ ಮಹಾಪೂಜೆ, ಅನ್ನಸಂತರ್ಪಣೆ ನಡೆಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ ಪ್ರಭು ವ್ಯವಸ್ಥಾಪನಾ ಸಮಿತಿ ಸದಸ್ಯ ಅರ್ಚಕ ಸುಬ್ರಹ್ಮಣ್ಯ ಭಟ್, ಕೆ. ದಯಾನಂದ ಕಟ್ಟೆಮನೆ, ಗುಣವರ್ಧನ ಕೆರೆಲ, ಕೆ. ಬೆಳ್ಳಪ್ಪ ಗೌಡ ಏಂಡಿಗೆ, ಯಂ.ಜೆ. ವಿನುಪ್ ಮಲ್ಲಾಜೆ, ಕೇಶವ ಕೆ. ಕೊಪ್ಪಡ್ಕ, ಸವಿತಾ ಕೆ. ಕಟ್ಟೆಮನೆ, ಪದ್ಮಿನಿ ಎನ್.ಜಿ. ಉಪಸ್ಥಿತರಿದ್ದರು.

ಅಡ್ಕಾರ್ ಶ್ರೀಕ್ಷೇತ್ರದ ವರ್ಷಾವಧಿ ಜಾತ್ರೆ

ಸುಳ್ಯ: ಜಾಲ್ಸೂರು ಗ್ರಾಮದ ಅಡ್ಕಾರು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವರ ಪ್ರತಿಷ್ಠಾ ದಿನ ಹಾಗೂ



ಕಾಲಾವಧಿ ಜಾತ್ರೋತ್ಸವವು ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿಗಳವರ ಮಾರ್ಗದರ್ಶನದಲ್ಲಿ ಬುಧವಾರ ಉಗ್ರಾಣ ತುಂಬಿಸುವ ಮೂಲಕ ಆರಂಭಗೊಂಡಿತು. ಬುಧವಾರ ಬೆಳಗ್ಗೆ ಸುಬ್ರಹ್ಮಣ್ಯ ಹವನದ ಸಾಮೂಹಿಕ ಪ್ರಾರ್ಥನೆ ನಡೆದು ಬಳಿಕ ಕಟಕಮೂಲ್ಯ ಶ್ರೀ ಆಶ್ಯಾರಾಮ ಭಜನಾ ಮಂದಿರ, ಜಾಲ್ಸೂರಿನ ಶ್ರೀ ಗುರುರಾಘವೇಂದ್ರ ಸ್ವಾಮಿ ಭಜನಾ ಮಂದಿರ, ಸೋಣಂಗೇರಿ ಶ್ರೀಕೃಷ್ಣ ಭಜನಾ ಮಂದಿರ, ಪೈಚಾರು, ಬೊಳುಬೈಲು, ಪೇರಾಲು–ಅಂಬೋಟಿ ಶ್ರೀ ರಾಮ ಭಜನಾ ಮಂದಿರಗಳಿಂದ ಹಸಿರುವಾಣಿ ಮೆರವಣಿಗೆ ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಗೆ ಸಾಗಿ ಬಂದು ಉಗ್ರಾಣ ತುಂಬಿಸಲಾಯಿತು. ರಾತ್ರಿ ದೇವರ ಮಹಾಪೂಜೆ, ಅನ್ನಸಂತರ್ಪಣೆ ನಡೆದು ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಗುರುವಾರ ಗಣಪತಿ ಹವನ, ಶ್ರೀ ದೇವರಿಗೆ ನವಕ ಕಲಶಾಭಿಷೇಕ, ಪರಿವಾರ ದೇವರಿಗೆ ತಂಬಿಲ, ಮಧ್ಯಾಹ್ನ ತುಲಾಭಾರ ಸೇವೆ, ಮಹಾಪೂಜೆ, ಪಲ್ಲಪೂಜೆ, ಪ್ರಸಾದ ವಿತರಣೆ ನಡೆಯಿತು.

ಸಂಜೆ ದೀಪಾರಾಧನೆ, ತಾಯಂಬಕ, ರಾತ್ರಿ ಮಹಾಪೂಜೆ ನಡೆದು, ಶ್ರೀ ದೇವರ ಉತ್ಸವ ಬಲಿ, ವಸಂತ ಕಟ್ಟೆಪೂಜೆ, ನೃತ್ಯಬಲಿ, ಪಟ್ಟಣ ಸವಾರಿ, ಅಶ್ವತ್ಥ ಕಟ್ಟೆಪೂಜೆ ಬೆಡಿಸೇವೆ, ಜರುಗಿತು. ಇಂದು ದೇವರ ಉತ್ಸವ ಬಲಿ, ದರ್ಶನಬಲಿ, ಬಟ್ಟಲುಕಾಣಿಕೆ, ರಾಜಾಂಗಣ ಪ್ರಸಾದ, ಮಹಾಪೂಜೆ, ಸಂಪ್ರೋಕ್ಷಣೆ, ಮಂತ್ರಾಕ್ಷತೆ ನಡೆಯಲಿದ್ದು ರಾತ್ರಿ ಸುಬ್ರಹ್ಮಣ್ಯ ದೇವರಿಗೆ ರಂಗಪೂಜೆ, ದೇವರ ಮಹಾಪೂಜೆ, ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ ವಿಜಯ ಕುಮಾರ್ ಕೊಡಿಯಾಲಬೈಲು ನಿರ್ದೇಶನದಲ್ಲಿ ಶಶಿರಾಜ್ ರಾವ್ ಕಾವೂರು ಬಳಗದವರಿಂದ ತುಳು ನಾಟಕ 'ಛತ್ರಪತಿ ಶಿವಾಜಿ' ಪ್ರದರ್ಶನಗೊಳ್ಳಲಿದೆ.

ಶ್ರೀ ಬಸವೇಶ್ವರ ಯುವಕ ಮಂಡಲದ ವಾರ್ಷಿಕೋತ್ಸವ

ಕುಂದಾಪುರ: ಇಲ್ಲಿನ ಟಿಟಿ ರಸ್ತೆಯ ಶ್ರೀ ಬಸವೇಶ್ವರ ಯುವಕ ಮಂಡಲದ 79ನೇ ವಾರ್ಷಿಕೋತ್ಸವ ನಡೆಯಿತು. ಕಾರ್ಯಕ್ರಮವನ್ನು ಕುಂದಾಪುರ ತಾಲ್ಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನಾಗರಾಜ್ ರಾಯಪ್ಪನಮಠ ಉದ್ಘಾಟನೆ ಮಾಡಿ ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿನೋದ್ ಕ್ರಾಸ್ತ ವಹಿಸಿದ್ದರು. ಇದೇ ಸಂದರ್ಭದಲ್ಲಿ ನಮ್ಮ ಕ್ಲಿನಿಕ್ ಇದರ ಕಿರಿಯ ವೈದ್ಯಾಧಿಕಾರಿ ಡಾ. ನಿವೇದಿತಾ ಮತ್ತು ಕ್ರೀಡಾಪಟು ವಿಠಲ್ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ಉಪ ತಹಶೀಲ್ದಾರ್ ಕೃಷ್ಣ ಭರತ್ಕಲ್, ದಾನಿ ವೇಣುಗೋಪಾಲ್, ಪುರಸಭೆ ನಾಮ ನಿರ್ದೇಶಿತ ಸದಸ್ಯರಾದ ಅಶೋಕ್ ಸುವರ್ಣ, ಡಾ ಶರಣ್ಯ, ಸಂಸ್ಥೆ ಅಧ್ಯಕ್ಷ ರವಿ ಬಿ., ಗೌರವ ಅಧ್ಯಕ್ಷ ಮನೀಶ್ ಉಪಸ್ಥಿತರಿದ್ದರು. ಸಂಸ್ಥೆಯ ಪ್ರಮುಖರಾದ ಗಣೇಶ್ ಶೇರೆಗಾರ್ ಸ್ವಾಗತಿಸಿದರು, ಮಾಧವ ಕಾರ್ಯಕ್ರಮ ನಿರೂಪಿಸಿದರು.

ವಿವಿಧ ಇಲಾಖೆ ಅಧಿಕಾರಿಗಳ ಜತೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಎ.ಎಸ್. ಪೊನ್ನಣ್ಣ ಭರವಸೆ

ಬಜೆಟ್ ಬಳಿಕ ಒಟ್ಟು 3 ಸಾವಿರ ನಿವೇಶನ ಹಕ್ಕುಪತ್ರ ವಿತರಣೆ



ಮಡಿಕೇರಿ: ಬಜೆಟ್ ಅಧಿವೇಶನ ನಂತರ ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ನೀಡಲು ಕ್ರಮವಹಿಸಲಾಗಿದೆ ಎಂದು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ತಿಳಿಸಿದ್ದಾರೆ.

ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ನಿವೇಶನ ರಹಿತರಿಗೆ ನಿವೇಶನ ಹಕ್ಕುಪತ್ರ ನೀಡುವ ಬಗ್ಗೆ ವಿವಿಧ ಇಲಾಖೆ ಅಧಿಕಾರಿಗಳ ಜತೆ ಪೊನ್ನಂಪೇಟೆಯ ತಾ.ಪಂ.ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ನವೆಂಬರ್, ಡಿಸೆಂಬರ್ ತಿಂಗಳಲ್ಲಿಯೇ ಮುಖ್ಯಮಂತ್ರಿಯವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿತ್ತು, ಆದರೆ ತಾಂತ್ರಿಕ ಕಾರಣಗಳಿಂದ ಆಗಿರಲಿಲ್ಲ, ಸದ್ಯ ಮಾರ್ಚ್ 27ರ ನಂತರ ಮುಖ್ಯಮಂತ್ರಿಯವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲಾಗುವುದು ಎಂದು ಎ.ಎಸ್.ಪೊನ್ನಣ್ಣ ವಿವರಿಸಿದರು.

ಸಮಗ್ರ ಗಿರಿಜನ ಕಲ್ಯಾಣ ಇಲಾಖೆಯಿಂದ ಲೈನ್ ಮನೆಗಳಲ್ಲಿ ವಾಸಿಸುವ ಸುಮಾರು 1125 ಕುಟುಂಬಗಳಿಗೆ, ಹಾಗೆಯೇ ಬಸವ ಮತ್ತು ಅಂಬೇಡ್ಕರ್ ವಸತಿ ಯೋಜನೆ, ಜತೆಗೆ ಸ್ಥಳೀಯ ಸಂಸ್ಥೆ ವ್ಯಾಪ್ತಿ ಸೇರಿದಂತೆ ಒಟ್ಟು ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಅಧಿಕಾರಿಗಳಿಗೆ ತಾಕೀತು

ನಿವೇಶನ ಹಕ್ಕುಪತ್ರ ವಿತರಣೆಗೆ ವಿಳಂಬ ಆಗಿರುವುದಕ್ಕೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ಶಾಸಕರು, ತಾಂತ್ರಿಕ ತೊಂದರೆಗಳನ್ನು ಒಂದು ವಾರದಲ್ಲಿ ಬಗೆಹರಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ನಿವೇಶನ ರಹಿತರಿಗೆ ನಿವೇಶನ ನೀಡಲೇಬೇಕು. ಆ ದಿಸೆಯಲ್ಲಿ ಅಧಿಕಾರಿಗಳು ಕಾಲಮಿತಿಯಲ್ಲಿ ಕರ್ತವ್ಯ ನಿರ್ವಹಿಸಿ, ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ವಿವಿಧ ಗ್ರಾ.ಪಂ. ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ನಿವೇಶನ ಹಂಚಿಕೆ ಅಂಕಿ ಅಂಶಗಳ ಬಗ್ಗೆ ಶಾಸಕರು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮೋಹನ್ ರಾಜ್ ಅವರು ವಸತಿ ಇಲಾಖೆಯಲ್ಲಿ ಅನುಮೋದನೆಗೆ ಬಾಕಿ ಇರುವ ಹಲವು ಕಡತವನ್ನು ಸ್ಥಳದಲ್ಲಿಯೇ ವಿಲೇವಾರಿ ಮಾಡಿದರಲ್ಲದೆ, ಬಡವರಲ್ಲಿ ಕಡು ಬಡವರಿದ್ದು ಅಂತಹ ಕುಟುಂಬಕ್ಕೆ ಆಧಾರ್ ಹಾಗೂ ಚುನಾವಣಾ ಗುರುತಿನ ಚೀಟಿ ಮಾಡಿಸಬೇಕು ಎಂದು ಸಲಹೆ ನೀಡಿದರು.

ಸಮಗ್ರ ಗಿರಿಜನ ಯೋಜನಾ ಇಲಾಖೆ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ ಅವರು ಮಾಹಿತಿ ನೀಡಿ, ವೀರಾಜಪೇಟೆ ತಾಲೂಕಿನ ಕೆದಮುಳ್ಳೂರು ವ್ಯಾಪ್ತಿಯಲ್ಲಿ 116, ಕೆತ್ತಡು ಗ್ರಾಮ ವ್ಯಾಪ್ತಿಯಲ್ಲಿ 127, ಪೊನ್ನಂಪೇಟೆ ತಾಲೂಕಿನ ಬಾಳುಗೋಡು ಗ್ರಾಮ ವ್ಯಾಪ್ತಿಯಲ್ಲಿ 37, ಬಿರುನಾಣಿ ಗ್ರಾಮ ವ್ಯಾಪ್ತಿಯಲ್ಲಿ 621 ಹಾಗೂ ಕುರ್ಚಿ ಗ್ರಾಮ ವ್ಯಾಪ್ತಿಯಲ್ಲಿ 224 ಒಟ್ಟು 1125 ಅರ್ಹ ಕುಟುಂಬಕ್ಕೆ ನಿವೇಶನ ಹಕ್ಕುಪತ್ರ ನೀಡಲು ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು. ಶಾಸಕರ ಪ್ರಯತ್ನದಿಂದ 38 ಎಕರೆ ಭೂಮಿಯಲ್ಲಿ ಲೈನ್ ಮನೆಗಳ ನಿವೇಶನ ರಹಿತರಿಗೆ ಹಕ್ಕುಪತ್ರ ವಿತರಿಸಲು ಕ್ರಮವಹಿಸಲಾಗಿದೆ ಎಂದು ವಿವರಿಸಿದರು.

ಮಡಿಕೇರಿ ತಾ.ಪಂ.ಇ.ಒ. ಶೇಖರ್ ಮಾಹಿತಿ ನೀಡಿ, ತಾಲೂಕಿನಲ್ಲಿ ನಿವೇಶನ ರಹಿತ 528 ಅರ್ಜಿಗಳಲ್ಲಿ 460 ಕುಟುಂಬಗಳನ್ನು ಆಯ್ಕೆ ಮಾಡಲಾಗಿದೆ. ಉಳಿದವು ತಾಂತ್ರಿಕ ಕಾರಣದಿಂದ ಬಾಕಿ ಇದೆ ಎಂದು ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರ ಗಮನಕ್ಕೆ ತಂದರು. ಇದಕ್ಕೆ ಸ್ಪಂದಿಸಿದ ಕೆ.ಪಿ.ಮೋಹನ್ ರಾಜ್ ಅವರು ಸ್ಥಳದಲ್ಲಿಯೇ ಅನುಮೋದಿಸಿದರು.

ವೀರಾಜಪೇಟೆ ತಾ.ಪಂ. ಇ.ಒ. ಅಪ್ಪಣ್ಣ ಮಾಹಿತಿ ನೀಡಿ 354 ಅರ್ಜಿಗಳಲ್ಲಿ 239 ಅರ್ಜಿಗಳಿಗೆ ಅನುಮೋದನೆ ದೊರೆತಿದೆ. ಹಾಗೆಯೇ ಪೊನ್ನಂಪೇಟೆ ತಾಲೂಕಿನಲ್ಲಿ 370 ರಲ್ಲಿ 231 ನಿವೇಶನ ಹಕ್ಕುಪತ್ರ ನೀಡಲು ಸಿದ್ಧವಾಗಿದೆ ಎಂದರು. ತಹಶೀಲ್ದಾರ್ ಪ್ರವೀಣ್ ಕುಮಾರ್, ಶ್ರೀಧರ ಅವರು ತಮ್ಮ ಹಂತದಲ್ಲಿ ಆಗಬೇಕಿರುವ ಕಾರ್ಯಗಳ ಬಗ್ಗೆ ವಿವರಿಸಿದರು.

ಗೋಣಿಕೊಪ್ಪಲಿನಲ್ಲಿ ಪೌರಕಾರ್ಮಿಕರಿಗೆ ನಿವೇಶನ ಹಂಚಿಕೆ ಬಗ್ಗೆ ಪಿಡಿಒ ಮಾಹಿತಿ ನೀಡಿದರು. ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ನಿವೇಶನ ಹಕ್ಕುಪತ್ರ ಹಂಚಿಕೆ ಸಂಬಂಧಿಸಿದಂತೆ ಗಂಭೀರವಾಗಿ ಪರಿಗಣಿಸಿ, ಕಾಲಮಿತಿಯಲ್ಲಿ ಪರಿಹರಿಸಲಾಗುವುದು ಎಂದು ಹೇಳಿದರು. ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಅವರು, ಜಿ.ಪಂ. ವ್ಯಾಪ್ತಿಯಲ್ಲಿ ನಿವೇಶನ ಹಕ್ಕುಪತ್ರ ನೀಡಲು ಬಾಕಿ ಇರುವ ಸುಮಾರು 622 ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು ಎಂದರು. ಯೋಜನಾ ನಿರ್ದೇಶಕ ಬಿ. ಬಸಪ್ಪ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ಮಾಹಿತಿ ನೀಡಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಭಿಡೆ ಸಹೋದರಿಯರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮದಲ್ಲಿ ಚಂದ್ರಶೇಖರ ನಾವಡ ಅಭಿಪ್ರಾಯ

ರಂಗಪ್ರವೇಶ ಕಲಾವಿದೆಯರೊಳಗೆ ಭಗವಂತನ ಪ್ರವೇಶ



ಬೆಳ್ತಂಗಡಿ: ಸುಖವಿರುವಲ್ಲಿ ವಿದ್ಯೆ ಖಂಡಿತ ಬರುವುದಿಲ್ಲ, ವಿದ್ಯೆ ಕರಗತವಾಗಲು ಶ್ರದ್ಧೆ ಮತ್ತು ಭಕ್ತಿ ಬೇಕು. ಗುರುವನ್ನು ಮೀರಿಸುವ ಶಿಷ್ಯ ಬೆಳೆದಾಗ ಮನಸ್ಸು ಅಪ್ಯಾಯಮಾನವಾಗುವುದು ಎಂದು ನಾಟ್ಯಾಂಜಲಿ ಕಲಾ ಅಕಾಡೆಮಿ ನಿರ್ದೇಶಕ ಕಲಾಶ್ರೀ ಗುರು ಚಂದ್ರಶೇಖರ ನಾವಡ ನುಡಿದರು.

ಅವರು ಫೆ.21ಕ್ಕೆ ಉಜಿರೆ ಎಸ್‌ಡಿಎಂ ಕಾಲೇಜಿನ ಇಂದ್ರಪ್ರಸ್ಥ ಸಭಾಂಗಣದಲ್ಲಿ ಮಂಗಳೂರು ನಾಟ್ಯಾರಾಧನಾ ಕಲಾ ಕೇಂದ್ರದ ಧರಿತ್ರಿ ಭಿಡೆ ಮತ್ತು ಹಂಸಿನಿ ಭಿಡೆ ಸಹೋದರಿಯರ ಭರತ ನೃತ್ಯ ರಂಗಪ್ರವೇಶ ಕಾರ್ಯಕ್ರಮದ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉಜಿರೆಯ ಧರಿತ್ರಿ ಭಿಡೆ ಮತ್ತು ಹಂಸಿನಿ ಭಿಡೆ ಸಂಪೂರ್ಣ ಕಲಾವಿದರು. ಅವರಲ್ಲಿ ಎಲ್ಲ ಶಕ್ತಿಯಿದೆ. ಕಲಾವಿದೆಯಾಗಲು ಪೂರಕವಾಗಿ ವಂಚನೆಯಿಲ್ಲದೆ ತನ್ನಲ್ಲಿರುವ ವಿದ್ಯೆಯನ್ನು ಧಾರೆಯೆರೆಯುವವರು ಗುರುಗಳು. ರಂಗಪ್ರವೇಶದಿಂದ ಕಲಾವಿದೆಯರೊಳಗೆ ಭಗವಂತನ ಪ್ರವೇಶವಾಗಿದೆ ಎಂದರು.

ಬೆಂಗಳೂರಿನ ಅಭಿನವ ಡಾನ್ಸ್ ಕಂಪನಿ ನಿರ್ದೇಶಕಿ ನಿರುಪಮಾ ರಾಜೇಂದ್ರ ಅವರು ಪ್ರೇಕ್ಷಕನಿಗೆ ಮನೋವಿಕಾಸ ಮಾಡುವ, ಭಗವಂತನಿಗೆ ಇಷ್ಟವಾಗುವ, ಚಿತ್ತಶುದ್ಧಿ ಮಾಡುವ ಭರತ ನೃತ್ಯ ಕಲೆ ಭಿಡೆ ಸಹೋದರಿಯರಿಗೆ ಸಿದ್ಧಿಸಿದೆ ಎಂದರು.

> **ಹೆತ್ತವರು ನಮಗೆ ಕಲೆಯಲ್ಲಿ ಆಸಕ್ತಿ ಬೆಳೆಯುವಂತೆ ಮಾಡಿದ್ದಾರೆ. ಹುಟ್ಟುಹಬ್ಬದ ಕೊಡುಗೆಯಾಗಿ ನಾಟ್ಯಾ ರಾಧನಾ ಕಲಾ ಕೇಂದ್ರಕ್ಕೆ ಸೇರಿಸಿದ್ದಾರೆ. ನಮಗೆ ಧೈರ್ಯ, ಸಮಯಪಾಲನೆ, ಜೀವನ ಮೌಲ್ಯ ತುಂಬಿ ನಮ್ಮ ಬೆಳವಣಿಗೆಗೆ ಪ್ರೇರಣಾದಾಯಿಯಾಗಿದ್ದಾರೆ.**
> ● **ಧರಿತ್ರಿ, ಭಿಡೆ, ಹಂಸಿನಿ ಭಿಡೆ**

ಮುಖ್ಯ ಅತಿಥಿ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ ಅವರು, ಕಲೆಯನ್ನು ಆರಾಧಿಸಿ ಅದನ್ನು ದೈವತ್ವಕ್ಕೇರಿಸಿ ಆರಾಧಿಸುವವರು ನಾವು. ಸಹೋದರಿಯರಲ್ಲಿ ದೈವತ್ವದ ಅಂಶ ಕಾಣುತ್ತೇವೆ. ಭಿಡೆ ಸಹೋದರಿಯರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚುವುದರಲ್ಲಿ ಸಂದೇಹವಿಲ್ಲ ಎಂದರು.

ಎಸ್‌ಡಿಎಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್. ಕಲಾವಿದೆಯರನ್ನು ಅಭಿನಂದಿಸಿ, ಶಿಕ್ಷಣ ಸಂಸ್ಥೆಯ ಹೆಮ್ಮೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಾಗಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕಗಳಲ್ಲಿ ವಿಶೇಷ ಸಾಧನೆ ಮಾಡಿದವರು. ಅವರು ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾರೆ. ಇಂದ್ರಪ್ರಸ್ಥ ಸಭಾಂಗಣದಲ್ಲಿ ರಾಷ್ಟ್ರ ಅಂತಾರಾಷ್ಟ್ರೀಯ ಕಲಾವಿದರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬುದು ಹೇಮಾವತಿ ಹೆಗ್ಗಡೆಯವರ ಆಶಯವಾಗಿದೆ ಎಂದರು.

ಕಲಾವಿದೆಯರ ನೃತ್ಯಗುರು ಸುಮಂಗಲಾ ರತ್ನಕರ ರಾವ್ ಮಾತನಾಡಿ, ಭಿಡೆ ಸಹೋದರಿಯರು ನೃತ್ಯ ಪ್ರೀತಿಸಿದ ಕಾರಣ ಈ ಮಟ್ಟಕ್ಕೆ ಬೆಳೆದಿದ್ದಾರೆ ಎಂದು ಅಭಿನಂದಿಸಿದರು.

ಕಲಾವಿದರಾದ ಧರಿತ್ರಿ ಭಿಡೆ ಮತ್ತು ಹಂಸಿನಿ ಭಿಡೆ ಅವರ ಮಾತಾಪಿತರಾದ ಚಿತ್ರಾ ಮತ್ತು ಧನಂಜಯ ಭಿಡೆ ಉಪಸ್ಥಿತಿಯಲ್ಲಿ ನೃತ್ಯ ಗುರು ಸುಮಂಗಲಾ ರತ್ನಾಕರ ರಾವ್ ಅವರಿಗೆ ಗುರು ವಂದನೆ ಸಲ್ಲಿಸಿ ಗೌರವಿಸಿದರು. ಅಭಿನವ ಡಾನ್ಸ್ ಕಂಪನಿಯ ಟಿ.ಡಿ .ರಾಜೇಂದ್ರ ಉಪಸ್ಥಿತರಿದ್ದರು. ಧರಿತ್ರಿ ಭಿಡೆ ಮತ್ತು ಹಂಸಿನಿ ಭಿಡೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ವಿದ್ಯಾಶ್ರೀ ರಾಧಾಕೃಷ್ಣ ನಿರೂಪಿಸಿದರು. ಭವ್ಯಾ ಸಂಕಮಾರ್ ಸ್ವಾಗತಿಸಿ, ಚಿತ್ರಾ ಭಿಡೆ ವಂದಿಸಿದರು. ನಾಟ್ಯಾರಾಧನಾ ಕಲಾಕೇಂದ್ರದ ಗುರು ಗಳು, ಶಿಷ್ಯವೃಂದದವರು ಭಾಗವಹಿಸಿದ್ದರು.

ನಟರಾಜನ ಪ್ರತಿಮೆಯ ಗೌರವ

ಸುಮಂಗಲಾ ರತ್ನಾಕರ ರಾವ್ ಧರಿತ್ರಿ ಭಿಡೆ ಮತ್ತು ಹಂಸಿನಿ ಭಿಡೆ ಸಹೋದರಿಯರಿಗೆ ನಟರಾಜನ ಪ್ರತಿಮೆ ನೀಡಿ ಗೌರವಿಸಿದರು. ರಾಮಾಯಣ ದೃಶ್ಯಾವಳಿಯ ನೃತ್ಯ ಸಂಯೋಜನೆಯೊಂದಿಗೆ ರಂಗಪ್ರವೇಶದಲ್ಲಿ ಈರ್ವರು ಸಹೋದರಿಯರು ಭಾವಾಭಿನಯ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದ್ದರು.

ಡಾ. ಬಿ.ಬಿ. ಹೆಗ್ಡೆ ಕಾಲೇಜಿನಲ್ಲಿ ವಾರ್ಷಿಕ ಎನ್ನೆಸ್ಸೆಸ್ ಶಿಬಿರ ಉದ್ಘಾಟನೆ



ಕುಂದಾಪುರ: ವಿದ್ಯಾರ್ಥಿಗಳು ಸಾಂಸ್ಕೃತಿಕ ಅಭಿರುಚಿ ಹೊಂದಿದಲ್ಲಿ ಅದು ಅವರ ಸರ್ವತೋಮುಖ ಅಭಿವೃದ್ಧಿಗೆ ಪೂರಕ ಎಂದು ಯಡಾಡಿ–ಮತ್ಯಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಸತೀಶ್ ಅಡಿಗ ಮತ್ಯಾಡಿ ಹೇಳಿದರು.

ಯಡಾಡಿ–ಮತ್ಯಾಡಿಯ ಶ್ರೀ ವಿನಾಯಕ ಸಭಾಭವನ ನಡೆದ ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಎನ್. ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕುಂದಾಪುರದ ವಿ.ಕೆ. ಆರ್. ಆಚಾರ್ಯ ಹೈಸ್ಕೂಲ್‌ನ ಅಧ್ಯಾಪಕ ಪ್ರೀತೇಶ ಶೆಟ್ಟಿ ಯಡಾಡಿ, ಮೊಳಹಳ್ಳಿ ವ್ಯವಸಾಯ ಸೇವಾ ಸಹಕಾರಿ ಸಂಘದ ನಿವೃತ್ತ ಮ್ಯಾನೇಜರ್ ರತ್ನಾಕರ ಶೆಟ್ಟಿ ಯಡಾಡಿ–ಮತ್ಯಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ. ಸದಸ್ಯರುಗಳಾದ ರೇವತಿ ಮತ್ತು ಹೇಮಲತಾ, ಪ್ರಾಕ್ತನ ವಿದ್ಯಾರ್ಥಿ ಶ್ರೀವಿನಾಯಕ ಅಡಿಗ ಶಿರಿಯಾರ, ಶಿಬಿರಾಧಿಕಾರಿಗಳಾದ ರಾಜೇಶ ಶೆಟ್ಟಿ ವಕ್ವಾಡಿ ಮತ್ತು ಪೂಜಾ ಕುಂದರ್ ಉಪಸ್ಥಿತರಿದ್ದರು.

ಎನ್.ಎಸ್.ಎಸ್. ಸ್ವಯಂಸೇವಕಿ ಶರಣ್ಯ ಶೆಟ್ಟಿ ಸ್ವಾಗತಿಸಿ, ವಂದಿಸಿ, ಕಾರ್ಯಕ್ರಮ ನಿರೂಪಿಸಿದರು.



ಬಂಟ್ವಾಳದ ಮೂಡನಡುಗೋಡು ಗ್ರಾಮದ ಕುಜ್ಜುಬೆಟ್ಟು ದೈವಸ್ಥಾನದ ವಠಾರದಲ್ಲಿ 1.5 ಲ.ರೂ. ಅನುದಾನದ ಅಳವಡಿಸಲಾದ ಸೋಲಾರ್ ಹೈಮಾಸ್ಟ್ ದೀಪವನ್ನು ಶಾಸಕ ರಾಜೇಶ್ ನ್ಯಾಕ್ ಶನಿವಾರ ಉದ್ಘಾಟಿಸಿದರು. ಬಿಜೆಪಿ ಬಂಟ್ವಾಳ ಮಂಡಲದ ಪ್ರ. ಕಾರ್ಯದರ್ಶಿ ಸುದರ್ಶನ್ ಬಜ, ಪಂ. ಸದಸ್ಯ ಸಂಜೀವ ಪೂಜಾರಿ, ಗೋಪಾಲ್ ಕುಲಾಲ್ ಮಜಲೋಡಿ ಪ್ರಮುಖರಾದ ಚಿದಾನಂದ ಕುಲಾಲ್, ಮನೋಜ್ ಕೋಟ್ಯಾನ್, ಶಶಿಧರ ಪೂಜಾರಿ,ಅರ್ಚಕರಾದ ಗಂಗಾಧರ್ ಭಟ್ ಪೆಜಕ್ಕಳ, ಪಂಜುರ್ಲಿ ಪಾತ್ರಿ ಲಕ್ಷ್ಮಣ ಪೂಜಾರಿ,ಲಕ್ಷ್ಮಿ ದಾಸ್ ಕುಲಾಲ್, ಯೋಗೀಶ್ ಕೈಲಾರ್ ಸಹಿತ ಪ್ರಮುಖರು ಉಪಸ್ಥಿತರಿದ್ದರು.

ಭಜನೆ ಹವನದಷ್ಟೇ ಫಲಪ್ರದ: ಶ್ರೀ ಹರಿನಾರಾಯಣದಾಸ ಆಸ್ರಣ್ಣ



ಕಿನ್ನಿಗೋಳಿ: ನಾವು ಶ್ರದ್ಧೆ ಭಕ್ತಿಯಿಂದ ಮಾಡುವ ಭಜನೆ ದೊಡ್ಡ ಯಾಗ ಹವನದಷ್ಟೇ ಫಲಪ್ರದವಾಗಿದೆ ಇದರ ಸತ್ಯವನ್ನು ದಾಸ ಶ್ರೇಷ್ಠರು ಕಂಡು ಕೊಂಡು ನಮಗೆ ಮಾರ್ಗದರ್ಶನ ನೀಡಿದ್ದಾರೆ ಎಂದು ಕಟೀಲು ದೇವಳದ ಅರ್ಚಕ ಶ್ರೀ ಹರಿನಾರಾಯಣ ದಾಸ ಆಸ್ರಣ್ಣ ಹೇಳಿದರು.

ಅವರು ಕಿನ್ನಿಗೋಳಿ ಸಮೀಪದ ಕಮ್ಮಜೆಯ ನೇಕಾರ ಕಾಲನಿಯ ಶ್ರೀ ದುರ್ಗಾ ಭಜನಾ ಮಂದಿರ ನೇಕಾರ ಕಾಲನಿ ಕಮ್ಮಾಜೆ ಕಿನ್ನಿಗೋಳಿ ಇದರ ಅಹೋರಾತ್ರಿ ಭಜನೆ ಹಾಗೂ 11ನೇ ವರ್ಷದ ಭಜನಾ ಮಂಗಲೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ಗ್ರಾಮ ಗ್ರಾಮದಲ್ಲಿಯೂ ಭಜನಾ ಮಂಡಳಿ, ಮಂದಿರಗಳು ಆಗಬೇಕಾಗಿದೆ ಇದರಿಂದ ಜನರಲ್ಲಿ ಧಾರ್ಮಿಕತೆ ಧರ್ಮ ಜಾಗೃತಿ ಮೂಡಿಸಲು ಸಾಧ್ಯವಿದೆ ಎಂದರು.

ಭಜನಾ ಮಂಗಲೋತ್ಸವದದಲ್ಲಿ ಯುಗಪುರುಷದ ಭುವಾನಭಿರಾಮ ಉಡುಪ, ಕಿನ್ನಿಗೋಳಿ ಪ.ಪಂ. ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಶ್ರೀನಿವಾಸ ಶೆಟ್ಟಿಗಾರ್, ಮೂರುಕಾವೇರಿ ದೇವಸ್ಥಾನದ ಗುರಿಕಾರ ಮೋಹನ ರಾಣ್ಯ, ಚಂದ್ರ ರಾಣ್ಯ, ನೀತಾ , ವಸಂತ ಸಪಳಿಗ ,ಭಜನಾ ಮಂದಿರದ ಅಧ್ಯಕ್ಷ ಚೇತನ್‌ಡಿ. ಶೆಟ್ಟಿಗಾರ್, ಕೆ. ಶಿವರಾಮ ಆಚಾರ್ಯ , ವಾಸುದೇವ ಶೆಟ್ಟಿಗಾರ್, ವರ್ಷಿತಾ ಬಿ., ಸುಧಾಕರ ಪೂಜಾರಿ, ಚಂದ್ರಶೇಖರ ಶೆಟ್ಟಿಗಾರ್ ಅರ್ಚಕ ಪುರಂದರ ಶೆಟ್ಟಿಗಾರ್, ವಾಸುದೇವ ಶೆಟ್ಟಿಗಾರ್, ದಾಮೋ ದರ ಶೆಟ್ಟಿಗಾರ್, ಜಗದೀಶ ಶೆಟ್ಟಿಗಾರ್, ಉಷಾ ದಾಸ್, ಸುಜಾತಾ ಭಟ್, ಯೋಶಾದಾ ಸಿ. ಮತ್ತಿತರಿದ್ದರು.

ಮಕ್ಕಳ ಪ್ರತಿಭೆ ಗುರುತಿಸುವ ಮೊದಲ ಹಂತ ಚಿತ್ರಕಲೆ: ಪುರುಷೋತ್ತಮ್



ಪುತ್ತೂರು: ಗೀಚುವುದರಿಂದ ಮಕ್ಕಳ ಕೈ ಪಳಗುತ್ತದೆ ಮತ್ತು ಕಲಿಕೆ ಆಗುತ್ತದೆ. ಚಿತ್ರಕ್ಕೆ ಯಾವುದೇ ಭಾಷೆ ಇಲ್ಲ, ಅದು ಅಂತಾರಾಷ್ಟ್ರೀಯ ಭಾಷೆ. ಮಕ್ಕಳ ಪ್ರತಿಭೆಯನ್ನು ಗುರುತಿಸುವ ಮೊದಲ ಹಂತ ಚಿತ್ರಕಲೆ ಆಗಿದೆ ಎಂದು ನಿವೃತ್ತ ಚಿತ್ರಕಲಾ ಶಿಕ್ಷಕ ಪುರುಷೋತ್ತಮ್ ಎಂ.ಎಸ್. ಹೇಳಿದರು.

ನಗರದ ಬನ್ನೂರಿನ ಎವಿಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏರ್ಪಡಿಸಲಾಗಿದ್ದ ಎವಿಜಿ ಚಿತ್ರೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಶುಭ ಕೋರಿದರು. ಮುಖ್ಯ ಅತಿಥಿಗಳಾಗಿದ್ದ ಶ್ರೀ ಮಹಾಲಿಂಗೇಶ್ವರ ಐಟಿಐನ ಸಂಚಾಲಕ ಯು.ಪಿ. ರಾಮಕೃಷ್ಣ ಮಾತನಾಡಿ, ಮಕ್ಕಳ ಪ್ರತಿಭೆಯನ್ನು ಚಿತ್ರದಿಂದ ಗುರುತಿಸಲು ಸಾಧ್ಯ. ಮಕ್ಕಳು ಯಾವುದೇ ಚಿತ್ರ ಬಿಡಿಸಲಿ ಅದಕ್ಕೆ ಪೋಷಕರು ಬೆಂಬಲ ನೀಡಬೇಕು. ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಪೋಷಕರ ಜವಾಬ್ದಾರಿ ಹೆಚ್ಚು ಎಂಬುದನ್ನು ಮನದಟ್ಟು ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಅಧ್ಯಕ್ಷ ವೆಂಕಟರಮಣ ಗೌಡ ಕಳುವಾಜೆ, ಪ್ರತಿಯೊಬ್ಬರ ಜೀವನಕ್ಕೆ ಮೌಲ್ಯ ಇದೆ. ಅದು ಚಿತ್ರಕಲೆಯಲ್ಲಿ ವಿದ್ಯಾರ್ಥಿಗಳು ತೋರಿಸುತ್ತಾರೆ. ಚಿತ್ರ ಎಂಬುದು ವಿಶೇಷವಾದ ವಿಜ್ಞಾನ. ಚಿತ್ರಕಲೆಯಿಂದ ಸಮಾಜದ ಅಂಕುಡೊಂಕುಗಳ ಬಗ್ಗೆ ಹೇಳಲಾಗುತ್ತದೆ. ಮಕ್ಕಳು ಭವಿಷ್ಯದ ಮುಂದಿನ ಉತ್ತಮ ಚಿತ್ರಕಲಾವಿದರಾಗಿ ಬೆಳೆಯಲಿ ಎಂದು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಶಾಲೆಯ ಸಂಚಾಲಕ ಎ.ವಿ. ನಾರಾಯಣ ಪ್ರಸ್ತಾವಿಸಿದರು. ಶಾಲಾ ಉಪಾಧ್ಯಕ್ಷ ಉಮೇಶ್ ಮಲುವೇಳು, ಶಾಲಾ ಆಡಳಿತ ಅಧಿಕಾರಿ ಗುಡ್ಡಪ್ಪ ಗೌಡ ಬಲ್ಯ, ಶಾಲೆಯ ರಕ್ಷಕ ಶಿಕ್ಷಕ ಸಂಘದ ಉಪಾಧ್ಯಕ್ಷ ಚಿದಾನಂದ ರೈ, ಶಾಲೆಯ ಮುಖ್ಯೋಪಾಧ್ಯಾಯ ಅಮರನಾಥ ಹಾಗೂ ಶಾಲಾ ನಾಯಕ ಕವನ್ ಬಿ. ಇದ್ದರು. ಕಾರ್ಯಕ್ರಮದಲ್ಲಿ ಶಾಲಾ ನಿರ್ದೇಶಕಿ ಪುಷ್ಪಾವತಿ ಕಳುವಾಜೆ ಮತ್ತಿತರರು ಪಾಲ್ಗೊಂಡರು. ವಿವಿಧ ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿನಿ ಅನಿಕಾ, ಜ್ಞಾನ, ಚೇತನ ಕೀರ್ತಿ, ಹನಿ, ಮತ್ತು ಶ್ರೀವಿಕ ಪ್ರಾರ್ಥಿಸಿದರು. ಶಿಕ್ಷಕ–ರಕ್ಷಕ ಸಂಘದ ಅಧ್ಯಕ್ಷೆ ಸೌಮ್ಯಶ್ರೀ ಹೆಗಡೆ ಸ್ವಾಗತಿಸಿ, ಶಿಕ್ಷಕಿ ಹಿತಶ್ರೀ ವಂದಿಸಿದರು. ಯಶುಭ ರೈ ನಿರ್ವಹಿಸಿದರು.



ಸುಬ್ರಹ್ಮಣ್ಯ ಗ್ರಾಮದ ಕೋಡಿಕಜೆ–ಕಲ್ಲಜಡ್ಕ ಪ್ರದೇಶದ ನೂತನ ಕಾಂಕ್ರೀಟ್ ರಸ್ತೆಯನ್ನು ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ಉದ್ಘಾಟಿಸಿದರು. ವ್ಯವಸ್ಥಾಪನಾ ಸಮಿತಿ ಸದಸ್ಯ ಸೌಮ್ಯ ಭರತ್, ಕಡಬ ತಾಲೂಕು ಕೆಡಿಪಿ ಸದಸ್ಯ ಶಿವರಾಮ,ಪ್ರಮುಖರಾದ ಮಾಧವ ಡಿ. ದೇವರಗದ್ದೆ ಸ್ಥಳೀಯರಾದ ತಾರಾನಾಥ್ ಕೋನಡ್ಕ, ಅಶ್ವತ್ಥ್ ಕೋನಡ್ಕ, ಉದಯ್ ಕೋನಡ್ಕ, ಸುರೇಶ್ ಕೋಡಿಕಜೆ, ಪ್ರಶಾಂತ್ ಆಚಾರ್ಯ, ಯೋಗೀಶ್ ಆಚಾರ್ಯ, ನಿತ್ಯಾನಂದ ಕೋನಡ್ಕ, ಮಂಜುನಾಥ ಕೋಡಿಕಜೆ, ನೀಲಪ್ಪ ಗೌಡ ಕೋನಡ್ಕ, ರಾಮಣ್ಣ ಗೌಡ ಕೋನಡ್ಕ, ನಾರಾಯಣ ಮಾನಾಡು ಇದ್ದರು.

ಸದಸ್ಯನ ಉಚ್ಚಾಟನೆಗೆ ಎಸ್‌ಡಿಪಿಐ ಸದಸ್ಯೆ ಜೊತೆ ಹೊಂದಾಣಿಕೆಯೇ ಕಾರಣ: ಬಿಜೆಪಿ ಸ್ಪಷ್ಟನೆ

ಉಳ್ಳಾಲ: ಕಳೆದ ಒಂದೂವರೆ ವರುಷದಿಂದ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿದ್ದಲ್ಲದೆ, ಪಂಚಾಯತ್ ಸಾಮಾನ್ಯ ಸಭೆಯಲ್ಲಿ ವಿಪಕ್ಷ ಎಸ್‌ಡಿಪಿಐ ಸದಸ್ಯೆಯ ಜೊತೆ ಕೈಜೋಡಿಸಿ ಅಧಿ ಕಾರಿಗಳ ವಿರುದ್ಧ ಘೋಷಣೆ ಕೂಗಿದ್ದಕ್ಕಾಗಿ ಕೋಟೆಕಾರು ಪಟ್ಟಣ ಪಂಚಾಯತ್ ಸದಸ್ಯ ಸುಜಿತ್ ಮಾಡೂರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟಿಸಲಾಗಿದೆ. ಸಾಮಾನ್ಯ ಸಭೆಯ ವಿಚಾರವು ಉಚ್ಚಾಟನೆಗೆ ನೇರ ಕಾರಣವಾದರೆ, ಪಕ್ಷದೊಳಗಿನ ಆಂತರಿಕ ವಿಚಾರ ಬೇರೆಯೇ ಇದ್ದು, ಅದನ್ನ ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲವೆಂದು ಬಿಜೆಪಿ ಮಂಗಳೂರು ಮಂಡಲದ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್.ಕೆ.ಆರ್ ಅವರು ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ್ದಾರೆ.

ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್ಬಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಳೆದ ಜನವರಿ 29ರಂದು ನಡೆದಿದ್ದ ಸಾಮಾನ್ಯ ಸಭೆಯಲ್ಲಿ ಸುಜಿತ್ ಅವರು ಎಸ್



ಡಿಪಿಐನ ಕೌನ್ಸಿಲರ್ ಜೊತೆ ಸೇರಿ ಪ್ರತಿಭಟಿಸಿದ್ದರು. ಈ ದೃಶ್ಯಗಳು ಮಾಧ್ಯಮಗಳಲ್ಲಿ ಪ್ರಸಾರಗೊಂಡಿದ್ದು ಎಸ್‌ಡಿಪಿಐ–ಬಿಜೆಪಿ ನಡುವಿನ ಹೊಂದಾಣಿಕೆಯ ಬಗ್ಗೆ ಜನರು ಪ್ರಶ್ನಿಸುವಂತಾಗಿದ್ದು ಇದರಿಂದ ಪಕ್ಷಕ್ಕೆ ಮುಜುಗರದ ಸ್ಥಿತಿ ಎದುರಾಗಿತ್ತು. ಅಧಿಕಾರಿಗಳು ಕೂಡ ಪಂಚಾಯತ್ ಆಡಳಿತದ ಭಾಗವಾಗಿದ್ದಾರೆನ್ನುವುದನ್ನು ಸುಜಿತ್ ಅವರು ಮನಗಾಣಬೇಕಿತ್ತು. ಸಾಮಾನ್ಯ ಸಭೆಯ ಪೂರ್ವಭಾವಿಯಾಗಿ ಬಿಜೆಪಿ ಪಕ್ಷದ ಕೌನ್ಸಿಲರ್‌ಗಳ ಆಂತರಿಕ ಸಮಾಲೋಚನಾ ಸಭೆ ಇರುತ್ತದೆ. ಅಲ್ಲಿ ತಮ್ಮ ತಮ್ಮ ವಾರ್ಡ್‌ಗಳ ಸಮಸ್ಯೆ ಬಗೆಹರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ. ಆ ತೀರ್ಮಾನಗಳನ್ನ ಬಿಟ್ಟು ಬೇರೆಯೇ ವಿಚಾರಗಳನ್ನು ಮುಂದಿಟ್ಟು ಪಂಚಾಯತ್ ಆಡಳಿತಕ್ಕೆ ಮುಜುಗರ ತರುವ ರೀತಿಯಲ್ಲಿ ಚರ್ಚಿಸುವುದನ್ನು ಪದೇ ಪದೇ ಸಹಿಸಲು ಸಾಧ್ಯವಿಲ್ಲವೆಂದರು.

ಪಂಚಾಯತ್ ಆಡಳಿತದ ವಿರುದ್ಧ ಭೂ ಮಾಫಿಯಾ ಆರೋಪದ ಬಗ್ಗೆ ಮಾತನಾಡಿದ ಅವರು, ನಡುಕುಮೇರಿನ ಸರಕಾರಿ ಭೂಮಿಯನ್ನ ಅತಿಕ್ರಮಿಸಿ ಮನೆಗಳನ್ನ ಕಟ್ಟಿದವರ ವಿರುದ್ಧ ಪಂಚಾಯತ್ ಅಧ್ಯಕ್ಷರು ಎಲ್ಲಾ ಕಾನೂನು ಕ್ರಮಗಳನ್ನ ಕೈಗೊಂಡಿದ್ದಾರೆ. ಅತಿಕ್ರಮಣಕಾರರು ಕುಮ್ಕಿ ಹಕ್ಕಿನಡಿ ಹೈ ಕೋರ್ಟ್‌ನಲ್ಲಿ ರಿಟ್ ಪಿಟೀಷನ್ ಹಾಕಿ ತಡೆ ತಂದಿರುವುದರಿಂದ ಕೆಲವೊಂದು ಅಡಚಣೆಯಾಗಿತ್ತು. ಈಗಲೂ ಜಿಲ್ಲಾಧಿಕಾರಿಗೆ ಅರ್ಜಿ ಕೊಟ್ಟು ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವ ಪ್ರಕ್ರಿಯೆಯನ್ನು ಅಧ್ಯಕ್ಷರು ಮುಂದುವರೆಸಿದ್ದಾರೆ. ಪಂಚಾಯತ್ ಅಧಿಕಾರಿಗಳ ಸಮರ್ಪಕ ಸಹಕಾರ ಲಭಿಸದೆ ಅಕ್ರಮ ಕಟ್ಟಡ ತೆರವು ಕಾರ್ಯ ವಿಳಂಬವಾಗಿದೆಯೆಂದರು.

ಅಕ್ರಮ ಕಟ್ಟಡ ತೆರವುಗೊಳಿಸಲು ನಮ್ಮಲ್ಲಿ ಅಧಿಕಾರಿಗಳು, ಪೊಲೀಸರು ಲಭ್ಯವಿಲ್ಲವೆಂದು ಸಾಮಾನ್ಯ ಸಭೆಯಲ್ಲಿ ಅಸಹಾಯಕತೆ ವ್ಯಕ್ತಪಡಿಸಿದ್ದ ಮುಖ್ಯಾಧಿಕಾರಿಯ ನಡೆಯು ಪಂಚಾಯತ್ ಆಡಳಿತದ ವೈಫಲ್ಯವಲ್ಲವೇ ಎಂದು ಪತ್ರಕರ್ತರು ಪ್ರಶ್ನಿಸಿದಕ್ಕೆ ಉತ್ತರಿಸಿದ ಮೋಹನ್ ರಾಜ್ ಅವರು ಅಧಿಕಾರಿಗಳು ಅಸಹಾಯಕತೆ ತೋರ್ಪಡಿಸಿದ್ದು, ಒಳ್ಳೆಯ ಅಧಿಕಾರಿಗಳನ್ನ ನಿಯೋಜಿಸುವಂತೆ ಅವರು ಶಾಸಕ ಖಾದರ್ ಅವರನ್ನು ಆಗ್ರಹಿಸಿದರು.

ಕೋಟೆಕಾರು ಪ.ಪಂ ಅಧ್ಯಕ್ಷ ದಿವ್ಯಾ ಶೆಟ್ಟಿ ಮಾತನಾಡಿ, ನಮ್ಮ ಆಡಳಿತವು ವಸತಿ ರಹಿತರಿಗೆ ನಿವೇಶನ ನೀಡಲು ಸತತ ಪ್ರಯತ್ನ ನಡೆಸುತ್ತಿದೆಯಾದರೂ ವಿನಾ ಕಾರಣ ಸುಳ್ಳು ಆರೋಪಗಳನ್ನ ಹೊರಿಸಲಾಗುತ್ತಿದೆ. ಕಳೆದ ಬಾರಿಯ ಆಡಳಿತಾವಧಿಯಲ್ಲಿ ಪಟ್ಟಣ ವ್ಯಾಪ್ತಿಯ ಬಗಂಬಿಲದ ಎರಡು ಎಕರೆ ಸರಕಾರಿ ಜಾಗವನ್ನು ನಮ್ಮ ಆಡಳಿತದ ಗಮನಕ್ಕೆ ಬಾರದಂತೆ ಉಳ್ಳಾಲದ ಕಡಲ್ಕೊರೆತ ಸಂತ್ರಸ್ತರ ನಿವೇಶನಕ್ಕಾಗಿ ಅಧಿಕಾರಿಗಳು ಮೀಸಲಿಟ್ಟಿದ್ದಾರೆ. ನಿವೇಶನ ರಹಿತರಿಗೆ ಹಂಚುವ ನಿಟ್ಟಿನಲ್ಲಿ ಆ ಜಾಗವನ್ನು ಪಟ್ಟಣ ಪಂಚಾಯತ್ ಸುಪರ್ದಿಗೆ ತರಬೇಕೆಂದು ಜಿಲ್ಲಾಧಿಕಾರಿಗೆ ಮನವಿ ನೀಡಿದ್ದೇವೆ. ಕಾಯರ್ ಮಜಲ್ ಎಂಬಲ್ಲಿನ ಹತ್ತು ಎಕರೆಯಷ್ಟು ಜಾಗವನ್ನ ನಿವೇಶನ ರಹಿತರು ಮತ್ತು ತ್ಯಾಜ್ಯ ಘಟಕ ನಿರ್ಮಾಣಕ್ಕೆ ಕಾಯ್ದಿರಿಸಲಾಗಿತ್ತು. ಮನೆ ನಿವೇಶನ ಮತ್ತು ತ್ಯಾಜ್ಯ ವಿಲೇವಾರಿ ಘಟಕವನ್ನು ಒಂದೇ ಸರ್ವೇ ಸಂಖ್ಯೆಯಡಿ ಕಾಯ್ದಿರಿಸಿದ ಕಾರಣ ಸ್ಥಳೀಯರು ತ್ಯಾಜ್ಯ ಘಟಕ ನಿರ್ಮಾಣ ವಿರುದ್ಧ ಹೈಕೋರ್ಟ್‌ನಲ್ಲಿ ಆಕ್ಷೇಪಣೆ ಸಲ್ಲಿಸಿ ತಡೆಯಾಜ್ಞೆ ತಂದಿದ್ದರು. ಹೈಕೋರ್ಟ್ ತಡೆಯಾಜ್ಞೆ ತೆರವುಗೊಳಿಸಲು ನಾವು ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕೆ ಬದಲಿ ಜಾಗ ನೀಡಬೇಕಿದೆ. ಪಟ್ಟಣವು ಜನನಿಬಿಡ ಪ್ರದೇಶವಾದುದರಿಂದ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಜಾಗ ನೀಡಲು ನಮಗೆ ಅಸಾಧ್ಯವಾಗಿದ್ದು ಹಾಗಾಗಿ ಕಾಯರ್ ಮಜಲು ಪ್ರದೇಶದಲ್ಲೂ ಅರ್ಜಿದಾರರಿಗೆ ನಿವೇಶನ ನೀಡಲು ಅಡಚಣೆಯಾಗಿದೆಯೆಂದರು.

ಬಿಜೆಪಿ ಮಂಗಳೂರು ಮಂಡಲದ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲು, ಪ್ರ.ಕಾ. ದಯಾನಂದ ತೊಕ್ಕೊಟ್ಟು, ಕೋಟೆಕಾರು ಪ.ಪಂ ಉಪಾಧ್ಯಕ್ಷ ಪ್ರವೀಣ್ ಐ.ಬಗಂಬಿಲ, ಬಿಜೆಪಿ ಪ್ರಮುಖರಾದ ಅತುಲ್ ಬಗಂಬಿಲ ಉಪಸ್ಥಿತರಿದ್ದರು.

ಸುತ್ತ ಮುತ್ತ

ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕಾಸರಗೋಡು: ಬೇಡಡ್ಕ ತಾಲೂಕು ಪ್ರಧಾನ ಆಸ್ಪತ್ರೆಯಲ್ಲಿ ವಿವಿಧ ಹುದ್ದೆಗಳಿಗೆ ತಾತ್ಕಾಲಿಕ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸ್ಥಳೀಯ ನಿವಾಸಿಗಳು ಮತ್ತು ಹಿಂದಿನ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಫೆ.28 ಆಗಿದೆ. ಹೆಚ್ಚಿನ ಮಾಹಿತಿಗೆ ಬೇಡಡ್ಕ ತಾಲೂಕು ಪ್ರಧಾನ ಕಚೇರಿ ಆಸ್ಪತ್ರೆ, ಬೇಡಡ್ಕ ಅಂಚೆ ಕಚೇರಿ, 671541, ಕಾಸರಗೋಡು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗೆ 9497142452 ಅಥವಾ 9447043551 ಕರೆ ಮಾಡಬಹುದು.

ಕ್ಲಿನಿಕಲ್ ಸೈಕಾಲಜಿಸ್ಟ್ ನೇಮಕಾತಿ

ಕಾಸರಗೋಡು: ರಾಷ್ಟ್ರೀಯ ಆಯುಷ್ ಮಿಷನ್ ನೇತೃತ್ವದಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಮಾರ್ಚ್ 3 ರಂದು ಬೆಳಗ್ಗೆ 10.30ಕ್ಕೆ ಕ್ಲಿನಿಕಲ್ ಸೈಕಾಲಜಿಸ್ಟ್ ನೇಮಕಾತಿಗಾಗಿ ಸಂದರ್ಶನ ಏರ್ಪಡಿಸಲಾಗಿದೆ. ವಯಸ್ಸಿನ ಮಿತಿ 40 ವರ್ಷಗಳು. ಎಂಎಸ್‌ಸಿ ಕ್ಲಿನಿಕಲ್ ಸೈಕಾಲಜಿ ತತ್ಸಮಾನ ಅಥವಾ ಎಂಎ, ಎಂಎಸ್‌ಸಿ ಸೈಕಾಲಜಿ ತತ್ಸಮಾನ ವಿದ್ಯಾರ್ಹತೆಯಾಗಿದೆ. ವಿಶ್ವವಿದ್ಯಾಲಯ, ಕಾಲೇಜು, ಕೇರಳ ಸರಕಾರಿ ಸಂಸ್ಥೆಗಳು, ಯುಜಿಸಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯ, ಆರ್‌ಸಿಐ ನೋಂದಣಿ ಹೊಂದಿರುವ ಕ್ಲಿನಿಕಲ್ ಸೈಕಾಲಜಿಸ್ಟ್‌ನಿಂದ ಕ್ಲಿನಿಕಲ್ ಸೈಕಾಲಜಿಯಲ್ಲಿ ಎರಡು ವರ್ಷಗಳ ಎಂಫಿಲ್ ಅಥವಾ ತತ್ಸಮಾನ ಕಡ್ಡಾಯವಾಗಿದೆ. ಹೆಚ್ಚಿನ ಮಾಹಿತಿಗೆ 04672288106 ಸಂಪರ್ಕಿಸಬಹುದು.

ನಾಗರಿಕ ಸೇವಾ ಪರೀಕ್ಷಾ ತರಬೇತಿಗೆ ಅರ್ಜಿ ಆಹ್ವಾನ

ಕಾಸರಗೋಡು: ಕೇರಳ ರಾಜ್ಯ ನಾಗರಿಕ ಸೇವಾ ಅಕಾಡೆಮಿಯ ಉಪಕೇಂದ್ರವಾದ ಪೊನ್ನಾನಿಯ ಇನ್‌ಸ್ಟಿಟ್ಯೂಟ್ ಆಫ್ ಕೆರಿಯರ್ ಸ್ಟಡೀಸ್ ಆ್ಯಂಡ್ ರಿಸರ್ಚ್ ಸಂಸ್ಥೆ 2026–27ರ ನಿಯಮಿತ ಬ್ಯಾಚ್‌ನ ನಾಗರಿಕ ಸೇವಾ ಪರೀಕ್ಷಾ ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಏಪ್ರಿಲ್ 27 ರಂದು ತರಗತಿಗಳು ಪ್ರಾರಂಭವಾಗುತ್ತವೆ. ಹೆಚ್ಚಿನ ಮಾಹಿತಿಗಾಗಿ, ಪೊನ್ನಾನಿಯ ವೃತ್ತಿ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯನ್ನು ಸಂಪರ್ಕಿಸಬಹುದು. 04942665489, 8281098868, 9846715386, 9645988778 ಕರೆ ಮಾಡಬಹುದು.

ಕುಟುಂಬಶ್ರೀ ಸಿಡಿಎಸ್‌ಗೆ ಅವಿರೋಧ ಆಯ್ಕೆ

ಉಪ್ಪಳ: ಪೈವಳಿಕೆ ಪಂಚಾಯತ್ ಕುಟುಂಬಶ್ರೀ ಸಿಡಿಎಸ್‌ಗೆ ಕಾಯರ್‌ಕಟ್ಟೆ ಕುಲಾಲ ಮಂದಿರದಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ




ನೂತನ ಅಧ್ಯಕ್ಷೆಯಾಗಿ ಸುಜಾತಾ ಬಿ.ರೈ ಕಳಾಯಿ, ಉಪಾಧ್ಯಕ್ಷೆ ಯಾಗಿ ಮಮತಾ ಶೆಟ್ಟಿ ಜೋಡುಕಲ್ಲು ಅವಿರೋಧ ವಾಗಿ ಆಯ್ಕೆಯಾಗಿದ್ದಾರೆ. ಪೈವಳಿಕೆ ಪಂಚಾಯತ್ ಒಟ್ಟು 21 ವಾರ್ಡ್‌ನ್ನು ಹೊಂದಿದೆ.

ಬದಿಯಡ್ಕ ಗ್ರಾ.ಪಂ. ಅಭಿವೃದ್ಧಿ ಸೆಮಿನಾರ್

ಬದಿಯಡ್ಕ: ಬದಿಯಡ್ಕ ಗ್ರಾ.ಪಂ.ವಾರ್ಷಿಕ ಯೋಜನೆ 2026–27ನೇ ಅಭಿವೃದ್ಧಿ ಸೆಮಿನಾರ್ ಬದಿಯಡ್ಕ ಸಂಸ್ಕೃತಿ ಭವನದಲ್ಲಿ ಶನಿವಾರ ಬೆಳಗ್ಗೆ ಜರಗಿತು. ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಉದ್ಘಾಟಿಸಿ ಮಾತನಾಡಿ, ಗ್ರಾ.ಪಂ.ನ ನೂತನ ಆಡಳಿತ ಸಮಿತಿಯ ನೇತೃತ್ವದಲ್ಲಿ ಎಲ್ಲಾ ಜನಪ್ರತಿನಿಧಿಗಳು ಉತ್ತಮ ಬಾಂಧವ್ಯದೊಂದಿಗೆ ನಾಡಿನ ಅಭಿವೃದ್ಧಿಗಾಗಿ ಮುನ್ನಡಿಯಿಟ್ಟಿರುವುದು ಅಭಿಮಾನದ ವಿಚಾರ. ಎಲ್ಲರೂ ಒಗ್ಗಟ್ಟಿನಿಂದ ಮುಂದುವರಿದಾಗ ಅಲ್ಲಿ ಐಕ್ಯತೆ, ಬಲ ಬರುತ್ತದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬದಿಯಡ್ಕ ಗ್ರಾ.ಪಂ. ಅಧ್ಯಕ್ಷ ಶಂಕರ ಡಿ. ಮಾತನಾಡಿದರು. ಯೋಜನಾ ಸಮಿತಿ ಸಮಿತಿ ಉಪಾಧ್ಯಕ್ಷ ಅನ್ವರ್ ಓಸೋನ್ ವಿಷಯ ಮಂಡನೆ ಮಾಡಿದರು. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ರಜನಿ ಜಿ.ಆರ್., ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಅವಿನಾಶ್ ರೈ, ಬ್ಲಾಕ್ ಪಂ. ಸದಸ್ಯ ಮಹೇಶ್ ವಳಕ್ಕುಂಜ, ಗ್ರಾ.ಪಂ.ಸದಸ್ಯರಾದ ಹರೀಶ ಮಜಿರ್ಪಳ್ಳಕಟ್ಟೆ, ಶ್ಯಾಮಪ್ರಸಾದ ಸರಳಿ, ಅನ್ನತ್ ಬೀವಿ, ಲೀಲಾವತಿ, ಉಷಾ ಪಳ್ಳತ್ತಡ್ಕ, ಮಧುಸೂದನ ಕಂಗಿಲ, ಬಾಲಕೃಷ್ಣ ಶೆಟ್ಟಿ ಕಡಾರು, ಫಾತಿಮ್ಮತ್ ಫೌಸಿಯಾ, ಶಾಹಿನಾ ಅನ್ವರ್, ಗಂಗಾಧರ ಗೋಳಿಯಡ್ಕ, ಸುಬೈದಾ, ಪ್ರಜ್ನಾ, ಶ್ಯಾಮಪ್ರಸಾದ ಮಾನ್ಯ, ಬಿಂದ್ಯಾ, ಅಶ್ವತಿ, ಮಾಹಿನ್ ಕೇಳೋಟ್ ಪಾಲ್ಗೊಂಡು ಶುಭಹಾರೈಸಿದರು.

ಫೆ.28, ಮಾರ್ಚ್ 1, 2ರಂದು ನಡೆಯಲಿದೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ

ನೀರ್ಚಾಲು ಶ್ರೀ ಕುಮಾರಸ್ವಾಮಿ ಭಜನಾ ಮಂದಿರದ ಬ್ರಹ್ಮಕಲಶ

ಬದಿಯಡ್ಕ: ನೀರ್ಚಾಲು ಶ್ರೀ ಕುಮಾರಸ್ವಾಮಿ ಭಜನಾ ಮಂದಿರದ ನವೀಕರಣ ಪುನರ್ ಪ್ರತಿಷ್ಠಾ ಮಹೋತ್ಸವವು ಫೆ.28, ಮಾರ್ಚ್ 1, 2ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ಮಾರ್ಗದರ್ಶನದಲ್ಲಿ ಬ್ರಹ್ಮಶ್ರೀ ವೇ.ಮೂ. ಶಿವಶಂಕರ ಭಟ್ ಕಿಳಿಂಗಾರು ನೇತೃತ್ವದಲ್ಲಿ ಧಾರ್ಮಿಕ ಕಾರ್ಯನಡೆಯಲಿವೆ.

ಫೆ.28ರಂದು ಅಪರಾಹ್ನ 3.30ಕ್ಕೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆಯು ಕುಮಾರಮಂಗಲ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಿಂದ ಹೊರಟು ಬದಿಯಡ್ಕ ಪೇಟೆಯಲ್ಲಿ ಸಾಗಿ ನೀರ್ಚಾಲು ಶ್ರೀ ಧರ್ಮಶಾಸ್ತಾ ಭಜನಾ ಮಂದಿರಕ್ಕೆ ಬಂದು ನೀರ್ಚಾಲು ಪೇಟೆ ಎ ಮೂಲಕ ಶ್ರೀ ಕುಮಾರಸ್ವಾಮಿ ಭಜನಾ ಮಂದಿರಕ್ಕೆ ತಲುಪಲಿದೆ.

ಮಾರ್ಚ್ 1ರಂದು ಬೆಳಗ್ಗೆ 6 ಕ್ಕೆ ಗಣಪತಿ ಹೋಮ, ದೀಪ ಪ್ರತಿಷ್ಠೆ ಧಾರ್ಮಿಕ ಮುಂದಾಳು ಪಿ.ಎಸ್. ಗೋಪಾಲ ಭಟ್ ಪಟ್ಟಾಜೆ ಅವರಿಂದ ದೀಪ ಪ್ರಜ್ವಲನೆ,



ವಿವಿಧ ಭಜನಾ ಸಂಘಗಳಿಂದ ಭಜನೆ, ಭೋಜನ ಪ್ರಸಾದ ನಡೆಯಲಿದೆ. ಮಧ್ಯಾಹ್ನ 1 ಕ್ಕೆ ಜ್ಯೋತಿಷ್ಯ ವಿದ್ವಾನ್ ವೆಂಕಟೇಶ್ವರ ಭಟ್ ಕುಂಜಾರು ಮೈಸೂರು ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, 1.15ರಿಂದ ಸೂರ್ಯನಾರಾಯಣ ಪದಕಣ್ಣಾಯ ಬಾಯಾರು ಅವರ ಶಿಷ್ಯವೃಂದ ಶ್ರೀ ಕುಮಾರಸ್ವಾಮಿ ಯಕ್ಷಗಾನ ಕಲಾಕೇಂದ್ರ ನೀರ್ಚಾಲು ಅವರಿಂದ ರಂಗಸಿರಿ ಸಾಂಸ್ಕೃತಿಕ ವೇದಿಕೆ ಬದಿಯಡ್ಕ ಅವರ ಸಹಕಾರದೊಂದಿಗೆ ಯಕ್ಷಗಾನ ಬಯಲಾಟವಿದೆ. 3.50ಕ್ಕೆ ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠದ ಶ್ರೀ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮೀಜಿಯವರ ಆಗಮನ, ಪೂರ್ಣಕುಂಭ ಸ್ವಾಗತ, ಸಂಜೆ 4ಕ್ಕೆ ಧಾರ್ಮಿಕ ಸಭೆಯಲ್ಲಿ ಅವರಿಂದ ಆಶೀರ್ವಚನ ನಡೆಯಲಿದೆ. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಧಾಕೃಷ್ಣ ಭಟ್ ಅಧ್ಯಕ್ಷತೆ ವಹಿಸಲಿದ್ದಾರೆ. ಜ್ಯೋತಿಷ್ಯ ವಿದ್ವಾನ್ ವೆಂಕಟೇಶ್ವರ ಭಟ್ ಕುಂಜಾರು ಮೈಸೂರು ಗೌರವ ಉಪಸ್ಥಿತರಿರುವರು. ಬದಿಯಡ್ಕ ಗ್ರಾ.ಪಂ.ಅಧ್ಯಕ್ಷ ಶಂಕರ ಡಿ., ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಸದಸ್ಯೆ ಬಿಂದ್ಯಾ ಕಾರ್ತಿಕ್, ಡಾ.ಜಯಶ್ರೀ ನಾಗರಾಜ್ ಶುಭಹಾರೈಸುವರು.

ಮಂದಿರ ಅರ್ಚಕ ಸುಬ್ರಹ್ಮಣ್ಯ ಆಚಾರ್ಯ, ಬಾಲಕೃಷ್ಣ ಆಚಾರ್ಯ ನಿರ್ಚಾಲು, ಪ್ರಧಾನ ಕಾರ್ಯದರ್ಶಿ ರವೀಂದ್ರ ಮಾಸ್ತರ್ ನೀರ್ಚಾಲು ಪಾಲ್ಗೊಳ್ಳುವರು. 5.30ಕ್ಕೆ ಸುರೇಶ್ ಕಂಬಾರು ಮತ್ತು ಬಳಗ ಬೆಂಗಳೂರು ಅವರಿಂದ ಶಾಸ್ತ್ರೀಯ ಸಂಗೀತ, 6 ಗಂಟೆಗೆ ಪ್ರಾಸಾದ ಶುದ್ಧಿ, ವಾಸ್ತುಹವನ, ರಾಕ್ಷೋಘ್ನ ಹೋಮ, ವಾಸ್ತುಬಲಿ, ಅಽವಾಸಾಽಗಳ ಕಲಶ ಪ್ರತಿಷ್ಠೆ ರಾತ್ರಿ 7 ಗಂಟೆಯಿಂದ ವಿದುಷಿ ಡಾ.ವಿದ್ಯಾಲಕ್ಷ್ಮೀ ನಾಟ್ಯ ವಿದ್ಯಾಲಯ ಕುಂಬಳೆ ಇವರ ಶಿಷ್ಯವೃಂದದವರಿಂದ ನೃತ್ಯಾರ್ಪಣಂ, 9.15ಕ್ಕೆ ಸೆನ್‌ಸಯಿ ಸೌಮ್ಯ ಮತ್ತು ಬಳಗ ಕರಾಟೆ ಅಕಾಡೆಮಿ ನೀರ್ಚಾಲು ಇವರಿಂದ ಕರಾಟೆ ಪ್ರದರ್ಶನವಿದೆ. 10 ಗಂಟೆಗೆ ಏಷ್ಯಾನೆಟ್ ಖ್ಯಾತಿಯ ಏಸುದಾಸ್ ಸ್ವರ ಮಾಧುರ್ಯ ಹೊಂದಿದ ರತೀಶ್ ಪರಪ್ಪ ಅವರನ್ನು ಒಳಗೊಂಡ ದೇವಗೀತಂ ಚಾರಿಟೇಬಲ್ ಟ್ರಸ್ಟ್ ಆರ್ಕೆಸ್ಟ್ರಾ ಕಾಞಂಗಾಡು ಅವರಿಂದ ಭಕ್ತಿ ಗಾನಾಮೃತಂ ನೆರವೇರಲಿದೆ. ಮಾ.2ರಂದು ಬೆಳಗ್ಗೆ 6.30ಕ್ಕೆ ಗಣಪತಿ ಹೋಮ, ಪ್ರತಿಷ್ಠಾ ಹವನ, ಕಲಶ ಪೂಜೆ, 7ರಿಂದ ವಿವಿಧ ಭಜನಾ ಸಂಘಗಳಿಂದ ಭಜನೆ, 10.30ಕ್ಕೆ ಶ್ರೀ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಆಗಮನ, ಪೂರ್ಣಕುಂಭ ಸ್ವಾಗತ, 10.59ರ ವೃಷಭ ಲಗ್ನ ಶುಭಮುಹೂರ್ತದಲ್ಲಿ ಶ್ರೀ ದೇವರ ಛಾಯಾಚಿತ್ರ ಪ್ರತಿಷ್ಠೆ ಕಲಶಾಭಿಷೇಕ, 11.30ಕ್ಕೆ ಮಹಾಪೂಜೆ, ಪ್ರಸಾದವಿತರಣೆ. 11.45ಕ್ಕೆ ಧಾರ್ಮಿಕ ಸಭೆಯಲ್ಲಿ ಎಡನೀರು ಶ್ರೀಗಳು ಆಶೀರ್ವಚನ ನೀಡಲಿದ್ದಾರೆ. ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿರುವರು. ಮಧ್ಯಾಹ್ನ 1.30ರಿಂದ ಕೃಷ್ಣಕುಮಾರಿ ಮತ್ತು ಬಳಗ ನೀರ್ಚಾಲು ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಅಪರಾಹ್ನ 2.30ರಿಂದ ಸ್ವರಸಿಂಚನ ನೀರ್ಚಾಲು ಇವರಿಂದ ಭಕ್ತಿರಸಮಂಜರಿ, ಸಂಜೆ 4.30ರಿಂದ ಪುಟಾಣಿ ಮಕ್ಕಳಿಂದ ನೃತ್ಯ ವೈವಿಧ್ಯ, 6ರಿಂದ ನಡೆಯುವ ಸಮಾರೋಪದಲ್ಲಿ ಗೌರವಾಧ್ಯಕ್ಷ ಜಯದೇವ ಖಂಡಿಗೆ ಅಧ್ಯಕ್ಷತೆ ವಹಿಸುವರು. ಧಾರ್ಮಿಕ ಮುಂದಾಳು ಗೋಪಾಲಕೃಷ್ಣ ಪೈ ಬದಿಯಡ್ಕ ದೀಪಪ್ರಜ್ವಲನೆ ಮಾಡಲಿದ್ದಾರೆ. ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು, ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ, ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡುವರು. ಮುಖ್ಯ ಅತಿಥಿಗಳಾಗಿ ಜ್ಯೋತಿಷರತ್ನ ಪದ್ಮನಾಭ ಶರ್ಮ ಬೇಳ ಇರಿಞಾಲಕ್ಕುಡ, ಧಾರ್ಮಿಕ ಮುಂದಾಳು ಶಿವಶಂಕರ ನೆಕ್ರಾಜೆ, ಉದ್ಯಮಿ ಮಧುಸೂದನ ಆಯರ್ ಮಂಗಳೂರು ಪಾಲ್ಗೊಳ್ಳುವರು. ನಾಡಿನ ಗಣ್ಯರು ಉಪಸ್ಥಿತರಿರುವರು. ವೇದಮೂರ್ತಿ ಶಿವಶಂಕರ ಭಟ್ ಕಿಳಿಂಗಾರು ಇವರಿಗೆ ಗೌರವಾರ್ಪಣೆ, ಮಂದಿರದ ವಾಸ್ತುಶಿಲ್ಪಿ ರಮೇಶ ಕಾರಂತ, ದಾರುಶಿಲ್ಪಿ ದೇವದಾಸ ಆಚಾರ್ಯ, ಗಾರೆಶಿಲ್ಪಿ ಚಂದ್ರ ಮಣಿಯಾಣಿ ಬೇಳ ಇವರಿಗೆ ಸನ್ಮಾನ ನಡೆಯಲಿದೆ.

ಕುಂಬ್ಡಾಜೆಯ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ಅಭಿವೃದ್ಧಿ ಸೆಮಿನಾರ್



ಬದಿಯಡ್ಕ: ಕುಂಬ್ಡಾಜೆ ಗ್ರಾ.ಪಂ.ನ 14 ಪಂಚವಾರ್ಷಿಕ ಯೋಜನೆಯ 2026–27ನೇ ವರ್ಷದ ಯೋಜನೆಗಳ ಕರಡು ಯೋಜನಾ ಅಭಿವೃದ್ಧಿ ರೇಖೆಯನ್ನು ಸಿದ್ಧಪಡಿಸುವ ಅಭಿವೃದ್ಧಿ ಸೆಮಿನಾರ್ ಕುಂಬ್ಡಾಜೆ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿತ್ತು.

ಗ್ರಾ.ಪಂ. ಅಧ್ಯಕ್ಷೆ ಯಶೋಧಾ ಎನ್. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯೋಜನೆ ಆಡಳಿತ ಸಮಿತಿ ಅಧಿಕಾರಕ್ಕೆ ಬಂದ ಬಳಿಕ ಮೊದಲ ಯೋಜನೆ ರಚನೆಯಾಗುತ್ತಿರುವುದು. ಈಗಾಗಲೇ ವರ್ಕ್ ಗ್ರೂಪ್‌ಗಳಲ್ಲಾಗಿ ಸಮಗ್ರ ಚರ್ಚೆ ನಡೆಸಲಾಯಿತು. ಇದರ ಭಾಗವಾಗಿ ಕರಡು ಯೋಜನೆ ರೂಪಿಸುವುದಕ್ಕಾಗಿರುವ ಸೆಮಿನಾರ್ ಪಂ.ನ ಅಭಿವೃದ್ಧಿ ಚಟುವಟಿಕೆಗಳಿಗೆ ಪೂರಕವಾಗಬಲ್ಲದೆಂದರು. ಕರಡು ಪ್ರತಿಯನ್ನು ಗ್ರಾಪಂ ಅಧ್ಯಕ್ಷೆ ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್ ಅಧ್ಯಕ್ಷ ಎಂ.ಸಂಜೀವ ಶೆಟ್ಟಿ ಅವರಿಗೆ ಹಸ್ತಾಂತರಿಸುವ ಮೂಲಕ ಚರ್ಚೆಗೆ ಚಾಲನೆ ನೀಡಲಾಯಿತು. ಬಳಿಕ ಸಭೆಯಲ್ಲಿ ವಿವಿಧ ವಲಯಗಳಿಂದ ಅಭಿಪ್ರಾಯ ಕ್ರೋಢೀಕರಿಸಲಾಯಿತು.

ಗ್ರಾಪಂ ಉಪಾಧ್ಯಕ್ಷ ರವೀಂದ್ರ ರೈ ಗೋಸಾಡ ಅಧ್ಯಕ್ಷತೆ ವಹಿಸಿ ವಿಷಯ ಮಂಡಿಸಿದರು. ಯೋಜನಾ ಸಮಿತಿ ಉಪಾಧ್ಯಕ್ಷ ರಾಜೇಶ್ ಶೆಟ್ಟಿ ಮಾತನಾಡಿದರು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ನಯನಾ ಕರಡು ವರದಿ ವಾಚಿಸಿದರು. ಕ್ಷೇಮ ಕಾರ್ಯಸ್ಥಾಯೀ ಸಮಿತಿ ಅಧ್ಯಕ್ಷ ಅಬೂಬಕ್ಕರ್ ಎಂ., ಆರೋಗ್ಯ – ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ., ಸದಸ್ಯರಾದ ಮಹೇಶ್, ಬಿ.ಟಿ. ಅಬ್ದುಲ್ಲ ಕುಂಞಿ, ಎಸ್.ಮುಹಮ್ಮದ್ ಕುಂಞಿ, ನೂರುದ್ದೀನ್ ಪಿ., ಗೀತಾ ಡಿ, ಕೊರಗಪ್ಪ ಬೆಳ್ಳಿಗೆ, ಬಬಿತಾ ರೇಷ್ಮಾ, ಸೌಭಾಗ್ಯಲಕ್ಷ್ಮೀ ಕೆ., ಆಯಿಷಾತ್ ಮಾಶಿದ ಪಿ., ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಂ. ಸಂಜೀವ ಶೆಟ್ಟಿ, ಶಶಿಧರ ತೆಕ್ಕೆಮೂಲೆ, ಅಲಿ ತುಪ್ಪೆಕಲ್ಲು, ಸ್ಯಾನಿ ಮತ್ತಿತರರಿದ್ದರು.

ಪೆರ್ಲದಲ್ಲಿ ಬೃಹತ್ ಹಿಂದು ಸಂಗಮ ಕಾರ್ಯಕ್ರಮ: ಶೋಭಾಯಾತ್ರೆ ಸಂಭ್ರಮ



ಪೆರ್ಲ: ಹಿಂದು ಸಂಗಮ ಆಯೋಜನಾ ಸಮಿತಿ ಎಣ್ಮಕಜೆ ಪಂ. ಘಟಕದ ಆಶ್ರಯದಲ್ಲಿ ಭಾನುವಾರ ಪೆರ್ಲ ಪರಿಸರದಲ್ಲಿ ಬೃಹತ್ ಹಿಂದು ಸಂಗಮ ಕಾರ್ಯಕ್ರಮ ಜರಗಿತು. ಹಿಂದು ಸಂಗಮದ ಅಂಗವಾಗಿ ಇಡಿಯಡ್ಕ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರ ಪಠಾರದಿಂದ ಕುಣಿತ ಭಜನೆ, ಮಕ್ಕಳಿಂದ ವಿವಿಧ ವೇಷಗಳು, ಚೆಂಡೆಮೇಳ ಮೊದಲಾದ ವೈವಿಧ್ಯತೆಗಳೊಂದಿಗೆ ಬೃಹತ್ ಸಾಂಸ್ಕೃತಿಕ ಶೋಭಾಯಾತ್ರೆ ಹಮ್ಮಿಕೊಳ್ಳಲಾಗಿತ್ತು.

ಬಳಿಕ ಹಿಂದು ಸಂಗಮದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಒಡಿಯೂರಿನ ಸಾಧ್ವಿ ಶ್ರೀ ಮಾತಾನಂದಮಯೀ ಆಶೀರ್ವಚನ ನೀಡಿದರು. ಹಿಂದು ಐಕ್ಯ ವೇದಿಕೆ ಕೇರಳ ರಾಜ್ಯ ಕಾರ್ಯಾಧ್ಯಕ್ಷ ವಲ್ಸನ್ ತಿಲ್ಲಂಗೇರಿ ಮುಖ್ಯ ಭಾಷಣ ಮಾಡಿದರು. ಹಿಂದು ಸಂಗಮ ಆಯೋಜನಾ ಸಮಿತಿ ಅಧ್ಯಕ್ಷ ಸುಬ್ಬ ಪಾಟಾಳಿ ಕುತ್ತಾಜೆ ಅಧ್ಯಕ್ಷತೆ ವಹಿಸಿದ್ದರು. ಕವಯತ್ರಿ ಸುಜಯಾ ಸಜಂಗದ್ದೆ ಅತಿಥಿಯಾಗಿ ಭಾಗವಹಿಸಿದ್ದರು. ಬಳಿಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಗದೀಶ್ ಆಚಾರ್ಯ ಪುತ್ತೂರು ಬಳಗದವರಿಂದ ಭಕ್ತಿಗೀತೆ, ಜಾನಪದ ಗೀತೆ , ರಾಷ್ಟ್ರ ಭಕ್ತಿಗೀತೆಯ ಗಾನ ಸಂಭ್ರಮ ನಡೆಯಿತು.

ಹಿಂದುಗಳಿಂದ ಸಾಮರಸ್ಯದ ಬದುಕು

ಸಾಮರಸ್ಯದಿಂದ ಬದುಕು ನಿರ್ವಹಿಸುವುದೇ ಹಿಂದುಗಳ ಆಶಯವಾಗಿದೆ. ಹಿಂದುಗಳು ಒಗ್ಗಟ್ಟಾಗಬೇಕು. ಲವ್ ಜಿಹಾದ್, ಲ್ಯಾಂಡ್ ಜಿಹಾದ್, ಮತಾಂತರ, ಗೋಹತ್ಯೆ ಮೊದಲಾದ ಸಾಮಾಜಿಕ ಪಿಡುಗುಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಮಹತ್ತರ ಹೆಜ್ಜೆಗಳೊಂದಿಗೆ ಮುನ್ನಡೆಯಬೇಕಾಗಿದೆ.

● ವಲ್ಸನ್ ತಿಲ್ಲಂಗೇರಿ

ಕುಂಬಳೆ ಅಂಚೆ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿ ಶೇಕಡಾ 50ರಷ್ಟು ಪೂರ್ಣ



ಕುಂಬಳೆ: ಹಲವು ವರ್ಷಗಳ ಕಾಯುವಿಕೆಯ ಬಳಿಕ ಕುಂಬಳೆ ಹೃದಯಭಾಗದಲ್ಲಿ ಅಂಚೆ ಇಲಾಖೆ ತನ್ನದೇ ಆದ ವಿಶಾಲವಾದ ಕಟ್ಟಡವನ್ನು ಹೊಂದಲಿದೆ. ಈ ವರ್ಷದ ಆರಂಭದಲ್ಲಿ ಆರಂಭಗೊಂಡ ನಿರ್ಮಾಣ ಕಾರ್ಯ ಈಗಾಗಲೇ ಶೇಕಡಾ 50ರಷ್ಟು ಪೂರ್ಣಗೊಂಡಿವೆ. ಈ ವರ್ಷದ ಮಧ್ಯಭಾಗದ ವೇಳೆಗೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆಯಿದ್ದು, ಕಚೇರಿಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.

ಕುಂಬಳೆ ಅಂಚೆ ಕಚೇರಿಯು ದಶಕಗಳಿಂದ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರಿಂದಾಗಿ ಅಂಚೆ ಇಲಾಖೆಯು ಪ್ರತಿ ತಿಂಗಳು ಬಾಡಿಗೆಗೆ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿದೆ. ಇಲಾಖೆ ಕುಂಬಳೆಯಲ್ಲಿ ತನ್ನದೇ ಆದ ಭೂಮಿಯನ್ನು ಹೊಂದಿದ್ದರೂ ಅದನ್ನು ಇದುವರೆಗೂ ಬಳಸಲಾಗಿಲ್ಲ, ಸಾಕಷ್ಟು ಕಾಲಗಳಿಂದ ಬಳಕೆಯಾಗದ ಕಾರಣ, ಈ ಭೂಮಿ ಕಸದ ತೊಟ್ಟಿಯಾಗಿ ಮಾರ್ಪಟ್ಟಿತ್ತು ಮತ್ತು ಅಽಕೃತರು ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಪ್ರತಿ ವರ್ಷ ವ್ಯರ್ಥವಾಗಿ ಹಣ ಖರ್ಚು ಮಾಡಬೇಕಾಗಿತ್ತು. ಇದೀಗ ಸ್ವಂತ ಕಟ್ಟಡ ಸಾಕಾರಗೊಂಡಾಗ ಬಾಡಿಗೆ ಮತ್ತು ಕಸ ವಿಲೇವಾರಿ ಸಹಿತ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಾಗಲಿದೆ.

ಕಾನೂನು ಹೋರಾಟದ ಫಲ ಲಭಿಸಿದ ಭೂಮಿ

ಕುಂಬಳೆ ಪೇಟೆಯ ಸಮೀಪ ಮೀನು ಮಾರುಕಟ್ಟೆ, ಶಾಲಾ ರಸ್ತೆ ಬಳಿಯ 30 ಸೆಂಟ್ಸ್ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಅಂಚೆ ಇಲಾಖೆ ಒಡೆತನದ ಈ ಭೂಮಿಯನ್ನು ಈ ಹಿಂದೆ ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿದ್ದರು. ನಂತರದ ಕಾನೂನು ಹೋರಾಟದ ಬಳಿಕ ಅಂಚೆ ಇಲಾಖೆ ಹೈಕೋರ್ಟ್ ಮೂಲಕ ಭೂಮಿ ಯನ್ನು ಮರಳಿ ಪಡೆದುಕೊಂಡಿತು. ಕುಂಬಳೆ ಅಂಚೆ ಕಚೇರಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಂಡರೆ ಕುಂಬಳೆ, ಸುತ್ತಮುತ್ತಲಿನ ಪ್ರದೇಶಗಳ ಜನರಿಗೆ ಅಂಚೆ ಸೇವೆಗಳು ಹೆಚ್ಚು ಅನುಕೂಲಕರ ರೀತಿಯಲ್ಲಿ ಲಭ್ಯವಾಗಲಿದೆ.

ಮಾ.1–9: ಮುನಿಪುರ ಶ್ರೀ ದೇವಸ್ಥಾನ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಸಂಭ್ರಮ

ಬದಿಯಡ್ಕ: ಮುನಿಯೂರು ಮುನಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನವು ಕಾಸರಗೋಡು ಜಿಲ್ಲೆಯಲ್ಲಿ ಕುಂಬ್ಡಾಜೆ ಗ್ರಾಮದಲ್ಲಿದೆ. ಈ ದೇವಸ್ಥಾನವು ಅತ್ಯಂತ ಪ್ರಾಚೀನವಾಗಿದ್ದು ಕಣ್ವಮುನಿಗಳಿಂದ ಪ್ರತಿಷ್ಠಾಪಿತವಾದುದೆಂದೇ ಪ್ರತೀತಿಯಿದೆ.



ಮುನಿಪುರ ಶ್ರೀ ಗೋಪಾಲಕೃಷ್ಣ ದೇವಳ 1800 ವರ್ಷಗಳಷ್ಟು ಪುರಾತನ ದೇವಸ್ಥಾನವಾಗಿದೆ. ಈ ದೇಗುಲದಲ್ಲಿ ಪೂಜಿಸಲ್ಪಡುವ ವಿಗ್ರಹ ಅಕ್ರೂರಾದಿಗಳಿಂದ ಪೂಜಿಸಲ್ಪಟ್ಟಿದೆ ಎಂದು ಹೇಳಲಾಗುತ್ತಿದೆ. ನೇರಪ್ಪಾಡಿ ತೀರ್ಥ ಸಂಗಮದ ನದೀ ತಟಾಕದಲ್ಲಿರುವ ಈ ಪ್ರದೇಶದಲ್ಲಿ ಹಿಂದಿನ ಕಾಲದಲ್ಲಿ ಮುನಿಗಳು ವಾಸಿಸುತ್ತಿದ್ದರು. ತಮ್ಮ ತಪೋದೃಷ್ಟಿಯಿಂದ ಪುತ್ರ ಪೌತ್ರಾದಿ ಸಂತಾನಾಭಿವೃದ್ಧಿಯ ಸಂಕಲ್ಪದೊಂದಿಗೆ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡುತ್ತಿದ್ದ ಸಂದರ್ಭ ಅವರಿಗೆ ಲಭಿಸಿದ ಗೋಪಾಲಕೃಷ್ಣನ ವಿಗ್ರಹ ತಂದು ಮುನಿಪುರದಲ್ಲಿ ಪ್ರತಿಷ್ಠಾಪಿಸಿದರು. ನಂತರದ ದಿನಗಳಲ್ಲಿ ದೇವಸ್ಥಾನವು ಮೊಗಲರ ಆಕ್ರಮಣಕ್ಕೆ ತುತ್ತಾಗಿತ್ತು.

ಮಾ. 1–9ರವರೆಗೆ ಬ್ರಹ್ಮಕಲಶ

2022ನೇ ಏಪ್ರಿಲ್ ತಿಂಗಳಿನಲ್ಲಿ ಶ್ರೀ ದೇವರ ಬಾಲಾಲಯ ಪ್ರತಿಷ್ಠೆ ನಡೆಯಿತು. ಬಳಿಕದ ದಿನಗಳಲ್ಲಿ ಜೀರ್ಣೋದ್ಧಾರ ಕಾರ್ಯಕ್ಕೆ ಮುಂದಡಿಯಿಡಲಾಯಿತು. ಶಿಲಾನ್ಯಾಸ, ಪಾದುಕಾನ್ಯಾಸದ ನಂತರ ದೇವಸ್ಥಾನದ ಗರ್ಭಗೃಹದ ಷಡಾಧಾರ ಪ್ರತಿಷ್ಠೆ ನೆರವೇರಿತು. ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿಗಳು ಹಾಗೂ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಗಳ ನೇತೃತ್ವದಲ್ಲಿ ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಅನುಗ್ರಹ, ದಿವ್ಯ ಉಪಸ್ಥಿತಿಯೊಂದಿಗೆ ಮಾರ್ಚ್ 1ರಿಂದ 9ರ ತನಕ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ಜರಗಲಿದೆ.

ಮಾ.1ರಂದು ಬೆಳಿಗ್ಗೆ 7 ಕ್ಕೆ ಮಹಾ ಗಣಪತಿ ಹೋಮದೊಂದಿಗೆ ಕಾರ್ಯಕ್ರಮಗಳು ಆರಂಭವಾಗಲಿವೆ. ಅದೇ ದಿನ ಸಂಜೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ ನಡೆಯಲಿದೆ. ಮಾ.6ರಂದು ಬೆಳಿಗ್ಗೆ 108 ತೆಂಗಿನಕಾಯಿ ಗಣಪತಿಹೋಮ, ಶ್ರೀ ದೇವರ ಪ್ರತಿಷ್ಠೆ ನೆರವೇರಲಿದೆ. ಮಾ.9 ರಂದು 1008 ಬ್ರಹ್ಮಕಲಶ, ರಾತ್ರಿ ಶ್ರೀ ದೇವರ ಉತ್ಸವ ಬಲಿ, ಬಟ್ಟಲುಕಾಣಿಕೆ ನಡೆಯಲಿದೆ.

ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಆಧುನಿಕ ಶವಾಗಾರ ಕಟ್ಟಡ ಉದ್ಘಾಟನೆ



ಕಾಸರಗೋಡು: ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಿಸಲಾದ ನೂತನ ಶವಾಗಾರ ಕಟ್ಟಡವನ್ನು ಶಾಸಕ ಎನ್.ಎ.ನೆಲ್ಲಿಕುನ್ನು ಉದ್ಘಾಟಿಸಿದರು. ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಈ ಕಟ್ಟಡವನ್ನು ಶಾಸಕರ ಆಸ್ತಿ ಅಭಿವೃದ್ಧಿ ನಿಧಿಯಿಂದ 1.20 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ.

ವೈಜ್ಞಾನಿಕವಾಗಿ ಏಕಕಾಲದಲ್ಲಿ ಹೆಚ್ಚಿನ ಶವಗಳನ್ನು ಸಂಗ್ರಹಿಸಲು ಫ್ರೀಜರ್ ವ್ಯವಸ್ಥೆ ವ್ಯಾಪಕವಾದ ಮರಣೋತ್ತರ ಪರೀಕ್ಷೆ ಟೇಬಲ್‌ಗಳು ಮತ್ತು ಪರೀಕ್ಷಾ ಕೊಠಡಿಗಳನ್ನು ಹೊಸ ಕಟ್ಟಡದಲ್ಲಿ ಸಿದ್ಧಪಡಿಸಲಾಗಿದೆ. ಹೊಸ ಕಟ್ಟಡ ಕಾರ್ಯಾರಂಭ ಮಾಡಿದ ನಂತರ ಶವಾಗಾರ ಸೇವೆಗಳು ದಿನದ 24 ಗಂಟೆಗಳೂ ಲಭ್ಯವಿರುತ್ತವೆ. ಇದು ಹಳೆಯ ಶವಾಗಾರದಲ್ಲಿನ ಸ್ಥಳಾವಕಾಶದ ಕೊರತೆ ಮತ್ತು ಅಸಮರ್ಪಕತೆಗೆ ಶಾಶ್ವತ ಪರಿಹಾರವನ್ನು ಒದಗಿಸಿದೆ.

ಕಾಸರಗೋಡು ನಗರಸಭೆ ಉಪಾಧ್ಯಕ್ಷ ಕೆ.ಎಂ.ಹನೀಫ್, ಸ್ಥಾಯೀಸಮಿತಿ ಸದಸ್ಯರು ಉಪ ಡಿಎಂಒ ಬಿ.ಸಂತೋಷ್, ಮೆಹರುನ್ನೀಸಾ ಹಮೀದ್, ಶಮೀನಾ ಮುಜೀಬ್, ಹಮೀದ್ ಬೆದಿರಾ, ಎನ್. ಆರ್.ವಿದ್ಯಾಶ್ರೀ, ಜಾಫರ್ ಕಮಲ್, ವಾರ್ಡ್ ಕೌನ್ಸಿಲರ್ ರಾಮಕೃಷ್ಣ ಹೊಳ್ಳ ಮತ್ತು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮಾತನಾಡಿದರು.

ಅಭಿನಂದನೆ

ಸಮಾರಂಭದಲ್ಲಿ ಗುತ್ತಿಗೆದಾರ ಮೆಹ್ರೂಫ್ ಬದಿರಿಯಾ ಅವರನ್ನು ಉಡುಗೊರೆ ನೀಡಿ ಅಭಿನಂದಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪಿ.ಎಂ.ಯಮುನಾ ಯೋಜನಾ ವರದಿ ಮಂಡಿಸಿ, ಆಸ್ಪತ್ರೆ ಸುಪ್ರಂಡ್ ಡಾ.ಶ್ರೀಕುಮಾರ್ ಮುಕುಂದನ್ ಸ್ವಾಗತಿಸಿ, ಫೋರೆನ್ಸಿಕ್ ಸರ್ಜನ್ ಡಾ.ಎಂ. ರೋಹಿತ್ ವಂದಿಸಿದರು.

ನೀಲೇಶ್ವರ: ಸ್ವಚ್ಛತಾ ಪಠನೋತ್ಸವ



ಕಾಸರಗೋಡು: ನೀಲೇಶ್ವರ ನಗರಸಭೆ ಆಶ್ರಯದಲ್ಲಿ ನಗರಸಭಾ ಪರಿಧಿಯೊಳಗಿನ ಶಾಲೆಗಳ ಭಾಗವಹಿಸುವಿಕೆಯೊಂದಿಗೆ ಸ್ವಚ್ಛತಾ ಪಠನೋತ್ಸವ (ಅಧ್ಯಯನ ಉತ್ಸವ)ವನ್ನು ಶನಿವಾರ ಆಯೋಜಿಸಲಾಗಿತ್ತು. ನಗರ ಸಭಾಧ್ಯಕ್ಷ ಪಿ.ಪಿ.ಮುಹಮ್ಮದ್ ರಫಿ ಕಾರ್ಯಕ್ರಮ ಉದ್ಘಾಟಿಸಿದರು. ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಎ.ವಿ.ಸುರೇಂದ್ರನ್ ಅಧ್ಯಕ್ಷತೆ ವಹಿಸಿದ್ದರು.

ನೈರ್ಮಲ್ಯ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ನಡೆಸಿದ ವೈವಿಧ್ಯಮಯ ಚಟುವಟಿಕೆಗಳು, ಪ್ರದರ್ಶನ ಅಧ್ಯಯನ ಉತ್ಸವದ ಪ್ರಮುಖ ಆಕರ್ಷಣೆಗಳಾಗಿದ್ದವು. ಅತ್ಯುತ್ತಮ ಸಾಧನೆ ಮಾಡಿದ ಶಾಲೆಗಳನ್ನು ವಿಶೇಷವಾಗಿ ಆಯ್ಕೆ ಮಾಡಿ ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಕೆ.ಸತೀಶನ್ ಟ್ರೋಫಿಗಳ ವಿತರಿಸಿದರು. ಪರಿಸರಸ್ನೇಹಿ ಚಟುವಟಿಕೆ ಉತ್ತೇಜಿಸುವ ಭಾಗವಾಗಿ ವಿದ್ಯಾರ್ಥಿಗಳಿಗೆ ಪರಿಸರ ಸೇನ್ಸ್ ಹರಿತ ಕ್ರಿಯಾ ಸೇನಾ ವಿದ್ಯಾರ್ಥಿ ವೇತನವನ್ನು ಪಿ.ಪಿ.ಮುಹಮ್ಮದ್ ರಫಿ ವಿತರಿಸಿದರು. ಉಪಾಧ್ಯಕ್ಷೆ ಪಿ.ಎಂ. ಸಂಧ್ಯಾ, ಸ್ಥಾಯೀ ಸಮಿತಿ ಅಧ್ಯಕ್ಷರಾದ ಇ.ಚಂದ್ರಮತಿ, ಶಮೀನಾ ಮುಹಮ್ಮದ್, ಕೌನ್ಸಿಲರ್‌ಗಳಾದ ಪಿ.ಕೆ.ಶಿಜಿತಾ, ಕೆ.ವಿ.ಲೀಲಾ, ಟಿ.ವಿ.ರಜಿತಾ, ಎಂ.ಶಾಂತಾ, ಅನೀಶ್, ಪಿ.ವಿ.ಸುನಿತಾ ಮತ್ತಿತರರಿದ್ದರು. ನಗರ ಸಭಾ ಸಿಸಿಎಂ ಉಸ್ತುವಾರಿ ವಿ.ವಿ.ಬೀನಾ ಸ್ವಾಗತಿಸಿ, ಪಿಎಚ್‌ಐ ಶಿಜು ವಂದಿಸಿದರು.

ಶ್ರೀ ಭಾರತಿ ವಿದ್ಯಾಪೀಠದಲ್ಲಿ ಸೇವಾ ಇಂಟರ್‌ನ್ಯಾಷನಲ್‌ನಿಂದ ಶೈಕ್ಷಣಿಕ ಸಹಾಯಧನ ವಿತರಣೆ

ಬದಿಯಡ್ಕ: ಅನೇಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಸೇವಾ ಇಂಟರ್‌ನೇಶನಲ್ ಸಂಸ್ಥೆಯ ವತಿಯಿಂದ ಸ್ಪೋನ್ಸರ್ ಅ ಚೈಲ್ಡ್ ಯೋಜನೆಯಲ್ಲಿ ಎಂಟು ಮಂದಿ ಪ್ರತಿಭಾವಂತರೂ, ಆರ್ಥಿಕ ಸಹಾಯಕ್ಕೆ ಅರ್ಹರೂ ಆದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯಧನ ವಿತರಿಸಲಾಯಿತು.

ಬಡಿಯಡ್ಕ ಶ್ರೀ ಭಾರತಿವಿದ್ಯಾಪೀಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ 15,000 ರೂ. ಸಹಾಯಧನವನ್ನು ನೀಡಲಾಯಿತು. ಅಮೇರಿಕಾದ ಜಿಯೋರ್ಜಿಯಾ ದ ಸ್ಟೋಕ್‌ಬರ್ಗ್‌ನ ಭಟ್ ಎಂಡ್ ಭಟ್ ಮೆಡಿಕಲ್ ಸೆಂಟರ್‌ನ ಮೆಡಿಕಲ್ ಡೈರೆಕ್ಟರ್ ಡಾ.ಸುಬ್ರಹ್ಮಣ್ಯ ಭಟ್ ಹಾಗೂ ಡಾ.ಅನ್ನಪೂರ್ಣ ಭಟ್ ದಂಪತಿ ಈ ಎಂಟೂ ವಿದ್ಯಾರ್ಥಿಗಳ ಸಹಾಯ ಧನದ ಮೊತ್ತವನ್ನು ಸ್ವತಃ ತಾವೇ ಭರಿಸಿದ್ದರು. ಕಾಸರಗೋಡಿನ ಬಳ್ಳಂಬೆಟ್ಟು ಮೂಲದ ಅಮೇರಿಕಾ ನಿವಾಸಿಗಳಾದ ಇವರು



ಸಹಾಯಧನ ನೀಡಿ ಮಾತನಾಡಿ, ಶಿಕ್ಷಣವೇ ಮಕ್ಕಳ ಭವಿಷ್ಯವನ್ನು ರೂಪಿಸುವ ಶಕ್ತಿ. ಈ ಸಹಾಯಧನವು ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗಲಿ ಹಾಗೂ ಅವರು ಸಮಾಜಕ್ಕೆ ಉತ್ತಮ ನಾಗರಿಕರಾಗಿ ರೂಪುಗೊಳ್ಳಲಿ ಎಂದು ಹಾರೈಸಿ ತಾವು ನಡೆದು ಬಂದ ದಾರಿಯನ್ನು ಮನಮುಟ್ಟುವಂತೆ ವಿವರಿಸಿದರು.

ಸಾಧನೆ ಮಾಡಲು ಕನಸು ಕಾಣಿರಿ

ವಿದ್ಯಾರ್ಥಿಗಳಲ್ಲಿ ಸಾಧನೆ ಮಾಡಲು ಮೊದಲು ಕನಸು ಕಾಣಿರಿ, ಯೋಜನೆ ಹಾಕಿರಿ, ಕಠಿಣ ಶ್ರಮ ವಹಿಸಿ ಮುಂದೆ ಸಾಗಿ ಎಂಬ ಕಿವಿಮಾತು ಹೇಳಿದರು. ಇದಕ್ಕೆ ಪೂರಕವಾಗಿ ಡಾ.ಅನ್ನಪೂರ್ಣಾ ಭಟ್ ಮಾತನಾಡಿ, ಶಿಷ್ಯ ವೇತನ ಪಡೆದ ವಿದ್ಯಾರ್ಥಿಗಳ ಮುಂದಿನ ಗುರಿಯನ್ನು ಕೇಳುತ್ತಾ ಅದನ್ನು ಸಾಧಿಸುವಲ್ಲಿ ಯಶಸ್ವಿಯಾಗಿ ಎಂದರು.

ಸೇವಾ ಇಂಟರ್‌ನ್ಯಾಷನಲ್ ಸಂಯೋಜಕಿ ಕಾರ್ತಿಕಾ ಮಾತನಾಡಿದರು.

ದಾನಿಗಳಿಗೆ ಕೃತಜ್ಞತೆ

ಒಳ್ಳೆಯ ಸಂಸ್ಕಾರಯುತ ಮಕ್ಕಳನ್ನು ಸಜ್ಜುಗೊಳಿಸುವ ಇಂತಹ ಶಾಲೆಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದ್ದು ನಮಗೆ ಖುಷಿ ತಂದಿದೆ. ಸಹಾಯಧನದಿಂದ ವಿದ್ಯಾರ್ಥಿಗಳ ಶಿಕ್ಷಣ ಮುಂದುವರಿಸಲು ಅಗತ್ಯ ಸಹಕಾರ ದೊರಕುವಂತಾಯಿತು. ದಾನಿಗಳಿಗೆ ಕೃತಜ್ಞತೆ.

● ಕಾರ್ತಿಕಾ, ಸೇವಾ ಇಂಟರ್ ನ್ಯಾಷನಲ್ ಸಂಯೋಜಕಿ

ಅತಿಥಿಗಳಾಗಿ ಆಗಮಿಸಿದ ಮಂಗಳೂರಿನ ಖ್ಯಾತ ವೈದ್ಯ ಡಾ.ಜಿ.ಕೆ. ಭಟ್ ಮಾತನಾಡಿ ದಾನಿಗಳ ಸೇವಾ ಮನೋಭಾವ, ಶಾಲೆಯ ಅಚ್ಚುಕಟ್ಟುತನ, ವಿದ್ಯಾರ್ಥಿಗಳ ಶಿಸ್ತು ಬದ್ಧ ನಡವಳಿಕೆ ಇತ್ಯಾದಿಗಳನ್ನು ಪ್ರಶಂಸಿಸಿ ಶುಭ ಹಾರೈಸಿದರು.

ಸಂಪಾದನೆ ಒಂದಂಶ ಸಮಾಜಕ್ಕೆ ನೀಡುತ್ತೇವೆ

ಶಿಷ್ಯವೇತನ ಪಡೆದ ವಿದ್ಯಾರ್ಥಿಗಳು ತಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತಾ ತಾವೂ ಮುಂದೊಂದು ದಿನ ತಮ್ಮ ಸಂಪಾದನೆಯ ಒಂದಂಶವನ್ನು ಸಮಾಜಕ್ಕೆ ನೀಡುತ್ತೇವೆ ಎಂದು ಹೇಳಿದರು.

10ನೇ ತರಗತಿಯ ಅವನಿ ಎಂ. ತಾನೇ ರಚಿಸಿದ ಹಿಂದಿ ಕವನದ ಮುಖಾಂತರ ಸಲ್ಲಿಸಿದ ಕೃತಜ್ಞತೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಶ್ಲಾಘನೀಯ

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಹವ್ಯಕ ಅಭ್ಯುದಯ ಚಾರೀಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ವೈ.ವಿ.ಕೃಷ್ಣಮೂರ್ತಿ ಮಾತನಾಡಿ, ಪರಿಶ್ರಮಪಟ್ಟು ಉನ್ನತ ಸ್ಥಾನಕ್ಕೇರಿ ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಪಾಲುದಾರಾಗಿ ಎಂದು ಹೇಳುತ್ತಾ ಸೇವಾ ಇಂಟರ್ ನ್ಯಾಷನಲ್ ಸಂಸ್ಥೆಯು ಶಿಕ್ಷಣ ಸಹಾಯದ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ಶಾಲೆಯ ಮುಖ್ಯೋಪಾಧ್ಯಾಯರು, ಶಾಲಾ ಆಡಳಿತ ಮಂಡಳಿ ಕಾರ್ಯದರ್ಶಿ ಮಧುಸೂದನ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಅನಂತಕೃಷ್ಣ ಚಡಗ ಶುಭ ಹಾರೈಸಿದರು. ನಾರಾಯಣ ಭಟ್ ಪಂಜಿತ್ತಡ್ಕ, ಕೃಷ್ಣ ಪ್ರಕಾಶ್ ಬಳ್ಳಂಬೆಟ್ಟು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಅಧ್ಯಾಪಿಕೆ ಸರೋಜಾ ಕಾನತ್ತಿಲ ಸ್ವಾಗತಿಸಿ, 8ನೇ ತರಗತಿಯ ಅಂಜಲಿ ವಂದಿಸಿದರು. 9ನೇ ತರಗತಿಯ ಪ್ರಕೃತಿ ಎ. ಕಾರ್ಯಕ್ರಮ ನಿರೂಪಿಸಿದರು.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಸೋಮವಾರ 23, ಫೆಬ್ರವರಿ 2026

ಸುತ್ತ ಮುತ್ತ

ವಿದ್ಯಾಪೋಷಕ್ ಸನಿವಾಸ ಶಿಬಿರ

ಉಡುಪಿ: ಪ್ರಥಮ ಪಿಯುಸಿ ಮುಗಿಸಿದ ವಿದ್ಯಾಪೋಷಕ್ ನ 250ಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ, ಪ್ರತಿವರ್ಷದಂತೆ ಈ ಬಾರಿಯೂ ಐದು ದಿನಗಳ ಶೈಕ್ಷಣಿಕ ಸನಿವಾಸ ಶಿಬಿರವು ಫೆ.24ರಿಂದ 28 ರ ತನಕ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ನಡೆಯಲಿದೆ. ಫೆ. 24ರಂದು 10 ಗಂಟೆಗೆ ಪುತ್ತಿಗೆ ಮಠಾಧೀಶರಾದ ಶ್ರೀಸುಗುಣೇಂದ್ರ ತೀರ್ಥ ಶ್ರೀಪಾದರು ಉದ್ಘಾಟಿಸಲಿರುವ ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಯಶ್‌ಪಾಲ್ ಎ. ಸುವರ್ಣ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ವಿದ್ಯಾಪೋಷಕ್1000 ವಿದ್ಯಾರ್ಥಿಗಳಿಗೆ ಮಾಹೆ ಕೊಡಮಾಡುವ ಉಚಿತ ಆರೋಗ್ಯ ಕಾರ್ಡನ್ನು ಸಹ ಕುಲಾಧಿಪತಿಗಳಾದ ಡಾ. ಎಚ್.ಎಸ್. ಬಲ್ಲಾಳರು ವಿದ್ಯಾರ್ಥಿಗಳಿಗೆ ವಿತರಿಸಲಿದ್ದಾರೆ. ಪರ್ಯಾಯ ಶ್ರೀ ಶೀರೂರು ಮಠದ ದಿವಾನ ಡಾ. ಉದಯಕುಮಾರ್ ಸರಳತ್ತಾಯರು ಶುಭಾಶಂಸನೆಗೈಲಿದ್ದಾರೆ. ಶಿಬಿರವನ್ನು ಗುರುದತ್ತ ಬಂಟ್ವಾಳಕರ್ ಮತ್ತು ಸಹನಾ ಕಿಣಿಯವರು ನಿರ್ದೇಶಿಸಲಿದ್ದು, ಹಲವಾರು ಸಂಪನ್ಮೂಲ ವ್ಯಕ್ತಿಗಳು ಮಾರ್ಗದರ್ಶನ ನೀಡಲಿದ್ದಾರೆ ಎಂದು ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಹಾಗೂ ಕಾರ್ಯದರ್ಶಿ ಮುರಲಿ ಕಡೆಕಾರ್ ತಿಳಿಸಿದ್ದಾರೆ.

ಯಕ್ಷ ಕಲಾ ಬಳಗ ಅಧ್ಯಕ್ಷರಾಗಿ ಆಯ್ಕೆ

ಕುಂದಾಪುರ: ಶ್ರೀ ಹವ್ಯಾಸಿ ಯಕ್ಷ ಕಲಾ ಬಳಗ, ನಾಯಕವಾಡಿ ಗುಜ್ಜಾಡಿ ಇದರ ನೂತನ ಅಧ್ಯಕ್ಷರಾಗಿ ರಾಜು ಇಡೂರು ಆಯ್ಕೆಯಾಗಿದ್ದಾರೆ.



ಅರುಣ್ ಕುಮಾರ್ ಗಂಗೊಳ್ಳಿ (ಉಪಾಧ್ಯಕ್ಷರು), ಅಭಿನಂದನ್ ಗಂಗೊಳ್ಳಿ (ಕಾರ್ಯದರ್ಶಿ), ವಿನಯ್ ಗಂಗೊಳ್ಳಿ (ಜೊತೆ ಕಾರ್ಯದರ್ಶಿ), ಕೃಷ್ಣ ಖಾರ್ವಿ (ಗೌರವ ಅಧ್ಯಕ್ಷ), ಶ್ರೀಪತಿ ಗಂಗೊಳ್ಳಿ (ಸಂಚಾಲಕರು), ನಾಗರಾಜ್ ಪೊಲೀಸ್ (ಕೋಶಾಧಿಕಾರಿ), ಗಣಪತಿ ಕಾಯ್ಕಿಣಿ, ರಾಜೇಶ್ ಶೆಟ್ಟಿ ಎ. ಭಾಸ್ಕರ್ ಶೆಟ್ಟಿ ರಾಜು ದೇವಾಡಿಗ ಕಂಚುಗೋಡು, ನಾಗರಾಜ ಖಾರ್ವಿ(ಮೇಳ) (ಗೌರವ ಸಲಹೆಗಾರರು), ನಾಗರಾಜ ಖಾರ್ವಿ ಕಂಚಗೋಡು, ಜಗನ್ನಾಥ ಗಾಣಿಗ, ರಾಘವೇಂದ್ರ ಗಾಣಿಗ (ಐಸ್ ಕ್ರೀಮ್), ಕೃಷ್ಣಯ್ಯ ಪೊಲೀಸ್, ಅಬ್ದುಲ್ ರಹೂಫ್, ದಿನೇಶ್ ಪೂಜಾರಿ, ವಿವೇಕ್ ಗಂಗೊಳ್ಳಿ, ಜಯರಾಮ ಖಾರ್ವಿ, ಗೋಪಾಲ್ ಪೂಜಾರಿ ಹೆಮ್ಮಾಡಿ, ಅಜಿತ್ ಗಂಗೊಳ್ಳಿ, ರಾಘವೇಂದ್ರ ಆಚಾರ್ಯ ಹರೇಗೋಡು, ಚರಣ್ ರಾಜ್ ಬಗ್ವಾಡಿ (ಗೌರವ ಸದಸ್ಯರು), ಚೇತನ್ ದೇವಾಡಿಗ ಕಂಚುಗೋಡು ಮತ್ತು ರವಿಚಂದ್ರ ಖಾರ್ವಿ ಶ್ರೀ ಮಹಾಕಾಳಿ ಮಹಿಳಾ ಸಹಕಾರಿ ಸಂಘ (ಮಹಾಪೋಷಕರು) ಆಯ್ಕೆಯಾಗಿದ್ದಾರೆ.

ಮೊದಲನೇ ಪುಟದಿಂದ

ತೋಟಗಳಿಗೆ ಹಾನಿ

ದೇವರಡ್ಕ ಪ್ರದೇಶದಲ್ಲಿ ಮರಗಳು ಬಿದ್ದು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗೆ ಹಾನಿ ಸಂಭವಿಸಿದೆ.
ರಾತ್ರಿ ವೇಳೆಯಲ್ಲೇ ಸ್ಥಳೀಯರು ಸ್ವಯಂಪ್ರೇರಿತರಾಗಿ ರಸ್ತೆಗೆ ಬಿದ್ದ ಮರಗಳನ್ನು ತೆರವುಗೊಳಿಸಿ ಸಂಚಾರ ವ್ಯವಸ್ಥೆಯನ್ನು ಪುನಃ ಸಹಜಗೊಳಿಸಿದರು. ಭಾರೀ ಗಾಳಿ ಮಳೆಯಿಂದ ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.
ಸುಬ್ರಹ್ಮಣ್ಯ ಮೆಸ್ಕಾಂ ವ್ಯಾಪ್ತಿಯ ಇಂಜಾಡಿ, ಎಡೋಳಿ, ಮಲೆಯಾಳ, ಕೊಲ್ಲಮೊಗ್ರು, ಹರಿಹರ, ಬಾಳುಗೋಡು, ಮುಂಡಕಜೆ ಕಡೆಗಳಲ್ಲಿ ಮರ ಬಿದ್ದು ಮರದ ಗೆಲ್ಲು ಬಿದ್ದು ವಿದ್ಯುತ್‌ಕಂಬಗಳು, ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. ಸುಬ್ರಹ್ಮಣ್ಯ ಮೆಸ್ಕಾಂ ಉಪವಿಭಾಗ ವ್ಯಾಪ್ತಿಯಲ್ಲಿ ಸುಮಾರು 20ರಷ್ಟುವಿದ್ಯುತ್‌ಕಂಬಗಳು ಹಾಗೂ ಒಂದು ವಿದ್ಯುತ್ ಪರಿವರ್ತಕ ಹಾನಿಗೊಂಡಿದೆ. ಮೆಸ್ಕಾಂ ವತಿಯಿಂದ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ.

ಕೃಷಿ ಹಾನಿ

ಗಾಳಿ ಮಳೆಗೆ ಹಲವೆಡೆ ಕೃಷಿ ಹಾನಿ ಸಂಭವಿಸಿದೆ. ಸುಬ್ರಹ್ಮಣ್ಯ, ಹರಿಹರ, ಐನೆಕಿದು, ಕೊಲ್ಲಮೊಗ್ರು, ಕಲ್ಮಕಾರು, ಏನೆಕಲ್ಲು ನಾಲ್ಕೂರು, ಗುತ್ತಿಗಾರು ಭಾಗದಲ್ಲಿ ಕೃಷಿ ಹಾನಿ ಸಂಭವಿಸಿದೆ. ಸುಬ್ರಹ್ಮಣ್ಯ ಸಮೀಪದ ಮಹೇಶ್‌ಎಂ.ಪಿ. ಅವರ 50 ಕ್ಕೂ ಅಡಿಕೆ ಮರಗಳು, ಬಾಳೆ ಕೃಷಿ ಗಾಳಿ ಮಳೆಗೆ ನೆಲಕಚ್ಚಿದೆ. ಕೃಷಿಕರಾದ ವಸಂತ, ಮನೋಜ್, ಪ್ರವೀಣ, ದೇವಿಪ್ರಸಾದ್, ದಿನಕರ, ಗೋಪಾಲ ಸೇರಿದಂತೆ ಕುಜುಂಬಾರು, ಮಾಣಿಬೈಲು ಮೊದಲಾದ ಪ್ರದೇಶದಲ್ಲಿ ಗಾಳಿ ಮಳೆಗೆ ಕೃಷಿ ತೋಟದಲ್ಲಿನ ಫಲ ಭರಿತ ಅಡಿಕೆ ಮರಗಳು ಮತ್ತು ಬಾಳೆ ಗಿಡಗಳು ಧಾರಾಶಾಹಿಯಾಗಿ ಅಪಾರ ಹಾನಿ ಸಂಭವಿಸಿದೆ.

ಅಕಾಲಿಕ ಮಳೆ

ಕಾಳುಮೆಣಸು ಧಾರಣೆ ಮಾತ್ರ ರೂ. 700 ರ ಗಡಿ ತಲುಪಿದರೂ. ಒಂದಷ್ಟು ಇಳಿಕೆ ಕಂಡು ರೂ.665 ಕ್ಕೆ ತಲುಪಿದೆ. ಕಾಳು ಮೆಣಸಿನ ಫಸಲೂ ಈ ಬಾರಿ ಕುಂಠಿತಗೊಂಡಿರುವುದರಿಂದ ಸಣ್ಣ ಬೆಳೆಗಾರರು ಮಾರುಕಟ್ಟೆಗೆ ಬಿಟ್ಟಿರುವುದರಿಂದ ಬೆಳೆಯಲ್ಲಿ ಒಂದಷ್ಟು ಇಳಿಕೆ ಕಂಡಿದೆ.

ಮದ್ಯದಂಗಡಿಗೆ

ಇನ್ನು 'ಸಿರಿ' ಬ್ರಾಂಡ್‌ನಲ್ಲಿ ಅನಾನಸು ಮತ್ತು ದ್ರಾಕ್ಷೆಯಿಂದ ನಿರ್ಮಿಸಲಾಗುವ ವೈನ್ 2024 ಎಪ್ರಿಲ್ ತಿಂಗಳಿಂದಲೇ ಬಿವರೇಜ್ ಕಾರ್ಪೋರೇಷನ್‌ನ ಎಲ್ಲಾ ಮದ್ಯದಂಗಡಿಗಳ ಮೂಲಕ ಮಾರಾಟ ಮಾಡಲಾಗುತ್ತಿದೆ. ಇಂತಹ ವೈನ್‌ಗಳನ್ನು ತಯಾರಿಸುವ ಲೈಸನ್ಸ್ ಪಯ್ಯನ್ನೂರು ಸಹಕಾರಿ ಸಂಘ ಮತ್ತು ಕೃಷಿ ವಿ.ವಿ. ಮಾತ್ರವಲ್ಲದೆ ಖಾಸಗಿ ವಲಯದಲ್ಲಿ ಕೊಟ್ಟಾರಕರೆ ಎನ್‌ಎಸ್ ವೈನ್ ರಿಗೆ ಮಾತ್ರವೇ ನೀಡಲಾಗಿದೆ. ಅಲ್ಲದೆ ವಿವಿಧ 14 ಹಣ್ಣು ಹಂಪಲು ಗಳಿಂದ ವೈನ್ ತಯಾರಿಸುವ ಲೈಸನ್ಸ್ ನೀಡಲಾಗಿದೆ.

ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ರಂಗಹಬ್ಬಕ್ಕೆ ಚಾಲನೆ | ಸಂಜೀವ ದಂಡೆಕೇರಿ ವಿಷಾದ

ನಾಟಕಗಳನ್ನು ನೋಡುವವರ ಸಂಖ್ಯೆ ದಿನೇ ದಿನೇ ಇಳಿಮುಖ

ಉಡುಪಿ: ಕಲಾವಿದ ಕಲಾ ಪ್ರದರ್ಶನ ನೀಡಿದರೆ ಪೂರ್ಣನಾಗುವುದಿಲ್ಲ. ಸಹೃದಯನಾಗಬೇಕು, ವಿಶಾಲ ಹೃದಯಿ ಆಗಿರಬೇಕು. ಆಗ ಮಾತ್ರ ಪೂರ್ಣಕಲಾವಿದನಾಗಿ ರೂಪುಗೊಳ್ಳಲು ಸಾಧ್ಯ ಎಂದು ರಂಗಕರ್ಮಿ ಸಂಜೀವ ದಂಡೆಕೇರಿ ಹೇಳಿದರು.



ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ಭಾನುವಾರ ಭುಜಂಗ ಪಾರ್ಕ್ ಬಯಲು ರಂಗಮಂದಿರದಲ್ಲಿ ಹಮ್ಮಿಕೊಂಡಿರುವ 14ನೇ ವರ್ಷದ ರಂಗಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು.
ನಾಟಕಗಳನ್ನು ನೋಡುವವರ ಸಂಖ್ಯೆ ದಿನೇ ದಿನೆ ಕಡಿಮೆಯಾಗುತ್ತಿದೆ. ವೇದಿಕೆಯಲ್ಲಿ ಇರುವಷ್ಟು ವೀಕ್ಷಕರು ಇಲ್ಲದ ಪರಿಸ್ಥಿತಿ ಕೆಲವು ಕಡೆಗಳಲ್ಲಿ ಉಂಟಾಗಿದೆ. ಧಾರಾವಾಹಿಗಳು, ಮೊಬೈಲ್ ಇದಕ್ಕೆ ಕಾರಣ ಇರಬಹುದು. ರಂಗಚಟುವಟಿಕೆ ಜಾಸ್ತಿಯಾಗುತ್ತಾ ಹೋಗಬೇಕು ಎಂದು ಆಶಿಸಿದರು.
ನಾವು ಮಾಡುವ ಒಳ್ಳೆಯ ಕಾರ್ಯ ಮತ್ತು ಜನರ ಪ್ರೀತಿ ಮಾತ್ರ ಶಾಶ್ವತ. ನಾವು ಬದುಕಿ ಸಾಯುವುದಕ್ಕಿಂತ ಸತ್ತ ಮೇಲೂ ಬದುಕುವಂತೆ ಸಾಧನೆ ಮಾಡಬೇಕು ಎಂದು ತಿಳಿಸಿದರು.
ರಂಗಸಾಧಕ ಸನ್ಮಾನ ಸ್ವೀಕರಿಸಿದ ರಂಗಕರ್ಮಿ ಸಂತೋಷ್ ಶೆಟ್ಟಿ ಹಿರಿಯಡ್ಕ ಮಾತನಾಡಿ, ರಂಗಭೂಮಿಯು ಆಯಾ ಕಾಲಘಟ್ಟದ ಅನಿವಾರ್ಯತೆಗೆ, ತಲ್ಲಣಗಳಿಗೆ ಸ್ಪಂದಿಸುವ ಪ್ರಬಲ ಮಾಧ್ಯಮ. ಮನರಂಜನೆ ಮಾತ್ರವಲ್ಲ, ಸಾಮಾಜಿಕ ಜವಾಬ್ದಾರಿ. ಕಲಾವಿದ ತನ್ನೊಳಗೆ ಬಗೆದು ನೋಡುವ ಪ್ರಕ್ರಿಯೆ. ಸಮಾಜವನ್ನು ಕಟ್ಟುವ ಪ್ರಕ್ರಿಯೆಯೂ ಹೌದು ಎಂದು ಹೇಳಿದರು.

ಪ್ರಭುತ್ವದ ಕೆಂಗಣ್ಣಿಗೆ ಗುರಿ

ರಂಗಭೂಮಿಗೆ ಪ್ರಶ್ನಿಸುವ ಮನೋಭಾವ ಇರುವುದರಿಂದ ಅದು ಆಗಾಗ ಪ್ರಭುತ್ವದ ಕೆಂಗಣ್ಣಿಗೆ ಗುರಿಯಾಗುತ್ತದೆ. ಆದರೆ ಇತ್ತೀಚೆಗೆ ಪ್ರಪಗಾಂಡ ನಾಟಕಗಳೂ ಬರುತ್ತಿರುವುದರಿಂದ ಎಲ್ಲ ನಾಟಕಗಳು ಒಳ್ಳೆಯವು ಎಂದು ಅದರ ಸ್ವರೂಪದ ಕಾರಣಕ್ಕಷ್ಟೇ ಗುರುತಿಸಲು ಸಾಧ್ಯವಿಲ್ಲ. ನಾಟಕ ರಚನೆಕಾರರ, ನಿರ್ದೇಶಕರ, ನಾಟಕ ಮಾಡುಸುವವರ ಮನಸ್ಥಿತಿಯನ್ನು ಅವಲಂಬಿಸಿದೆ ಎಂದು ಅಭಿಪ್ರಾಯಪಟ್ಟರು.

> **ಬಯ್ಯ ಮಲ್ಲಿಗೆ 28 ಸಾವಿರ ಬಳಿಕ ಪ್ರದರ್ಶನ ಲೆಕ್ಕ ಇಟ್ಟಿಲ್ಲ**
>
> ನಾನು ಬರೆದ ಬಯ್ಯಮಲ್ಲಿಗೆ ನಾಟಕವು ತುಳು, ಕನ್ನಡ, ಹಿಂದಿ, ಕೊಂಕಣಿ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪ್ರದರ್ಶನಗೊಂಡಿದೆ. 28 ಸಾವಿರ ಪ್ರದರ್ಶನಗಳವರೆಗೆ ನಾನು ಲೆಕ್ಕ ಇಟ್ಟಿದ್ದೆ. ಆನಂತರ ಲೆಕ್ಕ ಇಟ್ಟಿಲ್ಲ. ಇದೇ ಬಯ್ಯಮಲ್ಲಿಗೆ ಸಿನಿಮಾ ಕೂಡ ಆಯಿತು.
>
> ● ಸಂಜೀವ ದಂಡೆಕೇರಿ, ರಂಗಕರ್ಮಿ

ಉಡುಪಿಯಲ್ಲಿ ಸಹೃದಯತೆಯ ಮತ್ತು ಸೌಹಾರ್ದದ ಪರಂಪರೆ ಇದೆ. ಯು.ಎಸ್. ಪಣಿಯಾಡಿ, ಡಾ. ಟಿ.ಎಂ.ಎ ಪೈ, ಹಾಜಿ ಅಬ್ದುಲ್ಲ ಸಾಹೇಬ್ ಇದಕ್ಕೆ ಉದಾಹರಣೆ. ಅವರು ಹಾಕಿಕೊಟ್ಟ ಮೇಲ್ಪಂಕ್ತಿ. ವರ್ತಮಾನ ಮತ್ತು ಭವಿಷ್ಯದ ಹಾದಿಗೆ ಬೆಳಕಾಗಬಲ್ಲದು ಎಂದು ತಿಳಿಸಿದರು.

ಯುವಕರಿಗೆ ಅವಕಾಶ ಉತ್ತಮ ಬೆಳವಣಿಗೆ

ಅಧ್ಯಕ್ಷತೆವಹಿಸಿದ್ದನೂತನ್‌ಕ್ರೆಡಿಟ್ ಕೋಆಪರೇಟಿವ್ ಸೊಸೈಟಿಯ ಮಹಾಪ್ರಬಂಧಕ ಗಣೇಶ್ ಶೇರಿಗಾರ್ ಮಾತನಾಡಿ, ಸುಮನಸಾ ಮುಂದಿನ ಪೀಳಿಗೆಯನ್ನು ಸದೃಢಗೊಳಿಸುತ್ತಿದೆ. ಇತ್ತೀಚಿನ ನಾಟಕಗಳಲ್ಲಿ ಯುವ ಪೀಳಿಗೆಗೆ ಅವಕಾಶ ನೀಡುತ್ತಿರುವುದು ಇದಕ್ಕೆ ಸಾಕ್ಷಿ. ಸುಮನಸಾ ಸಂಸ್ಥೆಯ ಸ್ವಂತ ನಿವೇಶನ, ಸ್ವಂತ ಕಟ್ಟಡದ ಕನಸು ಈಡೇರಲಿ ಎಂದು ಹಾರೈಸಿದರು.
ಸಾಕಾರ್ ಕನ್‌ಸ್ಟ್ರಕ್ಷನ್ ಪ್ರವರ್ತಕ ರಾಕೇಶ್ ಜೋಗಿ, ಉದ್ಯಮಿ ನಾಗರಾಜ್ ಸುವರ್ಣ, ಯುವವಾಹಿನಿ ಕೇಂದ್ರ ಸಮಿತಿ ಮಂಗಳೂರು ಇದರ ಮಾಜಿ ಅಧ್ಯಕ್ಷ ಸಂತೋಷ್ ಉದ್ಯಾವರ, ಸುಮನಸಾ ಕೊಡವೂರು ಗೌರವಾಧ್ಯಕ್ಷ ಎಂ.ಎಸ್. ಭಟ್, ಸಂಚಾಲಕ ಭಾಸ್ಕರ ಪಾಲನ್ ಉಪಸ್ಥಿತರಿದ್ದರು, ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಸ್ವಾಗತಿಸಿದರು. ಸದಸ್ಯೆ ಅಂಬಿಕಾ ವಂದಿಸಿದರು. ಉಪಾಧ್ಯಕ್ಷ ಯೋಗೀಶ್ ಕೊಳಲಗಿರಿ ಕಾರ್ಯಕ್ರಮ ನಿರೂಪಿಸಿದರು.

ಕೋಟ: ಮಾ.1ರ ಏಕಃಪವಿತ್ರ ನಾಗ ಮಂಡಲ ಯಶಸ್ವಿಗೊಳಿಸಲು ಮನವಿ



ಕೋಟ: ಕೋಟ ಅಮೃತೇಶ್ವರೀ ದೇಗುಲ ವತಿಯಿಂದ ಮಾ.1ರಂದು ಕೋಟದ ಗಾಂಧಿ ಮೈದಾನದಲ್ಲಿ ನಡೆಯಲಿರುವ ಏಕಃ ಪವಿತ್ರ ನಾಗಮಂಡಲೋತ್ಸವ ಪೂರ್ವ ತಯಾರಿ ಸ್ವಚ್ಛತಾ ಕಾರ್ಯಕ್ರಮ ಭಾನುವಾರ ಜರಗಿತು.
ದೇಗುಲದ ಅಧ್ಯಕ್ಷ ಆನಂದ್ ಸಿ. ಕುಂದರ್ ಚಾಲನೆ ನೀಡಿ, ಪವಿತ್ರವಾದ ನಾಗ ಮಂಡಲೋತ್ಸವದಲ್ಲಿ ಎಲ್ಲರೂ ಭಕ್ತಿಪೂರ್ವಕವಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕಿದೆ. ಅಲ್ಲದೆ ಇಂದಿನ ಸ್ವಚ್ಛತಾ ಕಾರ್ಯದಲ್ಲಿ ಕೈಜೋಡಿಸಿದ ಪಂಚವರ್ಣ ಸಂಘಟನೆ, ಜನತಾ ಸಮೂಹ ಸಂಸ್ಥೆ ಗೀತಾನಂದ ಟ್ರಸ್ಟ್ ಹಂದಟ್ಟು ಮಹಿಳಾ ಬಳಗಕ್ಕೆ ಕೃತಜ್ಞತೆ ಸಲ್ಲಿಸಿದರು.
ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ಕೋಟ, ಗೀತಾನಂದ ಟ್ರಸ್ಟ್ ಮಣೂರು, ಜನತಾ ಸಮೂಹ ಸಂಸ್ಥೆ ಹಂದಟ್ಟು ಮಹಿಳಾ ಬಳಗ ಕೋಟ ನೇತೃತ್ವದಲ್ಲಿ 292ನೇ ಭಾನುವಾರದ ಅಂಗವಾಗಿ ಈ ನಾಗಮಂಡಲೋತ್ಸವದ ಪೂರ್ವತಯಾರಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡಿತು. ದೇಗುಲದ ಟ್ರಸ್ಟಿ ಚಂದ್ರ ಆಚಾರ್, ಶಿವ ಪೂಜಾರಿ, ಪ್ರಗತಿಪರ ಕೃಷಿಕ ರವೀಂದ್ರ ಐತಾಳ್, ಸ್ಥಳೀಯರಾದ ದೇವದಾಸ್ ಕಾಂಚನ್, ಜನತಾ ಫಿಶ್ ಮಿಲ್ ವ್ಯವಸ್ಥಾಪಕ ಶ್ರೀನಿವಾಸ ಕುಂದರ್, ಮಿಥುನ್ ಕುಮಾರ್, ಪಂಚವರ್ಣ ಯುವಕ ಮಂಡಲ ಅಧ್ಯಕ್ಷ ಮನೋಹರ್ ಪೂಜಾರಿ, ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಮಹಿಳಾ ಮಂಡಲದ ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್, ಹಂದಟ್ಟು ಮಹಿಳಾ ಬಳಗದ ಅಧ್ಯಕ್ಷೆ ಯಶೋಧ ಹಂದಟ್ಟು, ಸ್ಥಾಪಕಾಧ್ಯಕ್ಷೆ ಪುಷ್ಪ ಹಂದಟ್ಟು ರವಿ ಕಿರಣ್ ಕೋಟ ಇದ್ದರು. ಸುಜಾತ ಬಾಯರಿ ನಿರೂಪಿಸಿದರು.ರವೀಂದ್ರ ಕೋಟ ಸಂಯೋಜಿಸಿದರು.

ಕೋಡಿ ಕನ್ಯಾಣ ಯಕ್ಷಗಾನ ಕುಶ-ಲವ ಕುಟುಂಬ, ಜಾನಪದ ನೃತ್ಯೋತ್ಸವ



ಕೋಟ: ಕೋಡಿ ಕನ್ಯಾಣ ಶ್ರೀರಾಮ ದೇಗುಲದ ವಠಾರದಲಿ ಶ್ರೀ ರಾಮ ಪ್ರಸಾದಿತ ಯಕ್ಷಗಾನ ಕಲಾ ಸಂಘ ಕೋಡಿ ಕನ್ಯಾಣ ನೇತೃತ್ವದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಲಿಕಾ ಕೇಂದ್ರದ ವಿದ್ಯಾರ್ಥಿಗಳಿಂದ ಶ್ರೀ ಕೃಷ್ಣ ಯಕ್ಷ ವೇದಿಕೆ ಕೋಡಿ ಕನ್ಯಾಣ ಇವರ ಕೊಡುವಿಕೆಯಲ್ಲಿ ಪ್ರತೀಶ್ ಕುಮಾರ್ ಬ್ರಹ್ಮಾವರ ನಿರ್ದೇಶನದಲ್ಲಿ ಯಕ್ಷಗಾನ ಕುಶ-ಲವ ಕುಟುಂಬ, ಜಾನಪದ ನೃತ್ಯೋತ್ಸವ ನಡೆಯಿತು.
ಶ್ರೀರಾಮಪ್ರಸಾದಿತ ಯಕ್ಷಗಾನ ಕಲಾ ಸಂಘದ ಅಧ್ಯಕ್ಷ ಜಗನ್ನಾಥ ಅಮೀನ್ ಕೋಡಿ ಅಧ್ಯಕ್ಷತೆ ವಹಿಸಿದ್ದರು.
ಸಂಸದ ಶ್ರೀನಿವಾಸ ಪೂಜಾರಿ ಕೋಟ, ಶಾಸಕ ಕಿರಣ್ ಕುಮಾರ್ ಕೊಡ್ಗಿ, ಸಾಮಾಜಿಕ ಕಾರ್ಯಕರ್ತ ಬೈಕಾಡಿ ಸುಪ್ರಸಾದ್ ಶೆಟ್ಟಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಪೂರ್ಣಿಮಾ, ಕೋಟ ಸಹಕಾರಿ ವ್ಯವಸಾಯಕ ಸಂಘದ ಅಧ್ಯಕ್ಷ ಡಾ. ಕೃಷ್ಣ ಕಾಂಚನ್, ಸಂಘದ ಸಂಸ್ಥಾಪಕ ಮಹಾಬಲ ಭಂಡಾರಿ, ಮಾಜಿ ಜಿ.ಪಂ. ಸದಸ್ಯ ಶಂಕರ್ ಎ ಕುಂದರ್, ಯಾಂತ್ರಿಕ ಮೀನುಗಾರ ಸಂಘ ಹಂಗಾರಕಟ್ಟೆ ಕೋಡಿ ಬೇಂಗ್ರೆ ಅಧ್ಯಕ್ಷ ರಾಜು ಎನ್ ಬಂಗೇರ, ಶ್ರೀ ರಾಮ ದೇಗುಲದ ಅಧ್ಯಕ್ಷ ರಾಘವೇಂದ್ರ ಕರ್ಕೇರ, ಕೋಡಿ ಗ್ರಾ.ಪಂ. ಅಧ್ಯಕ್ಷೆ ಗೀತಾ ಖಾರ್ವಿ,ರಾಮ ದೇಗುಲದ ಪ್ರದಾನ ಅರ್ಚಕ ಭಾಸ್ಕರ್ ಬಾಯರಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರಾದ ಸುರೇಂದ್ರ ಕೋಡಿ, ಉದ್ಯಮಿ ಅಂತೋನಿ ಡಿಸೋಜ, ಕೋಡಿ ಶಾಲಾ ದೈಹಿಯ ಶಿಕ್ಷಣ ಶಿಕ್ಷಕ ವಿಜಯ ನಾಯರಿ, ಉದ್ಯಮಿ ಶಂಕರ್ ಕುಂದರ್ ಉಪಸ್ಥಿತರಿದ್ದರು.
ಕಾರ್ಯಕ್ರಮದಲ್ಲಿರಾಜೇಶ್ ಎನ್. ಕರ್ಕೇರ ಸ್ವಾಗತಿಸಿದರು. ರಾಧಕೃಷ್ಣ ಸಾಲಿಯಾನ್ ವಂದಿಸಿದರು.

ಕಲೆ, ಸಾಹಿತ್ಯದಲ್ಲಿ ಉಡುಪಿಗಿದೆ ದೇಶದಲ್ಲೇ ಖ್ಯಾತಿ: ಪಾಲೇಮಾರ್



ಉಪ್ಪುಂದ: ಕಲೆ ಮತ್ತು ಸಾಹಿತ್ಯಕ್ಕೆ ಉಡುಪಿ ಜಿಲ್ಲೆ ದೇಶದಲ್ಲಿಯೇ ಖ್ಯಾತಿ ಪಡೆದಿದ್ದು ಈ ಜಿಲ್ಲೆಯು ಅನೇಕ ಪ್ರತಿಭಾವಂತರನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಪರಿಚಯಿಸಿದೆ. ಬೈಂದೂರಿನ ಸುರಭಿ ಕೂಡ ತನ್ನದೇ ಆದ ಸಮಾನ ಮನಸ್ಕರ ಲೋಕಕಟ್ಟಿಕೊಂಡು ವಿಶೇಷವಾಗಿ ಈ ಭಾಗದ ಮಕ್ಕಳಿಗೆ ಬಾಲ್ಯದಿಂದಲೇ ಸಾಂಸ್ಕೃತಿಕವಾಗಿ ಬೆಳೆಸುತ್ತಿರುವುದು ಶ್ಲಾಘನೀಯ ಎಂದು ಮಾಜಿ ಸಚಿವ ಜೆ. ಕೃಷ್ಣ ಪಾಲೇಮರ್ ಹೇಳಿದರು.
ಇಲ್ಲಿನ ಶಾರದಾ ವೇದಿಕೆಯಲ್ಲಿ ಸುರಭಿ ಜೈಸಿರಿ-2026ರ ಪ್ರಯುಕ್ತ ಆಯೋಜಿಸಿದ ದಿ. ಹೊಸಾಡು ಸುಬ್ರಾಯ ಶೇರುಗಾರ್ ಸಂಸ್ಮರಣೆಯ ಸಾಂಸ್ಕೃತಿಕೋತ್ಸವದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.
ಹೃದ್ರೋಗ ತಜ್ಞ ಡಾ. ಎಚ್. ಪ್ರಭಾಕರ ಅಧ್ಯಕ್ಷತೆವಹಿಸಿದ್ದರು. ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಅವರನ್ನು ಸನ್ಮಾನಿಸಲಾಯಿತು. ನೃತ್ಯಗುರು ನಟರಾಜ ಗಂಗೊಳ್ಳಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು. ಡಾ. ಶಿವರಾಮ ಕಾರಂತ ಬಾಲ ಪ್ರಶಸ್ತಿ ಪುರಸ್ಕೃತೆ ತ್ರಿಷಾ ಅವರನ್ನು ಗೌರವಿಸಲಾಯಿತು. ಸೇವಾ ಸಂಗಮ ಶಿಶುಮಂದಿರ ಅಧ್ಯಕ್ಷ ಮಂಜುನಾಥ ಶೆಟ್ಟಿ ಪಟ್ಟಣ ಪಂಚಾಯತ್ ನಾಮ ನಿರ್ದೇಶಿತ ಸದಸ್ಯ ನಾಕಟ್ಟೆ ನಾಗರಾಜ ಶೆಟ್ಟಿ, ಬೈಂದೂರು ಸಿಟಿ ಜೆಸಿಐ ಅಧ್ಯಕ್ಷೆ ಚೈತ್ರಾ ಸತೀಶ್, ರಾಮಕ್ಷತ್ರಿಯ ಸಮಾಜದ ಅಧ್ಯಕ್ಷ ರಾಮಕೃಷ್ಣ ಪಾರ್ವತಿ ಸುಬ್ರಾಯ ಶೇರುಗಾರ್, ಪ್ರೇಮಾ ಪ್ರಕಾಶ್, ಸುಜಾತಾ, ಸುಧಾಕರ ಪಿ. ಇದ್ದರು. ಸುರಭಿ ಕಾರ್ಯದರ್ಶಿ ರಾಮಕೃಷ್ಣ ದೇವಾಡಿಗ ಸ್ವಾಗತಿಸಿ, ಅಧ್ಯಕ್ಷ ಆನಂದ ಮದ್ದೋಡಿ ಪ್ರಾಸ್ತಾವಿಸಿದರು. ರಾಘವೇಂದ್ರ ಕೆ ಮತ್ತು ಸಂದೀಪ್ ದೇವಾಡಿಗ ನಿರೂಪಿಸಿ, ಲಕ್ಷ್ಮಣ ಕೊರಗ ವಂದಿಸಿದರು. ನಂತರ ಪ್ರೊ. ಕೃಷ್ಣೇಗೌಡ ಮತ್ತು ತಂಡದವರಿಂದ ಹಾಸ್ಯೋತ್ಸವ ನಡೆಯಿತು.

ಪಾಂಡೇಶ್ವರ ಗಾನ ನಿನಾದ ಸಂಸ್ಥೆಯ ದಶಮಾನೋತ್ಸವ ಕರೋಕೆ ಗಾಯನ ಸ್ಪರ್ಧೆ



ಕೋಟ: ಸಂಗೀತ ಕ್ಷೇತ್ರದಲ್ಲಿ ಗಾನ ನಿನಾದ ಆರ್ಕೆಸ್ಟ್ರಾ ತಂಡ ತನ್ನದೆ ಆದ ವಿಶಿಷ್ಟ ಕಾರ್ಯಕ್ರಮಗಳಿಂದ ಗುರುತಿಸಿಕೊಂಡಿಗೆ ಅಲ್ಲದೆ ಸ್ಪರ್ಧೆ ಆಯೋಜಿಸಿ ರಾಜ್ಯಕ್ಕೆ ಮಾದರಿ ಕಾರ್ಯಕ್ರಮಗಳನ್ನು ನೀಡಿದೆ ಎಂದು ಉಡುಪಿ ಭವಾನಿ ಬಿಲ್ಡರ್ ಮಾಲಿಕ ನಾರಾಯಣ ಆಚಾರ್ ಹೇಳಿದರು.
ಶನಿವಾರ ಪಾಂಡೇಶ್ವರದ ಶಾಲಾ ವಠಾರದಲ್ಲಿ ಗಾನ ನಿನಾದ ಆರ್ಕೆಸ್ಟ್ರಾ ಪಾಂಡೇಶ್ವರ ದಶಮಾನೋತ್ಸವ ಸಂಭ್ರಮದ ಹಿನ್ನೆಲ್ಲೆಯಲ್ಲಿ ಸಿರಿ ಸಮೃದ್ಧಿ ಗೋಲ್ಡ್ ಪ್ಯಾಲೇಸ್ ಸಹಯೋಗದೊಂದಿಗೆ ರಾಜ್ಯಮಟ್ಟದ ಕರೋಕೆ ಗಾಯನ ಸ್ಪರ್ಧಾ ಕಾರ್ಯಕ್ರಮದಲ್ಲಿ ಟ್ರೋಫಿ ಅನಾವರಣಗೈದುಅವರುಮಾತನಾಡಿದರು. ಕಲಾವಿದರಿಗೆ ಅಥವಾ ಕಲಾ ತಂಡಗಳಿಗೆ ಪ್ರೋತ್ಸಾಹ ನೀಡುವ ಹೊಣೆಗಾರಿಕೆ ಪ್ರತಿಯೊರ್ವರಲ್ಲೂ ಇರಬೇಕು ಎಂದರು.
ಉದ್ಯಮಿ ಎಂ.ಸಿ. ಚಂದ್ರಶೇಖರ ಪೂಜಾರಿ ಪಾಂಡೇಶ್ವರ ಉದ್ಘಾಟಿಸಿ ಶುಭಹಾರೈಸಿದರು.
ಈ ಸಂದರ್ಭದಲ್ಲಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದ ಗಾಯಕರಿಗೆ ಗೌರವಾರ್ಪಣೆ ಜರಗಿತು. ಅಲ್ಲದೆ ರಂಗನಟಿ ದಿಕ್ಷಾ ಬ್ರಹ್ಮಾವರ ಅವರನ್ನು ಸನ್ಮಾನಿಸಲಾಯಿತು. ಗಾಯನ ಸ್ಪರ್ಧೆಯಲ್ಲಿ ಅಂತಿಮ ಸುತ್ತಿಗೆ ಪ್ರವೇಶ ಪಡೆದ ಹತ್ತು ಜನ ಗಾಯಕರಿಗೆ ಗೋಲ್ಡನ್ ಪ್ರತಿಯನ್ನು ಆತಿಥಿಗಳ ಮೂಲಕ ಹಸ್ತಾಂತರಿಸಲಾಯಿತು.
ಮುಖ್ಯ ಅಭ್ಯಾಗತರಾಗಿ ಸಮಾಜ ಸೇವಕರಾದ ಜೋಸೆಫ್ ಮಿನೇಜಸ್, ಸಿರಿ ಸಮೃದ್ಧಿ ಗೋಲ್ಡ್ ಪ್ಯಾಲೇಸ್ ಪಾಲುದಾರ ರಾಘವೇಂದ್ರ ಪೂಜಾರಿ, ಮಾಜಿ ತಾ.ಪಂ. ಅಧ್ಯಕ್ಷೆ ಜ್ಯೋತಿ ಉದಯ್ ಕುಮಾರ್, ಗುತ್ತಿಗೆದಾರ ಉದಯ್ ಆಚಾರ್, ಶ್ರೀ ಕ್ಷೇತ್ರ ಕಳಿಬೈಲು ಧರ್ಮದರ್ಶಿ ಅಭಿಜಿತ್ ಪಾಂಡೇಶ್ವರ, ಪಾಂಡೇಶ್ವರ ಶಾಲಾ ಮುಖ್ಯ ಶಿಕ್ಷಕ ಕೃಷ್ಣ ಪೂಜಾರಿ, ಗಾನ ನಿನಾದ ತಂಡದ ಮುಖ್ಯಸ್ಥ ಶ್ರೀಶ ಆಚಾರ್ ಉಪಸ್ಥಿತರಿದ್ದರು. ರಾಘವೇಂದ್ರ ರಾಜ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ ಅಧಿವೇಶನ , ಪ್ರತಿಭಾ ಪುರಸ್ಕಾರ



ಉಪ್ಪುಂದ: ಆಧುನಿಕ ಯುಗದಲ್ಲಿ ಯುವ ಸಮುದಾಯ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ತೊಡಗಿ ಕೊಂಡು ಮುಂದಿನ ಪೀಳಿಗೆಗೆ ಆಚಾರ ವಿಚಾರಗಳನ್ನು ವರ್ಗಾವಣೆ ಮಾಡುವಂತಹ ಜವಾಬ್ದಾರಿ ಹೊರಬೇಕು, ಶಿಸ್ತು ಸಂಯಮ, ಶಿಷ್ಟಾಚಾರ, ಸಂಸ್ಕಾರ ಎನ್ನುವ ಅಂಶಗಳನ್ನು ಇಂದಿನ ಯುವ ಸಮುದಾಯ ಅಳವಡಿಸಿಕೊಂಡು ಬದುಕಬೇಕು ಎಂದು ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ ಅಧ್ಯಕ್ಷ ಕೃಷ್ಣಾನಂದ ಚಾತ್ರ ಹೇಳಿದರು.
ಕಿರಿಮಂಜೇಶ್ವರ ಗುರುನರಸಿಂಹ ಸಭಾಭವನದಲ್ಲಿ ಭಾನುವಾರ ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತು ಉಪ್ಪುಂದ ವಲಯದ 31ನೇ ವಾರ್ಷಿಕ ಅಧಿವೇಶನ, ಪ್ರತಿಭಾ ಪುರಸ್ಕಾರ, ಸನ್ಮಾನ ಹಾಗೂ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಉಪ್ಪುಂದ ವಲಯದ ಅಧ್ಯಕ್ಷ ಯು. ಸಂದೇಶ ಭಟ್ ಅಧ್ಯಕ್ಷತೆವಹಿಸಿದ್ದರು. ರಾಜ್ಯಮಟ್ಟದ ಸಾಧಕ ವಿದ್ಯಾರ್ಥಿಗಳಾದ ಸಾನಿಧ್ಯ ಮಯ್ಯ, ಆದ್ರಿತ ಉಡುಪ, ಭೂಮಿಕ ಕಾರಂತ್ ಹಾಗೂ ವಿವಿಧ ಕ್ಷೇತ್ರದ ಸಾಧಕರಾದ ಬಿ. ಸಿ. ಗಣೇಶ್ ಮಯ್ಯ, ನಾಗೇಶ್ ಶ್ಯಾನಭೋಗ್ ಅರೆಹೊಳೆ ಅವರನ್ನು ಸನ್ಮಾನಿಸಲಾಯಿತು. ಚಿರಂತನ್ ಭಟ್, ಗಗನ್ ಭಟ್, ಆಶಿಲ್ ಮಧ್ಯಸ್ಥ ಕವಿತಾ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಭಾರತೀಯ ಸೇನೆಗೆ ಸೇರ್ಪಡೆಯಾದ ಸನ್ನಿಧಿ ಶ್ರೀನಾಥ್ ಮೇರ್ಟರನ್ನು ಅಭಿನಂದಿಸಲಾಯಿತು.
ಬಿಜೂರು ವಿಶ್ವೇಶ್ವರ ಅಡಿಗ, ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಉಪಾಧ್ಯಕ್ಷ ಬಿ. ಗಣೇಶ್ ಮಯ್ಯ, ಗೌರವಾಧ್ಯಕ್ಷ ಅರುಣ್ ಶ್ಯಾನುಭೋಗ್, ಮಹಿಳಾ ವೇದಿಕೆ ಅಧ್ಯಕ್ಷೆ ವೀಣಾ ಹೆಬ್ಬಾರ್, ಇದ್ದರು. ದೀಟಿ ಸೀತಾರಾಮ ಮಯ್ಯ ಸ್ವಾಗತಿಸಿದರು. ಚೈತ್ರಾ ವೈದ್ಯ ನಿರೂಪಿಸಿದರು. ಕಾರ್ಯದರ್ಶಿ ಪ್ರಶಾಂತ್ ಮಯ್ಯ ವಂದಿಸಿದರು.

ಕುಂದಾಪುರ: ಪೋಕ್ಸೋ, ಸೈಬರ್ ಅಪರಾಧ ಅರಿವು ಕಾರ್ಯಾಗಾರ



ಕುಂದಾಪುರ: ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ರೋಟರ‍್ಯಾಕ್ಟ್ ಕ್ಲಬ್ ಹಾಗೂ ರೋಟರಿ ಕ್ಲಬ್ ಆಶ್ರಯದಲ್ಲಿ ಪೋಕ್ಸೋ ಮತ್ತು ಸೈಬರ್ ಕ್ರೈಮ್ ಕುರಿತು ಅರಿವು ಕಾರ್ಯಕ್ರಮ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.
ಸಂಪನ್ಮೂಲ ವ್ಯಕ್ತಿಯಾಗಿದ್ದ ಕುಂದಾಪುರದ ವಕೀಲ ರಾಘವೇಂದ್ರ ಚರಣ್ ನಾವಡ ಅವರು ಪೋಕ್ಸೋ ಕಾಯ್ದೆ ಹಾಗೂ ಸೈಬರ್ ಕ್ರೈಮ್ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಇದೇ ಸಂದರ್ಭ ಅವರು ಇಂದಿನ ದಿನಗಳಲ್ಲಿ ತಂತ್ರಜ್ಞಾನ ಬಳಕೆ ಹೆಚ್ಚುತ್ತಿರುವುದರಿಂದ ಪೋಕ್ಸೋ ಮತ್ತು ಸೈಬರ್ ಅಪರಾಧಗಳ ಬಗ್ಗೆ ಸಮರ್ಪಕ ಅರಿವು ಬಹಳ ಅಗತ್ಯವಾಗಿದೆ. ಸರಿಯಾದ ಮಾರ್ಗದರ್ಶನ ಮತ್ತು ಜಾಗೃತಿ ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದೆ ಎಂದರು.
ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ರೋಟರಿ ಕಾರ್ಯದರ್ಶಿ ಸರ್ವೋದಯ ಪೂಜಾರಿ ಇದ್ದರು. ವಿನಯಾ ವಿ. ಶೆಟ್ಟಿ ಸ್ವಾಗತಿಸಿದರು. ರೋಟರಿ ಅಧ್ಯಕ್ಷ ನಾಗರಾಜ ಶೆಟ್ಟಿ ಪ್ರಸ್ತಾವಿಸಿದರು. ಗಿರಿರಾಜ್ ಭಟ್ ವಂದಿಸಿದರು. ರಿಷಿತಾ ಪ್ರಾರ್ಥಿಸಿ, ರಕ್ಷಿತಾ ಪರಿಚಯಿಸಿದರು. ವಿಶ್ವಾಸ್ ನಿರೂಪಿಸಿದರು.

ನಾಲ್ಕು ಶತಮಾನೋತ್ತರ ಇತಿಹಾಸವಿರುವ ಪಾದೂರು-ಕಳತ್ತೂರು ಶ್ರೀ ಬ್ರಹ್ಮಬೈದೇರುಗಳ ಗರಡಿ ಸಂಪೂರ್ಣ ನವೀಕರಣ

ಏ.20ರಿಂದ ಮೇ 1ರ ವರೆಗೆ ಪುನರ್ ಪ್ರತಿಷ್ಠಾಪನೆ, ಬ್ರಹ್ಮಕಲಶಾಭಿಷೇಕ, ನೇಮ

ಶಿರ್ವ: ಸಮಾರು ನಾಲ್ಕು ಶತಮಾನೋತ್ತರ ಇತಿಹಾಸವಿರುವ ಪಾದೂರು -ಕಳತ್ತೂರು ಶ್ರೀ ಬ್ರಹ್ಮಬೈದೇರುಗಳ ಗರಡಿ ಸಂಪೂರ್ಣ ನವೀಕರಣಗೊಳ್ಳುತ್ತಿದ್ದು ಏ.20ರಿಂದ ಏ.23ರವರೆಗೆ ಶ್ರೀ ಬ್ರಹ್ಮಬೈದೇರುಗಳ ಮತ್ತು ಪರಿವಾರ ಶಕ್ತಿಗಳ ಪುನರ್ ಪ್ರತಿಷ್ಠಾಪನೆ ಹಾಗೂ ಬ್ರಹ್ಮಕಲಶಾಭಿಷೇಕ, ಮತ್ತು ಏ.24ರಿಂದ ಮೇ 1ರವರೆಗೆ ಕಾಲಾವಧಿ ನೇಮ ಜರುಗಲಿದೆ.
ಉತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭ ಭಾನುವಾರ ಕ್ಷೇತ್ರದ ಜೀರ್ಣೋದ್ಧಾರ ಸಮಿತಿಯ ಕಾರ್ಯಾಲಯದಲ್ಲಿ ಜರುಗಿತು.



ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಿದ ಕಾಪು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ, ಹಿರಿಯ ಪತ್ರಕರ್ತ ಬಿ. ಪುಂಡಲೀಕ ಮರಾಠೆ ಶಿರ್ವ ಮಾತನಾಡಿ, ಯಾವುದೇ ಪುರಾತನ ಇತಿಹಾಸ ಧರ್ಮಸಾನಿಧ್ಯಗಳು ಜೀರ್ಣೋದ್ಧಾರಗೊಳ್ಳಲು ಕಾಲವೇ ಕೂಡಿಬರಬೇಕು. ಇತ್ತೀಚಿನ ಹಲವು ವರ್ಷಗಳಲ್ಲಿ ಕರಾವಳಿ ಜಿಲ್ಲೆಯಲ್ಲಿರುವ ಅನೇಕ ದೇವಾಲಯ, ನಾಗಾಲಯ, ಗರಡಿ, ದೈವಸ್ಥಾನಗಳು ಸಹಿತ ಅನೇಕ ಶ್ರದ್ಧಾಕೇಂದ್ರಗಳು ಜೀರ್ಣೋದ್ಧಾರಗೊಂಡಿದ್ದು ಎಲ್ಲಿಯೂ ಸಂಪನ್ಮೂಲಗಳ ಕೊರತೆ ಕಂಡುಬಂದಿಲ್ಲ. ಭಕ್ತರ ನಿರೀಕ್ಷೆಗೂ ಮೀರಿ ವಿಜೃಂಭಣೆಯಿಂದ ಸಾನಿಧ್ಯವು ಮಾಡಿಕೊಂಡಿದೆ. ಗ್ರಾಮದ ಧರ್ಮಸಾನಿಧ್ಯಗಳ ಪುನಶ್ಚೇತನದಿಂದ ಗ್ರಾಮದ ಸರ್ವೋದಯಕ್ಕೆ ನಾಂದಿಯಾಗುತ್ತದೆ ಎಂದರು.
ಅಧ್ಯಕ್ಷತೆಯನ್ನು ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಪಾದೂರುಗುತ್ತು ಜಯಕೃಷ್ಣ ಆಳ್ವ ವಹಿಸಿ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಉಪಾಧ್ಯಕ್ಷ ಶೇಖರ ಶೆಟ್ಟಿ ಬರಬೆಟ್ಟು ಹೊಸಮನೆ ಮಾತನಾಡಿದರು.
ವೇದಿಕೆಯಲ್ಲಿ ಎಲ್ಲೂರು ಶ್ರೀವಿಶ್ವೇಶ್ವರ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆರುಣಾಕರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ರಂಗನಾಥ್ ಶೆಟ್ಟಿ ಬರಬೆಟ್ಟು ಗುತ್ತು, ಅರ್ಚಕರಾದ ವಿಶ್ವನಾಥ ಅಮೀನ್ ಗರಡಿಮನೆ, ಗಣೇಶ ಶೆಟ್ಟಿ ಕಳತ್ತೂರು ನಡಿ ಗುತ್ತು, ಕರುಣಾಕರ ಪೂಜಾರಿ ಕಳತ್ತೂರು ನಟ್ಟಿಲ್ ಮನೆ, ಉಪಾಧ್ಯಕ್ಷರಾದ ಸುಬ್ರಾಯ ಪೂಜಾರಿ ಮಂಗಳೂರು, ವಸಂತ ಪೂಜಾರಿ ವಲದೂರು ಪಡುಮನೆ, ದಿವಾಕರ ಬಿ. ಶೆಟ್ಟಿ ಕಳತ್ತೂರು, ಪ್ರಕಾಶ್ ಪಾಲಮೆ, ಪರಮೇಶ್ವರ ಪೂಜಾರಿ, ಕರುಣಾಕರ ಪೂಜಾರಿ ಕಳತ್ತೂರು ನಟ್ಟಿಲ್ ಮನೆ, ಗೌರವ ಅಧ್ಯಕ್ಷ ಅಶೋಕ್ ಪೂಜಾರಿ ನಟ್ಟಿಲ್ ಕಳತ್ತೂರು, ಭಾಸ್ಕರ ಶೆಟ್ಟಿ ಪಾದೂರು ಅಂಡೆಮಾರುಗುತ್ತು, ಕಾರ್ಯದರ್ಶಿಗಳಾದ ರಚನ್ ಪೂಜಾರಿ ಗರಡಿಮನೆ ರೋಹಿತ್ ರಾವ್ ಗುರ್ಮೆ, ಸುಕೇಶ್ ಪೂಜಾರಿ ವಲದೂರು ಪಡುಮನೆ, ಅತಿಥ್ ಸುವರ್ಣ ಪಾಲಮೆ ಹಾಗೂ ರಮ್ಯಾ ಅಮೀನ್, ವಸಂತಿ ಬಿ.ಪೂಜಾರಿ ಗರಡಿಮನೆ, ವಿವಿಧ ಸಮಿತಿಗಳ ಪದಾಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.